9462

ಮಹಾಪ್ರಭು

ಮಾಗಡಿ ಕೆಂಪೇಗೌಡ

(ಐತಿಹಾಸಿಕ ನಾಟಕ)

15124

ಲೇಖಕರು:

ಎಸ್. ಕೆ. ಕರೀಂಖಾನ್

ಪ್ರಕಾಶಕರು:

ಬಿ. ವಿ. ಲಕ್ಷ್ಮಣ್

ನ್ಯೂಹುತ್ತಾ ಕಾಲೋನಿ - - ಭದ್ರಾವತಿ

9462

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಕನ್ನಡ ಸಾಹಿತ್ಯ ಪರಿಷತ್ತು
ಸರಸ್ವತಿ ಭಂಡಾರ
ಬೆಂಗಳೂರು-೧೮.

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಪುಸ್ತಕವನ್ನು ಈ ವಿಭಾಗದಿಂದ
ಹೊರಗೆ ಒಯ್ಯತಕ್ಕದ್ದಲ್ಲ

ಶ್ರೀ ಮಹಾಲಕ್ಷ್ಮೀ ನಾಟಕ ಮಂಡಳಿಯ ಪ್ರಪ್ರಥಮ ಪ್ರಕಟಣೆ

ಮ ಹಾ ಪ್ರ ಭು

ಮಾಗಡಿ ಕೆಂಪೇಗೌಡ

(ಐತಿಹಾಸಿಕ ನಾಟಕ)

9462
ಕನ್ನಡ ಪರಿಷತ್ತಿಗೆ
ಗ್ರಂಥಾಲಯ ... ಬಿ. ವಿ. ಲಕ್ಷ್ಮಣ್ ... ಇಂದ ... ತಾ 12 ... ಬೆಂಗಳೂರು-2.

★

ಲೇಖಕರು :

ಎಸ್. ಕೆ. ಕರೀಂಖಾನ್

Received & Taken to Stock
Page No ....
Accession No. 15124

★

O, 33, 2 KAR N 59

ಪ್ರಕಾಶಕರು :

ಬಿ. ವಿ. ಲಕ್ಷ್ಮಣ್

ನ್ಯೂ ಹುತ್ತಾ ಕಾಲೊನಿ, — — ಭದ್ರಾವತಿ.

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ] [ಬೆಲೆ ರೂ. ೨-೦೦

ಮುನ್ನುಡಿ

ಮಹಾಪ್ರಭು ಮಾಗಡಿ ಕೆಂಪೇಗೌಡನು ಒಕ್ಕಲಿಗ ಕುಲೋದ್ಭವನಾದರೂ, ಆತನ ಕೀರ್ತಿಯು ಸರ್ವಮಾನ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಕನ್ನಡದ ಗುಡಿಗುಡಾರಗಳಲ್ಲಿ ಚಿರಸ್ಥಾಯಿಯಾಗಿದೆ. ಈತನೂ ತನ್ನ ಪ್ರಪಿತಾಮಹನಾದ ಬೆಂಗಳೂರು ಕೆಂಪೇಗೌಡನಂತೆಯೇ ದೈವಭಕ್ತನೂ, ದೇಶಭಕ್ತನೂ, ಕಷ್ಟಸಹಿಷ್ಣುವೂ, ಪರೋಪಕಾರಿಯೂ, ದೀನ ದಯಾಪರನೂ ಆಗಿ ಪ್ರಖ್ಯಾತನಾಗಿದ್ದಾನೆ.

ಬೆಂಗಳೂರು ನಗರವನ್ನು ಕಂಡವರು ಬೆಂಗಳೂರು ಕೆಂಪೇಗೌಡನ ಕೀರ್ತಿಲಾಂಛನವನ್ನು ಕಾಣದಿರಲು ಸಾಧ್ಯವೇ ಇಲ್ಲ. ಅಲಸೂರಿನ ಸೋಮೇಶ್ವರ ದೇವಾಲಯ, ಗವೀಪುರದ ಗಂಗಾಧರೇಶ್ವರ ದೇವಸ್ಥಾನ, ಗಡಿಗಳಲ್ಲಿ ಕಂಗೊಳಿಸುವ ನಾಲ್ಕು ಗೋಪುರಗಳು-ನಮ್ಮನ್ನು ಬೆರಗುಮಾಡುತ್ತವೆ. ಬೆಂಗಳೂರಿನ ಕೆಂಪಾಂಬುಧಿ ಕೆರೆಯೂ ಈ ಮಹನೀಯನ ಧರ್ಮಸ್ವರೂಪವೇ ಆಗಿದೆ. ಈತನು ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಆಳಿಬಾಳಿದನೆಂಬುದಕ್ಕೆ ಆತನ ಧಾರ್ಮಿಕ ಕಾರ್ಯಗಳೇ ಸಾಕ್ಷೀಭೂತವಾಗಿವೆ. ಶಿವಗಂಗೆ, ಕೋರಮಂಗಲ, ಸಾವನದುರ್ಗ—ಈ ಪ್ರದೇಶಗಳಲ್ಲಿ ಈತನ ಕೀರ್ತಿಯು ದೇವಾಲಯಗಳ ರೂಪದಲ್ಲಿ ನೆಲೆಸಿದೆ. ಈ ಬೆಂಗಳೂರು ಕೆಂಪೇಗೌಡನ ವಂಶೋದ್ಭವನಾದ ಮಾಗಡಿ ಕೆಂಪೇಗೌಡನು ಆಗರ್ಭದರಿದ್ರನಾಗಿ ಜನಿಸಿದನು. ದರಿದ್ರತೆಯ ಪ್ರಕ್ಷುಬ್ಧ ವಾತಾವರಣದಲ್ಲಿ ಬೆಳೆದನು. ಹೊಟ್ಟೆಯ ಪಾಡಿಗಾಗಿ ಅನ್ಯರ ಹೊಲಗದ್ದೆಗಳಲ್ಲಿ ಜೀತಗಾರನಾಗಿ ದುಡಿದನು. ಕೊನೆಗೆ ತನ್ನ ತಾಯಿಯ ಆಶೀರ್ವಾದದಿಂದಲೂ, ಮಾಗಡಿ ರಂಗನಾಥಸ್ವಾಮಿಯ ಅನುಗ್ರಹದಿಂದಲೂ ರಾಜಗದ್ದುಗೆಯನ್ನೇರಿ ವಿರಾಜಿಸಿದನು.

ಈ ಮಹಾಪುರುಷನ ಜೀವನ ಚಿತ್ರವನ್ನು ವಿದ್ವಾಂಸರಾದ ಒಕ್ಕಲಿಗ ಮಹನೀಯರು ಗದ್ಯಪದ್ಯಗಳಲ್ಲಿ ಚಿತ್ರಿಸಿದ್ದಾರೆ. ಭದ್ರಾವತಿಯ ಶ್ರೀ ಮಹಾಲಕ್ಷ್ಮೀ ನಾಟಕ ಮಂಡಲಿಯವರು ಈ ಮಹನೀಯನ ಪವಿತ್ರ ಕಥೆಯನ್ನು

O, 33, 2(V) KAR M NS

9462

ನಾಟಕ ರೂಪದಲ್ಲಿ ರಂಗಸ್ಥಳಕ್ಕೆ ತಂದಿರುವುದು ಶ್ಲಾಘನೀಯವಾಗಿದೆ. ಈ ನಾಟಕದಲ್ಲಿ ಕಂಡುಬರುವ ಪಾತ್ರಗಳು ಸಹಜವಾಗಿವೆ. ನಿತ್ಯ ಜೀವನದ ಸಂಪ್ರದಾಯಗಳನ್ನು ಮೀರದಂತೆ ಪಾತ್ರದ ಚಲನೆಯಲ್ಲಿಯೂ, ಸಂಭಾಷಣೆಯಲ್ಲಿಯೂ ನಾಟಕಕರ್ತರು ಬಹಳ ಉತ್ತಮವಾದ ಮಾರ್ಗವನ್ನು ಅನುಸರಿಸಿದ್ದಾರೆ. ಇಂತಹ ನಾಟಕಗಳನ್ನು ಕನ್ನಡನಾಡಿನ ರಂಗಭೂಮಿಯಲ್ಲಿ ಆಡಿ, ನೋಡಿ, ಕೇಳಿ, ಆನಂದಪಡಬೇಕಾದುದು ಪ್ರತಿಯೊಬ್ಬ ದೇಶಭಕ್ತನ ಪ್ರಥಮ ಕರ್ತವ್ಯವಾಗಿದೆ.

ಭದ್ರಾವತಿಯು ಕಬ್ಬಿಣದ ಕೈಗಾರಿಕೆಯ ತವರೂರು. ಇಂತಹ ಕಬ್ಬಿಣದ ನಗರದಲ್ಲಿ ಚಿನ್ನದಂತಹ ಕಲಾಮಂಡಲಿಗಳು ಜನ್ಮತಾಳಿ, ಶ್ರೀಮಾನ್ ಎಂ. ಚಿನ್ನಸ್ವಾಮಿಯವರಂತಹ ಅಧಿಕಾರಿಗಳಿಂದ ಪರಿಪೋಷಿತವಾಗಿ ಬೆಳಗುತ್ತಿರುವುದು ಅತ್ಯಂತ ಸಂತೋಷವನ್ನುಂಟುಮಾಡುತ್ತದೆ. ಬರೆದು ತೋರಿಸುವುದಕ್ಕಿಂತ, ಆಡಿಸಿ ನೋಡಬೇಕಾದ ನಾಟಕ ಕಲೆಗೆ ಮುನ್ನುಡಿ ಅನವಶ್ಯಕವಾದರೂ, ಶ್ರೀ ಮಹಾಲಕ್ಷ್ಮೀ ನಾಟಕ ಮಂಡಲಿಯ ವ್ಯವಸ್ಥಾಪಕರಾದ ಶ್ರೀ ಬಿ.ವಿ.ಲಕ್ಷ್ಮಣ್‌ರವರ ಪ್ರಬಲ ಉತ್ಸಾಹಕ್ಕೆ ಒಂದೆರಡು ಪ್ರೋತ್ಸಾಹದ ನುಡಿಗಳನ್ನು ಹೇಳುವುದು ಯುಕ್ತವಲ್ಲವೇ? ನಮಸ್ತೇ.

ಗೋವಿಂದಪ್ಪ ರಸ್ತೆ.
ಬಸವನಗುಡಿ
ಬೆಂಗಳೂರು 4.

ಡಿ. ಆರ್. ರಾಮಯ್ಯ
15—2—59.

ಪುಸ್ತಕವನ್ನು ಈ ವಿಭಾಗದಿಂದ ಹೊರಗೆ ಒಯ್ಯತಕ್ಕದ್ದಲ್ಲ
ಕನ್ನಡ ಸಾಹಿತ್ಯ ಪರಿಷತ್ತು
ಸರಸ್ವತಿ ಭಂಡಾರ
ಬೆಂಗಳೂರು-೧೮.
ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಆತ್ಮನಿವೇದನೆ

ಶ್ರೀಯುತ ಬಿ. ವಿ. ಲಕ್ಷ್ಮಣ್‌ರವರು ಶ್ರಮಪಟ್ಟು ನಿರ್ಮಿಸಿದ ಪ್ರತಿಮೆಗೆ ಶೃಂಗಾರಗೊಳಿಸಿದ ಶ್ರಮವು ಮಾತ್ರ ನನ್ನದಾಗಿದೆ. ಈ ನಾಟಕದಲ್ಲಿ ದೃಶ್ಯಗಳು ಅಧಿಕವಾಗಿಯೇನೋ ಸೇರಿಸಲ್ಪಟ್ಟಿವೆ. ಆದರೆ ಹಳ್ಳಿಗರನ್ನು ಪ್ರಧಾನವಾಗಿಯೂ, ಪಟ್ಟಣಿಗರನ್ನು ಗೌಣವಾಗಿಯೂ ದೃಷ್ಟಿಯಲ್ಲಿಟ್ಟು ಕೊಂಡು ಈ ನಾಟಕವನ್ನು ರಚಿಸಲಾಗಿದೆ. ಹಳ್ಳಿಗಳಲ್ಲಿ ಮುಂಜಾನೆಯ ವರೆಗೂ ನಾಟಕಾಭಿನಯವು ಜರುಗಿದರೇನೇ ಸಮಾಧಾನ. ಆದ್ದರಿಂದ ಅನಾವಶ್ಯಕವೆಂದು ಕಂಡುಬಂದರೂ ಕೆಲವು ದೃಶ್ಯಗಳನ್ನು ಜೋಡಿಸ ಬೇಕಾಗುತ್ತದೆ. ಪಟ್ಟಣಗಳಲ್ಲಿ ಕಾಲಪರಿಮಿತಿಗನುಗುಣವಾಗಿ ಅಗತ್ಯ ವೆಂದು ತೋರುವ ಭಾಗಗಳನ್ನು ಮಾತ್ರ ಉಪಯೋಗಿಸಿಕೊಳ್ಳಬಹುದು.

ಶ್ರೀಯುತ ಲಕ್ಷ್ಮಣ್‌ರವರು ಮಾಗಡಿ ಕೆಂಪೇಗೌಡ, ಬೆಂಗಳೂರು ಕೆಂಪೇಗೌಡ, ರಣಭೈರೇಗೌಡರ ಜೀವನ ವಿಭಾಗಗಳನ್ನು ನಾಟಕ ರೂಪಗಳಲ್ಲಿ ಅಂಕಿಸಬೇಕೆಂದು ನನಗೆ ಸೂಚಿಸಿದ್ದರು. ಅವರ ಸೂಚನಾನುಸಾರವಾಗಿಯೇ ಮಹಾಪ್ರಭು ಮಾಗಡಿ ಕೆಂಪೇಗೌಡ ನಾಟಕದ ರಚನಾಕಾರ್ಯವನ್ನು ಪೂರ್ಣ ಗೊಳಿಸಿದೆನು. ಆದರೆ ಪ್ರಚಾರ ಪ್ರದರ್ಶನಗಳಲ್ಲಿ ಲಕ್ಷ್ಮಣ್‌ರವರಿಗೆ ದೊರೆತ ಕನಿಷ್ಠ ಪ್ರೋತ್ಸಾಹವನ್ನು ಕಂಡು ನನ್ನ ಉತ್ಸಾಹವು ಕುಗ್ಗಿಹೋಯಿತು. ಆದರೂ ಲಕ್ಷ್ಮಣ್‌ರವರು ತಮ್ಮ ಕಷ್ಟನಷ್ಟಗಳಿಂದ ಚೇತರಿಸಿಕೊಂಡು ಈ ನಾಟಕವನ್ನು ಪ್ರಕಟಿಸುವ ಸಾಹಸಕ್ಕೆ ಕೈಹಾಕಿದ್ದು ಶ್ಲಾಘನೀಯವಾದುದು. ಅವರ ಪ್ರಯತ್ನವು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಇಂತು,

ಎಸ್. ಕೆ. ಕರೀಂಖಾನ್

9462
ಸರಸ್ವತಿ ಭಂಡಾರ
ಬೆಂಗಳೂರು-೧೮

ಪ್ರಕಾಶಕರ ನುಡಿ

ಮೈಸೂರು ಪ್ರಾಂತ್ಯದಲ್ಲಿ ಗಣ್ಯಪ್ರಮಾಣದಲ್ಲಿರುವ ಒಕ್ಕಲಿಗ ಜನಾಂಗದವರ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಜೀವನವನ್ನು ಗ್ರಂಥರೂಪದಲ್ಲಿ ಪ್ರಕಟಿಸಬೇಕು ಮತ್ತು ನಾಟಕ ರೂಪದಲ್ಲಿ ಪ್ರದರ್ಶಿಸಬೇಕು ಎಂಬ ಸದಾಶಯವು ಬಾಲ್ಯಾರಭ್ಯದಿಂದಲೂ ನನಗಿತ್ತು. ಆದರೆ ನಾನು ಪ್ರೌಢವಿದ್ಯಾಸಂಪನ್ನನಾಗಿರಲಿಲ್ಲ. ನನ್ನ ಆರ್ಥಿಕ ಪರಿಸ್ಥಿತಿಯೂ ಆಶಾಜನಕವಾಗಿರಲಿಲ್ಲ. ಮೇಲಾಗಿ ಜನಾಂಗದ ಸಹಕಾರವೂ ನನಗಿರಲಿಲ್ಲ. ಉದರ ಪೋಷಣೆಯ ನಿಮಿತ್ತ ನಾನು 12 ರೂಪಾಯಿ ಮಾಸಿಕವೇತನದ ಮೇಲೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದೆನು. ಈ ನನ್ನ ನಿಸ್ಸಹಾಯಕ ಪರಿಸ್ಥಿತಿಯಲ್ಲಿಯೂ ನನ್ನ ಬೃಹದಾಕಾಂಕ್ಷೆಯು ಕುಂಠಿತವಾಗಲಿಲ್ಲ. ದೇವಾಧಿದೇವ ರಂಗನಾಥನ ಸುಪ್ರಸನ್ನತೆಯೋ ಎಂಬಂತೆ ನಾಟಕರಂಗದಲ್ಲಿ ನನ್ನ ಸಹೋದ್ಯೋಗಿಗಳ ಹಾಗೂ ಶ್ರೀ ಎಂ. ಚಿನ್ನಸ್ವಾಮಿಯವರ ಸಹಕಾರವು ನನಗೆ ಲಭಿಸಲಾರಂಭಿಸಿತು. ನಾನು ಅಧಿಕ ಶ್ರಮದಿಂದ ಗೌಡಮನೆತನದ ಇತಿಹಾಸವನ್ನು ಸಂಶೋಧಿಸಿ, ಶ್ರೀ ಬಿ. ಎಂ. ಸುಬ್ಬರಾಯರ ನೆರವಿನಿಂದ ಮಾಗಡಿ ಕೆಂಪೇಗೌಡ ಎಂಬ ನಾಟಕವನ್ನು ರಚಿಸಿದೆನು. ಈ ನಾಟಕವನ್ನು ಶ್ರೀ ಎಸ್. ಕೆ. ಕರೀಂಖಾನ್‌ರವರು ಸುವಿಸ್ತೃತಗೊಳಿಸಿದರು. ಶೃಂಗಾರ, ಹಾಸ್ಯ, ವೀರ, ಕರುಣಾರಸಗಳಿಂದ ಸುಮಧುರಗೊಳಿಸಿದರು.

ಈ ನಾಟಕದ ಪ್ರಚಾರ ಪ್ರದರ್ಶನೋದ್ದೇಶದಿಂದ ಮೈಸೂರು ಪ್ರಾಂತ್ಯದಲ್ಲಿ ಸಂಚರಿಸಿ ಅಪಾರ ಧನ ಹಾನಿಗೀಡಾದೆನು. ಆದರೂ ರಂಗನಾಥನ ಕೃಪಾನುಗ್ರಹದಿಂದ ಚೇತರಿಸಿಕೊಂಡು ಈ ನಾಟಕವನ್ನು ಪ್ರಕಟಿಸುವ ಸಾಹಸಕ್ಕೆ ಕೈಹಾಕಿರುವೆನು. ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಪೀಠದ ಮಹಾಸ್ವಾಮಿಯವರಾದ ಶ್ರೀ ಶ್ರೀ ಚಂದ್ರಶೇಖರನಾಥಜೀಯವರು, ಈ ನಾಟಕದ ಕರಡು ಪ್ರತಿಯನ್ನು ಆಮೂಲಾಗ್ರವಾಗಿ ಅವಲೋಕಿಸಿ ಆಶೀರ್ವದಿಸಿರುತ್ತಾರೆ. ಸುಪ್ರಸಿದ್ಧ ಸಾಹಿತಿಗಳೂ, ಮೈಸೂರು ಸರ್ಕಾರದ ವಾರ್ತಾ ಇಲಾಖಾ ಮುಖ್ಯಾಧಿಕಾರಿಗಳೂ ಆದ, ಶ್ರೀ ಡಿ. ಆರ್. ರಾಮಯ್ಯ

ನವರು ತಮ್ಮ ಅಮೂಲ್ಯವಾದ ಮುನ್ನುಡಿಯನ್ನು ಕರುಣಿಸಿ ಬರವಣಿಗೆ ಯನ್ನು ಪ್ರೋತ್ಸಾಹಿಸಿರುತ್ತಾರೆ. ಓರಿಯಂಟ್ ಮುದ್ರಣಾಲಯದ ಮಾಲೀಕರಾದ ಶ್ರೀಮಾನ್ ಜಿ. ಎಸ್. ಶ್ರೀನಿವಾಸನ್‌ರ ಅತ್ಯಲ್ಪಕಾಲದಲ್ಲಿ ನಾಟಕವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುತ್ತಾರೆ. ಈ ಎಲ್ಲ ಮಹನೀಯರ ಮಹೋಪಕೃತಿಗಳಿಗಾಗಿ ನಾನು ಅತ್ಯಂತ ಆಭಾರಿಯಾಗಿರುತ್ತೇನೆ.

ಈ ನಾಟಕವನ್ನು ಕನ್ನಡನಾಡಿನ ಜನತೆ ಆದರದಿಂದ ಸ್ವಾಗತಿಸಿದರೆ ನಾನು ಕೃತಕೃತ್ಯನೆಂದು ಭಾವಿಸಿಕೊಳ್ಳುತ್ತೇನೆ.

ನ್ಯೂ ಹುತ್ತಾ ಕಾಲೋನಿ
ಭದ್ರಾವತಿ
೧೫—೧—೫೯

ಇಂತು,
ಕಲಾಭಿಲಾಷಿ
ಬಿ. ವಿ. ಲಕ್ಷ್ಮಣ್

ಕನ್ನಡ ... ವಿಭಾಗ
9462

ಸೂಚನೆ :— ಈ ನಾಟಕದ ಸಂಪೂರ್ಣ ಹಕ್ಕು ಪ್ರಕಾಶಕರದೇ ಆಗಿದೆ. ಪ್ರಕಾಶಕರ ಸಮ್ಮತಿಯಿಲ್ಲದೆ ಈ ಕಥಾ ವಸ್ತುವನ್ನು ಯಾರೂ ಬಳಸಿಕೊಳ್ಳಕೂಡದು. ಇತರ ಭಾಷೆಗಳಿಗೆ ಅನುವಾದಿಸಕೂಡದು. ಚಲಚ್ಚಿತ್ರ ರಚನೆಗೆ ಉಪಯೋಗಿಸಕೂಡದು. ಈ ನಾಟಕವನ್ನು ಅಭಿನಯಿಸುವವರು ೧೦ ರೂಪಾಯಿ ಗೌರವ ಧನ ಕಳುಹಿಸಿ ಅನುಮತಿಯನ್ನು ಪಡೆಯಬೇಕು.

9462

ಪ್ರಥಮಾಭಿನಯ ಅಭಿನೇತೃವರ್ಗ

ಶ್ರೀ ಮಹಾಲಕ್ಷ್ಮಿ ನಾಟಕ ಮಂಡಳಿ

ಭದ್ರಾವತಿ) : : (ರಿಜಿಷ್ಟರ್ಡ್ M. I. S. W.)

ಮಹಾಪ್ರಭು ಮಾಗಡಿ ಕೆಂಪೇಗೌಡ ನಾಟಕದ ಸುವರ್ಣ ಮಹೋತ್ಸವ ಸಹಾಯಾರ್ಥ ನಾಟಕವನ್ನು ತಾ|| 31-5-1958 ನೇ ದಿನ ಭದ್ರಾವತಿ ಹೊಸ ನಗರದ ರಂಗಮಂದಿರದಲ್ಲಿ, ಮೈಸೂರು ಸರ್ಕಾರದ ಮಾಜಿ|| ಮುಖ್ಯ ಮಂತ್ರಿ ವರ್ಯರಾದಂಥ ಶ್ರೀ ಕೆಂಗಲ್ ಹನುಮಂತಯ್ಯ ಬಿ.ಎ., ಎಲ್.ಎಲ್.ಬಿ. ಇವರ ಘನ ಅಧ್ಯಕ್ಷತೆಯಲ್ಲಿ ಅಭಿನಯಿಸಿದ ನಟ, ನಟಿ ವರ್ಗದವರು.

ಶ್ರೀಗಳಾದ

ಎನ್. ರಾಮಯ್ಯ ...	... ಶ್ರೀವಿಷ್ಣು
ಪಿ. ಆರ್. ವೆಂಕಟರಾಮು ...	... ಆದಿಶೇಷ
ಎನ್. ಜಿ. ಸೂರ್ಯನಾರಾಯಣರಾವ್	... ಕೆಂಪೇಗೌಡ
ಎನ್. ನಂಜುಂಡಯ್ಯ ...	... ಪಟೇಲ್ ಬೈರಪ್ಪ
ಎನ್. ವೆಂಕಟರಾವ್ ...	... ಅನಂತಶಾಸ್ತ್ರಿ
ಎ. ಎಸ್. ಲಿಂಗಯ್ಯ ...	... ಜವರೇಗೌಡ
ಎಸ್. ನಂಜುಂಡಯ್ಯ ...	... ವೀರೇಗೌಡ
ಎಂ. ಕೆ. ಪುಟ್ಟಸ್ವಾಮಿ ...	... ಭಿಕ್ಷುಕ
ಹೆಚ್. ಮರಿಯಪ್ಪ ...	... ಮಲ್ಲಣ್ಣ
ಎಮ್. ಎಮ್. ಗೌಡ ...	... ಮಾಟೇಗೌಡ
ಆರ್. ಎನ್. ಖಂಡೇರಾವ್ ...	... ಹನುಮೇಗೌಡ
ಎನ್. ಜಯರಾಮ್ ...	... ಬಾಲ ಕೆಂಪೇಗೌಡ
ಸಿ. ದಾಸಪ್ಪ ...	... ರಂಗನಾಥ
ಓಬಯ್ಯ ...	... ಗಿಡ್ಡೇಗೌಡ

ಶ್ರೀಮತಿಯವರಾದ

ಆರ್. ಗಂಗೂಬಾಯಿ ...	... ಕೆಂಪಮ್ಮ
ಬಿ. ರಾಜಮ್ಮ ...	... ಮಲ್ಲಿ
ಹೆಚ್. ಎಸ್. ಸುಬ್ಬಲಕ್ಷ್ಮಿ ...	... ಸಾವಿತ್ರಮ್ಮ
ಹೆಚ್. ಪಿ. ಸರೋಜ ...	... ಲಿಂಗಾಂಬೆ
ಕುಮಾರಿ ರತ್ನ ...	... ಲಕ್ಷ್ಮೀ
ಕುಮಾರಿ ಲಕ್ಷ್ಮಿ ...	... ಭಿಕ್ಷುಕಿ
ಶ್ರೀ ಕೆ. ಶೇಷಪ್ಪ (ಮಲ್ಲಿ) ...	... ಈರವ್ವ
ಶ್ರೀ ಎಂ. ಎಲ್. ಲಿಂಗಯ್ಯ	... ಚನ್ನಮ್ಮ

ಅಧಿಕಾರ ವರ್ಗದವರು

ಶ್ರೀಗಳಾದ	ಜಿ. ಕೆ. ಚನ್ನೆರಾಜೆ ಅರಸು ಬಿ.ಎಸ್.ಸಿ.	ಅಧ್ಯಕ್ಷ
,,	ಬಿ. ಬೋರಯ್ಯ, ಬಿ.ಇ.	ಉಪಾಧ್ಯಕ್ಷ
,,	ಹೆಚ್. ಕೆ. ಸಂತೂರಾಮರಾವ್	ಗೌರವ
,,	ಬಿ. ಎಂ. ರಾಮಮೂರ್ತಿ	ಕಾರ್ಯದರ್ಶಿಗಳು.
,,	ಎಸ್. ಪುಟ್ಟನರಸಯ್ಯ	ಉಪ ಕಾರ್ಯದರ್ಶಿ
,,	ಎಂ. ಎಂ. ಅರಸಯ್ಯ	ಖಜಾಂಚಿ

ಪೋಷಕ ವರ್ಗದವರು

ಶ್ರೀಗಳಾದ ಬಿ. ಮಾಧವಚಾರ್ (ಮಾಜಿ) ಎಂ. ಎಲ್. ಎ.
,, ಟಿ. ಡಿ. ದೇವೇಂದ್ರಪ್ಪ
,, ಕೆ. ಎಂ. ಜವರಯ್ಯ
,, ಬಿ. ಎಚ್. ಹೊನ್ನಪ್ಪಗೌಡ
,, ಹೆಚ್. ಸಿ. ಚೆನ್ನಯ್ಯ

ಶ್ರೀಗಳಾದ ಡಿ.ಟಿ. ಸೀತಾರಾಮರಾವ್- ಎಂ. ಎಲ್. ಎ
,, ಪಿ. ವೀರಪ್ಪ
,, ಕೆ. ಕೆಂಚಯ್ಯ
,, ಕೆ. ಸಿಂಗಾರಿಗೌಡ
,, ಎಗ. ಬೋರಯ್ಯ

ವಾದ್ಯಗೋಷ್ಠಿ

ಶ್ರೀಗಳಾದ ಬಿ. ಶ್ರೀನಿವಾಸರಾವ್
,, ಹೆಚ್ ಬಿ. ಕಾಳಪ್ಪ
,, ಸಿ. ಚೌತಾಯಿ
,, ಸಿ. ನಾರಾಯಣರಾವ್

ರಂಗಸಜ್ಜಿಕೆ

ಶ್ರೀಗಳಾದ ಸಿ. ದಾಸಪ್ಪ
,, ತಿಮ್ಮಯ್ಯ
,, ಸುಬ್ಬು
,, ಎಸ್.ಬಿ.ರಂಗಪ್ಪ

ನಿರ್ಮಾಪಕ

ಶ್ರೀ ಬಿ. ವಿ. ಲಕ್ಷ್ಮಣ್, ಭದ್ರಾವತಿ

ವಿ. ಸೂ. :—ಪ್ರಥಮ ಮುದ್ರಣವಾದ್ದರಿಂದ ಕೆಲವು ನ್ಯೂನತೆಗಳು ಅಲ್ಲಲ್ಲಿ ಮುದ್ರಣದ ದೋಷಗಳು ತೂರಿಕೊಂಡಿವೆ. ವಾಚಕ ಮಹನೀಯರು ಈ ದೋಷಗಳನ್ನು ಉದಾರ ದೃಷ್ಟಿಯಿಂದ ನೋಡಿ ಪ್ರೋತ್ಸಾಹವಿತ್ತರೆ ಮುಂದಿನ ಪ್ರಕಟಣೆಯನ್ನು ಪರಿಷ್ಕರಿಸಿ ಬೆಳಕಿಗೆ ತರುತ್ತೇನೆ.

9462

ಮಹಾಪ್ರಭು ಕೆಂಪೇಗೌಡ

ದೃಶ್ಯ—೧.

ಶ್ರೀ ರಂಗನಾಥನ ದೇವಸ್ಥಾನ

(ಸ್ತ್ರೀಯರೂ, ಪುರುಷರೂ ಸ್ವಾಮಿಯ ಪೂಜೆ ಮಾಡಿಸಿಕೊಂಡು ಹೋಗುತ್ತಿರುವರು. ಗಂಟೆಯ ಶಬ್ದ. ಪಟೇಲ್ ಬೈರಪ್ಪನು ನಿಂತು ಹೆಂಗಸರನ್ನೇ ದುರುಗುಟ್ಟಿ ನೋಡುತ್ತಿರುವನು.)

ಒಬ್ಬ ಭಕ್ತ—ನಮಸ್ಕಾರ, ಪಟೇಲ್ರೇ.

ಬೈರಪ್ಪ—ನಮಸ್ಕಾರ, ನಮಸ್ಕಾರ.

ಭಕ್ತ—ದೇವಸ್ಥಾನಕ್ಕೋಸ್ಕರ ಬಲು ಶ್ರಮ ಪಡ್ತಾಯಿದ್ದೀರ್ರಪ್ಪಾ. ಏನೋ ತಾವಿರೋದ್ರಿಂದ ಈ ಪೂಜೇ ಪುರಸ್ಕಾರ ಯಾವ ಅಡ್ಡೀ ಆತಂಕಾನೂ ಇಲ್ದೇ ನಡೀತಾ ಐತ್ರೆ. ವೇಳೆವೇಳೆಗೆ ಸರಿಯಾಗಿ ಒಳ್ಳೇ ವೈಭವ ದಿಂದ ಜರಗ್ತಾಯಿದ್ರೆ.

ಬೈರಪ್ಪ—ಅಯ್ಯೋ ನಮ್ದೇನಿದೆ ಹೇಳಿ. ಎಲ್ಲಾ ಆ ನಮ್ಮಪ್ಪನ್ ದಯ. ಔನ್ ಕೃಪೆಯಿಂದಾನೇ ಎಲ್ಲಾ ನಡ್ದೋಗ್ತಾಯಿದೆ. ಏನೋ ಇರೋ ವರೆಗೆ ನಾವು ನೆಪಕ್ಕೆ ಮಾತ್ರ ದುಡೀತಿರ್ತೇವೆ.

ಭಕ್ತ—ಬಹಾಳ ದೊಡ್ಮಾತಾಡ್ತೀರಪ್ಪಾ. ದೊಡ್ಡೋರ್ ಬಾಯಿಂದ ದೊಡ್ಮಾತುಗ್ಳೇ ಬರೋದು.

ಬೈರಪ್ಪ—ಅಯ್ಯೋ ನಾನ್ ದೊಡ್ಡೋನೇ! ನಾನ್ ತಮ್ಮಂಥೋರ ಸೇವಕ. ಏನೋ ತಮ್ಮಂಥೋರೆಲ್ಲಾ ಸೇರಿ ನನ್ನ ಕುತ್ತಿಗೇಗೊಂದು ಚಾಕ್ರೀ ತಗಲಾಕಿದ್ದೀರಾ, ಅಷ್ಟೇ.

ಭಕ್ತ—ಚಾಕ್ರಿ ತಗಲಾಕಿಲ್ಲಾ ಪಟೇಲ್ರೇ, ನಮ್ಮನ್ನೆಲ್ಲಾ ಸರಿಯಾಗಿ ನಡೆಸ್ಕೊಂಡೋಗಿ ಅಂಥ ಯಜ್ಮಾನ್ಕೇ ಕೊಟ್ಟಿದ್ದೀವಿ.

ಬೈರಪ್ಪ—ಅಯ್ಯೋ ತಗೀರಿ. ನನ್ನಾದ್ಯವ ಮಹಾ ಯಜ್ಮಾನ್ಕೆ. ನನ್ನಿಂತ ದೊಡ್ಡೋರು ಬೇಕಾದಷ್ಟು ಜನಾ ಇದಾರೆ.

ಭಕ್ತ—ನಾವೇನೋ ಈ ಊರಿಗೆ ತಾವೇ ದೊಡ್ಡೋರು, ತಾವೇ ಯಜ್ಮಾನ್ರು ಅಂತಾ ತಿಳ್ಕೊಂಡಿದ್ದೀವ್ರಿ. ಆಗ್ಲಿ ಪಟೇಲ್ರೇ ಬರ್ತೀನ್ರಿ.

ಬೈರಪ್ಪ—ಒಳ್ಳೇದು ಬರ್ತಾ ಇರಿ.

ಭಕ್ತ—ನಿತ್ಯಾ ಬರ್ತಾನೇ ಇದ್ದೀನ್ರಿ. ನಮಸ್ಕಾರ (ಹೊರಡುವನು)

ಬೈರಪ್ಪ—ಆಗ್ಲಿ, ಬನ್ನಿ. ನಮಸ್ಕಾರ. (ಅವನು ಹೋದ ಕಡೆಯೆ ನೋಡುತ್ತ) ಎಂಥಾ ಒಳ್ಳೇ ಹುಡ್ಗೀನ ಗಿಟ್ಟಿಸ್ಕೊಂಡಿದಾನೆ ಈ ಅಯ್ಯಾ! ಏನಾದ್ರೂ ಪ್ರಯತ್ನಪಟ್ಟೇ ಕೈಸಿಗಿಡಾ? ಹ್ಯಾಗೂ ದಿವ್ಸಾ ಬರ್ತಾಯಿರ್ತಾನಲ್ಲಾ, ಸ್ನೇಹಾ ಮಾಡ್ಕೋಬಿಡೋದು ಆಮೇಲೆ ಒಂದ್ ಕೈ ನೋಡೋದು.

(ಮಲ್ಲಮ್ಮನು ಬಂದು ಪೂಜೆ ಮಾಡಿಸಿಕೊಂಡು ಬರುವಳು. ಪಟೇಲರನ್ನು ನೋಡಿ)

ಮಲ್ಲಮ್ಮ—ಕೈಮುಗ್ದೆ.

ಬೈರಪ್ಪ — ಒಳ್ಳೇದು. (ಚೆನ್ನಾಗಿ ನೋಡಿ) ಯಾರು, ನಮ್ ಕಳ್ಯಾರ ಚಿಕ್ಕಮ್ಮನ ಮಗ್ಳಲ್ವಾ? ಮಲ್ಲೀ ಅಲ್ವಾ?

ಮಲ್ಲಮ್ಮ—ಔದ್ರೀ.

ಬೈರಪ್ಪ—ಯಾಕೆ ದಿವ್ಸಾ ಬಂದು ನಮ್ಹಿತ್ಲಲ್ಲಿ ಹೂ ಕುಯ್ಕೊಂಡ್ಹೋಗೊ ದಕ್ಕಾಗೋದಿಲ್ವಾ? ಬೇಕಾದಷ್ಟು ಬಿಡ್ತಾಯಿದೆ. ನಿನ್ಗೆ ಯಾರ ಬ್ಯಾಡಾ ಅಂತಾ ಹೇಳೋರು?

ಮಲ್ಲಮ್ಮ—ನಂಗೇ ಊ ಕಂಡ್ರೇ ಬೋ ಆಸೇ. ನನ್ ಪರಾಣ್ವೆ ಅದ್ರಾಗೈತೇ.

ಬೈರಪ್ಪ—ಅದ್ಕೇ ನಾ ಹೇಳೋದು. ಬಂದು ಕುಯ್ಕೊಂಡೋಗ್ತಿರು ಅಂತಾ.

ಮಲ್ಲಮ್ಮ—ಅಂಗಾರೆ ದಿನಾಲೂ ಬತ್ತೀನಿ. ಈಗೋಗ್ಲಾ?

9462

ಬೈರಪ್ಪ—ಹೂಂ, ಹೋಗು. (ಅವಳು ಹೋದ ಕಡೆಯೇ ನೋಡುತ್ತ) ಚೋಟುದ್ದಾ ಇದ್ಲೂ. ಈಗ ಏನ್‌ಮಟ್ಟಿಗೆ ಬೆಳ್ದುಬಿಟ್ಟಿದಾಳೇ ? ಗಾಣಾ ಹಾಕಿ ಮೀನ್ .ಎಳೆಯೋ ಹಾಗೆ ಮನಸನ್ನ ಮಶೀತಾ ಳಲ್ಲಾ ? ಹ್ಯಾಗೂ ಹೊನ್ನಲ್ಗೀ ಸಾಲ ಬೇರೆ ಕೊಡ್ಬೇಕು ನನ್ಗೇ. ಇದಂತೂ ಅಂಗೈ ತುತ್ತು. ನನ್ನ ಬಿಟ್ಟು ಎಲ್ಲಾನೇ ಹೋದೀತೂ ? ದೇವರಿಗೆ ಹಿತ್ತಾಳೆ ಒಡ್ವೇಗಳನ್ನೆಲ್ಲಾ ಮಾಡಿಸಿದ್ದಾಗಿದೆ. ನಾಲ್ಕೇ ದಿನ ಗಳ್ ಮಟ್ಟಿಗಾದರೂ ಈ ಅರ್ಚಕನನ್ನು ಓಡಿಸಿ ನಮಗೆ ಬೇಕಾದ ಬೇರೊಬ್ಬ ಅರ್ಚಕನ್ನ ನೇಮಿಸಿಕೊಳ್ಳಬೇಕು. ಆಗ ಒಡ್ವೇಗಳನ್ನು ಬದಲಾಯಿಸೋಕೆ ಸಾಧ್ಯವಾಗ್ತದೆ. (ಹೊರಡುವನು. ಅರ್ಚಕನೂ ಬಾಗಿಲನ್ನು ಹಾಕಿಕೊಂಡು ಹೋಗುವನು.)

(ಘಂಟೆ ಶಬ್ದ. ಸ್ವಲ್ಪ ಕಾಲದ ತರುವಾಯ ದೇವಸ್ಥಾನದ ಬಾಗಿಲು ತಾನಾಗಿ ತೆರೆಯಲ್ಪಡುವುದು. ಶ್ರೀರಂಗನಾಥನೂ, ಆದಿಶೇಷನೂ ಈಚೆಗೆ ಬರುವರು)

ಶ್ರೀರಂಗನಾಥ—ಆದಿಶೇಷಾ ! ನಾನು ಸಕಲ ಪ್ರಾಣಿವರ್ಗಗಳಲ್ಲಿ ಮಾನವ ವರ್ಗದ ಮೇಲೆಯೇ ಅಪಾರವಾದ ಮಮತೆಯನ್ನು ತೋರಿದೆ. ಮಾನವರ ಮೇಲೆ ಸುಪ್ರಸನ್ನತೆಯನ್ನು ಬೀರಿದೆ. ಸುಜ್ಞಾನವನ್ನಿತ್ತೆ. ಧರ್ಮಸೂತ್ರಗಳ ಸಾರವನ್ನರುಹಿದೆ. ಈ ಜಗತ್ತನ್ನು ಮಾನವರ ಶೈಕ್ಷಣಿಕ ಕೇಂದ್ರವಾಗಿ ಪರಿವರ್ತಿಸಿದೆ. ಈ ಜಗತ್ತಿನಲ್ಲಿ ಮಾನವರ ಹಿತಾರ್ಥವಾಗಿ ಸ್ವರ್ಗೀಯ ಸಂಪತ್ಸಾಧನಗಳನ್ನು ಸೃಜಿ ಸಿದೆ. ದೇವತೆಗಳಿಗೂ ಅಲಭ್ಯವಾದ ನಿತ್ಯಾನಂದವೀವ ಮೋಕ್ಷಪದದ ಪರಮ ಸಾಧನೆಯನ್ನು ಅನುಗ್ರಹಿಸಿದೆ. ಇಷ್ಟಾದರೂ ಮಾನವರು ಚಂಚಲಚಿತ್ತರಾದರು. ಪಾಪಾಸಕ್ತರಾದರು.

ಆದಿಶೇಷ—ಇದಕ್ಕೆ ನಿವಾರಣೆಯಿಲ್ಲವೇ, ಸ್ವಾಮಿ.

ಶ್ರೀರಂಗ—ಇದೆ. ನಾನು ಅಸಂಖ್ಯಾತ ಧರ್ಮಪ್ರಚಾರಕರನ್ನು, ಸಮಾಜೋ ದ್ಧಾರಕರನ್ನು - ಕಳುಹಿಸಿದೆ. ಅವರು ಮಾನವರ ಕಲ್ಯಾಣಕ್ಕಾಗಿ ದುಡಿದರು. ಮಾನವರ ಪ್ರಗತಿಗಾಗಿ ಶ್ರಮಿಸಿದರು. ಆದರೂ ಮಾನ ವರು ತಮ್ಮ ಉದ್ಧಾರವನ್ನು ಮಾಡಿಕೊಳ್ಳಲಿಲ್ಲ. ತಮ್ಮಲ್ಲಿರುವ

ದುರ್ಗುಣಗಳ ಮಲಿನತೆಯನ್ನು ತೊಳೆದುಕೊಂಡು ಪರಿಶುದ್ಧರಾಗಲಿಲ್ಲ. ನಾನು ಈ ನಾಡಿನಲ್ಲಿ ರಂಗನಾಥನೆಂಬ ಅಭಿದಾನದಿಂದ ನೆಲಸಿದೆ. ಹಿಂದಿನ ಗೌಡ ಮನೆತನಗಳಿಂದಲೂ, ಇತರ ಭಕ್ತಾದಿಗಳಿಂದಲೂ, ಪೂಜಾದಿ ಕೈಂಕರ್ಯಗಳನ್ನು ಕೈಗೊಳ್ಳುತ್ತ ಅವರ ಇಷ್ಟಾರ್ಥಗಳನ್ನು ಸಲ್ಲಿಸುತ್ತ ಬಂದೆ. ಆದರೆ ಈಗ ಏನನ್ನು ನೋಡುತ್ತಿದ್ದೇನೆ ! ನನ್ನ ಭಕ್ತರ ಹೃದಯಗಳು ಪಿಶಾಚಿಯ ಆವಾಸಸ್ಥಾನಗಳಾಗಿವೆ. ಅವರು ನನ್ನನ್ನು ನಿರ್ಲಕ್ಷಿಸಿ, ನನ್ನ ಸೃಷ್ಟಿಯ ಪವಿತ್ರತೆಯನ್ನು ಉಪೇಕ್ಷಿಸಿ ದ್ವೇಷ, ಅಸೂಯೆ, ವಂಚನೆ, ಕಳವು, ಕೊಲೆ, ಸುಲಿಗೆ, ದರೋಡೆ ಮೊದಲಾದ ರಾಕ್ಷಸೀಕೃತ್ಯಗಳಲ್ಲಿ ನಿರತರಾಗಿದ್ದಾರೆ. ಬಲಿಷ್ಠರಾದವರೇ ಸ್ವಾಮಿಗಳಾಗಿದ್ದಾರೆ. ಅವರ ದಬ್ಬಾಳಿಕೆಗಳು ಮೇರೆ ಮೀರಿ ಹೋಗಿವೆ. ಇಷ್ಟಾದರೂ ಈ ಜನರು ನನ್ನ ಪೂಜಾದಿ ಸಮಾರಂಭಗಳನ್ನು ನಡೆಸುತ್ತಿರುವುದೇಕೆ ಗೊತ್ತೇ? ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ, ತಮ್ಮ ಪ್ರತಿಷ್ಠೆಯನ್ನು ಸಾರಿಕೊಳ್ಳುವುದಕ್ಕಾಗಿ, ತಮ್ಮ ಕೀರ್ತಿ ಗೌರವಗಳನ್ನು ಬೆಳಗಿಕೊಳ್ಳುವುದಕ್ಕಾಗಿ, ತಮ್ಮ ಅಧಿಕಾರವನ್ನು ಮತ್ತೊಬ್ಬರ ಮೇಲೆ ಸ್ಥಾಪಿಸಿಕೊಳ್ಳುವುದಕ್ಕಾಗಿ. ಈಗ ನನಗೆ ಎಲ್ಲೆಲ್ಲಿಯೂ ಹಾಹಾಕಾರವೇ ಕೇಳಿಬರುತ್ತಿದೆ. ಶಾಂತಿ, ಸಮಾಧಾನಗಳ ಸೊಲ್ಲೇ ಇಲ್ಲದಂತಾಗಿ ಹೋಗಿದೆ. ನಡೆ, ಇಲ್ಲಿಂದ ಹೊರಟುಹೋಗೋಣ.

ಆದಿಶೇಷ — ಪ್ರಭು ! ನಾವು ಇಲ್ಲಿಂದ ಹೊರಟುಹೋದರೆ ಭಕ್ತರ ಪಾಡೇನು ?

ಶ್ರೀರಂಗ—ಹಾಗಲ್ಲ, ಆದಿಶೇಷ ! ನನ್ನ ಪ್ರಭಾವದಿಂದ ಒಬ್ಬ ಮಹಾನಾಯಕನನ್ನು ಸೃಷ್ಟಿ ಮಾಡುವೆ. ಆತನ ಮೂಲಕ ಪ್ರಜಾರಕ್ಷಣಾಕಾರ್ಯವನ್ನೆಸಗುವೆ. ಭಕ್ತರ ಪಾಡು ! ಭಕ್ತರಿದ್ದರಲ್ಲವೇ ಪಾಡಿನ ಪ್ರಶ್ನೆ ? ಹುಚ್ಚಾ ! ಎಲ್ಲಿ ಸತ್ಯ, ಧರ್ಮ, ನ್ಯಾಯ, ನಿಷ್ಠೆ, ಶುದ್ಧಾಚರಣೆಗಳಿರುವುದಿಲ್ಲವೋ ಅಲ್ಲಿ ನನ್ನ ಭಕ್ತರಿದ್ದಾರೆಂದು ಭಾವಿಸಿಕೊಂಡಿರುವೆಯಾ ? ಧನಕ್ಕಾಗಿ, ಹೆಣ್ಣಿಗಾಗಿ, ಆಸ್ತಿಗಾಗಿ, ಅಧಿಕಾರ

ಕ್ಕಾಗಿ ಪ್ರತಿನಿತ್ಯ ನಾಯಿಗಳಂತೆ ಕಚ್ಚಾಡುತ್ತಿರುವ ಈ ಜನರನ್ನು ನ್ಯಾಯನಿಷ್ಠರು, ಸತ್ಯಪ್ರೇಮಿಗಳು, ಧರ್ಮಶೀಲರು ಎಂದು ಅರಿತು ಕೊಂಡಿರುವೆಯಾ! ಯಾವ ಪುಣ್ಯ ಕ್ಷೇತ್ರದಲ್ಲಿ ಧರ್ಮಗ್ಲಾನಿಯಾಗುತ್ತ ದೆಯೋ ಅಲ್ಲಿ ನಾನಿರುವುದಿಲ್ಲವೆಂದು ಭಾವಿಸಿಕೋ. ನಡೆ, ಮತ್ತೊಬ್ಬ ಮಹಾಭಕ್ತನು, ನ್ಯಾಯನಿಷ್ಠನು, ಸತ್ಯಪರಿಪಾಲಕನು ಬರುವವರೆಗೂ ಹಿಂದಿರುಗುವುದು ಬೇಡ. ನಡೆ. ಸ್ವಾರ್ಥಿಗಳೂ, ಪಾಪಾಸಕ್ತರೂ, ವಿಷಯ ಸುಖಾಭಿಲಾಷಿಗಳೂ ಆದ ಈ ಜನರು ನನ್ನ ಅಂಶವಾಗಲಿ ಸತ್ವವಾಗಲಿ ಲವ ಲೇಶವೂ, ಇಲ್ಲದ ನನ್ನ ರೂಪಿನ ಪ್ರತಿಮೆಗಳನ್ನೇ ಪೂಜಿಸಿ, ತಮ್ಮ ಸ್ವಾರ್ಥ ವನ್ನು ಸಾಧಿಸಿಕೊಳ್ಳಲಿ, ನಡೆ.

(ಇದಿರಿನಿಂದ ದೊಣ್ಣೆಯನ್ನು ಹಿಡಿದುಕೊಂಡು ಕೆಂಪಣ್ಣನು ಹಾದುಹೋಗು ವನು. ಶ್ರೀರಂಗನಾಥನೂ ಆದಿಶೇಷನೂ ಅವನ ಕಡೆಯೇ ನೋಡುವರು. ಅನಂತರ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿಕೊಳ್ಳುವರು. ಪುನಃ ಕೆಂಪಣ್ಣನು ಹೋದ ಮಾರ್ಗವನ್ನೇ ನೋಡುತ್ತ ನಿಲ್ಲುವರು.)

ದೀಪವು ಆರುವುದು.

ದೃಶ್ಯ—೨.

ರಸ್ತೆ

(ಪಟೇಲ್ ಬೈರಪ್ಪನೂ, ಅನಂತಶಾಸ್ತ್ರಿಗಳೂ ಪ್ರವೇಶಿಸುವರು)

ಬೈರಪ್ಪ—ನೋಡಿ ಶಾಸ್ತ್ರಿಗಳೇ! ಈಗ ನಾನೊಂದು ಮಹಾ ಸಾಹಸಕ್ಕೆ ಕೈ ಹಾಕಿದ್ದೀನಿ. ನನಗೆ ಜಯಾನೂ ಲಭಿಸುತ್ತೇ ಅನ್ನೋ ಭರವಸೆಯೂ ಇದೆ. ಆದರೆ ಇದಕ್ಕೆ ನಿಮ್ಮ ಸಹಕಾರ ಪೂರ್ಣವಾಗಿ ಬೇಕು. ಅದಕ್ಕೋಸ್ಕರಾ ನಿಮ್ಮನ್ನ ಕಾಣಬೇಕಾಯ್ತು.

ಶಾಸ್ತ್ರಿ—ಅದಕ್ಕೇನಂತೆ ಪಟೇಲ್ರೇ! ಆಗ್ಬಾದು. ನಿಮ್ ವಿಚಾರದಲ್ಲಿ ನಾನ್ಯಾವಾಗ ಇಲ್ಲಾ ಅನ್ನೋ ಶಬ್ದಾ ಉಚ್ಚರ್ಸಿದ್ದೀನೀ! ನಿಮ್ ಯಾವ ಕಾರ್ಯದಲ್ಲೂ ನನ್ ಸಹಕಾರ ಇದ್ದೇ ಇದೆ ಅಂತ ತಿಳ್ಕೊಳ್ಳಿ. ತಿಳ್ಕೊಳೋದೇನು, ನೂರಕ್ಕೆ ನೂರ್ಪಾಲು ನಂಬ್ಕೋ ಇಟ್ಕೊಳ್ಳಿ.

ಬೈರಪ್ಪ—ನೋಡಿ ಶಾಸ್ತ್ರಿಗಳೇ! ಈಗ ಸುತ್ಮುತ್ತಿನ್ ಗ್ರಾಮಗಳಿಗೆಲ್ಲಾ ಸರಿಯಾದ ನಾಯಕರೇ ಇಲ್ಲದಂತಾಗಿದೆ. ನಾನು ಅಕ್ಕಪಕ್ಕದ ಗ್ರಾಮಗಳಲ್ಲಿ ಬಲಿಷ್ಠರಾಗಿರೋ ಜನಗಳ ಸ್ನೇಹ ಬೆಳಸ್ಕೋತಾಯಿದ್ದೀನಿ. ಇದರಿಂದ ಈವತ್ತಿನ ನನ್ನ ಸಾಮಾನ್ಯ ಪಟೇಲಿಕೆಯೇನು, ನಾಳೆ ಪಾಳ್ಳೇಗಾರನಾಗೋದಕ್ಕೂ ನನಗೆ ಸಾಧ್ಯವಿದೆ. ಬರೀ ಪಾಳ್ಳೇಗಾರಿಕೆಯೇನು; ಈ ನಾಡಿನ ನಾಯಕನಾಗಿ ಸಿಂಹಾಸನಾ ಹತ್ತಿ ರಾಜ್ಯವಾಳೋದಕ್ಕೂ ಔಕಾಶ ಇದೆ.

ಶಾಸ್ತ್ರಿ—ಬಹಳ ಒಳ್ಳೇದು.

ಬೈರಪ್ಪ—ಬರೀ ಒಳ್ಳೇದು ಅಂದ್ರೇ ಆಗ್ಲಿಲ್ಲ. ಇದನ್ನ ಸಾಧಸ್ಬೇಕೋ ಬ್ಯಾಡ್ವೋ!

ಶಾಸ್ತ್ರಿ—ಹೌದು, ಸಾಧಸ್ಲೇಬೇಕು.

ಬೈರಪ್ಪ—ಸಾಧಸ್ಬೇಕಾದ್ರೇ ಸೈನ್ಯಾ ಕಟ್ಬೇಕು. ಕೋಟೆಗಳನ್ನ ನಿರ್ಮಿಸ್ಬೇಕು. ಅದಕ್ಕೆಲ್ಲಾ ಹಣಬೇಕೋ ಬ್ಯಾಡ್ವೋ!

ಶಾಸ್ತ್ರಿ—ಹೌದು, ಎಲ್ಲಾ ಕಾರ್ಯಕ್ಕೂ ಹಣವೇ ಮುಖ್ಯವಾಗಿ ಬೇಕು.

ಬೈರಪ್ಪ—ಅದಕ್ಕೇ ನಾನ್ ನಿಮ್ ಸಹಕಾರಾ ಕೋರ್ತಾಯಿರೋದು.

ಶಾಸ್ತ್ರಿ—ಅಯ್ಯೋ! ನನ್ಹತ್ರಾ ಹಣಾ ಎಲ್ಲಿದೆ! ನನ್ಹತ್ರಾ ಹಣಾ ಎಲ್ಲಿದೆ! ಬಿಡ್ಗಾಸೂ ಇಲ್ಲಾ. ನನ್ ವಿಚಾರ ನಿಮ್ಗೆ ಗೊತ್ತಿಲ್ವೇ?

ಬೈರಪ್ಪ—ನಿಮ್ಹತ್ರಾ ಹಣಾ ಯಾರ್ರೀ ಕೇಳದ್ರೂ! ನಾನು ಹಣ ಕೂಡ್ಸೋದಕ್ಕೆ ಬೇರೆ ಉಪಾಯಗಳನ್ನೆಲ್ಲಾ ಯೋಚ್ನೆ ಮಾಡ್ಕೊಂಡಿದ್ದೀನಿ. ಅದನ್ನ ಸ್ವಲ್ಪ ಕೇಳೀ ಅಂತಾ.

ಶಾಸ್ತ್ರಿ—ಹಾಗಾದ್ರೇ ಹೇಳಿ, ಹಾಗಾದ್ರೆ ಹೇಳಿ; ಚಿಂತೆಯಿಲ್ಲಾ.

ಬೈರಪ್ಪ—ನೋಡಿ, ಮುಂದಿನ ರಥೋತ್ಸವಕ್ಕೆ ದೂರ ದೂರದಿಂದಾ ಎಲ್ಲಾ ಸಾವರಾರು ಜನಾ ಬರ್ತಾರೆ. ಎಲ್ಲಾ ದಾರಿಗಳಲ್ಲೂ ನಮ್ಮೋರ್ನಾ ನಿಲ್ಸಿದ್ದು, ಸುಲ್ಗೇ ನಡಸ್ಬೇಕು. ಲಕ್ಷಾಂತರ ರೂಪಾಯಿನ ನಗ ನಾಣ್ಯ ಸುಲಭವಾಗಿ ಸಿಕ್ಬಿಡುತ್ತೆ. ಅನಂತರ ಸಾಲ್ದೇ ಹೋದ್ರೇ

ನಮ್‌ಗುಂಪ್ನೋರ್ನಾ ನುಗ್ಸೀ ಗ್ರಾಮಗಳನ್ನೆಲ್ಲಾ ಲೂಟಿ ಹೊಡ್ಸೋದು. ಹ್ಯಾಗಿದೆ ಉಪಾಯ?

ಶಾಸ್ತ್ರಿ—ಉಪಾಯ್ವೇನೋ ಒಳ್ಳೇದೇನೆ. ಆದ್ರೇ ಇದು ಅನ್ಯಾಯ, ಅಧರ್ಮ ಪಾಪಕಾರ್ಯ ,ಚಂಡಾಲ ವೃತ್ತಿ ಅಂತಾ.............

ಬೈರಪ್ಪ—(ಸಿಟ್ಟಿನಿಂದ) ಮುಚ್ರಿಬಾಯ್ ಸಾಕು. ನಾನೇನೋ ನಮ್ ಅಭಿಮಾನಿಗಳು, ನಮಗೆ ಬೇಕಾದವ್ರೂ ಅಂತಾ ಹೇಳದ್ರೇ, ಪಾಪಕಾರ್ಯ ವಂತೇ! ಚಂಡಲವೃತ್ತಿಯಂತೇ! ತಿಳ್ಕೋಳಿ, ನಾವು ಲೂಟೀ ಹೊಡೀ ಬೇಕಾದ್ರೇ ಮೊದ್ಲು ನಿಮ್ಮನೇನೇ! ಅತ್ಯಾಚಾರ, ಅನಾಚಾರಾ ಏನ್ಮಾಡ್ಬೇಕಾದ್ರೂ ಮೊದ್ಲೂ ನಿಮ್ಮನೇ ಮೇಲೇನೇ.

ಶಾಸ್ತ್ರಿ—(ಗಾಬರಿಯಾಗಿ) ಅಯ್ಯೋ! ನಾ ಹೇಳಿದ್ದನ್ನ ನೀವ್ ಸರಿಯಾಗಿ ಅರ್ಥಾನೇ ಮಾಡ್ಯೋಲ್ಲಿಲ್ವಲ್ಲಾ!

ಬೈರಪ್ಪ—ಮುಚ್ರೀ ಬಾಯ್! ಅರ್ಥಾಮಾಡ್ಕೋಲ್ಲಿಲ್ವಂತೇ, ಮಹಾ ಅರ್ಥಾ ಆಗ್ದೇಯಿರೋ ಮಾತಾಡ್ಬಿಟ್ಟಿರೋದು. ನಾನೇನ್ ದನದ ಹೊಟ್ಟೇಲಿ ಹುಟ್ಟಿದ್ದೀನಲ್ಲಾ. ನಿಮ್ಹಾಗೆ ಮನುಷ್ಯರ ಹೊಟ್ಟೇಲೇ ಹುಟ್ಟಿದ್ದೀನು. ನನ್ಗೆಲ್ಲಾ ಅರ್ಥ ಆಯ್ತು.

ಶಾಸ್ತ್ರಿ—ಅದಕ್ಕೇ ನಾನ್ಹೇಳಿದ್ದು, ನಿಮ್ಗೇ ಅರ್ಥವಾಗ್ಲಿಲ್ಲಾ ಅಂತಾ.

ಬೈರಪ್ಪ—ಏನ್ರೀ ಅರ್ಥವಾಗ್ದೇ ಇರೋ ಅಂಥಾ ಒಗ್ಟು ನೀವಾಡಿರೋದು.

ಶಾಸ್ತ್ರಿ—ಅಲ್ಲಾ, ಪಾಪಕಾರ್ಯ, ಚಂಡಾಲವೃತ್ತಿ ಅಂತಾ ಜನಾ ತಿಳ್ಕೋಂಡು ನಮ್ಗೆ ದೂರ್ಬಿದ್ಬಿಟ್ರೇ ನಮಗೆ ತೊಂದ್ರೇ ಆಗ್ಬೌದಲ್ವಾ. ಅದಕ್ಕೆ ನಮ್ ಕಾರ್ಯಸಾಧನೆಯಾಗೋವರೆಗೆ ಬೇರೆ ಎಲ್ಲೂ ಈ ಪ್ರಸ್ತಾಪ ಎತ್ಬೇಡೀ ಅಂತಾ ಹೇಳ್ಬೇಕೂ ಅಂತಾ ನಾನಿದ್ದಿದ್ದೊ.

ಬೈರಪ್ಪ—ಅಷ್ಟೇನೋ!

ಶಾಸ್ತ್ರಿ—ಅಷ್ಟೇನೇ.

ಬೈರಪ್ಪ—ಹಾಗಾದ್ರೇ ನಮ್‌ಕಾರ್ಯ್ಯಾ ನಿಮ್ಗೊಪ್ಗೇ ಆಗದೆ ತಾನೇ?

ಶಾಸ್ತ್ರಿ—ಹೋಹೋ, ಬೇಸಾಗಿ ಒಪ್ಗೇ ಆಗಿದೆ. ನಿಮ್ ಕಾರ್ಯಕೋಸ್ಕರಾ ನಾನು ಕಾಯಾ ವಾಚಾ ಮನಸಾ ದುಡಿಯೋದಕ್ಕಿದ್ಧನಾಗಿದ್ದೀನಿ. ನೀವೇನೂ ಯೋಚ್ನೇನೇ ಇಟ್ಕೋಬ್ಯಾಡಿ. ಈವತ್ತಿಂದಾನೇ ಕಾರ್ಯಾರಂಭ ಮಾಡ್ಬಿಡೋಣಾಂತೆ.

ಬೈರಪ್ಪ—ನೋಡದ್ರಾ? ಆತ್ರದೌನಿಗೆ ಬುದ್ಧಿಮಟ್ಟ ಅನ್ನೋಹಾಗೆ ನಾನೇ ಔಸರದಲ್ಲಿ ಏನೇನೋ ಅಂದ್ಬಿಟ್ಟೆ. ದಯವಿಟ್ಟು ಬೇರೇನೂ ತಿಳ್ಕೊಬ್ಯಾಡಿ. ನಮ್ ಜೊತೇಲಿ ಸಹಕರಿಸಿ ನಮ್ಗೆ ಸಹಾಯ ಮಾಡ್ತಾಯಿರಿ.

ಶಾಸ್ತ್ರಿ—ನಾನೇನೂ ತಿಳ್ಕೊಂಡಿಲ್ಲ. ನೀವ್ ಬೇಸರಾಪಟ್ಕೋಬ್ಯಾಡಿ. ನಾನ್ ಸದಾ ನಿಮ್ ಜೊತೇಲಿ ಸಹಕರ್ಸೋದಕ್ಕೆ, ನಿಮ್ಗೆ ಸಹಾಯ ಮಾಡೋದಕ್ಕೆ, ಸಿದ್ಧನಾಗಿಯೇ ಇರ್ತೀನಿ.

ಬೈರಪ್ಪ—ಹಾಗಾದ್ರೇ ತುಂಬಾ ಸಂತೋಷ. ಇಲ್ನೋಡಿ, ನನ್ ಪ್ರಯತ್ನ ಯಶಸ್ವಿಯಾಗ್ಬಿಟ್ರೇ ನಿಮ್ಮನ್ನೇ ನಾನ್ ಮಂತ್ರಿಯಾಗಿ ಮಾಡ್ಕೊಳ್ಳೋದು.

ಶಾಸ್ತ್ರಿ—ಮಂತ್ರಿಯಾಗೋದು ಒತ್ತಟ್ಟಗಿರ್ಲಿ. ಮೊದ್ಲು ತಮ್ ಪ್ರಯತ್ನ ಯಶಸ್ವಿಯಾದ್ರೇ ಸಾಕು. ಅದನ್ನೇ ನಾನು ಹಾರೈಸ್ತಿರೋದು.

ಬೈರಪ್ಪ—ಅದ್ಯಾಗಾದ್ರೂ ದೇವರ ದಯೆಯಿದ್ರೇ ನಡ್ದೇಹೋಗುತ್ತೆ. ಬನ್ನಿ ಮನೇಗ್ಹೋಗೋಣಾ.

ಶಾಸ್ತ್ರಿ—ತಾವ್ ನಡೀರಿ. ನಾನ್ ಸ್ವಲ್ಪ ಅಡ್ಕೇ ತೋಟಕ್ಹೋಗ್ಬಿಟ್ಟು ಮಧ್ಯಾಹ್ನದ್ಹೊತ್ತಿಗೆ ಬರ್ತೀನಿ. ಅನಂತರ ಕೂತ್ಕೊಂಡು ಮುಂದೇನೇನ್ ಮಾಡ್ಬೇಕು ಅನ್ನೋದನ್ನಾ ಯೋಚ್ನೆ ಮಾಡೋಣಾಂತೆ.

ಬೈರಪ್ಪ—ಹಾಗೇ ಮಾಡಿ. ನಾನ್ ಹೋಗ್ತೀನಿ ನಮಸ್ಕಾರ (ಹೋಗುವನು.)

ಶಾಸ್ತ್ರಿ—ನಮಸ್ಕಾರ, ನಮಸ್ಕಾರ (ಎರಡು ಹೆಜ್ಜೆಹೋಗಿ ಹಿಂತಿರುಗಿ ನಿಂತು) ಎಲಾ ಬಡ್ಡೀಮಗ್ನೇ! ಆಗ್ಲೇ ನಿನ್ಗೆ ರೆಕ್ಕೆ ಹುಟ್ಬಿಡ್ತೇ? ನಾನೆಲ್ಲೋ ದನಾ ಮೇಯ್ಸೋ ಹುಡ್ಗ್ರೇರ್ನ ಬೆಸ್ರಾಡೋದ್ರಲ್ಲೇ, ಬಡ್ತಾನಕ್ ಸಿಕ್ಹಾಕ್ಕೊಂಡು ದಿಕ್ಕೂದೆಸೆ ತಪ್ಪಿರೋ ಹೆಂಗ್ಸರ್ನ ಎಳ್ದಾಡೋದ್ರಲ್ಲೇ ತೃಪ್ತಿಪಟ್ಕೊಂಡಿರ್ತಾನೇ ಅಂತಾ ತಿಳ್ಕೊಂಡಿದ್ದೆ. ಆದ್ರೇ ಈಗ ರೆಕ್ಕೆ ಕಟ್ಕೊಂಡ್ಹಾರೋದಕ್ಪ್ರಯತ್ನ ಪಡ್ತಾಯಿದ್ದಾನಲ್ವೇ? ನಾನ್ ನಿನ್ ಜೊತೇಲೇ ಇದ್ಕೊಂಡು, ನೀನ್ಹೇಳ್ದಾಗೆ

ಕೇಳೋನಂತೆ ನಟಿಸ್ತಾ ನಿನ್‌ರೆಕ್ಕೇ ಕತ್ತರ್ಸಿರ್ ನಿನ್ಗೆ ಮಣ್ ಮುಕ್ಕಸ್ದೇ ಯಿದ್ರೇ (ಜುಟ್ಟನ್ನು ತಿರುವುತ್ತ) ನಾನ್ ಅನಂತಶಾಸ್ತ್ರೀನೇ ಅಲ್ಲಾ ಕಣೋ. (ಹೋಗುವನು)

ದೃಶ್ಯ—೩

ಕೆಂಪಮ್ಮನ ಮನೆ

(ಕೆಂಪಮ್ಮನು ಆದಿಶಕ್ತಿಯ ಮೂರ್ತಿಯ ಇದಿರಿನಲ್ಲಿ ಹಾಡುತ್ತಿರುವಳು)

ಕೆಂಪಮ್ಮ—ತಾಯೇ, ಕೆಂಪಾಂಬಿಕೆ! ಭುವನೇಶ್ವರಿ! ಜಗಜ್ಜನನಿ! ನಮ್ಮ ಯಾವ ಮಹಾಪರಾಧಕ್ಕಾಗಿ ನೀನು ನಮಗಿಂತಹ ಉಗ್ರವಾದ ಶಿಕ್ಷೆಯನ್ನು ಕೊಡುತ್ತಿರುವೆಯಮ್ಮಾ? ಲೋಕ ಭಯಂಕರರಾದ ಘೋರ ರಾಕ್ಷಸರನ್ನು ನಿರ್ನಾಮಗೈದು ಜಗದೋದ್ಧಾರಮಾಡಿದ ಮಹಾದೇವಿ! ನಿನ್ನ ಕೋಪಕ್ಕೆ ನಾವು ಸಾಟಿಯೇ? ಸಾಮ್ರಾಜ್ಯವನ್ನಾಳುತ್ತಿದ್ದ ನಮಗೆ ಇಂದು ಹೆರರ ಮನೆಯ ಕೂಲಿಯೂ ಗತಿಯಿಲ್ಲವಾಗಿದೆ. ಅರಮನೆಗಳಲ್ಲಿ ವಾಸಿಸುತ್ತಿದ್ದವರಿಗೆ ಇಂದು ಮುರುಕು ಗುಡಿಸಿಲಿಗೂ ಅಭಾವವಾಗಿದೆ. ಮೃಷ್ಟಾನ್ನ ಸವಿಯುತ್ತಿದ್ದವರಿಗೆ ರಾಗಿ ರೊಟ್ಟಿಯ ಒಂದು ಚೂರಿಗೂ ಮಾರ್ಗವಿಲ್ಲವಾಗಿದೆ. ರಾಜ್ಯವಿಲ್ಲ, ಅರಮನೆಯಿಲ್ಲ, ಸವಿಯೂಟವಿಲ್ಲ, ಪರಿವಾರವಿಲ್ಲ. ಸಾಲದ್ದಕ್ಕೆ ಜ್ವರ, ತಲೆನೋವು. ಕೂಲಿಮಾಡಲೂ ಕೈಯಲ್ಲಾಗುತ್ತಿಲ್ಲ. ಈಗೇನು ಮಾಡಲಿ? ಯಾರಲ್ಲಿ ಬೇಡಲಿ? ಯಾರಲ್ಲಿ ಮೊರೆಯಿಡಲಿ? ಎರಡು ದಿನಗಳಿಂದಲೂ ಹಸಿದಿರುವ ಮಕ್ಕಳ ಬಾಡಿದ ಮುಖಗಳನ್ನು ಹೇಗೆ ನೋಡಲಿ? ಹೇಗೆ ತಾನೇ ಅವರನ್ನು ಸಂತೈಸಲಿ? ಅಮ್ಮಾ! ಮಹಾದೇವಿ! ಆದಿಶಕ್ತಿ! ರಾಜರಾಜೇಶ್ವರಿ! ಪ್ರಸನ್ನಳಾಗು. ಕೃಪೆ ತೋರು. ನನಗಾಗಿ ಅಲ್ಲದಿದ್ದರೂ ನನ್ನ ನಿರ್ದೋಷಿ ಹಸುಳೆಗಳಿಗಾಗಿಯಾದರೂ ಮರುಗು. ಇನ್ನು ಈ ಪರೀಕ್ಷೆ ಸಾಕು ತಾಯಿ! ಇನ್ನು ಈ ಪರೀಕ್ಷೆ ಸಾಕು (ಕಣ್ಣುಮುಚ್ಚಿಕೊಂಡು ನಿಲ್ಲುವಳು. ಕೆಂಪಣ್ಣನು ಓಡಿಬರುವನು.)

ಕೆಂಪಣ್ಣ—ಅಮ್ಮಾ! ಅಮ್ಮಾ! ರೊಟ್ಟಿ ಕೊಡಮ್ಮಾ! (ತಾಯಿಯನ್ನು ಹಿಡಿದು ಎಳೆಯುವನು.)

ಕೆಂಪಮ್ಮ—(ಕಣ್ಣುಮುಚ್ಚಿಕೊಂಡೇ) ಊಂ!

ಕೆಂಪಣ್ಣ—ರೊಟ್ಟಿ ಕೊಡಮ್ಮಾ?

ಕೆಂಪಮ್ಮ—(ಕಣ್ಣುಬಿಟ್ಟು) ಊಂ! ಊಂ!

ಕೆಂಪಣ್ಣ—ಏನ್ ಊಂ. ಊಂ? ರೊಟ್ಟಿಕೊಡಮ್ಮಾ ಅಂತಾ ಎಷ್ಟುಸಲ ಕೇಳೋದು?

ಕೆಂಪಮ್ಮ—ರೊಟ್ಟಿ ಮಾಡಿಲ್ಲ ಮಗೂ.

ಕೆಂಪಣ್ಣ—ರೊಟ್ಟಿ ಮಾಡಿಲ್ಲ! ಹಾಗಾದ್ರೇ ಅನ್ನಾಮಾಡಿದ್ರೇ ಅದನ್ನೇ ಕೊಡು.

ಕೆಂಪಮ್ಮ—ಅನ್ನವನ್ನೂ ಮಾಡಿಲ್ಲಪ್ಪಾ.

ಕೆಂಪಣ್ಣ—ಅನ್ನವನ್ನೂಮಾಡಿಲ್ಲ, ರೊಟ್ಟಿಯನ್ನೂ ಮಾಡಿಲ್ಲ. ಹೋಗ್ಲಿ ತಿಂಡಿಯನ್ನು ಮಾಡಿದ್ದರೆ ಅದನ್ನೇ ಕೊಡು.

ಕೆಂಪಮ್ಮ—ತಿಂಡಿಯನ್ನೂ ಮಾಡಿಲ್ಲ, ಮಗೂ.

ಕೆಂಪಣ್ಣ—ರೊಟ್ಟಿಯನ್ನೂ ಮಾಡಿಲ್ಲ. ಅನ್ನವನ್ನೂ ಮಾಡಿಲ್ಲ. ತಿಂಡಿಯನ್ನೂ ಮಾಡಿಲ್ಲ. ನೆನ್ನೆಯಿಂದ ತಿನ್ನಲು ನೀನು ನನಗೇನೂ ಕೊಡುತ್ತಿಲ್ಲ. ನಾನು ಕಾಡಿನ ನೇರಳೆಹಣ್ಣನ್ನು ತಿಂದು ಹೊಟ್ಟೆತುಂಬಿಕೊಳ್ಳುತ್ತಿದ್ದೀನಿ. ನಿನಗೆ ನನ್ನಮೇಲೆ ಸ್ವಲ್ಪವಾದರೂ ಪ್ರೀತಿಯಿಲ್ಲ. ನೀನು ನನಗೆ ಅನ್ನವನ್ನೂ ಹಾಕದೇನೇ ಸಾಯಿಸಬೇಕೆಂದಿದ್ದೀಯೇನಮ್ಮಾ.

ಕೆಂಪಮ್ಮ—ಕೂಗಬೇಡಪ್ಪಾ. ಅಕ್ಕಪಕ್ಕದವರು ಕೇಳಿಯಾರು.

ಕೆಂಪಣ್ಣ—ಕೇಳಲಿ. ಬೇಕಾದಂತೆ ಕೇಳಲಿ. ನಾನು ಕೂಗಿಕೊಳ್ಳುತ್ತೇನೆ. ಗಟ್ಟಿಯಾಗಿ ಕಿರುಚಿಕೊಳ್ಳುತ್ತೇನೆ. ನಮ್ಮಮ್ಮ ಅನ್ನವನ್ನು ಹಾಕುತ್ತಿಲ್ಲ ಎಂದು ಕೇರಿಯಲ್ಲೆಲ್ಲಾ ಸಾರಿಕೊಂಡು ಬರುತ್ತೇನೆ.

ಲಕ್ಷ್ಮೀ—(ಕಂಕುಳಲ್ಲಿ ಸೌದೇಚೂರಿನ ಕುಕ್ಕೆಯನ್ನು ಇರಿಕಿಕೊಂಡು ಬರುವಳು) ಅಣ್ಣಾ! ಅಣ್ಣಾ! ಇದ್ಯಾಕಣ್ಣಾ ಹೀಗೆ ಕೂಕ್ಕೋತಾಯಿದ್ದೀಯಾ? ಅಮ್ಮನ್ಮೇಲ್ಯಾಕೆ ರೇಗ್ತಾಯಿದ್ದೀಯಾ?

ಕೆಂಪಣ್ಣ—ಸಾಕ್ ಸುಮ್ನಿರೇ ನಿನ್ ಪಾಡಿಗ್ ನೀನು. ಓಹೋಹೋ! ಬಂದ್ಬಿಟ್ಲೊ ಇಲ್ಲಿ, ಅಮ್ಮನ್ ಪರ ವಹಿಸ್ಕೊಂಡು. ನನ್ಗ ಕೊಡ್ದೇನೇ ಬಚ್ಚಿಟ್ಟೂ ನೀನ್ ಕೇಳಿಕೇಳ್ದಾಗ್ಲೆಲ್ಲಾ ಅಮ್ಮಾ ಹ್ಯಾಗೂ ಊಟಾ, ತಿಂಡಿ ಎಲ್ಲಾ ಕೊಟ್ಬಿಡ್ತಾಳೋ ಇಲ್ವೋ ನಿನ್ಗೇ? ನಾನ್ ತಾನೇ ಹೊಟ್ಟೆಗೆನೂ ಇಲ್ದೇ ಸಾಯ್ತಿರೋನು?

ಲಕ್ಷ್ಮೀ—ಇಲ್ಲದ್ ಸುಳ್ಳೆಲ್ಲಾ ಹೇಳ್ಬ್ಯಾಡಣ್ಣಾ! ನಿನ್ಗ ಕೊಡ್ದೇ ಬಚ್ಚಿಟ್ಟ್ರೆ ಅಮ್ಮಾ ಯಾವಾಗ್ಲೂ ನನ್ಗೇ ಊಟಾ ತಿಂಡೀ ಏನೂ ಕೊಟ್ಟಿಲ್ಲ.

ಕೆಂಪಣ್ಣ—ಸುಳ್ಳೋಗಿಳ್ಳೊ ಅಂತ ಹೇಳದ್ರೇ, ಇಲ್ನೋಡಿಲ್ಲಿ? (ಕೋಲನ್ನು ಮೇಲಕ್ಕೆತ್ತಿ) ಹೊಡ್ದು ಸಾಯ್ಸ್ಬಿಟ್ಟೇನು.

ಲಕ್ಷ್ಮೀ—ಸಾಯ್ಸೇಬಿಡೂ. ನೆನ್ನೆ ಬೆಳಿಗ್ಗೆಯಿಂದಾ ಹ್ಯಾಗೂ ಹೊಟ್ಟೆಗೇನೂ ಇಲ್ಲ. ಬರೀ ನೀರ್ ಕುಡ್ದೇ ಹೊಟ್ಟೇತುಂಬ್ಕೋತಾ ಇದ್ದೀನಿ. ಹೊಟ್ಟೆಗಿಲ್ದೇ ಸಾಯೋದಕ್ಕಿಂತಾ, ನಿನ್ ಕೈಯಿಂದ ಏಟ್ ತಿಂದೇ ಸತ್ಹೋಗ್ಬಿಡೋಣ.

ಕೆಂಪಣ್ಣ—ಹಾಂ? ನೀನೇನೇಳ್ತಾಯಿದ್ದಿಯಾ? ಅಮ್ಮ ನಿನ್ಗೂ ಹೊಟ್ಟೇಗೇನೂ ಹಾಕ್ತಾಯಿಲ್ವೇ?

ಲಕ್ಷ್ಮೀ—ಅಮ್ಮನ್ಗಿದ್ರೇ ತಾನೇ ನನ್ಗಾಕೋದು? ಅಮ್ಮನಿಗೆ ಮೂರ್ ದಿನದಿಂದಾನೂ ಜ್ವರ, ತಲೆನೋವು. ಒಂದು ತೊಟ್ ಗಂಜೀನಾದ್ರೂ ಕಾಯಿಸ್ ಕೋಡೋಣಾ ಅಂದ್ರೇ, ಮನೇಲ್ ಒಂದ್ ಕಾಳ್ ದವ್ಸಾ ಕೂಡಾ ಇಲ್ಲ. ಕುಡಿಯೋದಕ್ ಸ್ವಲ್ಪ ಬಿಸ್ನೀರಾದ್ರೂ ಕಾಯ್ಸ್ಕೊಡೂ ಅಂತಾ ಅಮ್ಮಾ ಕೇಳದ್ಲು. ಮನೇಲ್ ನೋಡದ್ರೇ ಒಂದ್ ಕಡ್ಡಿ ಸೌದೇನೂ ಇಲ್ಲಿಲ್ಲ. ಈಗ್ಹೋಗಿ ಸೌದೆಕಡ್ಡಿಗಳ ಆದ್ಕ್ಕೊಂಡ್ ಬಂದಿದ್ದೀನಿ. ಏನ್ಮಾಡೋದು? ನಮ್ಗ್ಯಾರೂ ಗತೀನೇ ಇಲ್ಲ. ಏನಣ್ಣಾ! ಅಪ್ಪಾ ಹೋದ್ಮೇಲೆ ನೀನೇ ಈ ಮನೇಗ್ ಗಂಡ್ಸಲ್ವೇ? ನೀನೇ ಯಜ್ಮಾನ ಅಲ್ವೇ? ನಾವೆಲ್ಲಾ ಇಷ್ಟ ತೊಂದ್ರೇಪಡ್ತಾಯಿದ್ರೂ ನೀನ್ ನೋಡ್ಕೊಂಡ್ ಸುಮ್ನಿದ್ದೀಯಾ? ನಮ್ಮನ್ನೆಲ್ಲಾ

ಹೀಗೆ ಸತ್ತ್ಹೋಗೋದಕ್ಕಿಬಿಟ್ಟಿದ್ದೀಯಾ? ನಿನ್ಗಿಂತಾ ಚಿಕ್‌ವಯಸ್ನೋ
ಹೊಲಾಗದ್ದೇಗಳಲ್ಲಿ ದುಡೀತಿಲ್ವೇ? ಸಂಪಾದ್ನೇಮಾಡಿ ತಂದು ವ
ಗ್ಹಾಕ್ತಾಯಿಲ್ವೇ?

ಕೆಂಪಣ್ಣ—(ಪಕ್ಕಕ್ಕೆ ತಿರುಗಿ) ಅಯ್ಯೋ! ನಾನೆಂಥಾ ಪಾಪಿ! ಮನೇವ್ರ
ಇಷ್ಟ್‌ತೊಂದ್ರೇಲಿದ್ರೂ, ಒಂದ್‌ತೊಟ್ ಗಂಜಿಗಾಗಿ,
ರೊಟ್ಟಿಚೂರಿಗಾಗಿ, ಬಾಯ್ ಬಾಯ್ ಬಿಡ್ತಾಯಿದ್ರೂ ನಾನ್‌ವ
ಅನ್ನಾಹಾಕ್ಲಿಲ್ಲಾ, ರೊಟ್ಟೀಕೊಡ್ಲಿಲ್ಲಾ ಅಂತಾ,ರೋಗದಿಂದ ನರ
ಯಿರೋ ತಾಯಿಯೊಡನೆ ಜಗಳ ಆಡುತ್ತಿದ್ದೇನೆಯೆ? ಹಸಿವಿನಿ
ತಂದಿರುವ ತಂಗಿಗೆ ಬೈಯುತ್ತಿದ್ದೇನೆಯೋ? ಗದರಿಸು
ದ್ದೇನೆಯೋ? ನನ್ನಂಥಾ ಸಾವಿರ ಮಕ್ಕಳಿದ್ದರೂ ಹೆತ್ತವರಿಗೇನೇ
ಸುಖವಿಲ್ಲ. ನನಗಿಂತ ಚಿಕ್ಕವಯಸ್ಸಿನವರೆಲ್ಲಾ ದುಡಿಯುತ್ತಿರುವ
ತಂದೆತಾಯಿಗಳನ್ನು ಸಾಕುತ್ತಿರುವಾಗ ನಾನು ಮಾತ್ರ ಸೋವ
ಯಾಗಿರುವೆನೇ? ಅಜ್ಞಾನಿಯಾಗಿರುವೆನೇ? (ಕೈಗಳನ್ನು ಮೇಲಕ್ಕೆ
ಹೇ ದೇವದೇವಾ! ರಂಗನಾಥಾ! ನನಗೆ ಒಳ್ಳೆಯ ಮಾರ್ಗವ
ತೋರಿಸು. ಬೇರೆಯವರು ಕಷ್ಟಪಟ್ಟು ಸಂಪಾದಿಸಿದ ಅನ್ನವ
ತಿನ್ನದಿರುವಂಥಾ ಸದ್ಬುದ್ಧಿಯನ್ನು ಕರುಣಿಸು. ನಾನು ಕಷ್ಟಪ
ದುಡಿದು ಮನೆಯವರಿಗೆ ತಂದುಹಾಕುವಂಥಾ ಚೈತನ್ಯವನ್ನು ಅನ
ಹಿಸು. (ಲಕ್ಷ್ಮಿಯ ಸಮೀಪಕ್ಕೆ ಹೋಗಿ) ಲಕ್ಷ್ಮೀ! ನನ್ನ ಮು
ತಂಗಿ! ನೀನೂ ನಿಶ್ಚಯವಾಗಿಯೂ ನೆನ್ನೆಯಿಂದ ಏನೂ ತಿಂದಿಲ್ಲ

(ಲಕ್ಷ್ಮಿ ಮೌನವಾಗಿ ತಲೆಯಾಡಿಸುವಳು)

ಕೆಂಪಣ್ಣ—ನಿನಗೆ ಹಸಿವಾಗ್ತಿದೆಯೇ?

ಲಕ್ಷ್ಮೀ—(ಹೌದು ಎನ್ನುವಂತೆ ತಲೆಯಾಡಿಸಿ ಅನಂತರ ಗಾಬರಿಗೊಂ
ಇಲ್ಲ, ನನಗೆ ಹಸಿವೇ ಆಗ್ತಿಲ್ಲ. ನನಗೆ ಹಸಿವೇ ಆಗ್ತಿಲ್ಲ.

ಕೆಂಪಣ್ಣ—(ಖಿನ್ನನಾಗಿ) ನನಗೆ ಗೊತ್ತಿದೆ. ನಿನಗೆ ಹಸಿವಾಗ್ತಿದೆ. ಹೌ
ನಿನಗೆ ಹಸಿವಾಗ್ತಿದೆ. ನೀನು ಬಾಯಿಬಿಟ್ಟು ಹೇಳುತ್ತಿಲ್ಲ. ದೇವ
ನಿನಗೆಂಥಾ ಸಹನೆಯನ್ನು ಕೊಟ್ಟಿದ್ದಾನೇ? ಆದರೆ ಲಕ್ಷ್ಮೀ, ನನ್ನ
ಅಣ್ಣನು ನಿನಗಿರುವಾಗ ಇನ್ನುಮೇಲೆ ನೀನು ಹಸಿವಿನಿಂದ ನ

ಬೇಕಾಗಿಲ್ಲ. (ಕೈಯನ್ನು ಮೇಲಕ್ಕೆತ್ತಿ) ನಾನು ಹೊಲಗಳಲ್ಲಿ ಹೋಗಿ ದುಡಿಯುತ್ತೇನೆ. ಗದ್ದೆಗಳಲ್ಲಿ ಹೋಗಿ ದುಡಿಯುತ್ತೇನೆ. ಬೇಕಾದಷ್ಟು ದವಸವನ್ನು ತಂದು ಸುರಿದುಬಿಡುತ್ತೇನೆ. (ಕುಪ್ಪಸವನ್ನು ಮುಟ್ಟಿನೋಡಿ) ಓಃ! ನಿನ್ನ ಬಟ್ಟೆಗಳೆಲ್ಲಾ ಹರಿದುಹೋಗಿವೆ. ಲಕ್ಷ್ಮೀ! ನಾನು ಹಣವನ್ನು ಸಂಪಾದನೆಮಾಡಿ ನಿನಗೆ ರೇಷ್ಮೆಯ ಕುಪ್ಪಸವನ್ನು ತಂದುಕೊಡುತ್ತೇನೆ. ಜರತಾರಿಯ ಸೀರೆಯನ್ನು ತಂದುಕೊಡುತ್ತೇನೆ. (ಮೈಯನ್ನೆಲ್ಲಾ ನೋಡುತ್ತ) ನಿನ್ನ ಮೈಮೇಲೆ ಒಡವೆಯ ಒಂದು ಚೂರೂ ಇಲ್ಲ ಲಕ್ಷ್ಮೀ. ನಾನು ನಿನ್ನ ಕೈಗೆ ಚಿನ್ನದ ಕಡಗವನ್ನು ಮಾಡಿಸಿಕೊಡುತ್ತೇನೆ. ನಿನ್ನ ಕಿವಿಗೆ ಜುಂಕಿಯ ವಾಲೆಗಳನ್ನು ಮಾಡಿಸಿಕೊಡುತ್ತೇನೆ. ಕತ್ತಿಗೆ ಗುಂಡಿನ ಸರವನ್ನು ಮಾಡಿಸಿಕೊಡುತ್ತೇನೆ. ಇನ್ನುಮೇಲೆ ಲಕ್ಷ್ಮೀ, ನೀನು ಸೌದೆ ಕಡ್ಡಿಯನ್ನಾರಿಸಲು ಹೋಗಲೇಕೂಡದು. (ಕಂಕುಳಲ್ಲಿದ್ದ ಕುಕ್ಕೆಯನ್ನು ಕಿತ್ತುಕೊಂಡು) ನಾನೇ ಹೋಗಿ ಸೌದೆಯನ್ನು ಕಡಿದುಕೊಂಡು ತರುತ್ತೇನೆ. ತಿಳೀತೇ ?

(ಲಕ್ಷ್ಮಿ ಮುಗುಳ್ನಗೆ ಬೀರಿ ತಲೆದೂಗುವಳು)

ಕೆಂಪಣ್ಣ—(ತಾಯಿಯ ಹತ್ತಿರಕ್ಕೆ ಬಂದು ಭುಜದ ಮೇಲೆ ಎರಡೂ ಕೈಗಳನ್ನಿಟ್ಟು) ಅಮ್ಮಾ ನನ್ನ ಮಾತನ್ನು ಕೇಳಿ ನಿನಗೆ ಬೇಸರವಾಯಿತೇನಮ್ಮಾ? ನನ್ನ ಕೋಪವನ್ನು ನೋಡಿ ನಿನ್ನಮನಸ್ಸಿಗೆ ನೋವಾಯಿತೇನಮ್ಮಾ?

ಕೆಂಪಮ್ಮ—ಇಲ್ಲಾ ಮಗನೇ! ಮಕ್ಕಳು ಎಷ್ಟೇ ಬಿರುಸಾಗಿ ನುಡಿದರೂ, ಕೋಪಗೊಂಡರೂ ಅದರಿಂದ ಹೆತ್ತತಾಯಿಗೆ ಅಷ್ಟಾಗಿ ನೋವಾಗುವುದಿಲ್ಲ. ಆದರೆ ಅದೇ ಮಕ್ಕಳು ತಾಯಿಯ ಇದಿರಿನಲ್ಲಿ ಅಮ್ಮಾ, ಹೊಟ್ಟೆಹಸಿಯುತ್ತೆ ಎಂದು ದೀನಸ್ವರದಲ್ಲಿ ಹೇಳುವಾಗ, ಆ ನುಡಿ ತಾಯಿ ಕಿವಿಯಲ್ಲಿ ಕಾದ ಸೀಸವಾಗಿ ಪ್ರವೇಶಿಸುತ್ತದೆ. ಅವಳ ಹೃದಯ ಒಡೆದು ಸಾವಿರ ಹೋಳಾಗಿಹೋಗುತ್ತದೆ. ಅವಳ ಹೆತ್ತ ಕರುಳು ಕಿತ್ತು ಈಚೆಗೆ ಬಂದುಬಿಡುತ್ತದೆ. ಏನು ಮಾಡಲಿ? ಗಂಡನ ಆಶ್ರಯವನ್ನು ಯಮಧರ್ಮನು ಕಿತ್ತುಕೊಂಡ. ಇದ್ದ ಆಸ್ತಿಯನ್ನೂ

ಮನೆಮಠವನ್ನೂ, ದುಷ್ಟನಾದ ಪಟೇಲ್ ಬೈರಪ್ಪ ಕಿತ್ತುಕೊಂಡ. ಆದರೆ ನಿಮ್ಮನ್ನು ದುರವಸ್ಥೆಯಲ್ಲಿ ನೋಡುತ್ತಿರುವ ಈ ಹಾಳು ಕಣ್ಣುಗಳನ್ನು ಮಾತ್ರ ಭಗವಂತನು ಕಿತ್ತುಕೊಳ್ಳಲಿಲ್ಲ. (ಸೆರಗಿನಿಂದ ಮುಖವನ್ನು ಮುಚ್ಚಿಕೊಳ್ಳುವಳು)

ಕೆಂಪಣ್ಣ—ಅಮ್ಮಾ! ಅಮ್ಮಾ! ನೀನಳ್ಬ್ಯಾಡಮ್ಮಾ ನಾನಿರ್ವಾಗ ನೀನ್ಯಾಕಮ್ಮಾ ಚಿಂತೆ? ನಾನಿನ್ಮೇಲೆ ಕಷ್ಟಾಪಟ್ ದುಡೀತೀನಿ. ವಾರಕ್ಕೆ ಹೊಲಾ ಮಾಡ್ತೀನಿ. ಗದ್ದೇ ಮಾಡ್ತೀನಿ. ಬಾಳೇತೋಟ ಬೆಳಸ್ತೀನಿ. ಮನೆಲೆಲ್ಲ ದವ್ಸಾತಂದ್ ತುಂಬಾಕ್ಬಿಡ್ತೀನಿ. ನಿನ್ಗೆ ಮಂಚದ ಮೇಲೆಕೂರ್ಸಿ ಸಾಕ್ತೀನಮ್ಮಾ. ಮಂಚದ್ಮೇಲೇ ಕೂರ್ಸಿ ಸಾಕ್ತೀನಿ. ಓ! ನಿನ್ಗೆಜ್ವರಾ ಅಂತಾ ಲಕ್ಷ್ಮೀ ಹೇಳದ್ಲಲ್ವೇ? ತಡಿ, ಈಗ್ಲೇ ಹೋಗಿ ಪಂಡಿತ್ರ್ಯತ್ರ ಔಷ್ದೀ ತಂದ್‌ಕೊಡ್ತೀನಿ.

ಕೆಂಪಮ್ಮ—ಬೇಡ ಮಗ್ನೇ, ನಿನ್ ಸಂಜೀವನದಂತಾ ಮಾತುಗಳನ್ನ ಕೇಳದ್ಮೇಲೆ ನನ್‌ಜ್ವರ, ತಲೇನೋವು, ಎಲ್ಲಾ ಎಲ್ಲೋ ಓಡ್ಹೋಗ್ಬಿಟ್ವು. ಈಗ ನಾನ್ ಸ್ವಸ್ಥವಾಗಿದ್ದೀನಿ. ನನ್ಗೆ ಔಷ್ದೀಬೇಡ.

ಕೆಂಪಣ್ಣ—ಹಾಗಾದ್ರೇ ಅಮ್ಮಾ! ನಾನ್‌ಹೋಗಿ ಕೂಲಿಮಾಡ್ಕೊಂಡು ಸಾಯಂಕಾಲದ್‌ಹೊತ್ತಿಗೆ ದವ್ಸಾ ತರ್ತೀನಮ್ಮ.

ಕೆಂಪಮ್ಮ—ತಡೀ ಮಗ್ನೇ! (ಒಳಗೆ ಹೋಗಿ ಕಾಳನ್ನು ತರುವಳು) ತಗೋ ಮಗ್ನೇ! ಹುರ್ದಿದ್‌ಸ್ವಲ್ಪ ಹುಳ್ಳೀಕಾಳಿತ್ತು. ಇದನ್ ತಗೋಂಡ್ಹೋಗು.

ಕೆಂಪಣ್ಣ—ಬ್ಯಾಡಮ್ಮಾ. ಲಕ್ಷ್ಮೀಗೆ ಕೊಟ್ಬಿಡೂ. ನನ್ಗ್ ಬ್ಯಾಡ.

ಕೆಂಪಮ್ಮ—ಇರ್ಲೀ ತಗೋಂಡ್ಹೋಗಪ್ಪ, ಲಕ್ಷ್ಮಿಗೂ ಅರ್ಧಾ ಇಟ್ಟಿದ್ದೀನಿ.

ಕೆಂಪಣ್ಣ—ಹಾಗಾದ್ರೇ ನನ್ಗೆ ಆಶೀರ್ವಾದಮಾಡಿ ಕಳ್ಸಿಕೊಡಮ್ಮಾ (ಕಾಲಿಗೆ ನಮಸ್ಕರಿಸುವನು).

ಕೆಂಪಮ್ಮ—ದೀರ್ಘಾಯುಷ್ಯವಂತನಾಗಿ ಬಾಳು.ಏಳಪ್ಪಾ,ನನ್ ಆಶೀರ್ವಾದವೇನು? ದೇವಾದಿದೇವನಾದ ರಂಗನಾಥನ ಆಶೀರ್ವಾದವಿರಬೇಕು. ಭಕ್ತಿಯಿಂದ ಒಮ್ಮೆ ಅವನನ್ನು ಪ್ರಾರ್ಥಿಸೋಣ. ಅವನೇ ನಮ್ಮೆಲ್ಲರನ್ನೂ ಕಾಪಾಡುವವನು.

(ಎಲ್ಲರೂ ಹಾಡುವರು)

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ದೃಶ್ಯ—೪

(ರಸ್ತೆ. ಶ್ರೀರಂಗನಾಥ ಆದಿಶೇಷರು ಹಾಡುತ್ತಾ ಪ್ರವೇಶಿಸುವರು)

ಆದಿಶೇಷ—(ಪಕ್ಕಕ್ಕೆ ತಿರುಗಿ) ಪ್ರಭು ಅಲ್ಲಿ ಬರುತ್ತಿರುವ ಆ ಬಾಲಕನು ಯಾರ್ರು?

ಶ್ರೀರಂಗ-ಅವನು ನನ್ನ ಮಹಾ ಭಕ್ತನಾಗಿದ್ದ, ರಣಭೈರೇಗೌಡನ ವಂಶದ ಬಾಲಕನಲ್ಲವೆ?

ಆದಿಶೇಷ—ಪ್ರಭು ಆತನ ಮುಖದ ಮೇಲೆ, ಎಂತಹ ತೇಜಸ್ಸಿದೆ, ದೃಷ್ಟಿಯಲ್ಲಿ ಎಂತಹ ಗಾಂಭೀರ್ಯವಿದೆ! ಆತನ ನಡಿಗೆಯಲ್ಲಿ ಕಷ್ಟಗಳನ್ನೆಲ್ಲಾ ತುಳಿದು ಸಾಗುವ ಎಂತಹ ಸಾಮರ್ಥ್ಯವಿದೆ! ಪ್ರಭು ಪ್ರಜಾನಾಯಕನಾಗುವ ಸಲ್ಲಕ್ಷಣಗಳೆಲ್ಲವೂ ಈ ಬಾಲಕನಲ್ಲಿ ಒಡೆದು ಮೂಡಿವೆಯಲ್ಲವೆ!

ಶ್ರೀರಂಗ—ನಿಜ. ನಿಶ್ಚಯವನ್ನೇ ಹೇಳಿದೆ ಆದಿಶೇಷ. ಆದರೆ ನಾವು ಈಗ ಇವನ ಚಿತ್ತಸ್ಥೈರ್ಯವನ್ನು ಪರೀಕ್ಷಿಸೋಣ.

ಆದಿಶೇಷ—ಹೌದು ಪ್ರಭು, ಪರೀಕ್ಷಿಸಬೇಕು. ಅಗತ್ಯವಾಗಿ ಪರೀಕ್ಷಿಸಲೇಬೇಕು.

(ದೀಪವು ಆರುವುದು. ಮರಳಿ ದೀಪವು ಹತ್ತಿದಾಗ ಶ್ರೀರಂಗನಾಥನು ಬಿಕ್ಷುಕನಾಗಿಯೂ, ಆದಿಶೇಷನು ಬಿಕ್ಷುಕಿಯಾಗಿಯೂ ಹಾಡುತ್ತ ನಿಲ್ಲುವರು. ಕೆಂಪೇಗೌಡ ಪ್ರವೇಶಿಸಿ ನೋಡುತ್ತ ನಿಲ್ಲುವನು. ಹಾಡು ಮುಗಿಯುವುದು.)

ಬಿಕ್ಷುಕ—ದಿಕ್ಕಿಲ್ಲದ ಪಾಪಿ ಜನ್ಮ, ನೋಡಿರಪ್ಪಾ, ಎರಡೂ ಕಣ್ಣುಗಳಿಲ್ಲದ ಅನಾಥ, ಅಪ್ಪಾ: ದಾನವನ್ನು ನೀಡಿ ಹೊಟ್ಟೆಗೆ ಒಂದು ತುತ್ತು ಅನ್ನವನ್ನು ನೀಡಿರಪ್ಪಾ. ದಯಾ ದಾಕ್ಷಿಣ್ಯವನ್ನು ತಿಳಿದ ಧರ್ಮಾತ್ಮರೆ! ಮಕ್ಕಳೆತ್ತ ಪುಣ್ಯಾತ್ಮರೆ, ನಮ್ಮನ್ನು ನಿಮ್ಮ ಮಡಿಲಲ್ಲಿ ಬಿದ್ದಿರುವ ಮಕ್ಕಳೆಂದು ತಿಳಿದುಕೊಳ್ಳಿರಪ್ಪ! ನೀಡಿರಪ್ಪಾ, ಒಂದು ತುತ್ತು ಕೂಳನ್ನು ನೀಡಿರಪ್ಪಾ! ಒಂದು ಹಿಡಿ ಕಾಳನ್ನು ನೀಡಿರಪ್ಪಾ, ನೀಡಿರಪ್ಪಾ(ಕೆಂಪೇಗೌಡನ ಕಡೆ ಕೈಚಾಚುವನು. ಕೆಂಪೇಗೌಡ ಕಾಳಿನ ಗಂಟನ್ನು ಮುಟ್ಟನೋಡಿ ಕಂಕುಳಲ್ಲಿ ಇರುಕಿಕೊಳ್ಳುವನು)

ಬಿಕ್ಷುಕಿ—ಅಯ್ಯಾ ಪುಣ್ಯಾತ್ಮರೆ, ಧರ್ಮಾತ್ಮರೇ, ಮೂರು ದಿನಗಳಿಂದಲೂ ಹೊಟ್ಟೆಗೆ ಅನ್ನವಿಲ್ಲಾ. ತಲೆ ಸುತ್ತಿ ಬರುತ್ತಿದೆ. ಕರುಳು ಕಿತ್ತು ಬರುತ್ತಿದೆ. ಹಸಿವಿನಿಂದ ಪ್ರಾಣವೇ ಹೋಗುತ್ತಿದೆ! ಒಂದು ತುತ್ತು ಕೂಳನ್ನು ಕೊಡಿರಪ್ಪಾ, ಒಂದು ಹಿಡಿ ಕಾಳನ್ನು ಕೊಡಿರಪ್ಪಾ.

ಬಿಕ್ಷುಕ—ಅಯ್ಯೋ ಈ ಊರಿನಲ್ಲಿ ಯಾರೂ ಬಡವರಿಗಾಗಿ ಮರುಗುವವರಿಲ್ಲವೆ. ದೀನರಿಗಾಗಿ ನೀಡುವವರಿಲ್ಲವೇ, ಇಲ್ಲವೇ, ಯಾರೂ ಇಲ್ಲವೇ!

ಬಿಕ್ಷುಕಿ—ಅಪ್ಪಾ! ಈ ಗ್ರಾಮದಲ್ಲಿ ಯಾರೂ ದಾನಿಗಳಿಲ್ಲ, ಯಾರೂ ಪುಣ್ಯಾತ್ಮರಿಲ್ಲ. ಯಾರ ಹೃದಯದಲ್ಲಿಯೂ ಕರುಣೆ ಇಲ್ಲ. ಎಲ್ಲಾ ಜಿಪುಣರೇ, ಎಲ್ಲಾ ಕ್ರೂರಿಗಳೇ. ನಡಿಯಪ್ಪಾ, ಮುಂದಿನ ಗ್ರಾಮಕ್ಕಾದರೂ ಹೋಗೋಣ ನಡೀ.

ಬಿಕ್ಷುಕ—ಇಲ್ಲಾ ಮಗಳೇ, ನಾನು ನಡೆಯಲಾರೆ. ನಾನು ನಡೆಯಲಾರೆ. ಹಸಿವಿನಿಂದ ನನ್ನ ಪ್ರಾಣವೇ ಹೋಗುತ್ತಿದೆ. ನನ್ನನ್ನು ಬಿಟ್ಟುಬಿಡು. ನಾನು ಇಲ್ಲಿಯೇ ಸತ್ತು ಹೋಗುತ್ತೇನೆ. ಅಯ್ಯೋ, ಅಯ್ಯೊ, ಅಯ್ಯೊ, ಒಂದು ಹಿಡಿ ಕಾಳು ದೊರೆತಿದ್ದರೂ ನನ್ನ ಪ್ರಾಣ ಉಳೀತಿತ್ತಲ್ಲ (ಕುಸಿದು ಬೀಳಲು ಹೋಗುವನು. ಕೆಂಪೇಗೌಡ ಓಡಿಬಂದು ಹಿಡಿದು ಕೊಳ್ಳುವನು).

ಕೆಂಪೇಗೌಡ—ಸ್ವಾಮಿ, ನನ್ನ ಬಳಿಯಲ್ಲಿ ಒಂದು ಹಿಡಿ ಕಾಳಿದೆ. ನಾನು ಕೊಡುತ್ತೇನೆ. ನೀವು ದುಃಖಿಸಬೇಡಿ. ಇದೋ ತೆಗೆದುಕೊಳ್ಳಿ.

(ಗಂಟನ್ನು ಬಿಚ್ಚುವನು)

ಬಿಕ್ಷುಕ—ಸಂತೋಷದಿಂದ—

ಕೊಡಪ್ಪಾ, ಕೊಡಪ್ಪಾ, ಇಲ್ಲಿ ಹಾಕಪ್ಪಾ.

(ಮಡಿಲನ್ನು ಒಡ್ಡುವನು. ಕೆಂಪೇಗೌಡ ಕಾಳನ್ನು ಸುರಿದು, ಪಾದಕ್ಕೆ ನಮಸ್ಕರಿಸುವನು) ಏಳಪ್ಪಾ, ಮೇಲಕ್ಕೇಳಪ್ಪಾ. ಶ್ರೀರಂಗನಾಥನು ನಿನ್ನಲ್ಲಿ ಪ್ರಸನ್ನನಾಗಿದ್ದಾನೆ. ನಿನ್ನ ವಂಶ ಉದ್ಧಾರವಾಗಲಿ, ನಿನ್ನ ತಾಯಿಯ ಹೊಟ್ಟೆ ತಣ್ಣಗಿರಲಿ।

(ಕೆಂಪೇಗೌಡ ಎದ್ದು ನಾಲ್ಕು ಹೆಜ್ಜೆ ಹೋಗಿ ಹಿಂದಿರುಗಿ ನಿಲ್ಲುವನು). ತಗೋ ಮಗಳೇ. ನೀನೂ ಸ್ವಲ್ಪ ಕಾಳನ್ನು ತೆಗೆದುಕೋ. ಯಾರೋ ಪುಣ್ಯಾತ್ಮ ಕಾಳನ್ನು ಕೊಟ್ಟು ಹೋಗುತ್ತಿದ್ದ ಜೀವವನ್ನು ಕಾಪಾಡಿದ. ಪರಮಾತ್ಮ ಅವನಿಗೆ ಮಂಗಳವನ್ನುಂಟು ಮಾಡಲಿ, ಅವನ ಕುಲ ಕೋಟಿಗಳೆಲ್ಲಾ ಉದ್ಧಾರವಾಗಲಿ (ಕೆಂಪೇಗೌಡ ಮಂದಹಾಸವನ್ನು ಬೀರಿ ತಲೆದೂಗಿ ಹೊರಟು ಹೋಗುವನು).

ಭಿಕ್ಷುಕ–(ಕೆಂಪೇಗೌಡಹೋದ ಹಾದಿಯನ್ನು ಓರೆನೋಟದಿಂದ ನೋಡುವನು ದೀಪ ಆರಿ ಮತ್ತೆ ಬರುವುದು. ಭಿಕ್ಷುಕ ಬಿಕ್ಷುಕಿಯರು ಶ್ರೀರಂಗನಾಥ ಆದಿಶೇಷರಾಗಿ ಕಾಣಿಸಿಕೊಳ್ಳುವರು).

ಶ್ರೀರಂಗನಾಥ—ನೋಡಿದೆಯಾ ಆದಿಶೇಷ! ಪ್ರಜಾನಾಯಕನಾಗುವವನ ಲಕ್ಷಣ ಹೇಗಿದೆ ನೋಡಿದೆಯಾ? ಎರಡು ದಿನಗಳಿಂದಲೂ ಸ್ವತಃ ಆತನ ಹೊಟ್ಟೆಗೇ ಇಲ್ಲ. ಆದರೆ ಹಸಿದಿರುವವನ ಕೂಗು ಕೇಳಿ ಬಂದೊಡನೆಯೇ, ತನ್ನಲ್ಲಿದ್ದ ಒಂದು ಹಿಡಿ ಕಾಳನ್ನು ನಿಶ್ಚಿಂತೆಯಿಂದ ಕೊಟ್ಟು, ಹೇಗೆ ಸಮಾಧಾನದಿಂದ ಹೊರಟುಹೋದ ನೋಡಿದೆಯಾ? ಇದಲ್ಲವೇ ಶ್ರೇಷ್ಠ ಹೃದಯ? ಹೀಗಿಲ್ಲದೇ ಪ್ರಜೆಗಳು ದುಃಖ ಸಂಕಟಗಳಿಂದ ನರಳುತ್ತಿರಲಿ, ಹಸಿವಿನಿಂದ ಕಂಗೆಟ್ಟಿರಲಿ, ದಾರಿದ್ರ್ಯದಿಂದ ಬೇಸತ್ತಿರಲಿ, ತಾವು ಮಾತ್ರ ಉಂಡು ಉಟ್ಟು ಸುಖಿಸುತ್ತ ವೈಭವದಿಂದ ಮೆರೆಯುತ್ತಿರುವ ನರಾಧಮರು ಪ್ರಜಾನಾಯಕನಾಗಬಲ್ಲರೇ? ತಮ್ಮದೋಷಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಸ್ತುತಿಪಾಠಕರಿಗೆ ಭೂರಿದಕ್ಷಿಣೆಗಳನ್ನು ಕೊಟ್ಟು ಹೊಗಳಿಸಿಕೊಳ್ಳುವವರು ಮಾನವ ಶ್ರೇಷ್ಠರಾಗಬಲ್ಲರೇ? ದೀನರ ದಲಿತರ ದುಃಖಿತರ ಅನಾಥರ ವಿಧವೆಯರ ಆಕ್ರಂದನಗಳನ್ನು ಕೇಳಿ ಯಾರು ಕಳವಳಗೊಳ್ಳುವರೋ, ದುಃಖ ಸಂಕಟಗಳ ನಿವಾರಣೆಗಾಗಿ ಶ್ರಮಿಸುವರೋ ಅವರೇ ನಿಜವಾದ ಪ್ರಜಾನಾಯಕರು ಆದಿಶೇಷಾ, ಅವರೇ ನಿಜವಾದ ಪ್ರಜಾನಾಯಕರು.

ಆದಿಶೇಷ—ಅಂತೂ ಪ್ರಭು, ಕೊನೆಗೂ ನಿಜವಾದ ಪ್ರಜಾನಾಯಕನನ್ನು ಪರೀಕ್ಷಿಸಿದೆಯಲ್ಲವೇ?

ರಂಗನಾಥ—ಹೌದು, ಆದಿಶೇಷಾ? ಪರೀಕ್ಷಿಸಿದೆನು. ಆದರೇ ಇನ್ನೂ ಪರೀಕ್ಷಿಸಬೇಕಾಗಿದೆ. ಇನ್ನೂ ಪರೀಕ್ಷಿಸಬೇಕಾಗಿದೆ.

ದೃಶ್ಯ—೫

ವನ

(ರೈತರು ಕೋಲಾಟವಾಡುತ್ತಿರುವರು. ಬೈರಪ್ಪ ಕೈಯಲ್ಲಿ ದೊಣ್ಣೆಯನ್ನು ಹಿಡಿದು ಕೂಗುತ್ತ ಪ್ರವೇಶಿಸುವನು. ಕೋಲಾಟ ನಿಂತುಹೋಗುವುದು.)

ಪ|| ಬೈರಪ್ಪ—ಎಲ್ಲೋದ್ನೋ ಆ ಹನುಮೇಗೌಡ.

ಹನುಮೇಗೌಡ—ಅದ್ಯಾಕ್ ಬೈರಪ್ಪಣ್ಣ, ಇಲ್ಲೇ ಇನ್ನಿ.

ಪ|| ಬೈರಪ್ಪ—ಏನೋ ಗುಲಾಮ, ಊರಿಗೆ ಸರ್ದಾರ ಆಗ್ಹೋಗ್ಬಿಟ್ಟಿದ್ದೀಯ ಏನೋ ನೀನು? ಎಷ್ಟೋ ಸೋಕ್ ನಿನ್ಗೇ?

ಹನುಮೆಗೌಡ—ಅಯ್ಯೋ ನಾನೇನ್ ಮಾಡಿನ್ನಿ ಬೈರಪ್ಪಣ್ಣ. ನಿನ್ ಪಾದ್ದಾಣೆಗೂ ಹಾದಿ ತಪ್ಪೋಗಿಲ್ಲ. ದೇವ್ರಾಣೆಗೂ ನಾನು ಏನ್ ತಪ್ಪೂ ಮಾಡಿಲ್ಲ.

ಪ|| ಬೈರಪ್ಪ—ಮುಚ್ಕೋ ಬಾಯಿ, ಕೂಗ್ಬ್ಯಾಡ. ಕತ್ ಹಿಸಕ್ ಬಿಟ್ಟೇನು? ತಪ್ಪು ಮಾಡೀನೂ ಮಾಡಿಲ್ಲ ಅಂತ ಸಾಧಸ್ತ್ಯ? ಎಲ್ಲೊ ಬಿಟ್ಟಿದ್ದೀಯ ನಿನ್ ಕರೀ ಹಸಾನ?

ಹನುಮೇಗೌಡ—ಅಯ್ಯೋ ನಂಗೇ ಗೊತ್ತಿಲ್ಲ ಬೈರಪ್ಪಣ್ಣ. ಅದು ಕಣ್ಣಿಗೆ ಬಿದ್ದು ಮೂರುದಿನಾ ಆಗೋಯ್ತು. ಮಗಾ ಹಾಲಿಲ್ದೆ ಬಡ್ಕೊತಾಐತೆ.

ಪ|| ಬೈರಪ್ಪ—ಮತ್ ಸುಳ್ ಬೊಗಳ್ತ್ಯ ಏನೋ? ಮತ್ ಸುಳ್ ಬೊಗಳ್ತ್ಯ? ನನ್ ಹಿತ್ಲಿಗೆ ನುಗ್ಗಿಸಿ ಬಾಳೆಕಂದೆಲ್ಲ ಹಾಳ್ ಮಾಡ್ಸಿ, ಗೊತ್ತಿಲ್ಲಾ ಅಂತ ಬೊಗಳ್ತ್ಯ? ಗೊತ್ತಿಲ್ಲ ಅಂತ ಬೊಗಳ್ತ್ಯ? (ಎಳೆದುಕೊಂಡು ಹೊಡೆಯುವನು)

ಹನುಮೇಗೌಡ—ಅಯ್ಯೋ ಒಡೀಬ್ಯಾಡಣ್ಣ ಒಡೀಬ್ಯಾಡಣ್ಣ ದಮ್ಮಯ್ಯ ಅಂತೀನಿ. ಕಾಲಿಗ್ ಬೀಳ್ತೀನಿ (ಕಾಲಿಗೆ ಬೀಳುವನು) ಅಯ್ಯೋ ಒದೀಬ್ಯಾಡಣ್ಣ.

(ಕೆಂಪೇಗೌಡ ಮುಂದೆ ಬಂದವನೇ ಬೈರಪ್ಪನನ್ನು ಎಳೆದು ದೂರತಳ್ಳಿ)

ಕೆಂಪೇಗೌಡ—ಪಟೇಲ್ರೆ, ನಾಚ್ಕೆಆಗೋದಿಲ್ಲವೆ ನಿಮಗೆ? ಆ ಬಡವನ್ಗೇ ಹಂಗ್ಹಿಡ್ಕೊಂಡು ಹೊಡೀತೀರಲ್ಲ ಸತ್ಹೋಗ್ಬಿಟ್ರೇ ಔನ್ ಹೆಂಡ್ತೀ ಮಕ್ಕಳಿಗೆ ನೀವ ಅನ್ನಾ ಕೊಡ್ತೀರಾ?

ಬೈರಪ್ಪ—(ಸಿಟ್ಟನಿಂದ,) ಏನೋ ನಾಯಿಕುನ್ನಿ? ನೀನ್ ನನ್ನಸ್ನ ಎಳ್ದು ತಳ್ಳೋಹಂಗಾದ? ಊರಿನ ಪಟೀಲನ್ಗೆ? ಮುಂದೆ ನಾಡಿನ ನಾಯಕನಾಗೋನ್ಗೆ?

ಕೆಂಪೇಗೌಡ—ಪಟೀಲರಾದ್ರೇನು? ನಾಯಕರಾದ್ರೇನು? ನ್ಯಾಯ ತಪ್ಪಿ ಹೋದರೆ, ಯಾರೂ ಗೌರವ ಕೊಡೋದಿಲ್ಲ.

ಬೈರಪ್ಪ—(ಸಿಟ್ಟನಿಂದ) ಎಷ್ಟೊ ಸೊಕ್ಕಿದ್ದೀಯ? ಮುಚ್ಕೊಬಾಯ್! ಇಲ್ದಿದ್ರೇ ನಾಲ್ಗೇನ ಈಚೆಗೆ ಎಳ್ದುಹಾಕ್ಬಿಟ್ಟೇನು.

ಕೆಂಪೇಗೌಡ—ನನ್ನನ್ನೂ ನಮ್ಮಮ್ಮ ಗಂಡ್ಮಗ ಅಂತಾನೇ ಹೆತ್ತಿದ್ದಾಳೆ ಪಟೇಲ್ರೆ! ನೀವು ನಾಲಿಗೆ ಎಳೆಯೋದಕ್ಬರೋವರ್ಗೆ ನನ್ನ ಕೈಯೇನು ಹುಲ್ಲುಕುಯ್ತಾ ಇರೋದಿಲ್ಲ.

ಬೈರಪ್ಪ—ಏನೋ ಅಂದೆ ನೀನು (ಕೆಂಪಣ್ಣನ ಮೇಲೆ ಬಿದ್ದು ಎರಡೇಟು ಕೊಡುವನು. ಕೆಂಪೇಗೌಡನು ಎರಡೇಟು ಹಾಕುವನು. ಬೈರಪ್ಪನು ಕೆಂಪೇಗೌಡನನ್ನು ಎತ್ತಿ ಎತ್ತಿ ಕುಕ್ಕಿ ಮೂರ್ಛೆ ಬರುವಂತೆ ಹೊಡೆದು ಉರುಳಿಸಿ ಬಿಡುವನು.) ಎಲಾ ಬಡ್ಡಿಮಗ್ನೇ. ಇನ್ನೂ ಬಲಿಯೋದಕ್ಕಿಲ್ಲಾ, ಆಗ್ಲೇ ನನ್ಗೆದುರಾಗಿ ಬರ್ತೀಯ? (ಮೀಸೆ ತಿರುವುತ್ತ) ಪಟೇಲ್ ಬೈರಪ್ಪನ ಕೈ ಬಿಸಿ ಹ್ಯಾಗಿದೆ ನೋಡ್ದಾ? ಬಿದ್ದಿರು ಸಾಯ್ತ ಇಲ್ಲೇ ಬಿದ್ದಿರು (ಸುತ್ತಮುತ್ತ ನಿಂತಿದ್ದವರೆಲ್ಲ ಹತ್ತಿರ ಬರುವರು.)

ಹಾಂ, ಯಾರಾದರೂ, ಹತ್ರಾ ಹೋದೀರಾ? ಹುಷಾರ್! ಜೋಕೆ! ಒಬ್ಬೊಬ್ಬನ್ಗೆ ಸಿಗ್ದಾಕ್ಬಿಟ್ಟೇನು. ನಡೀರ್ರೋ ಇಲ್ಲಿಂದ. (ಎಲ್ಲರೂ ಹೊರಟುಹೋಗುವರು) ಹನುಮೇಗೌಡ ತಲೆತಗ್ಗಿಸಿ ಕೆಂಪೇಗೌಡನನ್ನು ನೋಡುತ್ತ ನಿಲ್ಲುವನು.)

ತೊಲ್ಗೋ ನೀನಿಲ್ಲಿಂದ (ಕತ್ತಿಗೆ ಕೈಹಾಕಿ ತಳ್ಳಿಬಿಡುವನು ಮೀಸೆ ತಿರುವುತ್ತ) ಇನ್ಮುಂದೆ ಯಾವಾನಾದ್ರು ನನ್ನ ವಿರುದ್ಧ ಉಸ್ರೆತ್ತಿದ್ರ (ಕಾಲು ಎತ್ತಿ ತೋರಿಸುತ್ತ) ಈ ಕಾಲಿನ ಅಡಿ ಹಾಕಿ ತಿಕ್ಕಿಬಿಟ್ಟೇನು (ಹೋಗುವನು.)

ದೃಶ್ಯ—೬

ರೋಡ್‌ಸೀನ್

(ಮಲ್ಲಿ ಕಂಕುಳಲ್ಲಿ ಮಕ್ಕರಿಯನ್ನು ಇರಕಿಕೊಂಡು "ಏನಲೆ ಬಿರುಗಾಳಿ" ಎಂದು ಹಾಡುತ್ತ ಹೋಗುತ್ತಿರುವಳು. ಹಿಂದಿನಿಂದ ಮಲ್ಲಣ್ಣ ಬಂದು—)

ಮಲ್ಲಣ್ಣ—ಲೇ ಮಲ್ಲಿ, ಮಲ್ಲೀ ಮಲ್ಲಿ, ಲೇ ಮಲ್ಲಿ, (ಮಲ್ಲಿ ತಿರುಗಿ ನೋಡದೇ ನಿಲ್ಲುವಳು) ಏಟಿ ನಿಂಕೂಗೋದು? ಉಸ್ರು ಎಳೀದಂಗೆ ಒಂದೇಪಟಾ ಅಲ್ಲಿಂದಾನೂ ಕೂಗ್ಕೊಂಡ್ ಬತ್ತಿವ್ನಿ. ಏಟ್ ಕೂಗ್ಕೊಂಡ್ರೂ ನನ್ ಸದ್ದು ನಿನ್ನ ಕಿವಿಮ್ಯಾಗೆ ಬೀಳಾಕೇಇಲ್ಲ. ನಾನು ಕೂಗ್ತಾನೆ ಅವ್ನಿ, ಮುಂಗಾರ್ ಮಳೆ ಉಯ್ತಿದ್ರೂ ಅತ್ಕಡೀಕಿತ್ಕಡೀಕೆ ನೋಡ್ದೆ ತೂರಾಡ್ಕೊಂಡೋಗೋ ಉಬ್ಬಳ್ಳಿ ಎಮ್ಮೆ ಅಂಗೆ ದಿವಾಕ್ನಲ್ಲಿ ಒಂಟೋಯ್ತಿದ್ದಿಯಲ್ಲೇ?

ಮಲ್ಲಿ—ಏನಂದೆ! ಏ ಮಲ್ಲಣ್ಣ, ನನ್ನೇನ್ ನಿನ್ ಆಟ್ಟೆ ಕಸ ಬಾಚೋಳು ಅಂತ ತಿಳ್ಕೊಂಬುಟ್ಯಾ? ಇಲ್ಲಾಅಂದ್ರೇ ನಿನ್ ದನದ್ ಕೊಟ್ಗೆ ಗಂಜ್ಳ ಎತ್ತೋಳು ಅಂತ ಅಂದ್ಕೊಂಡ್ಯೋ ಎಂಗೆ? ವಸಿ ಬುದ್ಧಿ ನೆಟ್ಗೆಟ್ಕೊಂಡು ಮಾತಾಡ್ಸು. ಇಲ್ದಿದ್ರೇ ವೈನಾಗಾಕಿಲ್ಲ. ನಾಏನ್ ಸಿಟ್ಬಂದ್ಬುಟ್ರೆ ಸುಮ್ಕಿರೋಳಲ್ಲ.

ಮಲ್ಲ—ಏ ಏಟ್ ಕೊಬ್ಬೋಗ್ಬುಟ್ಟದ್ಯೆ? ನಾಯೇನೋ ಪಿರೀತಿ ಇಸ್ವಾಸ ಎಲ್ಲಾ ಇಕ್ಕ್ಯೊಂಡು ಮಾತಾಡ್ಸಾವಾ ಅಂತ ಬಂದ್ರೆ ಉಚ್ನಾಯಾಗಿ ಕಚ್ಚಾಕ ಬತ್ತೀಯಾ? ನಿನ್ನ್ನೋಡು ನಿನ್ ಯೋಕ್ತಿನೋಡು.

ಮಲ್ಲಿ—ಏ ಮಲ್ಲಣ್ಣ ಇನ್ನೊಂದ್ಸಪ್ಟಾ ಯೋಕ್ತಿ ಇಸಾರ ಎತ್ತದ್ರೇ ನಾ ಸುಂಕಿರಾಕಿಲ್ಲ. ನನ್ನ ಯೋಕ್ತಿ ಇಸಾರ ಎತ್ತಾಕೆ ನಿನ್‌ಗ್ಯಾವನ್ಲಾ ಅದಿಕಾರಾಕೊಟ್ಟೋನೂ? ನಿನ್ ಯೋಕ್ತಿ ತಿಳ್ಕೊಳ್ದೆ ನನ್ ಯೋಕ್ತಿ ಎತ್ತಾಡಾಕ್ ಬತ್ತ್ಯಾ? ನಾಏನ್ ನಿನ್ನಂಗೆ ಪಟೇಲ ಬೈರಪ್ಪನ ಮನೇಲಿ ಜೀತಗೇಯ್ತಿವ್ನಾ? ಇಲ್ಲಾಂದ್ರೇ ಅವ್ನ್ ಮನೇ ದನಾಕಾಯ್ತಿವ್ನಾ?

ಮಲ್ಲ—ದನಾಕಾಯ್ತಾವ್ನೇ ಅಂತ ನಂಗೇಳ್ತೀಯಲ್ಲಾ ನಿಮ್ಮಪ್ಪ ಏನ್ ದನಾ ಕಾಯಾಕಿಲ್ಲಾ ಅಲ್ವೇನ್ಲೇ?

ಮಲ್ಲಿ—ನಮ್ಮಪ್ಪ ನಿನ್ನಂಗೇನು ಕಂಡೋರ ದನಾ ಕಾಯ್ತವ್ನ? ಇಲ್ಲಾಂದ್ರೆ ನಿನ್ನಂಗೆ ಪಟೇಲ ಬೈರಪ್ಪನ ಕಾಲೊತ್ತವ್ನಾ ಒತ್ತಾರೆಯಿಂದ ಚಂಜೆ ತಂಕ?

ಮಲ್ಲ—ನಾನ್ ಪಟೇಲ್ರ ಕಾಲೊತ್ತೀನೇನೆ.

ಮಲ್ಲಿ—ಇಲ್ಲಾ ಕಾಲೊತ್ತಾಕಿಲ್ಲ, ಆಕಾಲ್ನಿಂದ ಒದಸ್ಕೊತೀಯ.

ಮಲ್ಲ—ನಾನ್ ಒದಸ್ಕೊತಿವ್ನೇನೇ?

ಮಲ್ಲಿ—ಇಲ್ಲ ಒದಸ್ಕೊಳಾಕಿಲ್ಲ, ಬೈರಪ್ಪನ್ ಮದ್ಯಾ ಕುಡ್ದ್ ಮೀಸೇನ ಅರಿವೆ ತಕ್ಕೊಂಡು ಒರಸ್ತೀಯ.

ಮಲ್ಲ—ಆಂ! ಬೈರಪ್ಪನ ಮದ್ಯ ಕುಡ್ದ್ ಮೀಸೇನ ಅರಿವೆ ತಕ್ಕೊಂಡ್ ಒರಿಸ್ತಿನೇನೇ?

ಮಲ್ಲಿ—ಇಲ್ಲ ಬೈರಪ್ಪನ್ ಮದ್ಯ ಕುಡ್ದ ಬಾಯಿಂದ ಉಗಸ್ಕೋತಿಯ ಓಟೆ.

ಮಲ್ಲ—ಅಲೆ ಇವ್ಳಾ! ಎಂತೆಂತ ಮಾತಾಡ್ತಾವ್ಳೆ ಇವ್ಳು? ಅಲ್ಲೇ, ಮಲ್ಲಿ ಏಟುದ್ದಾನೆ ನಿನ್ನಾಲ್ಗೆ ಬೆಳ್ಕೋಂಬುಟ್ಟರೋದು? ಏಳಾವ್ರು ಕೇಳಾವ್ರ ಇಲ್ಲಾ ಅಂದ್ಕೋಂಡು ಏಸ್ ಎಚ್ಕೋಬುಟ್ಟೇದ್ದೀಯೆ ನೀನು? ಇನ್ನೇನಾರ ಮಾತ್‌ಗೀತ್ ಆಡ್ ನೋಡು ನೀನು, ದಬ್ಬಾಕತಕ್ಕೊಂಡು ಬಾಯ್ಗೀಯ್ ಎಲ್ಲಾ ಒಲ್ದಾಕ್ಬುಡ್ತೀನಿ.

ಮಲ್ಲಿ—ಯಾನ್ವೂ ಅಂತ ತಿಳ್‌ಕೊಂಡು ಗದರ್ಸಾಕ್ ಬತ್ತಿಯಾ? ವಸಿ ಮರ್ವಾದೆ ಇಕ್ಕೋಂಡು ಮಾತಾಡ್ಸು. ನಾ ಬಲ್ ಕೆಟ್ಟಿಣ್ಣು ರೇಗ್ಬುಟ್ರೇ ಸರಿಯಾಗಿ ಬುದ್ಧಿ ಕಲಿಸ್ಬುಟ್ಟೇನು. ಇನ್‌ಮ್ಯಾಕೆ ಅವ್ಳು

ಇವ್ಳು ಅಂತ ಕರಿಯಾಕ್ ಬರ್‌ಬ್ಯಾಡ. ನಾನ್ ನಿನ್ನೆಂಡ್ರು ಕೆಟ್ಹೋಗ್ಬುಟ್ನಾ?

ಮಲ್ಲ—ಈವತ್ತಾಗ್ದಿದ್ರೆ ಏನಾಯ್ತು ಬುಡ್ಲೇ. ಇನ್ನೊಂದೊರ್ಸಕ್ಕಾದರೂ ನೀನ್ ನನ್ನೆಂಡ್ತಿ ಆಗವ್ಳೇ.

ಮಲ್ಲಿ—ನಿನ್ ಎಂಡ್ರ್ ಆಗಾಕೆ ನನಗೇನ್ ಗಾಚಾರ ಇಡ್ದಿಲ್ಲಾಕಣ್ಲಾ ಓಗೂ.

ಮಲ್ಲ—ಅದ್ಕೆ ನಿಮ್ಮವ್ವ ಸಾಯ್ವಾಗ ನಮ್ಮೈನ ಕರ್ದು, ಒನ್ನೆಲ್ಗಣ್ಣಾ, ಮಲ್ಲಿ ಕೈಬುಡ್‌ಬ್ಯಾಡ. ಹರೇಗ್ ಬಂದ್ಮ್ಯಾಕೆ ಮಲ್ಲಣ್ಣನ ಸಂಗಾಟಾನೇಲಗ್ನಾ ನಡ್ಸೂ ಅಂತ ಬಾಸೆ ತಗೊಂಡು ಸಾಮಿಪಾದ ಸೇರದ್ಲು. ನಿನ್‌ಲಗ್ನಾ ನಡಿಯೋದು ನಂಕುಟ್ಟೇನೆ. ನನಗಿಂತ ಬಾದ್ದೂರ ಇನ್ಯಾವನ್ ಕಾಯ್ಕೊಂಡು ಕುಂತವ್ನೆ ನಿಂಗೇ?

ಮಲ್ಲಿ—ಆಂ, ಎಲ್ಲೋ ಮಲ್ಲಣ್ಣ ಎಲ್ಲೋ, ವಸಿ ಇಂಗ್‌ತಿರ್ಗು? ಯವ್ವೆನಾ ಕೆಟ್ಟಿ ಈಸೀಕ್ಲ ಮುಸುಡಿ ಮ್ಯಾಕೆ ಲಗ್ನ ಆಗೋ ಲಕ್ಸಣ ರವಸ್ಟಾದ್ರು ಐತಾ? ಅದ್ಕೇ ನಿಮ್ಮಯ್ಯ ಪಟೇಲ್ ಬೈರಪ್ಪ ನತಾವ ನೂರು ರೂಪಾಯಿ ತಕ್ಕೊಂಡು ನಿನ್ನ ಅಡಾ ಆಕ್ಯವ್ನೆ. ನೀನು ಬೈರಪ್ಪನ ಸಾಲ ತೀರ್ಸ್ಸದ್ದಿಟವಾ, ನಂಗೆ ಬಾಸಿಂಗ ಕಟ್ಸಾದ್ದಿಟವಾ, ನಮ್ಮಪ್ಪನಿಗೆ ತೆರಾ ಕಟ್‌ಕೊಟ್ಟು ನನ್ಗೆ ವಡವೆ ಸೀರೆ ತರಾದ್ದಿಟವಾ? ಕುಲಸ್ತ್ರೋರ್ಗೆಲ್ಲಾ ಊಟ ಹಾಕ್ಸಾದ್ದಿಟವಾ ಈ ಜನ್ಮದಾಗೆ ನೀನು ಲಗ್ನ ಆಗದ್ದಿಟವಾ.

ಮಲ್ಲ—ಎಲ್ಲಾ ದಿಟಾನೆ ಕಣೆ ಮಲ್ಲಿ (ಮೀಸೆ ತಿರುವಿ) ಏಟಾದ್ರು ಗಂಡ್ಸಲ್ವಾ?

ಮಲ್ಲಿ—ಅಯ್ಯವ್ವಿ ನೀ ಗಂಡ್ಸಾ? ನೋಡದ್ರೇ ಗೊತ್ತಾಗಾಕಿಲ್ವಾ ಈ ಮುಸಡಿ ಮ್ಯಾಕೆ ರವಸ್ಟಾದ್ರು ಗಂಡಸ್ತನದ ಲಕ್ಷ್ಯಣ ಇಲ್ಲಾ ಅಂತ? ಏಳ್ದೇ ಕೇಳ್ದೆ ಉಟ್ಕೊಂಡಿರೋ ಮೀಸೇನ ನಂಬ್ಕೊಂಡು ನಾನೂ ಗಂಡ್ಸು ನಾನು ಗಂಡ್ಸೂ ಅಂತ ಕುಂತಿದ್ಯಾ? ಓಗೋಗು. ಇನ್ಮ್ಯಾಕೆ ಯಾರ್ಕುಟ್ಟೇನು ನಾ ಗಂಡ್ಸು ಅಂತ ಏಳ್ಕೋಬ್ಯಾಡ. ಒಂದ್‌ಪಟಾನು ಈ ಮೀಸೆ ಮ್ಯಾಕೆ ಕೈಯ್ಯಾಕ್‌ಬ್ಯಾಡ. ನಾ ಮಾತ್ರ ನಿಂಗೆ ಮದ್ವೇ ಆಗಾಕೇ ಇಲ್ಲಾ.

ಮಲ್ಲ—ಲೆ, ಮುಚ್ಚೆ ಬಾಯ್ ಏಟ್ ಮಾತಾಡ್ತೀಯಾ? ಓಗ್ಲೀ ಓಗ್ಲೀ ನಮ್ಮಲ್ಲಿ ಅಲ್ವಾ ಅಂತ ಸಸಾರ ಕೊಟ್ರೇ ಬಾಯ್ಗೆ ಬಂದಂಗೆ ಒದ್ರಾಕತ್ಬುಟ್ಯಾ? ಇನ್ಮೇಲ್ ಇಂಗೆಲ್ಲ ನಡಿಯಾಕಿಲ್ಲ ನಂತಾವ, ಇನ್ನೇನಾರ ಎಚ್ಚು ಕಡ್ಮೆ ಮಾತಾಡ್ದೇ ಅಂದ್ರೇ ಒಮ್ಮಾಕೇ ಗುದ್ದಿಕ್ಕಿ ನಡಾ ಮುರ್ದಾಕ್ಬುಟ್ಟೇನು.

ಮಲ್ಲಿ—(ಸಿಟ್ಟಿನಿಂದ) ಆಂ! ಏನ್ಲಾ ಅಂದೇ! ನಡಾ ಮುರ್ದಾಕ್ಬುಡ್ತಿಯಾ? (ಕುಕ್ಕೆ ಬಿಸಾಡಿ ಸೊಂಟ ಸೆರಗಿನಿಂದ ಬಿಗಿದು) ಬಾರ್ಲಾ ಒಂದ ಪಟಾ ನಿನ ಗಂಡಸ್ತನವಾ ನೋಡೇ ಬುಡ್ತೀನಿ (ಮಲ್ಲ ನೋಡುತ್ತಾ ನಿಲ್ಲುವನು) ಇಲ್ನೋಡಿಲ್ಲಿ, ಕಡಗದ ಕೈನಾಗೆ ಕತ್ತಿನ್ಮ್ಯಾಗೆ ಒಂದು ಬಿಗ್ತ ಬಿಗ್ದೇ ಅಂದ್ರೇ ತಲೆ ರಾಗಿಕಲ್ ತಿರ್ಗೋ ಅಂಗೆ ತಿರ್ಗಬುಡ್‌ಬೇಕು. ನಡೀಗ್‌ಕೈಕೊಟ್ಟು ಕೆಳಾಕಿತ್ತಿಕ್ಕಿ ಮ್ಯಾಲೆ ಮಕ್ಕರಿ ದಬ್ಬಾಕ್ಬುಟ್ಟೇನು (ದೂರ ಹೋಗಿ ನಿಲ್ಲುವಳು) (ಮಲ್ಲಣ್ಣ ಸಭಿಕರ ಕಡೆ ನೋಡುತ್ತ ಕಣ್ಣುಗಳನ್ನು ಪಟಪಟನೆ ಹೊಡೆಯುವನು. ಮಲ್ಲಿ ಅವನನ್ನು ಅಣಕಿಸುತ್ತಾ ನಗುವಳು. ಮಲ್ಲಣ್ಣ, ಅತ್ತಕಡೆ ತಿರುಗಿ ನೋಡಿ ಸಿಟ್ಟಿನಿಂದ ಪಕ್ಕಕ್ಕೆ ಹೊರಳಿ ನಿಲ್ಲುವನು. ಮಲ್ಲಿ ಸಮೀಪಕ್ಕೆ ಬಂದು.)

ಯಾಕ್ ಸಿಟ್ಬಂದ್ಬುಡ್ತೆ ಮಲ್ಲ? ನಾನು ನಗಸಾರ್ಕೆ ಅಂಗೆಲ್ಲಾ ಆಡ್ದೇ ಓಟೇ. ನೀನದ್ಕೇ ಈಟೋಂದು ಸಿಟ್ಮಾಡ್ಕೊಬುಡ್ತ್ಯಲ್ಲಾ? ಈಗೇನೋ ಇಂಗಾಡ್ತೀವ್ನಿ. ಮುಂದೆ ಲಗ್ನಾ ಕಟ್ಕೊಂಡು ಗಂಡಾ ಎಂಡ್ರಾದ್ಮ್ಯಾಕೆ ಇಂಗೆಲ್ಲಾ ಆಡಕಾಗ್ತೈತಾ, ನಿಂತಾವ ಇಂಗೆಲ್ಲಾ ಆಡ್ದೇ ಇನ್ಯಾರ್ತಾವ ಆಡ್ಬೇಕೇಳು?

ಮಲ್ಲ—ಸಾಕು ಸಾಕ್ ಸುಂಕಿರು. ನಿನ್ನ ಬಣ್ಣ ಎಲ್ಲಾ ತಿಳಕೋಂಬುಟ್ಟೆವ್ನಿ ನೀನ್ಯಾವಾಗ, ಲಗ್ನಾ ಆಗಾಕಿಲ್ಲ ಅಂತ ಅಂದ್ಬುಟ್ಯೋ. ಆಗ್ಲೇ ನಿನ್ಮನ್ಸು ಸುದ್ದಾ ಇಲ್ಲಾ ಅಂತ ಗೊತ್ತಾಗೋಗ್ಬುಡ್ತು.

ಮಲ್ಲಿ—ಸುಂಸುಂಕಂಗಂದೆ ಓಟೆ ಮಲ್ಲಣ್ಣ. ನೀನು ಅದ್ಕೇ ಬೇಸಾರ ಪಟ್ಕೊಬುಡ್ತಿಯಲ್ಲ? ನಿನ್ ಬುಟ್ಬುಟ್ಟು, ನಾನು ಇನ್ಯಾರ್ನಾ ಲಗ್ನ ಆದೇನಾ? ನಮ್ಮವ್ವ ಸಾಯ್ವಾಗ ಬಾಸೆ ಆ ಕಸ್ಕೊಂಡಿರೋ ಇಚಾರ ನಂಗೊತ್ತಿಲ್ವಾ? (ಹಿಡಿದು ಅಲ್ಲಾಡಿಸಿ) ಎಲ್ಲಿ ಎಲ್ಲಿ ಒಂದ್ಸಪಟಾ ಇತ್ಕ ಡೀಕ್ ತಿರ್ಗಿ ಅಂಗೇ ಒಸಿ ಅಲ್ಬುಡೂ ನೋಡಾವಾ?

(ಮಲ್ಲ ನಗುವನು, ಮಲ್ಲಿ ನಿವಾರಿಸಿಕೊಳ್ಳುವಳು)

ಮಲ್ಲ—(ನಗುತ್ತ) ನೋಡು ಮಲ್ಲಿ, ಈ ಸರಸ ತರವಲ್ಲ! ಇನ್ಮ್ಯಾ ಕಿಂಗೆಲ್ಲಾ ಸರ್ಸಾ ಆಡಬ್ಯಾಡಾ.

ಮಲ್ಲಿ—ಸಲ್ಲಾದ ಸರಸ ತರವಲ್ಲ! (ಹಾಡುವಳು)

(ರಂಗನಾಥ ಆತುರದಿಂದ ಬರವನು. ಮಲ್ಲಣ್ಣ ನೋಡಿ)

ಮಲ್ಲ—ಎನ್ರ ಬುದ್ಧಿ ಏನ್ ಈ ಸಾತ್ರ್ರದಲ್ಲಿ ಒಂಟೋಯ್ತಿದ್ದೀರಿ ಏನ್ ಇಚಾರ. ವಸಿ ಏಳಾಕಿಲ್ವಾ?

ರಂಗನಾಥ—ಏನೇಳ್ಳಿ ಮಲ್ಲಣ್ಣ, ಪಟೇಲ್ರು ಕೆಂಪಣ್ಣನನ್ನು ಮೂರ್ಛೆ ಬರೋಹಾಗೆ ಹೊಡೆದು ಬೇವಿನ ಕಟ್ಟೆ ಹತ್ರ ಬಿಸಾಕ್ಹೋಗಿದ್ದಾರಂತೆ. ಆದರೆ ನನಗೆ ತೋಟದಲ್ಲಿ ಈ ವಿಚಾರ ತಿಳೀತು. ಹೋಗಿ ನೋಡಿ ಕೊಂಡು ಬರೋಣ ಅಂತ ಹೊಗ್ತಾ ಇದ್ದೀನಿ

ಮಲ್ಲಿ—ಅಯ್ಯಮ್ಮ ಆ ಪಟೇಲ್ರೀಗೇನ್ ಹೊತ್ಕೊಂಡೋಗೋದು ಬಂದಿತ್ತು. ಚಿನ್ನದಂತ ಹುಡುಗನ್ನ ಹೊಡಿಯಾಕೆ, ಕೈಯಾದ್ರು ಎಂಗೇಳ್ತು? ಆ ಕೈಗೆ ಬರಬಾರದು ಬಂದೋಗ.

ಮಲ್ಲ—ಕೈ ಮೇಲೆತ್ತಿ
ಅಯ್ಯೊ ದ್ಯಾವ್ರೇ ನಾಮದಯ್ಯ! ರಂಗನಾತಾ! ಕೆಂಪಣ್ಣನ್ನ ನಿನ ಮಡಲಾಗಾಕ್ಕೊಂಡು ಕಾಪಾಡಪ್ಪ. ನಡೀರಿ ಬುದ್ಧಿ ನಾನು ಬತ್ತೀನಿ ಬಾರೆ ಮಲ್ಲಿ ವಸೀ ಓಗಿ ನೋಡಾವಾಂ.

ದೃಶ್ಯ ೭

ವನ

(ಕೆಂಪಮ್ಮ ಲಕ್ಷ್ಮಿ ಗಾಬರಿಯಿಂದ ಓಡಿಬರುವರು ಕೆಂಪಮ್ಮ ಹುಚ್ಚಿಯಂತೆ ಹುಡುಕಾಡುತ್ತ)

ಕೆಂಪಮ್ಮ—ಮಗ್ನೆ! ಕೆಂಪಣ್ಣ! ಕೆಂಪಣ್ಣ! ಅಪ್ಪಾ! ಎಲ್ಲಿದ್ದೀಯೋ!

ಲಕ್ಷ್ಮಿ—ಅಣ್ಣಾ! ಕೆಂಪಣ್ಣ! ಕೆಂಪಣ್ಣ!

ಪರಾಮರ್ಶನ ಗ್ರಂಥ
9462

ಕೆಂಪಮ್ಮ ಅಲ್ಲಲ್ಲಿ ಹುಡುಕಾಡುತ್ತ ಕೆಂಪಣ್ಣ ಬಿದ್ದಿರುವ ಸ್ಥಳಕ್ಕೆ ಬಂದು ನೋಡಿ ಅಯ್ಯೊ ಮಗ್ನೇ! ಕೆಂಪಣ್ಣ ಇದೇನಿದು? ಇದೇನ್ ನಿನ್ನ ಅವಸ್ಥೆ (ಮುಖ ಮೈ ಸೀರೆಯಿಂದ ಒರೆಸುತ್ತಾ)?

ಅಯ್ಯೊ ಬಾಯೆಲ್ಲಾ ರಕ್ತ, ಮೂಗೆಲ್ಲ ರಕ್ತಾ, ಕತ್ತೆಲ್ಲಾ ಊದಿ ಕೊಂಡಿದೆ. ಮೈಯೆಲ್ಲಾ ಮಣ್ಣಾಗಿದೆ. ಅಯ್ಯೊ ಮಗ್ನೇ ಒಂದ್ಸಲ ವಾದರೂ ನಿನಗೆ ಕೈಯೆತ್ತಿ ನಾನೊಂದೇಟೂ ಹೊಡೀಲಿಲ್ಲವಲ್ಲ? ನಿನ್ನ ಮೈ ತೊಳೆಯುವಾಗ ಗಟ್ಟಿಯಾಗಿ ತಿಕ್ಕಿದ್ರೆ ಎಲ್ನೋವಾಗುತ್ತೋ ಅಂತ ಹೆದರಿ ನಿನ್ನನ್ ಕಾಪಾಡಿದೆನಲ್ಲ? ನಿನ್ನನ್ನ ಮುಟ್ಟಬೇಕಾದ್ರೆ ಹೂವನ್ನು ಮುಟ್ಟೋ ಹಾಗೆ ಮುಟ್ತಿದ್ನಲ್ಲೋ ಮಗ್ನೆ. ನಿನ್ನೀ ಬಂಗಾರದ ಮೈಗೆ ಹೀಗೆ ಹೊಡೀಬೇಕಾದ್ರೆ, ದಿಕ್ಕಿಲ್ಲದ ತಬ್ಬಲಿಯಾದ ನಿನ್ಗೆ ಇಷ್ಟೆಲ್ಲಾ ನೋವು ಕೊಡ್ಬೇಕಾದ್ರೆ, ಆ ಬೈರಪ್ಪನ ಹೃದಯ ಹೇಗೆ ಕಲ್ಲಾಗಿರ್ಬೇಕು? ಪಾಪಿ! ಚಂಡಾಲ! ದುರಾತ್ಮ! ಕ್ರೂರಿ! ನಿಷ್ಕರುಣಿ ನೀನು ನನ್ನ ಹೃದಯದ ಅರಗಿಳಿಗೆ ಮೂರ್ಛೆ ಬರುವಂತೆ ಹೊಡೆದೆಯಲ್ಲವೆ! ಬೈರಪ್ಪ ಮಗನಿಗೆ ಹಾಲನ್ನು ಉಣಿಸಿ ಸಲಹಿರುವ ಹೃದಯದ ನೋವನ್ನು ಕೇಳು. ಮಗನ ತೊಟ್ಟಿಲನ್ನು ತೂಗಿ ತೂಗಿ ಬಳಲಿರುವ ಕೈಗಳ ಸಂದೇಶವನ್ನು ಕೇಳು. ಇನ್ನು ಮೇಲೆ ನಿನಗೆ ಸುಖವೆನ್ನುವುದು ಎಂದೂ ಲಭಿಸದೆ ಹೋಗಲಿ. ನಿನ್ನ ಬಾಳಿನ ಮುಂದಿನ ದಿನಗಳು ದುಃಖ ಸಂಕಟ ಅಪಮಾನಗಳಿಂದ ಕೂಡಿಬರಲಿ. ನೀನು ಮಾಡಿರುವ ಘೋರ ಅನ್ಯಾಯಗಳೂ ಅತ್ಯಾಚಾರಗಳೂ ಅನಿಷ್ಟ ಭೂತ ಪ್ರೇತಗಳಾಗಿ ಬಂದು ನಿನ್ನನ್ನು ಹಿಂಸಿಸಲಿ. ನೀನು ಮಾಡುವ ಪ್ರತಿ ಪ್ರಯತ್ನದಲ್ಲೂ ಭಗವಂತನ ಅಗ್ರಹವು ತುಂಬಿ ಕೊಂಡು ನಿನ್ನ ಪ್ರಯತ್ನಗಳ ಸರ್ವನಾಶವನ್ನುಂಟುಮಾಡಲಿ. ಹೇ ದೇವ ದೇವ ರಂಗನಾಥ, ಜೀವದಾತ ನಾನು? ದೀನಳು, ನಿರ್ಗತಿಕಳು, ನಿರಾಶ್ರಿತಳು, ವಂಶಕ್ಕೇ ಏಕಮಾತ್ರನೂ ನನ್ನ ಜೀವನದ ಸರ್ವಸ್ವನೂ ಆಗಿರುವ ಮಗನ ಮೂರ್ಛೆಯನ್ನು ಪರಿಹರಿಸಿ ನನ್ನ ಮನಸ್ಸಿನ ದುಗುಡವನ್ನು ನಿವಾರಿಸು ಪ್ರಭು. ಹೇ ಮುರಹರ ವಿಶ್ವಂಭರ ರಮಾ ವಲ್ಲಭಾ! ವಾಸುದೇವ ರಂಗನಾಥ! ನಿನ್ನನ್ನಲ್ಲದೆ ಮತ್ತಾರನ್ನಾಶ್ರಯಿಸಲಿ

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ನೀನಲ್ಲದೆ ನನಗಿನ್ನಾರು ರಕ್ಷಕರು? ಇದೋ ನಿನ್ನ ಚರಣ ಕಮಲಗಳ ಸಹಸ್ರ ಶರಣಾರ್ತಿಗಳು. (ಪ್ರಾರ್ಥನೆ)

ಕೆಂಪೇಗೌಡ ಅಮ್ಮಾ ಎಂದು ಪಕ್ಕಕ್ಕೆ ಹೊರಳುವನು ರಂ ನಾಥ ಮಲ್ಲಣ್ಣ ಮಲ್ಲಮ್ಮ ಓಡಿಬರುವರು

ಎಲ್ಲರೂ—ಕೆಂಪಣ್ಣ ಕೆಂಪಣ್ಣ,(ಕೂಗುತ್ತ ಮೈಮೇಲೆಲ್ಲಾ ಕೈಯಾಡಿಸುವರು)

ಕೆಂಪೇಗೌಡ—ಮೇಲಕ್ಕೇಳುತ್ತಾ

ಎಲ್ಹೋದ ಅವನು? ಎಲ್ಹೋದ ಅವನು? ನಾನವನ್ನ ಕರುಳ ಬಗ್ದಾಕ್ಬಿಡ್ತೀನಿ, ಅವನ ಎದೆ ಸೀಳಿ ರಕ್ತಾ ಕುಡಿದು ಬಿಡ್ತೀನಿ, ಅವನ ಕತ್ತು ಹಿಸುಕಿ ಜೀವ ತೆಗದ್ಬಿಡ್ತೀನಿ, ಜೀವ ತೆಗೆದ್ಬಿಡ್ತೀನಿ.

ಕೆಂಪಮ್ಮ—ಸುಮ್ಮನೆ ಮಲಕ್ಕೋ ಅಪ್ಪ, ಸುಮ್ಮನೆ ಮಲಕ್ಕೋಪ್ಪ.

ಮಲ್ಲಣ್ಣ—ಕೆಂಪಕ್ಕ ಮನೀಗೆ ತಕ್ಕೊಂಡೋಗಾನಾ, ಅಲ್ಲೇ ಆಲೂ ಮದ್ದು ಎಲ್ಲಾ ಕೊಟ್ರೆ ಎರಡುದಿನದಾಗೆ ಪಸಂದಾಗ್ಬಡ್ತಾನೆ ಊಂಕಣಕ್ಕ ನಮ್ಮ ಪೈಕಿಗೆಲ್ಲಾ ಇನ್ನೇ ರುಸ್ತುಮಾ. ನಮ್ಮ ಪಟೇಲರಂತಾವ ಇಬ್ಬರು ಬಂದ್ರು ಜುಮ್ಮನ್ನೋ ಮಗ ಅಲ್ಲ ಏನೋ ಎತ್ವಾಸ ಆಗೋಗ್ಯೆತೆ.

ಕೆಂಪಮ್ಮ—ಎರಡು ದಿನದಿಂದ ಅವನ ಹೊಟ್ಟೆಗೆ ಏನು ಇಲ್ಲ.

ಮಲ್ಲಣ್ಣ—ಆಂ ಕಂಡ್ಯ ಅದ್ಕೆ ತಲೆಸುತ್ ಬಂದ್ಬುಟ್ಟೈತೆ. ಇಲ್ಲದಿದ್ರೆ ಪಟೇಲರಿ ಜಗ್ಗೊ ಮರೀನ ಇವ್ನ? ಏನಕ್ಕಾ ನಾವೇನ್ ನಿನ್ನ ಬಾಗಕ್ಕೆ ಸತ್ತೊ ಗ್ಬಿಟ್ಟಿದ್ವ? ಆಂಗೆ ಒಂದು ಮಾತು ಅನ್ನಾಕಾಗ್ಲಿಲ್ವಾ? ನಾವೇನ ನಿನ್ನ ಮನ್ಯಾಗ್ ಉಂಡಿಲ್ವಾ? ಏನೇ ಮಲ್ಲಿ?

ಮಲ್ಲಿ—ಅದೇ ನಾನು ಕೇಳಾದು. ನಾವೇನು ಊರ ಮನೆಯಾವ್ರಲ್ವ ನಾನೇನು ನಿನ್ನ ಮನ್ಯಾಗ ಆಲುತುಪ್ಪದಾಗ್ ಕೈತೊಳ್ದಿಲ್ವಾ? ನಂಗಾ ಒಂದು ಮಾತು ಕರ್ದು ಏಳ್ಬಾರ್ದಾಗಿತ್ತಾ? ಬುಡು ಬಡಕ್ಕಾ ಎಂ (ಚಾಳಿ ನಿಂದು)ಕೆಂಪಣ್ಣನ್ನ ನೋಡಿ ಬಾಯಿಮೇಲೆ ಬೆರಳಿಟ್ಟುಕೊಂಡ ಆಂ ಮೈಯಲ್ಲಾ ಊದ್ಕೊಂಬುಟೈತೆ. ಕಂಡ್ಯಾ ಮಲ್ಲಣ್ಣ ಬೈರಪ್ ಎಂಗೊಡ್ದವ್ನೆ? ತಬ್ಬಲಿ ಮಕ್ಕಳ್ನಾ ಇಂಗಾ ವಡೆಯೋದು? (ನೆಟ ಮುರಿಯುತ್ತಾ) ಅಯ್ಯೋ ಅವನ ಕೈ ಬತ್ತೋಗ. ಅವನ್ನಾ

ಸೇದೋಗ, ಅನ್ನಬಾಯಿಗೆ ಮಣ್ಣುಬಿದ್ದೋಗ, ಅನ್ನಸೊಲ್ಲಡ್ಗೋಗ ಅವನ್ಗೆ ದೊಡ್ಡರೋಗ ಬರಾ ಚಿಕ್ಕರೋಗ ಬರಾ ಅವನ್ಗೆ ರಬ್ಬಂತ ಮಾರವ್ವ ಒಡ್ಡು ದಬ್ಬಂತ ಕೆಡ್ವಾ ಬರಬಾರದ ಬಿರುಗಾಳಿಬಂದು ಅವ್ನ ಗುಡುಸ್ಕೊಂಡೋಗ ಓಗು (ಎಂದು ಕೈಕೊಡವಿ ಬಿಡುವಳು)

ರಂಗನಾಥ—ಕೆಂಪಮ್ಮ ನೀವೇನು ಚಿಂತೆಮಾಡಬೇಡಿ. ನಾನು ಪಂಡಿತರನ್ನ ಕರೆದುಕೊಂಡು ಬಂದು ಬೇಕಾದ ಔಷದಿ ಕೊಡಿಸುತ್ತೇನೆ. ಕೆಂಪೇಗೌಡ ಗುಣ ಮುಖನಾದಮೇಲೆ ನಾನು ನಮ್ಮನೇಲೆ ನನ್ನ ಜೊತೇಲೆ ಇಟ್ಕೋತೀನಿ. ಅವನ ಎಚ್ಚರಿಕೆ ಏನಿದ್ರುನಾನು ನೋಡ್ಕೊತೀನಿ.

ಕೆಂಪಮ್ಮ—ಏನೋಪ್ಪ ರಂಗನಾಥ ನೀನು ನಿಜವಾಗಿಯೂ ನಮ್ಮ ಪಾಲಿಗೆ ರಂಗನಾಥನಾಗೆ ಬಂದಿದ್ದೀಯ. ನನ್ನಮಗ್ನ ಉದ್ಧಾರವೆಲ್ಲ ನಿನಗೇ ಸೇರಿದೆಯಪ್ಪ.

ರಂಗನಾಥ—ಆಗ್ಲಿ. ಅದ್ದೇಗಾದ್ರು ಆಗುತ್ತೆ ಈಗ ಕೆಂಪಣ್ಣನ್ನ. ಮನೆಗೆ ಕರಕೊಂಡ್ಹೋಗೋಣ ಎಲ್ಲಿ ಮಲ್ಲಣ್ಣ ಸ್ವಲ್ಪ ಹಿಡ್ಕೊ.

(ಎತ್ತಿಕೊಂಡು ಹೋಗುವರು)

ದೃಶ್ಯ—೮

ಜಂಗಲುರಸ್ತೆ

ಸಂಸ್ಕೃತಿ ಭಂಡಾರ ಬೆಂಗಳೂರು-೧೮.

ಕೆಂಪಸಾಗರದ ಜವರೇಗೌಡರಪುತ್ರಿ ಲಿಂಗಾಂಬೆ ಪೂಜೆ ಸಾಮಗ್ರಿಗಳನ್ನಿಡಿದು ಗೆಳತಿಯರೊಡನೆ ಪ್ರವೇಶಿಸುವಳು. ಬೈರಪ್ಪ, ವೀರೇಗೌಡ ಎದುರಾಗುವರು.

ಚೆನ್ನಮ್ಮ—ಲಿಂಗಾಂಬೆ ನೀನು ನಿಮ್ಮ ಅಜ್ಜಿಊರಿಗೆ ಹೋಗ್ಬಂದ ವಿಚಾರ ಹೇಳಲೆ ಇಲ್ಲವಲ್ಲ?

ಲಿಂಗಾಂಬೆ—ಅಯ್ಯೊನನಗೆಂಟು ದಿನಕ್ಕೇ ಸಾಕಾಗೋಯ್ತುಮ್ಮ ಯಾವಾಗ ಊರು ಸೇರ್ಕೊಂಡೇನೋ ಅಂತ ಮನಸ್ಸಾಹತೊರೆಯುತ್ತ ಇತ್ತು. ನಮ್ಮೂರಿನ ಬಯಲು, ಆ ಹೊಂಗೆತೋಪು, ದೇವಸ್ಥಾನದ ಮುಂಭಾ

ಗದ ಸಂಪ್ಗೆ ಕಟ್ಟೆ, ಆ ದೊಡ್ಡ ಕೆರೆ, ಆದರ ಸೋಪಾನ, ಮನಸ್ಸನ್ನೆಲ್ಲಾ ಸೂರೆ ಮಾಡ್ಕೊಬಿಡ್ತಾವೆ. ನನಗಂತೂ ನಮ್ಮೂರು ಬಿಟ್ಟೋಗೋದಕ್ಕೆ ಇಷ್ಟಾನೆ ಆಗೋದಿಲ್ಲ. ಇಷ್ಟು ಒಳ್ಳೆ ಊರು ಈ ಲೋಕದ ಮೇಲೆ ಇಲ್ಲ. ನಮ್ಮ ತೋಟದ ವೀರಪ್ಪ ಹಾಡೋದಿಲ್ವೆ? ನಮ್ಮ ಕೆಂಪಸಾಗರವೆ ನಾಡಿಗೆ ಚಂದಕಾಣಿರೊ.

ಚಿಕ್ಕಮ್ಮ—ಈಗೇನೊ ಹೀಗ್ಹೇಳ್ತೀಯ ನಾಳೆ ಮದುವೆಯಾಗಿ ಪರ ಊರಿಗೆ ಹೋಗಬೇಕಾದ್ರೆ ಏನ್ಮಾಡ್ತಿಯಾ?

ಲಿಂಗಾಂಬೆ—ಥೂ, ಹೋಗ್ರೆ ನೀವು ಏನೇನೋ ಮಾತಾಡ್ತೀರ.

ಚನ್ನಮ್ಮ—ನಾವೇನೇನು ಮಾತಾಡ್ತಿಲ್ಲ ಇರೋ ವಿಚಾರವನ್ನೆ ಹೇಳಿದೆವು ನೀನೆ ಹೇಳು ಮದುವೆ ಆಗಿ ಬೇರೆ ಊರಿಗೆ ಹೋಗಬೇಕಾದ್ರೆ ಏನ್ಮಾಡ್ತಿಯ?

ಲಿಂಗಾಂಬೆ—ನಾನು ಮದುವೇನೆ ಆಗೋದಿಲ್ಲವಲ್ಲ? ಅಂದ ಮೇಲೆ ಬೇರೆ ಊರಿಗೆ ಹೋಗೂ ವಿಚಾರ ಎಲ್ಲಿಂದಾ ಬಂತು?

ಚಿಕ್ಕಮ್ಮ—ಅಯ್ಯೋ ಪಾಪ ಮದುವೇನೆ ಆಗೋದಿಲ್ಲ. ಕಾವಿ ಸೀರೆ ಉಟ್ಕೊಂಡು ಸನ್ಯಾಸಿನಿ ಆಗಿಬಿಡ್ತಾಳೆ

ಚನ್ನಮ್ಮ—ಹೂಂ, ಹೂಂ ಸನ್ಯಾಸಿನಿ ಆಗಿಬಿಡ್ತಾಳೆ. ಇವರಪ್ಪ ಮದುವೆ ಮಾಡಿ ಗಂಡನ ಮನೆಗೆ ಅಟ್ಟದ್ರೆ ಆಗ ಗೊತ್ತಾಗುತ್ತೆ.

ಚಿಕ್ಕಮ್ಮ—ಆಗೇನ್ಮಾಡ್ತಿಯಾ?

ಲಿಂಗಾಂಬೆ—ಏನ್ಮಾಡ್ತಿನಿ ಅಂದ್ರೆ ಗಂಡನ ಮನೇನೆ ಬಿಟ್ಟು ಇಲ್ಲಿಗೇ ಓಡಿ ಬಂದು ಬಿಡ್ತೀನಿ.

ಚನ್ನಮ್ಮ—ಬಂದ್ಬಿಡ್ತಾಳೆ ಬಂದ್ಬಿಡ್ತಾಳೆ ಆಮೇಲೆ ಈ ಕಡೆ ಮುಖಾನೆ ಹಾಕೋದಿಲ್ಲ. "ಕಟ್ಟಾಣಿ ಗುಂಡಿಗೆ ಕಲ್ಲು ಹಾಸಿದುಂಗುರ ಸಿಟ್ಟು ಮಾಡಿದರೆ ನಗುವಂತ ರಾಯರನು ಬಿಟ್ಟೆಂಗೆ ಬರಲೆ ಹಡದವ್ವ" ಅನ್ನೋದಿಲ್ವೇನೊ?

ಚಿಕ್ಕಮ್ಮ—ಅಷ್ಟೇ ಅಲ್ಲ "ಕಾಣಾದೆ ಇರಲಾರೆ ಕಾಶಿ ಖರ್ಜೂರವಾ." ಬಾಣಶೂರಾನ ಗಂಡಾನ, ಮುಖವನ್ನು ಕಾಣಾದರ ಘಳಿಗೆ ಇರಲಾರೆ, ಅಂತಾಳೆ

ಲಿಂಗಾಂಬೆ—ಥೂ ಹೊಗ್ರೆ, ನಿಮ್ಮ ಜೋತೆಲೆ ಬರ್ಬಾರ್ದರ್ೂ. ಬಂದ್ರೆ ನಮ್ಮಪ್ಪ ನೀವು ಎನೇನೋ ಅಂತೀರಾ. (ಹೊರಡುವಳು)

ಚಿಕ್ಕಮ್ಮ ಚೆನ್ನಮ್ಮ—(ಹಿಂಬಾಲಿಸುತ್ತ) ಅದ್ಕೆ ಹೇಳ್ತಿರೋದು ಮದುವೆ ಆಗಿ ಗಂಡನ ಮನೆಗೋಗ್ಬಿಡು ಅಂತ.

(ಇದಿರಿನಿಂದ ಬೈರಪ್ಪ, ವೀರೆಗೌಡ ಬರುವರು. ಅವರನ್ನು ಕಂಡು ಮೂರು ಜನ ಹೆಂಗಸರು ಗಾಬರಿಯಾಗಿ ಓಡಿಹೋಗುವರು.)

ಬೈರಪ್ಪ—ಎಂಥಾ ಸುಂದರವಾದ ರೂಪು

ವೀರೆಗೌಡ—ಅದಕ್ಕೆ ತಕ್ಕಂತೆ ಸರಳಸ್ವಭಾವ.

ಬೈರಪ್ಪ—ಮನಸ್ಸೇ ಸಂಪೂರ್ಣವಾಗಿ ಸೋತುಹೋಯ್ತು. ಆ ಹೆಣ್ಣನ್ನು ನೋಡಿದಮೇಲೆ ಜಗತ್ತಿನ ಯಾವ ಹೆಣ್ಣಿನ ಕಡೆಗೂ ದೃಷ್ಟಿಯು ಹರಿಯುವುದಿಲ್ಲ.

ಬೀರೇಗೌಡ—ನಿನಗೆ ತಕ್ಕ ಹೆಣ್ಣು.

ಬೈರಪ್ಪ—ನಿಶ್ಚಯವೇ ?

ವೀರೇಗೌಡ—ನಿಶ್ಚಯವಲ್ದೆ ಸುಳ್ಳಾಡ್ತಾಯಿದ್ದೀನೆ? ಮುಂದೆ ನೀನು ಈ ಮಾಗಡಿ ನಾಡಿಗೆ ರಾಜನಾದಾಗ ಮಹಾರಾಣಿಯಾಗಿ ಸಿಂಹಾಸನದ ಮೇಲೆ ನಿನ್ನ ಪಕ್ಕದಲ್ಲಿ ಕೂರೋದಕ್ಕೆ ಈ ಹೆಣ್ಣೇ ಯೋಗ್ಯವಾದವಳು.

ಬೈರಪ್ಪ—ಸರಿಯಾದ ಲೆಕ್ಕಾನೆ ಹಾಕಿದ್ದೀಯ. ಆದ್ರೆ ಕೆಂಪಸಾಗರದಲ್ಲಿ ಈಕೆ ಯಾರಮಗಳು? ನಾವು ಇಷ್ಟು ಹತ್ತಿರವಿದ್ರೂ ನಮಗೆ ಗೊತ್ತಾಗಿಲ್ಲವಲ್ಲ ?

ವೀರೇಗೌಡ—ಅಯ್ಯೊ ಅಷ್ಟುಗೊತ್ತಿಲ್ವೆ ? ಕೆಂಪಸಾಗರದ ನಮ್ಮ ಜವರೇಗೌಡ್ರ ಮಗಳಲ್ಲವೇ ?

ಬೈರಪ್ಪ—ನಮ್ಮ ಜವರೇಗೌಡ್ರ ಮಗಳೇ. ಅವರೇನೋ ಈ ಭಾಗದಲ್ಲಿ ಒಳ್ಳೆ ದೈವಭಕ್ತರು. ಸದ್ವಂಶದವರು ಯೋಗ್ಯರು ಅನ್ನೋ ಹೆಸರನ್ನು ಪಡೆದಿದ್ದಾರೆ. ಆದ್ರೆ ಈ ಹುಡುಗೀನ ನನಗೆ ಮದುವೆಮಾಡಿ ಕೊಡೋದಕ್ಕೆ ಅವರು ಒಪ್ತಾರ್ಯೇ ?

ವೀರೇಗೌಡ—ಇದೇನಯ್ಯ ಹೀಗೆ ಅನುಮಾನ ಪಡ್ತಿಯ? ನಿನಗೆ ಕೊಡೋದಕ್ಕೆ ಯಾರ್ತಾನೆ ಒಪ್ಪೋದಿಲ್ಲ? ನೀನು ಯಾವುದ್ರಲ್ಲೇನು ಕಡಿಮೆಯಾಗಿದ್ದೀಯಾ?

ಬೈರಪ್ಪ—ಅದೇನೋ ನಿಜ್ವೇಅನ್ನು. ಆದ್ರೆ ಇದು ನನ್ಗೆ ಮೂರ್ನೆ ಸಂಬಂಧಾ ನೋಡು ಅದಕ್ಕೋಸ್ಕರ ನನಗನುಮಾನವಾಯ್ತು ಅಷ್ಟೆ.

ವೀರೇಗೌಡ—ಅಯ್ಯೋ ನಿನ್ನ ಸ್ಥಾನ, ನಿನ್ನ ಐಶ್ವರ್ಯ, ನಿನಗಿರೋ ಜನ ಜನಬೆಂಬಲ ಎಲ್ಲಾ ತಿಳ್ಕೊಂಡ್ರೆ ಕಾಲ್ಬಿಡ್ದು ಮಗಳನ್ನ ಕೊಡ್ತಾರೆ. ನೀನು ನಿಶ್ಚಿಂತೆಯಿಂದಿರು. ನಾನೆ ಜವರೇಗೌಡ್ರ ಬಳಿಗ್ಹೋಗಿ ಸಂಬಂಧ ನಿರ್ಧಾರ ಮಾಡ್ಕೊಂಡು ಬರ್ತೀನಿ.

ಬೈರಪ್ಪ—ನೀನು ಧೈರ್ಯಕೊಟ್ಟಮೇಲೆ ಆಹುಡ್ಗೀ ನನಗೆ ಮೂರೆಜ್ಜೆ ದೂರವಲ್ಲಿ ನಿಂತಿರೋ ಹಾಗೆ ತೋರ್ತಾಇದೆ ನೋಡು. ಆದ್ರೆ ಬಹಳ ಜಾಣತನದಿಂದ ಕಾರ್ಯಸಾಧನೆ ಮಾಡಬೇಕು.

ವೀರೇಗೌಡ—ಅದನ್ನೆಲ್ಲಾ ನನಗೆ ಹೇಳಿಕೊಡಬೇಕೇನಯ್ಯ ನೀನು?

ಬೈರಪ್ಪ—ಹಾಗೆ ನಮ್ಮ ಪರವಾಗಿ ಜವರೇಗೌಡರಿಗೆ ಒಂದು ಉಡುಗೊರೆಯನ್ನ ತೆಗೆದುಕೊಂಡು ಹೋಗು.

ವೀರೇಗೌಡ—ಆಗ್ಲಿ ಹೋಗೋಣ ನಡೆ.

ದೃಶ್ಯ ೬

ಶಾಸ್ತ್ರಿ ಮನೆ

ಶಾಸ್ತ್ರಿ—ಸಾತೂ, ಸಾತೂ,

ಸಾವಿತ್ರಮ್ಮ ಒಳಗಿನಿಂದ, ಬಂದೇ ಅಂದ್ರೆ. ಒಲೆಮೇಲೆ ರೊಟ್ಟಿ ಬೇಯ್ತಾ ಇದೆ.

ಶಾಸ್ತ್ರಿ—ಬಾರೆ ಇಲ್ಲಿ ಅಂದ್ರೆ, ಎನೋ ನೆಪ ಹೇಳ್ತಾ ಇದ್ದಾಳೆ.

ಸಾವಿತ್ರಮ್ಮ, ಬಂದೇ ಬಂದೇ ಒಳಗಿನಿಂದ.

ಸಾವಿತ್ರಿ—(ಪ್ರವೇಶಿಸಿ,) ಏನು ಅಂದ್ರೆ ಯಾಕ ಕರೀತಿದ್ರಿ?

ಶಾಸ್ತ್ರಿ—ನೋಡ್ದೇನೆ ಕೆಂಪ ಇಷ್ಟೋತ್ತಾದರು ಬಂದ್ನೇನೆ? ನನಗೂ ಎರಡು ವರ್ಷದಿಂದ ನೋಡಿ ನೋಡಿ ಸಾಕಾಗ್ಹೋಯ್ತು. ನೆನ್ನೆ ಆವನ್ನ

ಹೆದರಿಸಿ ಎರಡೇಟು ಹೊಡೆಮದಕ್ಕೆ, ನನ್ನ ಮೇಲೆ ದೊಡ್ಡ ಯುದ್ಧವನ್ನೆ ಮಾಡಿಬಿಟ್ಟಲ್ಲ, ನೋಡ್ದೋ?

ಸಾವಿತ್ರಿ—ಮತ್ತಿನ್ನೇನು ತಗೋಳಿ ತಂದೆಯಿಲ್ಲದ ತಬ್ಲಿ ನಮ್ಮನ್ನೇ ನಂಬಿಕೊಂಡಿದೆ, ತಬ್ಲಿ ಮಕ್ಕಳ್ನ ಹೊಡೆದು ಬೈಯ್ದು ಗೋಳ್‌ಹುಯ್ಕೊಂಡ್ರೆ, ದೇವ್ರು ತಾನೆ ನಮ್ಮನ್ನ ಮೆಚ್ಚುತಾನೇನು? ನನಗಂತೂ ಕೆಂಪನನ್ನು ನೋಡಿದ್ರೆ, ನಮ್ಮ ರಂಗನಾಥನ್ನೇ ನೋಡ್ದಾಗಾಗುತ್ತೆ. ನಮ್ಮ ರಂಗನಾಥನು ಕೆಂಪನ್ನ ಎಷ್ಟು ಪ್ರೀತಿಸ್ತಾನೆ. ಇಬ್ರು ಅಣ್ಣ ತಂಮ್ಮಂದ್ರಂತೆ ನಡ್ಕೊತಾ ಇದ್ದಾರೆ.

ಶಾಸ್ತ್ರಿ—ಸಾಕುಮಾಡೆ ಸಾಕು. ಆ ರಂಗನಾಥ ಆ ಕೆಂಪನ್ನ ತಲೆ ಮೇಲೆ ಹತ್ತಸ್ಕೊಂಡಿದ್ದಾನೆ. ನೀನು ಬೇರೆ ಬೆನಿಂದೆ ಹಾಕ್ಕೊಂಡಿದ್ದೀಯ. ಇನ್ನು ಸಾನವನಿಂದ ಕೆಲಸ ತಗೊಳ್ಳೋಧ್ಯಾಗೆ? ಆಳುಕಾಳುಗಳಿಗೆ ಇಷ್ಟೊಂದು ಸದ್ರಾ ಕೊಡಬಾರದು ಕಣೆ, ಇದು ಧರ್ಮಕ್ಕಾಲವಲ್ಲ (ಪಕ್ಕಕ್ಕೆ ತಿರುಗಿ) ಅದೇನೆ ವಾಸನೆ ಬರ್ತಿರೋದು?

ಸಾವಿತ್ರಮ್ಮ—ಅಯ್ಯೋ ನನ್ನ ಬುದ್ದೀನೆ? ನಿಮ್ಮ ಧರ್ಮ ಕೇಳ್ತನಿಂತ್ಬಿಟ್ರೆ ನನ್ನ ಕರ್ಮ ನೋಡದಾ್ರ? ಕಾವಲಿ ಮೇಲೆ ರೊಟ್ಟೆ ಹಾಕಿ ಬಂದಿದ್ದೆ. ಸುಟ್ಹೋಯ್ತೊ ಏನೋ. (ಹೋಗುವಳು)

ಕೆಂಪೇಗೌಡ—(ಪ್ರವೇಶಿಸಿ) ನಮಸ್ಕಾರ ಸ್ವಾಮಿ.

ಶಾಸ್ತ್ರಿ—ಏನೋ ಹಾಸ್ಗೆಯಿಂದ ಏಳ್ಬೇಕಾದ್ರೆಇಷ್ಟೊತ್ತುಬೇಕಾಯ್ತೇನೋ?

ಕೆಂಪೇಗೌಡ—ಇಲ್ಲ ಸ್ವಾಮಿ. ಆಗ್ಲೆ ಎದ್ದೆ ಲಕ್ಷ್ಮಿಗೆ ಮೈ ಸ್ವಸ್ಥವಿಲ್ಲ ನಮ್ಮಮ್ಮ ಸೊಪ್ಪು ತರೋದಕ್ಹೇಳಿದ್ಲು ಹೋಗಿ ತಂದು ಕೊಟ್ಟು ಬರೋದು ಸ್ವಲ್ಪ ತಡವಾಯ್ತು. ನಾಳೆಯಿಂದ ಮನೇಗೆ ಹೋಗೋದಿಲ್ಲ. ರಾತ್ರಿ ಇಲ್ಲೇ ಮಲಗಿದ್ದು ನಾಳೆ ಬೆಳಗ್ಗೇನೆ ಎದ್ದು ತೋಟಕ್ಹೋಗ್ತೀನಿ.

ಶಾಸ್ತ್ರಿ—ಮನೇಗ್ಹೋಗ್ಬೇಡ ಅಂತ ಯಾರೋ ನಿನಗ್ಹೇಳ್ದವರು? ಹೋದ್ರೆ ವೇಳೆಗೆ ಸರಿಯಾಗಿ ಬರಬೇಕೊ ಬೇಡವೋ? ಈ ಮನೇ ಸೇರಿ ಎರಡು ವರ್ಷಕ್ ಮೀರ್ತಲ್ಲ. ಒಂದು ದಿನವಾದರು ನಿನ್ನ ರಗಳೆ ತಪಲ್ಪೊ

ಇಲ್ಲ. ನಾಳೆಯಿಂದ ಹೀಗೇನಾದರು ಮಾಡದ್ರೇ ಈ ಮನೆ ಮೆಟ್ಟಲು ಸಹ ಹತ್ತಿಸೋನಲ್ಲ. ತಿಳೀತೇ?

ಕೆಂಪೇಗೌಡ—ಇಲ್ಲಾ ಸ್ವಾಮಿ. ಇನ್ನು ಒಂದು ದಿನವಾದರು ತಡವಾಗಿ ಬರೋದಿಲ್ಲ. ನೀವು ಯಾವ ಕೆಲಸ ಹೇಳದ್ರೂ ತಪ್ಪದೆ ಮಾಡ್ತೀನಿ. ಆದ್ರೆ ನೆನ್ನೆ ಹೊಡೆದ್ದಾಗೆ ಮಾತ್ರ ಇನ್ನು ಹೊಡಿಬೇಡಿ ನಿಮ್ಗೆ ಕೈ ಮುಗೀತೀನಿ.

ಶಾಸ್ತ್ರಿ—ಸಾಕು ಬಾಯಿ ಮುಚ್ಚು. ತಪ್ಪು ಮಾಡಿದ್ದಲ್ದೆ, ಎದುರಿನಲ್ಲಿ ನಿಂತ್ಕೊಂಡು ಬೇರೆ ವಾದಿಸ್ತಿಯೇನೋ? ಹೊಡಿಬಾರದಂತೆ, ದೊಡ್ಡ ರಾಜನ ಮಗ. ಹೊಡೀಬಾರ್ದು, ಇಲ್ಲವೇನೊ ಕತ್ತೆ ತಂದು

ಸಾವಿತ್ರಮ್ಮ—(ಒಳಗಿನಿಂದ ಬಂದು.)ಅಲ್ಲ ಅಂದ್ರೆ ನೀವು ಯಾಕೆ ಸುಮ್ಮನೆ ಅವನ ಮೇಲೆ ರೇಗ್ತ ಇದ್ದೀರ? ಏನೋ ಬರೋದಕ್ಕೆ ಸ್ವಲ್ಪ ತಡವಾಗಿರ ಬಹುದು. ನಾಳೆಯುಂದ ಸರಿಯಾಗಿ ಬರ್ತಾನೆ.

ಶಾಸ್ತ್ರಿ—ಏನೆ ಸರಿಯಾಗಿ ಬರ್ತಾನೆ? ಬಂದ್ಲು ಪರವಹಿಸಿ ಮಾತ್ನಾಡೋಕೆ. ಲೇ, ಸಾತು ನೀನೆ ಈ ಕೆಂಪನನ್ನ ಹಾಳುಮಾಡಿದವಳು, ಚೆನ್ನಾಗಿ ತಿನ್ನೋಕ್ಕಾಕಿ ಶುದ್ಧ ಸೋಮಾರಿ ಮಾಡ್ಬಿಟ್ಟೆ. ನಾಳೆಯಿಂದ ಇವನಿಗೆ ನಾನು ಹೇಳಿದಷ್ಟು ಊಟ ತಿಂಡಿ ಕೊಡಬೇಕು. ಅದು ನಾನು ಹೇಳಿದ ಹೊತ್ತಿಗೆ ಕೊಡಬೇಕು. ತಿಳೀತೇನೆ? ಲೋ, ಕೆಂಪ ಈಗ ನಾನು ಬೈರಪ್ಪನ ಮನೆಗ್ಹೋಗಿ, ತೋಟಕ್ಕೆ ಬರ್ತೀನಿ ಎಷ್ಟು ಕೆಲ್ಸ ಮಾಡಿರ್ತೀಯಾ ಅನ್ನೋದು ಗೊತ್ತಾಗುತ್ತಲ್ಲ? ಒಂದು ಗುದ್ದಲಿ ತಪ್ಪಿದರೆ ಮತ್ತೊಂದು ಕೈಲಿರಬೇಕು, ಎರಡೂ ನೆಲದ ಮೇಲಿದ್ದಿದನ್ನು ನಾನೇನಾದ್ರು ನೋಡ್ಬೇಕಂತೇ. ಅಲ್ಲಿಂದಾನೆ ಒದ್ದು ಓಡಸ್ಬಿಡ್ತೀನಿ. ತಿಳಿತೇನೋ?

ಕೆಂಪೇಡಗೌ—ತಿಳೀತು ಸ್ವಾಮಿ, ತಾವು ಹೇಳ್ದಾಗೆ ಕೆಲ್ಸ ಮಾಡ್ತಾ ಇರ್ತೀನಿ.

ಶಾಸ್ತ್ರಿ—ಹಾಂ ಹಾಗಿರಬೇಕು. ಸಾತು ಈ ದಿನ ಕೆಂಪನಿಗೆ ರೊಟ್ಟಿಗಿಟ್ಟಿ ಏನು ಕೊಡಬೇಡ. ಹಾಗೆ ಕಳ್ಸು ನಾನು ಬರ್ತೀನಿ.

ಸಾವಿತ್ರಮ್ಮ—ಕೆಂಪ, ಯಾಕಪ್ಪ ಹೊತ್ತಿಗೆ ಸರಿಯಾಗಿ ಬರ್ದೆ ಅವರ ಕೈಲಿ ಬೈಸ್ಕೊೀತೀಯ ಹೊಡಸ್ಕೋತೀಯ? ಬಾ ರೊಟ್ಟಿ ಕೊಡ್ತೀನಿ ತೋಟಕ್ಕೋಗುವಿಯಂತೆ.

ದೃಶ್ಯ ೧೦

ಜಂಗಲ್

ಮಲ್ಲಣ್ಣ ಕೈಲಿ ಮರದ ಕೊಂಬೆಯನ್ನು ಹಿಡಿದುಕೊಂಡು ಅಲ್ಲಲ್ಲಿ ಕೆಂಪು ಬಣ್ಣವನ್ನು ಬಳಿದುಕೊಂಡು ಹಾಡುತ್ತ ಪ್ರವೇಶಿಸಿದನು

ಹಾಡು

ಇಂಬೀಯ ಹಣ್ಣಂತೆ ತುಂಬೀದ ಮೈಬಾಲೆ, ಕಾಣಾದೆ ನಿನ್ನ ಬಳಲೀದೆ
ಗೆಣಕಾತಿ ಕಾಣಾಲಿನ್ನೆಂಗೆ ಮನೆದೂರ.

ಅಡ್ಡಗುಡ್ಡವದಾಟಿ ಕದ್ದು ಕಣಿವೆಯದಾಟಿ ಬಿದ್ದೋಡಿಬಂದಿವ್ನಿ ನಿನಗಾಗಿ
ಗೆಣೆಕಾತಿ ಕಬ್ಬಿನಂತವಳೆ ದನಿತೋರೆ.

ಅಲ್ಲಾ ಈ ಮಲ್ಲಿ ನನ್ನ ಕಪಿ ಮಾಡ್ಕೊಂಡು ಕುಣಸಾಕತ್ಬುಟ್ಟವಳಲ್ಲ? ಅಲ್ಲಾ ಒಂದು ಪಟಾಏಳ್ತಾಳೆ. ಮಲ್ಲಣ್ಣ ನಿನ್ನಂತ ಚಂದುಳ್ಳ ಗಂಡು ಸೀಮೆಮ್ಯಾಗೆ ಇಲ್ಲ, ನಿನ್ನ ಬುಟ್ಟು ಇನ್ಯಾರನಾರ ಲಗ್ಣಆಯ್ತಿನಾ ಅಂತ. ಇನ್ನೊಂದು ಪಟಾ ಏಳ್ತಾಳೆ ಅಲೆ ಹೋಗೋಗೊ, ನಿನ್ನ ಲಗ್ಣ ಆಗಾಕ್ಕೆ ನಂಗೇನು ಗಾಚಾರ ಇಡದೈತ? ನಿನ್ನ ರವಷ್ಟು ಒಪ್ಪಾಕಿಲ್ಲ ಅಂತ. ಇವಳ ಮಣಸನಾಗೇನೈತೆ ಅನ್ನೊ ಇಚಾರ, ಇಂಗೇ ಅಂತ ನಾನೆಂಗ್ ತಿಳ್ಕೊಳ್ಳಿ? ಎಂಗಸಿನ ಮಣಸಿನ ಮರ್ಮ ಅಣೇಬರ ಬರೆಯೋ ಆ ಬೊಮ್ಮ ಅವನಲ್ಲ ಅವನ ಕಯ್ಯಾಗೆ ತಿಳಿಯಾಕಾಗಲಿಲ್ಲ ಅಂತ, ಇದ್ಯಬುದ್ದಿ ತಿಳದೋರು ಅಂದ ಬುಟ್ಟಮ್ಯಾಕೆ ನನ್ನ ಕೈಲಿ ತಿಳಿಯಾಕಾಗತ್ತೈತಾ? ಏನ್‌ಮಾಡಾವ ಏನ್‌ಮಾಡಾವ ಅಂತ ಇಳ್ಳಾನಿಳ್ಳ ನಿದೆಕೆಟ್ಟು ಯೋಸ್ನೇ ಮಾಡಿ ಮಾಡೀ ಕಟ್ಕಡೀಕು ಒಂದುಪಾಯ ಕಂಡೇಇಡುದುಬುಟ್ಟಿವ್ನಿ. ಅದಕೇ ಈ ಯಾಸ ಕಟ್ಟೆರೋದು. ಪರೀಕ್ಸೆ ಮಾಡೇಬುಡಾವಾ ಅವಳು ಬರಲಿ ಅಂತ ಕಾಯ್ತಾಇವ್ನಿ. (ನೋಡಿ) ಅಕ್ಕೋ ಇತ್ತಕಡೀಕೇನೇ ಬತ್ತಾಅವಳೆ. ಬಾರ್ಲೆ ಬಾ. ಅಂಜನ ಹಚ್ಚಿ

ಬೂಮಿತಾಯಿ ಒಟ್ಟೇಲಿರೋ ಅಣ ಕಂಡಿಡಿಯೋ ಅಂಗೆ ನಿನ್ನ ಮಣಸಿನಾಗೆ ಏನಯ್ತೆ ಅನ್ನೋ ಇಚಾರ ಕಂಡಿಡೀದೆ ಬುಟ್ಟುಬುಟ್ರಿ ನಾ ಮಲ್ಲಣ್ಣನೇ ಅಲ್ಲಾ (ಮಲಗುವನು).

ಮಲ್ಲಿ—(ಮಲ್ಲಿ ಬಿಂದಿಗೆ ಹಿಡಿದು ಹಾಡುತ್ತಾ ಪ್ರವೇಶಿಸುವಳು).

ಹಾಡು

ಚಳಿ ಜ್ವರ ಬಿಟ್ಟಾರು ಒಳಜರಾ ಬಿಡಲಿಲ್ಲ, ಮಂಟಪದ ಜಾಜಿ ಮನೆಯವನೇ, ಅತ್ತೀಮಗನೇ ಮಂತ್ರೀಸಿ ಹೋಗೋ ತಲೆನೋವಾ ॥ ನೆನ್ನಿಂದ ಮೊನ್ನಿಂದ ನಿನ್ನಮ್ಯಾಗಳ ಗ್ಯಾನ ಹೊಟ್ಟೆಯ ಒಳಗೆ ತುಸನೋವು ಗೆಣಕಾರ ಸುಣ್ಣಕ್ಕೆ ಬಂದಾರೆ ಸುಳಿದೋಗು ॥

(ಇದೇನು ಮಲ್ಲಣ್ಣ ಆದೀಲೆ ಮಲಗನ್ನಲ್ಲ? ದನಾ ಕರಾ ಏನಾರಾ ತುಳಿದಾಕ್ಬುಟ್ಟರೆ ಏನುಗತಿ? ಮಲ್ಲಣ್ಣ, ಮಲ್ಲಣ್ಣ, ಏ ಮಲ್ಲಣ್ಣ.

(ಬಾಯಿಮೇಲೆ ಬೆರಳಿಟ್ಟು) ಅಯ್ಯವ್ವ ಮೂಗ್ನಾಗೆ ರಕ್ತ ಬಾಯಾಗೆಲ್ಲ ರಕ್ತ ಮೈಮ್ಯಾಗೆಲ್ಲಾ ಏಟೊಂದು ರಕ್ತಸುರುದುಬುಟೈತೇ?

ಮರದಮ್ಯಾಕೆ ಹತ್ತಿ ಬುದ್ದುಬುಟ್ಟವನೋ ಏನೋ. ಅಂಗೆ ಕೊಂಬೇನು ಮುರ್ಕೊಂಡು ಬಿದ್ದೈತೆ. (ಹಿಡಿದು ಅಲ್ಲಾಡಿಸಿ) ಮಲ್ಲಣ್ಣ, ಏ ಮಲ್ಲಣ್ಣ, ಮಾತೆ ಆಡಾಕಿಲ್ಲ! ಉಸುರೂ ಒಂಟೋಗೈತೆ! ಹಯ್ಯೊ ನಾ ಕೆಟ್ನೇ! ಇನ್ನೇನ್ ಗತಿ ಮಾಡಲವ್ವ ಅಯ್ಯೊ ಮಲ್ಲಣ್ಣ ನನ್ನ ಬುಟ್ಟು ಒಬ್ಬನೇ ಒಂಟೋದೇನೋ? ಈ ಲೋಕ ಬುಟ್ಟು ಬುಟ್ಟು ಪರಲೋಕ ಸೇರ್ದೇನೋ ನನರಾಜಾ! ಕೈಗೆ ಕಂಕಣ ಕಟ್ನಿಲ್ಲಾ, ಲಗ್ಣದಾಸೆ ಮನಸಾಗೆ ಇಟ್ಕೊಂಡು ಒಂಟೋದೇನೋ ನನ್ನ ಸಾಮಿ, ಮಾತಿಗೊಂಡು ಪದಾಮಾಡಿ ಚಿಗರಮೀಸೆ ಉರಿಮಾಡಿ ಎಗಲಮ್ಯಾಗಳೆ ಕಂಬ್ಳಿ ಸರಿಮಾಡಿ ಮಲ್ಲೀ ಅಂತ ಕುಪ್ಪಳಿಸಿ ಕೂಗಾಡಿ ಬರತಿದ್ದಲ್ಲೋ ನನರಾಯಾ, ಒಂದು ಮಾತು ಆಡಲಿಲ್ಲ ಬತ್ತೀನಂತ ಏಳಲಿಲ್ಲಾ. ಇದ್ದಕ್ಕಿದ್ದಂಗೇ ಏಳ್ದೆ ಕೇಳ್ದೆ ಒಂಟೋದೇನೋ ನನ್ನ ಒಡೆಯಾ! (ಅಳುತ್ತ ಮಂಡಿಯಲ್ಲಿ ತಲೆಯನ್ನಿಟ್ಟುಕೊಳ್ಳುವಳು. ಮಲ್ಲ ಅರ್ದ ಕ್ಕೆದ್ದು ಮಲ್ಲಿಯ ಮುಖವನ್ನು ನೋಡುವನು. ಮಲ್ಲಿ ಅಕಸ್ಮಾತ್ ತಲೆ ಎತ್ತಿ ನೋಡುವಳು. ಮಲ್ಲ ಹಾಗೆ ಬಿದ್ದುಕೊಳ್ಳುವನು. ಮಲ್ಲಿ

ಅದನ್ನು ನೋಡಿ ಪಕ್ಕಕ್ಕೆ ತಿರುಗಿ) ಅಲ್ಲಾ, ಆಲದಮರದ ಕೆಳಗೆ ಮಾವಿನ ಕೊಂಬೆ ಮುರಿದು ಬಿದ್ದೈತೆ. ನೆಲದಮೇಲೆ ಒಂದನೀ ರಕ್ತಾನು ಸುರಿದಿಲ್ಲ. ಇದ್ದಕ್ಕಿದ್ದಂಗೆ ಸತ್ತೊಗ್ಬುಟ್ಟವನೇನೋ. ಎದ್ದು ಮತ್ತೆ ಮಲಗಿಕೊಂಡವ್ನೆ. ಆಂ ಎಂತಾ ಯಾಸ ಕಟ್ಟವ್ನೇ? ನಾನೇ ಬಲ್ ಉಸಾರಿ ಎಣ್ಣು ಅಂತ ತಿಳಕೊಂಡಿದ್ರೆ ನನ್ನ ಕಣ್ಗೆ ಮಂಕಬೂದಿ ಆಕ್ಬುಟ್ಟವನಲ್ಲ. (ಮಲ್ಲ ಎದ್ದು ಮಲ್ಲಿ ನೋಡಿ ಹಾಗೆ ಮಲಗುವನು ಮಲ್ಲಿ ನೋಡಿ ಸಮೀಪಕ್ಕೆ ಹೋಗಿ) ಅಯ್ಯೋ ಈಗೇನ್ಮಾಡ್ಲಿ ಮಲ್ಲಣ್ಣ ಸತ್ತೋಗವನೆ ಒತ್ಕೊಂಡೋಗಾಕೆ ಯಾರೂ ಇಲ್ಲವಲ್ಲ! ಅಕ್ಕೋ ಪಟೇಲ್ರು ಬತ್ತಾ ಅವ್ರೆ. ಬೈರಪ್ಪಮಾವಾ! ವಸಿ ಇಂಗೇಬನ್ನಿ ಮಾವಾ ಮಲ್ಲಣ್ಣ ಸತ್ತೋಗವ್ನೆ.

ಮಲ್ಲ—(ಜಗ್ಗನೆದ್ದು) ಬ್ಯಾಡ್ಕಾಣೆ ಕರೀಬ್ಯಾಡ್ಕಾಣೆ (ಎಂದು ಓಡುವನು ಮಲ್ಲಿ ಹಿಡಿದು ಎಳೆದುಕೊಂಡು ಬರುವಳು).

ಮಲ್ಲ (ಕಾಲಿಗೆ ಬೀಳುತ್ತ)—ಇಲ್ಲಾ ಮಾವ, ಇನ್ಮ್ಯಾಲೆ ಇಂಗೆಲ್ಲಾ ಆಡಾಕಿಲ್ಲ ಮಾವ, ನಿನ್ನ ಪಾದಸಾಕ್ಸಿ ಆಡಕಿಲ್ಲ ಬುಟ್ಬುಡು ಮಾವಾ, (ಮಲ್ಲಿ ಕಾಲ್ಹಿಡಿಯುವನು).

ಮಲ್ಲಿ—(ಬೆನ್ನಿನಮೇಲೆ ಹೊಡೆದು) ಅಯ್ಯೊ ಮಲ್ಲಣ್ಣ ನಾನು. ಬೈರಪ್ಪಲ್ಲಾ.

ಮಲ್ಲ—(ನೋಡಿ) ಅಯ್ಯೊ ನೀನಾ?

ಮಲ್ಲಿ—ಔದು ನಾನೇ. ನೀನ್ಯಾಕೆ ಇಂಗಾಡ್ತಿಯೊ ಮೂದೇವಿ. ನನ್ನ ಕಾಲಿಗ್ಯಾಕೆ ಬಿಳಾಕೆ ಬತ್ತಿಯಾ? ಈ ಪಿಚಾಚಿಯಾಸ ಏನೂ? ನಿನಗೇನ್ ಹಿಡಿದೈತೆ? (ಮಲ್ಲ ಎದ್ದು ಪಕ್ಕಕ್ಕೆ ತಿರುಗಿ ನಿಲ್ಲುವನು)

ಮಲ್ಲಿ—ಇದ್ಯಾಕೆ ಮಲ್ಲ ಇಂಗೆ ನಿಂತ್ಬುಟ್ಟ್ವಾನೇ? ಎಲ್ಲಿಗೋ ಒಂಟ್ ನಿಂತಿರೋ ಅಂಗೈತೆ? (ಮುಂದಕ್ಕೆ ಬಂದು) ಏ ಮಲ್ಲಾ ಇದ್ಯಾಕ್ಲಾ ಇಂಗ್ ನಿಂತಿದ್ಯಾ?

ಮಲ್ಲ—ಮಲ್ಲಿ ಮಲ್ಲಿ ನನ್ನ ಬುಟ್ಬುಬುಡು. ನಾನು ದೇಸಾಂತರ ಒಂಟೋಯ್ತೀನಿ.

ಮಲ್ಲಿ—ಅದ್ಯಾಕೆ ದೇಸಾಂತರ ಒಂಟೋಯ್ತಿಯೋ?

ಮಲ್ಲ—ಸನ್ನ ಮಣ್ಣೂ ಬಲ್ ನೋವುಂಡ್ಬುಟ್ಟೈತೇ ಮಲ್ಲಿ. ನನ್ನ ಜೀವ ಬೆಂಕಿ ವ್ಯಾಗೆ ಬಿದ್ದ ಉಳೀನಂಗೆ ವಿಲಿವಿಲೀ ಅಂತ ಒದ್ದಾಡ್ತೈತೆ. ನಿನ್ನ ವ್ಯಾಲೆ ನಾನು ಏಟೊಂದು ಪಿರೀತಿ ಇಟ್ಟಿವ್ನಿ ಅನ್ನೊ ಇಚಾರ ನಿಂಗೊತ್ತಿಲ್ವಾ? ಇಂಗಿದ್ದೂ ನನ್ನಯಾಕೆ ಗೋಳಾಡಿಸ್ತೀಯಾ ಮಲ್ಲಿ? ದೇವ್ರು ನಿಂಗೆ ಒಳ್ಳೇದು ಮಾಡಾಕಿಲ್ಲ ನೋಡು. ಏಳ್ಬುಡು, ನೀನು ನಂಗೆ ಲಗ್ಣ ಆಗವಳಾ ಇಲ್ವಾ? ಮಣಸ್ನಾಗೆ ಏನಿದ್ರು ಒಗದ್ಬುಡು ಅತ್ಕಡೀಕೆ.

ಮಲ್ಲಿ—ಇದಕೇ ಈಟೆಲ್ಲಾ ಯಾಸಕಟ್ಟಿ ಆಟ ಊಡಿದ್ದೆ ಅನ್ನು. ನಾನು ಇಂದೇನೆ ನಿಂಗೆ ಬಾಸೆಕೊಟ್ಟಿಲ್ವಾ? ಒಂದು ಪಟ ಅಲ್ಲ ಹತ್ತಪಟ ನೂರಪಟ ಸಾವಿರಪಟ ಅಂದಿವ್ನಿ ನಿನಗೇ ಲಗ್ಣ ಆಗೋದು ಅಂತ. ನಾನು ಬಾಸೆ ಕೊಟ್ಟವ್ಯಾಕೆ ತಪ್ಪೊವುಗಳಲ್ಲ.

ಮಲ್ಲ—ನೀನು ನಗಸಾರಕೇಳ್ತಿದ್ದಿಯ ಮಲ್ಲಿ.

ಮಲ್ಲಿ—ನಗಸಾರ ಅಲ್ಲ ದಿಟವಾಗಿ ಏಳ್ತೀನಿ. ಅಲ್ಲಕಣೋ ಮಲ್ಲಣ್ಣ, ಲಗ್ಣ ಆಗಾಕೆ ನಿಂಗೇನ ಆಸೆ ಇರೋದು ನಂಗೇನಿಲ್ವಾ?

ಮಲ್ಲ—ಅಂಗಾದ್ರೆ ಆಗಬುಡಾವಾ?

ಮಲ್ಲಿ—ಆಗಾಕೆ ನಮ್ಮಕೈಸಾಗೈತ? ನೀನು ನಿಮ್ಮಯ್ಯನ್ಕಟ್ಟೇಳು ನಾನು ನಮ್ಮಯ್ಯನ ಕುಟ್ಟೆಳ್ತೀನಿ. ಮುಂದೆ ಬರೋ ಬ್ಯಾಸ್ಗೆ ಮೂರ್ತದಾಗೆ ಲಗ್ಣ ಆಗ್ಬುಡಾವಾ.

ಮಲ್ಲ—ಸೈಕಣೇ ಮಲ್ಲಿ ಒಪ್ಪಿದೆ. ನಿನ್ನ ಮಾತ ಕೇಳಿ ನಂಗೆ ಬೋ ಸಂತೋಸ ಆಯ್ತು ಮಲ್ಲಿ ಬೋ ಸಂತೋಸ ಆಯ್ತು. (ಮೆಲೆ ಕೈಯೆತ್ತಿ) ಕಾಗಲ್ವಾಡಿಲಿರುವ ಬಾಗೀಲ ಹನುಮಂತ ನೀಟ್ಗಾತಿ ಹೆಣ್ಣು ಒಲಿದಾರೇ ಹನುಮಂತ ಮುತ್ತ ಬಾಗೀಲ್ಗೆ ಹೆಣಿಸೇನು ॥ ಕನ್ನಂಬಾಡೀಲಿರುವ ಚನ್ನಗೋಪಾಲಯ್ಯ ಕನ್ನೆಣ್ಣು ನನಗೆ ಒಲಿದಾರೆ ಕನ್ನಂಬಾಡಿ ಕನ್ನಡಿಗೆ ಮುತ್ತ ಬಿಗಿಸೇನೂ (ಮಲ್ಲಿ ಬಿಂದಿಗೆ ತೆಗೆದುಕೊಂಡು ಹೊರಡುವಳು. ಮಲ್ಲ ನೋಡಿ).

ಮಲ್ಲ—ನೀರಿಗ್ಹೋಗೋ ಹೆಣ್ಣೆ ನಿಲ್ಲೇ ನಾ ಬರುತೀನಿ ನಿನ್ನಾಣೆ ನಿನ್ನ ಕೊಡದಾಣೆ ಕತ್ತೀನ ಬಣ್ಣದ ಸರದಾಣೆ ಬರುತೀನಿ.

ಮಲ್ಲಿ—ಚಿನ್ನಾದ ಚೀಲಕ್ಕೆ ರನ್ನಾದ ಬಾಯ್ದಾರ, ನಿನ್ನೊಂದಿಗಾಡಿ ಗೆಣಕಾರ ನಾನು ನೆನ್ನಿಂದ ನೀರ ತರಲಿಲ್ಲಾ.

ಮಲ್ಲ—ನೀರಿಗೋಗೋಳೆ, ನೀಲದುಂಗರದವಳೆ, ವಯ್ಯಾರಿ ಸಣ್ಣದನಿಯೋಳೆ, ಗೆಣಕಾತಿ ವೈಯ್ಯಾರಬಿಟ್ಟು ತೆರಹೇಳೆ.

ಮಲ್ಲಿ—ಆಚೆಯ ಕರೆಯುವನೇ, ಚೀಟವಸ್ತ್ರಾದವನೆ, ಪಾರಿವಾಳದ್ಹಂಗೆ ಸುಳಿಯೋನೆ ಗೆಣಕಾರ ದೂರು ಬತ್ತಾದೆ ನಿನಮೇಲೆ.

ಮಲ್ಲ—ದೂರು ಬಂದರೆ ಬರಲಿ ವೈಯ್ಯಾರ ನಿನಗಿರಲಿ ನಾರಿ ನಿನ್ನ ಮುಖ ಕಳೆಯಿರಲಿ ಗೆಣಕಾತಿ ನೂರು ಬಿದ್ದಾರು ನನಗಿರಲಿ.

ಮಲ್ಲಿ—ಕಾಕು ಹಾಕಿದ ಕಂಡು ಬೇಕಾಗಿ ನಾ ಬಂದೇ, ಬಾರೊ ನನ ಗೆಣೆಯ ಬಯಲೀಗೆ ನಾನು ಬಾಸೆ ತಪ್ಪುವಂತ ಮಗಳಲ್ಲ.

ದೃಷ್ಯ ೧೧

ಲಿಂಗಾಂಬೆ ಆದಿಶಕ್ತಿಯ ಎದುರಿನಲ್ಲಿ ಹಾಡುತ್ತಿರುವಳು ಜವರೇಗೌಡ ಪ್ರವೇಶ)

ಜವರೇಗೌಡ—ಏನಮ್ಮ ದೇವಿಯನ್ನು ಬಹುವಾಗಿ ಆರಾಧಿಸುತ್ತಿರುವೆ?

ಲಿಂಗಾಂಬೆ—ಅಪ್ಪ ಎಷ್ಟಾದರು ನಮ್ಮ ಕುಲದೇವತೆಯಲ್ಲವೇ ? ನಮ್ಮ ದುಃಖ ಸಂಕಟಗಳನ್ನು ನಿವಾರಿಸಿ ನಮಗೆ ಸುಖ ಸಂತೋಷಗಳನ್ನು ಅನುಗ್ರಹಿಸುವ ನಮ್ಮ ಭಾಗ್ಯ ದೇವತೆಯಲ್ಲವೇ ? ಇವಳನ್ನು ಹಗಲು ರಾತ್ರಿ ಎಷ್ಟು ಪೂಜಿಸಿದರೂ ಭಜಿಸಿದರೂ ಅಲ್ಪವೇ ಅಲ್ಲವೇನಪ್ಪ? ನನಗಂತು ತೃಪ್ತಿಯೇ ಆಗುವುದಿಲ್ಲ.

ಜವರೇಗೌಡ—ನಿಶ್ಚಯವಮ್ಮ ನಿಶ್ಚಯ. ತ್ರಿಮೂರ್ತಿಗಳೂ ಸಹ ಈ ಮಹಾದೇವಿಯನ್ನು ಪೂಜಿಸುತ್ತಿರುವಾಗ, ಇವಳ ಅನುಗ್ರಹದಿಂದಲೇ ಸೃಷ್ಟಿ ಸ್ಥಿತಿ ಲಯತ್ರಯ ಕಾರ್ಯಗಳನ್ನು ನಡೆಸುತ್ತಿರುವಾಗ, ಈ ರಾಜರಾಜೇಶ್ವರಿಯ ಕೃಪಾಪ್ರಸಾದದಿಂದಲೇ ಲೋಕ ವಿಧ್ವಂಸಕರಾದ ಘೋರ ರಾಕ್ಷಸರನ್ನು ನಿಗ್ರಹಿಸಿ ಧರ್ಮಸಂಸ್ಥಾಪನಾ ಭಾರವನ್ನು ಹೊತ್ತಿರುವಾಗ, ನಾವು ಪೂಜಿಸುವುದರಲ್ಲಿ ಭಜಿಸುವುದರಲ್ಲಿ ಆಶ್ಚರ್ಯವೇನಿದೆ? ಈ ಜಗಜ್ಜನನಿಯ ವರದಾನದಿಂದಲೇ ಅಲ್ಲವೆ ನಮ್ಮ

ಪೂರ್ವಿಕರು ಮಹಾ ಸಾಮ್ರಾಜ್ಯಗಳನ್ನು ಸ್ಥಾಪಿಸಿದರು. ದುರ್ಗಮವಾದ ಕೋಟೆ ಕೊತ್ತಲುಗಳನ್ನು ನಿರ್ಮಿಸಿದರು. ಧರ್ಮಮಾರ್ಗಾವಲಂಬಿಗಳಾಗಿ ಪ್ರಜಾಪರಿಪಾಲನೆಗೈದು ನಭೋಮಂಡಲ ವ್ಯಾಪಿಯಾಗುವಂಥಾ ಕೀರ್ತಿ ಗೌರವಗಳನ್ನು ಪಡೆದು ವಿರಾಜಿಸಿದರು. ಈ ಜಗಜ್ಜನನಿಯ ಕೃಪಾನುಕಂಪದಿಂದಲೇ ಅಲ್ಲವೇ ನೇಗಿಲಯೋಗಿಗಳಾದ ನಮ್ಮ ಒಕ್ಕಲು ಮಕ್ಕಳು ದೇಹದ ರಕ್ತವನ್ನು ಬೆವರಿನ ರೂಪದಲ್ಲಿ ಹರಿಸಿ ಹೊಲಗದ್ದೆಗಳಲ್ಲಿ ಮುತ್ತು ನವರತ್ನಗಳಿಗೆ ಸಮವಾದ ಧಾನ್ಯದ ತೆನೆಗಳನ್ನು ಕಾಣುತ್ತಿರುವರು.

ಲಿಂಗಾಂಬೆ—ನಿಶ್ಚಯವಪ್ಪ ಎಲ್ಲವು ನಿಶ್ಚಯ. ಈ ಮಹಾತಾಯಿ ಕೆಂಪಾಂಬೆಯ ಸುಪ್ರಸನ್ನತೆಯಿಂದಲೇ ಸಕಲ ಜಗದ್ವ್ಯಾಪಾರಗಳು ನಡೆಯುತ್ತಿರುವುವು.

ಜವರೇಗೌಡ—ಅದಿರಲಿ ಲಿಂಗಾಂಬೆ, ಸಾವನದುರ್ಗದಿಂದ ಪುನಃ ಭರಮೇಗೌಡರು ಹೇಳಿಕಳುಹಿಸಿದ್ದಾರೆ. ಅವರ ಮಗನಿಗಾಗಿ ನಿನ್ನನ್ನು ಕೇಳಲು ಬರುತ್ತಾರಂತೆ. ಭರಮೇಗೌಡರು ಸಾವನದುರ್ಗದ ಭಾಗದಲ್ಲೆಲ್ಲಾ ಉದಾರಿಗಳೂ ದೈವಭಕ್ತರೂ ಎಂದು ಪ್ರಸಿದ್ಧರಾಗಿದ್ದಾರೆ. ಮೇಲಾಗಿ ಸಾಕಷ್ಟು ಸ್ಥಿತಿವಂತರೂ ಅಗಿದ್ದಾರೆ. ಅವರ ಮಗನನ್ನೂ ನಾನು ನೋಡಿದ್ದೇನೆ. ಹುಡುಗನು ಸುಂದರವಾಗಿದ್ದಾನೆ. ಒಳ್ಳೆಯ ಮೈಕಟ್ಟು ನಿನಗಂತೂ ತಕ್ಕವರ? ಈಗ ನಿನ್ನ ಅಭಿಪ್ರಾಯವೇನು ಹೇಳಮ್ಮ.

ಲಿಂಗಾಂಬೆ—ಅಪ್ಪ ನಾನು ನಿಮ್ಮೆಲ್ಲರಿಗೂ ಅಷ್ಟು ಹೊರೆಯಾಗಿದ್ದೇನೆಯೆ? ನನ್ನನ್ನು ಮನೆಯಿಂದ ಹೊರಗಟ್ಟಬಿಡಲು ಇಷ್ಟೆಲ್ಲಾ ಸನ್ನಾಹಗಳನ್ನು ನಡೆಸುತ್ತಿರುವಿರಾ. ?

ಜವರೇಗೌಡ—ಅಯ್ಯೋ ದೇವದೇವ, ಏನು ಹುಚ್ಚಿಯಂತೆ ಮಾತನಾಡುತ್ತಿರುವೆಯಮ್ಮ? ಆದಿಶಕ್ತಿ ಕೆಂಪಾಂಬೆಯನ್ನು ಪೂಜಿಸಿ ನಿನ್ನನ್ನು ಪಡೆದಿದ್ದೇನೆ. ಪ್ರಾಣಕ್ಕಿಂತ ಮಿಗಿಲಾಗಿ ನಿನ್ನನ್ನು ಪೋಷಿಸಿದ್ದೇನೆ. ನಿನ್ನ ಕಾಣದ ಘಳಿಗೆ ವಿಷಸಮಾನವೆಂದು ಭಾವಿಸಿದ್ದೇನೆ. ಇಷ್ಟೆಲ್ಲಾ ಪ್ರೀತ್ಯಾದರಗಳು ಲಾಲನೆ ಪಾಲನೆಗಳು ನಿನ್ನನ್ನು ಮನೆಯಿಂದ ಹೊರಗಟ್ಟುವ ಒಂದೇ ಉದ್ದಿಶ್ಯಕ್ಕಾಗಿಯೆ? ಹೆಣ್ಣುಮಗಳು ಒಂದು

ಪುಸ್ತಕವನ್ನು ಈ ವಿಭಾಗದಿಂದ

ಮನೆಯಲ್ಲಿ ಹುಟ್ಟಿದರೆ ಮತ್ತೊಂದು ಮನೆಯಲ್ಲಿ ಬೆಳಗಬೇಕಾಗುತ್ತದೆ. ಇದು ಕುಲಪದ್ಧತಿಮಾತ್ರವಲ್ಲವಮ್ಮ. ಲೋಕದ ನೀತಿಯೂ ಹೌದು ಏನುಮಾಡಲಾಗುತ್ತೆ ? ಸೃಷ್ಟಿಯನಿಯಮವೇ ಹೀಗಿದೆ. ಇಷ್ಟಲ್ಲದೆ ಹೆಣ್ಣಿನ ಜೀವನ ಪ್ರಾರಂಭವಾಗುವುದು ತಂದೆತಾಯಿಗಳ ಮನೆಯಲ್ಲಲ್ಲಾ, ಅವಳ ನಿಜಜೀವನ ಪ್ರಾರಂಭವಾಗುವುದು ಗಂಡನ ಮನೆಯಲ್ಲಿ. ಇಷ್ಟಲ್ಲದೆ ಸೃಷ್ಟಿಕರ್ತನಾದ ಬ್ರಹ್ಮ ಹೆಣ್ಣನ್ನು ಯಾವ ಉದ್ದಿಶ್ಯದಿಂದ ಸೃಷ್ಟಿಸಿದ್ದಾನೆಂಬುದನ್ನು ನೀನು ಮುಖ್ಯವಾಗಿ ಅರಿತುಕೊಳ್ಳಬೇಕಾಗುತ್ತದೆ. ಈಗ ನೀನು ನನ್ನ ಮನೆಯಿಂದ ವಿವಾಹಿತೆಯಾಗಿ ಮತ್ತೊಬ್ಬರ ಮನೆಗೆ ಹೋಗುವೆಯಾದರೆ ಜನಾಂಗದ ತಾಯಿಯಾಗಲು ಹೋಗುತ್ತಿರುವೆಯಮ್ಮ. ನನ್ನತಾಯಿ ನಿನ್ನತಾಯಿ ಎಲ್ಲರೂ ಇದೇ ಉದ್ದೇಶದಿಂದಲೇ ಬಂದವರು. (ಒಳಗಿನಿಂದ ಶಬ್ದ ಜವರೇಗೌಡರೆ, ಜವರೇಗೌಡರೆ).

ಜವರೇಗೌಡರು—ಯಾರದು ?

ವೀರೇಗೌಡ (ಒಳಗಿನಿಂದಲೇ)—ನಾನು ವೀರೇಗೌಡ ಮಾಗಡಿಯಿಂದ ಬಂದಿದ್ದೇನೆ.

ಜವರೇಗೌಡ—ಓಹೊ ಬನ್ನಿಬನ್ನಿ (ಹೋಗಿ ಕರೆದುಕೊಂಡು ಬರುವನು). ವೀರೆಗೌಡನನ್ನು ನೋಡಿ ಲಿಂಗಾಂಬೆ ಒಳಗೆ ಹೋಗುವಳು.

ಬನ್ನಿ ಬನ್ನಿ ಕುಳಿತುಕೊಳ್ಳಿ ಕ್ಷೇಮವೇ?

ವೀರೇಗೌಡ—ಏನೋ ತಮ್ಮ ದಯದಿಂದ ಕ್ಷೇಮವಾಗಿಯೆ ಇದ್ದೇನೆ. ನೀವೆಲ್ಲಾ ಕ್ಷೇಮತಾನೆ ?

ಜವರೇಗೌಡ—ನಮ್ಮದೇನು ಎಲ್ಲರೂ ಕ್ಷೇಮದಿಂದಿರಬೇಕು. ಲೋಕವೇ ಕ್ಷೇಮವಾಗಿರಬೇಕು.

ವೀರೇಗೌಡ—ಯಾವಾಗ್ಲು ದೊಡ್ಡವರ ಮಾತೇ ಹಾಗೇ.

ಜವರೇಗೌಡ—ಏನು ಅಪರೂಪವಾಗಿ ಬಹಳದೂರ ಬಂದಿರಲ್ಲ? ಏನು ಸಮಾಚಾರ?

ವೀರೇಗೌಡ—ಏನು ಅಪರೂಪ? ಏನು ದೂರ ಜವರೇಗೌಡ್ರೆ, ದೇವರು ನಮ್ಮನ್ನು ಹತ್ತಿರ ಹತ್ತಿರದ ಗ್ರಾಮಗಳಲ್ಲಿಯೆ ಹುಟ್ಟಿಸಿದ್ದಾನೆ.

ಪುಸ್ತಕದಲ್ಲಿ ಗುರುತು ಹಾಕತಕ್ಕದ್ದಲ್ಲ

ಜವರೇಗೌಡ—ಹತ್ತಿರದ ಗ್ರಾಮಗಳಲ್ಲಿ ಹುಟ್ಟಿಸಿಬಿಟ್ಟರೆ ಆಯಿತೇ? ಹೃದಯಗಳೂ ಹತ್ತಿರ ಹತ್ತಿರ ಆಗಬೇಕೋ ಬೇಡವೊ?

ಬೀರೇಗೌಡ—ಅಹುದಹುದು ಹೃದಯಗಳೂ ಹತ್ತಿರವಾಗಬೇಕು. ಅದಕ್ಕೆ ಸರಿಯಾದ ಕಾಲ ಸನ್ನಿವೇಶಾನೂ ಒದಗಬೇಕು. (ತಂದ ಉಡುಗೊರೆಯನ್ನು ಜವರೇಗೌಡ್ರ ಮುಂದಿಡುವನು).

ಜವರೇಗೌಡ—(ನೋಡಿ) ಇದೇನಿದು? ಇದೆಲ್ಲಾ ಯಾಕೆ?

ವೀರೇಗೌಡ—ಈಗತಾನೆ ತಾವೇ ಹೇಳಲಿಲ್ಲವೆ ಹೃದಯಗಳು ಹತ್ತಿರವಾಗಬೇಕು ಅಂತ. ಅದಕ್ಕಾಗಿಯೆ ಮಾಗಡಿ ಪಟೇಲ ಬೈರಪ್ಪನೋರು ತಮ್ಮ ಸ್ನೇಹ ಬಯಸಿ ಈ ಉಡುಗೊರೆ ಕೊಟ್ಟುಕಳುಹಿಸಿದ್ದಾರೆ.

ಜವರೇಗೌಡ—(ಅವನ್ನು ಇನ್ನೊಂದು ಕಡೆ ಇಡುತ್ತ) ಬಹಳ ಸಂತೋಷ ಬಹಳ ಸಂತೋಷ.

ವಿರೇಗೌಡ—ಇತ್ತೀಚೆಗೆ ನಮ್ಮ ಬೈರಪ್ಪನವರ ಪ್ರಭಾವ ಸುತ್ತುಮುತ್ತಿನ ಗ್ರಾಮಗಳಲ್ಲೆಲ್ಲಾ ಹೇಗಿದೆ ಅನ್ನೋವಿಚಾರ ತಮಗೇನು ತಿಳೀದೆ ಇಲ್ಲ?

ಜವರೇಗೌಡ—ಹೌದು ತಿಳಿದಿದೆ.

ವಿರೇಗೌಡ—ಇತ್ತೀಚೆಗೆ ನಮ್ಮ ಸುತ್ತ ಮುತ್ತಿನ ಗ್ರಾಮದ ಜನರು ಬೈರಪ್ಪನವರನ್ನ ಪಾಳೆಗಾರ್‍ರು ಅಂತ ಭಾವಿಸಿ ಗೌರವದಿಂದ ಕಾಣ್ತಾ ಇರೋ ವಿಚಾರ ತಮಗೇನು ತಿಳೀದೆ ಇಲ್ಲ?

ಜವರೇಗೌಡ—ಹೌದು ಅದನ್ನೂ ತಿಳಿದಿದ್ದೇನೆ.

ವೀರೇಗೌಡ—ನೂರಾರು ಜನರು ಸಾವಿರಾರು ಜನರು, ನಮ್ಮ ಬೈರಪ್ಪನವರ ಒಂದೊಂದು ಮಾತಿನ ಮೇಲೆ, ಕತ್ತಿಗಳನ್ನು ಹಿಡಿದು ಹೋರಾಡಿ ಪ್ರಾಣವನ್ನರ್ಪಿಸಲು ಸಿದ್ಧರಾಗಿದ್ದಾರೆ ಇದರಿಂದ ತಾವೆ ಅರ್ಥ ಮಾಡಿಕೊಳ್ಳಿ, ನಮ್ಮ ಬೈರಪ್ಪನವರು ಮುಂದೆ ಈ ನಾಡಿಗೆ ನಾಯಕರಾಗಬಲ್ಲರಲ್ಲವೇ? ಸಿಂಹಾಸನವನ್ನು ಹತ್ತಿ ರಾಜ್ಯವಾಳಬಲ್ಲರಲ್ಲವೇ?

ಜವರೇಗೌಡ—ಯಾರಿಗೆ ಗೋತ್ತು? ಯಾರ ಅದೃಷ್ಟದಲ್ಲಿ ಭಗವಂತನು ಏನೇನು ಬರೆದಿದ್ದಾನೋ? ಅಂತೂ ಬೈರಪ್ಪನವರು ನಮ್ಮ ಸ್ನೇಹ ಬಯಸಿರೋದು, ನಮಗೊಂದು ಅಭಿಮಾನದ ವಿಚಾರ.

ವೀರೇಗೌಡ—ಬರೀ ಸ್ನೇಹ ಮಾತ್ರವಲ್ಲ, ಸಂಬಂಧಾನೂ ಬೆಳಸಬೇಕೂ ಅಂತ ಇದ್ದಾರೆ.

ಜವರೇಗೌಡ—ಸಂಬಂಧ! ಎಂಥಾಸಂಬಂಧ! ಯಾರ ಸಂಬಂಧ! ನೀವು ಹೇಳೋದು ನನಗೊಂದು ಅರ್ಥವೇ ಆಗುತ್ತಿಲ್ಲವಲ್ಲ?

ವೀರೇಗೌಡ—ಈಗ ಅರ್ಥವಾಗೋಹಾಗೆ ಹೇಳ್ತೀನಿ. ಬೈರಪ್ಪನವರು ತಮ ಪುತ್ರ ಲಿಂಗಾಂಬೆಯೊಡನೆ ವಿವಾಹವಾಗಬೇಕೆಂದಿದ್ದಾರೆ.

ಜವರೇಗೌಡ—ಹಾಂ........

ವೀರೇಗೌಡ—ತಮ್ಮ ಮಗಳು ಮಹಾ ಭಾಗ್ಯವಂತೆ. ಮುಂದೆ ಈ ನಾಡಿನ ಮಹಾ ರಾಣಿಯಾಗುತ್ತಾಳೆ.

ಜವರೇಗೌಡ—(ಸಿಟ್ಟಿನಿಂದ) ಇಲ್ಲ ಇಲ್ಲ ವೀರೇಗೌಡ್ರೆ! ಇನ್ನು ಹೆಚ್ಚಾಗಿ ಈ ವಿಚಾರವಾಗಿ ಪ್ರಸ್ತಾಪಮಾಡಬೇಡಿ. ನಾನು ಈ ಸಂಬಂಧಕ್ಕಾಗಿ ಸಿದ್ಧನಾಗಿಲ್ಲ. ಎಂದೆಂದಿಗೂ ಸಿದ್ಧನಾಗಿಲ್ಲ.

ವೀರೇಗೌಡ—ಸ್ವಲ್ಪ ಸಾವಧಾನದಿಂದ ಯೋಚನೆಮಾಡಿನೋಡಿ ಜವರೇ ಗೌಡ್ರೆ ?

ಜವರೇಗೌಡ—ಯೋಚನೆಮಾಡೋದೇನು ಉಳಿದಿಲ್ಲ ವೀರೇಗೌಡ್ರೆ, ನಾನು ನನ್ನ ಮಗಳನ್ನು ಸತ್ಕುಲದಲ್ಲಿ ಹುಟ್ಟಿದ ವರನಿಗೆ ಕೊಡಬೇಕು ಅಂತ ಇದ್ದೇನೆ.

ವೀರೇಗೌಡ—ಬೈರಪ್ಪನವರೂ ಒಕ್ಕಲು ಮಕ್ಕಳೇ. ನಮ್ಮ ನಿಮ್ಮ ಕುಲದ ದವರೇ. ಅವರೇನು ನೀಚವಂಶದವರಲ್ಲ.

ಜವರೇಗೌಡ—ನೀಚವಂಶವೆಂದರೆ ವ್ಯಕ್ತಿಯ ನಡೆ, ನುಡಿ, ಆಚಾರ ವಿಚಾರ ಗಳ ಮೇಲೆ ಹೊಂದಿಕೊಂಡು ಹೋಗುತ್ತೆ ವೀರೇಗೌಡ್ರೇ! ದುರಾಚಾರಿ ಯಾದವನನ್ನು ಸದ್ವಂಶದವನೆಂದು ಯಾರೂ ಹೇಳಲಾರರು. ಸದಾ ಚಾರಿಯಾದವನನ್ನು, ನೀಚಕುಲದವನೆಂದು ಯಾರೂ ಒಪ್ಪಲಾರರು ಬೈರಪ್ಪನವರು ಮೊದಲನೇ ಹೆಂಡತಿಯನ್ನು ನದೀಗೆ ತಳ್ಳಿದ್ದಾರೆ. ಎರಡನೆ ಹೆಂಡತಿಯನ್ನು ಭಾವಿಗೆ ದೂಡಿದ್ದಾರೆ. ಇನ್ನು ಅವರು ನಡೆಸಿರುವ ಅತ್ಯಾಚಾರ ಅನಾಚಾರಗಳಿಗೆ ಮಿತಿಯೇ ಇಲ್ಲ. ಕೊಲೆ, ವ್ಯಭಿಚಾರ, ಕುಡುಕತನ, ದರೋಡೆಗಳಲ್ಲಿ ನಿರತನಾಗಿರುವ ಕ್ರೂರ

ಹೃದಯ ಉಳ್ಳವನಿಗೆ ನನ್ನ ಮುತ್ತಿನಂತಹ ಮಗಳನ್ನು ಕೊಡಲೇ? ಇದೆಂದಿಗೂ ಸಾಧ್ಯವಿಲ್ಲ.

ವೀರೇಗೌಡ—ಇವು ಒಬ್ಬ ವ್ಯಕ್ತಿಯ ಮೇಲೆ, ಎಲ್ಲೆ ಮೀರಿದ ಆಕ್ಷೇಪಣೆಗಳು ಜವರೇಗೌಡರೇ! ಅಭಿಮಾನಿಯಾದವನು ಎಂದಿಗೂ ಇದನ್ನು ಸೈರಿಲಾರನು.

ಜವರೇಗೌಡ—ನಾನು ಸತ್ಯವಾದ ಅಂಶಗಳನ್ನೇ ತಿಳಿಸಿರುತ್ತೇನೆ. ಕಲ್ಪನೆ ಮಾಡಿಕೊಂಡೇನು ಹೇಳುತ್ತಿಲ್ಲ.

ವೀರೇಗೌಡ—ತಾವು ಹೇಳಿದುದರಿಂದ ನನಗೆ ಬಂದಿರುವ ಕೋಪವನ್ನೆಲ್ಲಾ ನುಂಗಿಕೊಂಡು ತಟಸ್ಥನಾಗಿದ್ದೇನೆ. ಮತ್ತೊಬ್ಬನು ಈ ಮಾತುಗಳನ್ನು ಆಡಿದ್ದೇ ಆಗಿದ್ದರೇ, ಅವನ ನಾಲಿಗೆಯನ್ನು ಕಿತ್ತುಬಿಡುತ್ತಿದ್ದೆನು. ತಮಗಾದರೂ ಸೂಚಿಸುವುದಿಷ್ಟೇ, ಇಂತಹ ವಾಕ್ಯಗಳನ್ನು ಮತ್ತೊಮ್ಮೆ ಆಡಬೇಡಿ.

ಜವರೇಗೌಡ—ಆಡಿದರೆ?........

ವೀರೇಗೌಡ—ಪರಿಣಾಮ ಭಯಂಕರವಾಗುವುದು. ತಿಳಿದುಕೊಳ್ಳೀ, ಮತ್ತೊಬ್ಬರಿಗಾಗುವ ಶಿಕ್ಷೆಯೇ ನಿಮಗೂ ಆಗುವುದು.

ಜವರೇಗೌಡ—ಓ! ನನಗೆ ಬೆದರಿಕೆಯನ್ನು ತೋರಿಸುತ್ತಿರುವಿರಾ? ನಾನು ಈ ವಾಕ್ಯಗಳನ್ನಾಡುತ್ತೇನೆ. ಪುನಃ ಆಡಿಯೇ ಆಡುತ್ತೇನೆ. ಒಂದು ಬಾರಿ ಹತ್ತು ಬಾರಿ ನೂರು ಸಾವಿರ ಲಕ್ಷಬಾರಿ ಆಡುತ್ತೇನೆ. ನೋಡುತ್ತೇನೆ ಪರಿಣಾಮ ವೇನಾಗಬಲ್ಲದು? ಬೈರಪ್ಪನಿಗೆ ನನ್ನ ಮಗಳನ್ನು ಕೊಡುವುದಕ್ಕಿಂತ, ನಾನೇ ಕಣ್ಣು ಕಟ್ಟಿ ನದಿಗೆ ದೂಡುವುದು ಮೇಲು.

ವೀರೇಗೌಡ—ಉದ್ಧಟತನ ಅತಿಯಾಯ್ತು ಜವರೇಗೌಡ್ರೇ, ನನ್ನ ಸಹನೆ ಮೀರಿ ಹೋಗುತ್ತಿದೆ.

ಜವರೇಗೌಡ—ಉದ್ಧಟತನ ನನ್ನದಲ್ಲ ನಿಮ್ಮದು. ನಿಮ್ಮ ಸಹನೆ ಮೀರಿ ಹೋದರೆ, ನನಗೇನೂ ಮಾಡಲಾರದು. ಇದು ನನ್ನ ಮನೆಯಾದ್ದರಿಂದ ನೀವು ನನ್ನ ಮನೆಗೆ ಬಂದಿರುವುದರಿಂದ, ನಿಮ್ಮನ್ನು ಅತಿಥಿ ಎಂದು ಭಾವಿಸಿ ನಿಮ್ಮ ಅನುಚಿತ ವರ್ತನೆಗಳನ್ನು ಸೈರಿಸಿಕೊಂಡಿರುತ್ತೇನೆ. ಬೇರೆಲ್ಲಿಯಾದರೂ ಈ ಪ್ರಸಂಗ ನಡೆದಿದ್ದರೆ, ಅಲ್ಲೇ ನಿಮಗೆ ತಕ್ಕ ಶಾಸ್ತಿಯನ್ನು ಮಾಡಿಬಿಡುತ್ತಿದ್ದೆ.

ವೀರೇಗೌಡ—ಏನು ನೀವು ನನಗೆ ಶಾಸ್ತಿಯನ್ನು ಮಾಡಬಲ್ಲಿರಾ? ನಿಮ್ಮಂತಹ ಇಪ್ಪತ್ತು ಜನರು ಏಕ ಕಾಲದಲ್ಲಿ ಬಂದು ಬಿದ್ದರೂ ಜಗ್ಗುವ ಮಗನಲ್ಲ ಈ ವೀರೇಗೌಡ. ನಾನು ಇಚ್ಛೆಪಟ್ಟರೆ, ಈ ಕ್ಷಣವೇ, ಇಲ್ಲಿಯೇ ನಿಮ್ಮನ್ನು ಕೊಂದು ನಿಮ್ಮ ಮಗಳನ್ನು ಹೊತ್ತುಕೊಂಡು ಹೋಗಿ ಬೈರಪ್ಪನಿಗೆ ಒಪ್ಪಿಸಬಲ್ಲೆನು.

ಜವರೇಗೌಡ—ಏನಂದೇ! ನೀನು ನನ್ನನ್ನು ಕೊಲ್ಲ ಬಲ್ಲೆಯಾ? ಕಣ್ಣಲ್ಲಿ ತುಂಬಿಕೊಂಡಿರುವ ಸೊಕ್ಕನ್ನು ಇಳಿಸಿಬಿಟ್ಟೇನು. ನನ್ನನ್ನು ಕೊಂಚ ನೋಡು ವೀರೇಗೌಡ, ನನ್ನನ್ನೂ ನನ್ನ ತಾಯಿ ಗಂಡು ಮಗನೆಂದೇ ಹೆತ್ತಿದ್ದಾಳೆ ನನ್ನ ಧಮನಿಗಳಲ್ಲಿಯೂ, ನಮ್ಮ ಪೂರ್ವಿಕರಾದ ಅದೇ ವೀರಾಗ್ರಣಿಗಳ ರಕ್ತವು ಹರಿಯುತ್ತಿದೆ. ನೀನು ನನ್ನನ್ನು ಕೊಂದು ನನ್ನ ಮಗಳನ್ನು ಹೊತ್ತುಕೊಂಡು ಹೋಗಬಲ್ಲೇಯೊ? ಅಥವಾ ನಾನು ನಿನ್ನನ್ನು ತುಂಡು ತುಂಡಾಗಿ ಕತ್ತರಿಸಿ ನಾಯಿ ನರಿಗಳಿಗೆ ಚಲ್ಲುತ್ತೇನೆಯೋ? ಪರಿಣಾಮದಲ್ಲಿ ಗೊತ್ತಾಗುವುದು.

ವೀರೇಗೌಡ—ಪರಿಣಾಮದವರೆಗೆ ಕಾಯಬೇಕಾದ ಅಗತ್ಯವೇನಿದೆ? ಗಂಡು ಮಗನಾಗಿದ್ದರೆ ಈಗಲೇ ಸಿದ್ಧನಾಗು ಜವರೇಗೌಡ, ಪರೀಕ್ಷೆಯು ನಡೆದೇಹೋಗಲಿ.

ಜವರೇಗೌಡ—ಪರೀಕ್ಷೆಯು ನಡದೇ ಹೋಗಲಿ (ಕತ್ತಿಯನ್ನು ಎಳೆದು ಕೊಳ್ಳುವರು.)

ಲಿಂಗಾಂಬೆ—(ಪ್ರವೇಶಿಸಿ) ಅಪ್ಪ, ಅಪ್ಪ, ಮನೆಗೆ ಬಂದ ಅತಿಥಿಯು ಏನೇ ಹೇಳಲಿ ನೀವು ಆತನ ಮೇಲೆ ಖಡ್ಗವನ್ನೆತ್ತಬಹುದೇ? ನಮ್ಮ ಮನೆಯಲ್ಲಿ ಅತಿಥಿಯ ರಕ್ತವು ಬೀಳಬಹುದೇ? ಇದು ನಿಮಗೆ ಧರ್ಮವೇ? ಖಡ್ಗವನ್ನು ಹಿಂದಕ್ಕೆ ಎಳೆದುಕೊಳ್ಳಿರಪ್ಪ, ಹಿಂದಕ್ಕೆ ಎಳೆದುಕೊಳ್ಳಿ.

ಜವರೇಗೌಡ—(ಕತ್ತಿ ಹಿಂದೆಕ್ಕೆಳೆದುಕೊಂಡು) ಹೋಗು, ನಿನ್ನ ಅದೃಷ್ಟ ಚೆನ್ನಾಗಿತ್ತು. ಉಳಿದುಕೊಂಡೆ. (ಉಡುಗೊರೆಯನ್ನು, ಅವನ ಮೇಲೆ ಬಿಸಾಡಿ) ತೆಗೆದುಕೊಂಡು ಹೋಗು, ನಿನ್ನ ಬೈರಪ್ಪನ ಸ್ನೇಹದ ಕಾಣಿಕೆಯನ್ನು, ತಡಮಾಡದೆ ಇಲ್ಲಿಂದ ಹೊರಟುಹೋಗು. ಶಾಂತವಾಗಿರುವ ನನ್ನ ಕೋಪ ಮರುಕೊಳಿಸೀತು. ಉದ್ದೇಶ ಸಾಧಿಸದೆ

ಹಿಂದಿರುಗುವ ನನ್ನ ಖಡ್ಗ ಅಷ್ಟೇ ವೇಗದಿಂದ ಮುಂದುವರಿದೀತು ಹೋರಟುಹೋಗು. ಮೊದಲಿಲ್ಲಿಂದ ಹೊರಟುಹೋಗು.

(ವೀರೇಗೌಡ ಬಟ್ಟೆಗಳನ್ನು ಹೆಗಲಮೇಲೆ ಹಾಕಿಕೊಳ್ಳುತ್ತ)

ಜವರೇಗೌಡ—ಹೋಗುತ್ತೇನೆ ಹೋಗುತ್ತೇನೆ. ಆದರೆ ಜವರೇಗೌಡ ನೀನು ನಿನ್ನ ಮೃತ್ಯುವನ್ನು ಕೆಣಕಿರುವೆ ಎಂಬುದನ್ನು ಮರೆಯಬೇಡ ನಾನು ಇಚ್ಛೆಪಟ್ಟರೆ, ಈ ಕೆಂಪಸಾಗರದಲ್ಲಿ ಬೆಂಕಿಯ ಪ್ರಚಂಡ ಜ್ವಾಲೆಯನ್ನೆಬ್ಬಿಸಬಲ್ಲೆನು. ಬಿರುಗಾಳಿಯಂತೆ ಬಂದು, ಭೂಮಿಯ ಮೇಲೆ ಕೆಂಪಸಾಗರವಿರಲೇ ಇಲ್ಲ ಎಂಬಂತೆ ಇದನ್ನು ಗುಡಿಸಿಕೊಂಡ ಹೋಗಬಲ್ಲೆನು. ನಿನ್ನ ಮನೆಯ ಒಂದೊಂದು ಹೆಂಟೆಯನ್ನು ಕಿತ್ತು ಬಿಸಾಡಬಲ್ಲೆನು. ನಿನ್ನನ್ನು ನಿನ್ನ ವಂಶ ಸಹಿತ ನಿರ್ಮೂಲಗೊಳಿಸ ಬಲ್ಲೆನು. ಮುಂದಿನ ವಿಪತ್ತನ್ನೆದುರಿಸಲು ಸಿದ್ಧತೆಯನ್ನು ಮಾಡಿ ಕೊಳ್ಳುತ್ತಿರು (ಹೋಗುವನು).

ಜವರೇಗೌಡ—ಅಲೇ ಹೋಗೋ ಹೋಗೋ. ನಿನ್ನಂಥ ಪೊಳ್ಳು ಬೆದರಿ ಯುವರಿಗೆ ಈ ವಯಸ್ಸಿಗಾಗಲೇ ಬಹಳ ಜನರನ್ನು ನೋಡಿದ್ದೇನೆ.

ಲಿಂಗಾಂಬೆ—ಅಪ್ಪ ಇದೆಲ್ಲಾ ಏನಪ್ಪ? ಅವರು ಮಹಾ ನೀಚರು. ಅವ ಗುಂಪೂ ಬಹಳವಾಗಿದೆ. ಅವರೊಡನೆ ಏಕಪ್ಪ ದ್ವೇಶವನ್ನು ಕಟ್ಟಿ ಕೊಂಡೇ? ಅಯ್ಯೋ! ನನ್ನ ದೆಸೆಯಿಂದ ನಿಮಗೆಲ್ಲಾ ಎಷ್ಟೊಂದು ತೊಂದರೆ!

ಜವರೇಗೌಡ—ಅಯ್ಯೋ ಸುಮ್ಮನಿರಮ್ಮ. ಇವರ ಗುಂಪು ದೊಡ್ಡದಿದ್ದರೆ ನಮ್ಮನ್ನೇನು ಮಾಡೀತು! ಹೆದರಬೇಡ. ಹೊಡೆಯುವವನಿಗಿಂತ ಕಾಪಾಡುವವನು ದೊಡ್ಡವನಿದ್ದಾನೆ. ಅವರು ಕೊಲ್ಲಲು ಬಂದರೆ ನನ್ನ ಕೈಗಳೇನು ಪಗಡೆಯಾಡುತ್ತಿರುವುದಿಲ್ಲ! ನನ್ನ ಬಾಹುಗಳಲ್ಲಿಯೂ ಬಲವಿದೆ. ನನ್ನ ಖಡ್ಗದಲ್ಲಿಯೂ ಧಾರೆ ಇದೆ.

ದೃಶ್ಯ—೧೨
ರೋಡ್ ಸೀನ್

ಬೈರಪ್ಪ ಶಾಸ್ತ್ರಿ ಪ್ರವೇಶ.

ಬೈರಪ್ಪ—ಆಹಹ! ಏನು ಲಾವಣ್ಯ ! ಏನು ರೂಪು! ಎಂಥಾ ಇಂಪಾದ ಸ್ವರ! ಏನು ಮನೋಹರ ಸಂಗೀತ! ತಿಳಿ ನೀರಿನಂಥ ಹೃದಯ, ಕಪಟತನ ವಂಚನೆಗಳ ಅರಿವೇ ಇಲ್ಲ. ಎಳೆ ಮಗುವಿನಂಥ ಸವಿನುಡಿ. ಅವಳು ನಗ್ತಾ ಇದ್ದಾಗ, ಭೂಮೀನೆ ಸ್ವರ್ಗವಾಗಿಬಿಡುತ್ತೇನೋ ಅನ್ನೋ ಹಾಗೆ ತೋಚ್ತಾಯಿತ್ತು. ಅವಳು ಗೆಳತೀರ ಜೊತೇಲಿ ನಗುತ್ತ ಹಾಡುತ್ತಿದ್ದರೆ, ನನಗಂತೂ ಮದ್ಯಪಾನ ಮಾಡಿದಂತೆ, ಪ್ರಜ್ಞೇನೇ ತಪ್ಹೋಗ್ತಾ ಇತ್ತು. ಅವಳನ್ನು ನೋಡಿದ ಮೇಲೆ ಯಾವ ಸ್ತ್ರೀಯ ಕಡೆಗೂ ಕಣ್ಣೆತ್ತಿ ನೋಡೋದಕ್ಕೂಡ ಇಚ್ಛೆಯಾಗೋದಿಲ್ಲ. ಯಾವಾಗ ಅವಳನ್ನು ಮದುವೆಯಾದೇನೋ! ಯಾವಾಗ ಅವಳೊಂದಿಗೆ ಮಾತನಾಡೇನೋ' ಯಾವಾಗ ಅವಳ ಜೊತೇಲಿ ಸುಖ ಅನುಭವಿಸೇನೋ! ಅನ್ನಸ್ತಾಯಿದೆ. ನನ್ನ ಹೃದಯವನ್ನು ಇದು ವರೆಗೆ ಇಷ್ಟರಮಟ್ಟಿಗೆ ಯಾವ ಸ್ತ್ರೀಯೂ ಆಕರ್ಷಿಸಿರಲಿಲ್ಲ. ನೀವು ಆ ಹುಡುಗೀನ ನೋಡಿರಬೇಕು ಶಾಸ್ತ್ರಿಗಳೇ!

ಶಾಸ್ತ್ರಿ—ಯಾವಾಗಲೋ ಒಂದು ಸಲ ನೋಡಿದ ಜ್ಞಾಪಕ, ಅಂತೂ ಹುಡುಗಿಯೇನೋ ತುಂಬಾ ಸುಂದರವಾಗಿದ್ದಾಳೆ. ಮುಂದಿನ ನಿಮ್ಮ ಸ್ಥಾನಮಾನಗಳ ದೃಷ್ಟಿಯಿಂದ ನೋಡೋದಾದ್ರೇ ನಿಮಗೆ ಸರಿಯಾದ ಹೆಣ್ಣು.

ಬೈರಪ್ಪ—ಮನಸ್ಸಿಗೊಪ್ಪೋ ಮಾತಾಡ್ಬಿಟ್ರೀ ಶಾಸ್ತ್ರಿಗಳೆ, ಆದರೆ ಜವರೇ ಗೌಡ್ರು ಒಪ್ಪಿದ್ದಾರೋ ಇಲ್ಲವೋ ಗೊತ್ತಾಗಲಿಲ್ಲ!

ಶಾಸ್ತ್ರಿ—ಒಪ್ಪದೇ ಏನು ಮಾಡ್ತಾರೇ, ನಿಮಗೆ ಕೊಡೋದಕ್ಕೆ ಯಾರ್ತಾನೆ ಒಪ್ಪೋದಿಲ್ಲಾ.

ಬೈರಪ್ಪ—ಅದೂ ನಿಜವೇ ಅನ್ನಿ. ನನಗಿಂತ ಒಳ್ಳೆಯವರ ಆ ಹುಡುಗೀಗೆ ಇನ್ಯಾವನು ಸಿಕ್ಕಾನು? ಆದರೆ ವೀರೆಗೌಡ ಇನ್ನೂ ಬರ್ಲೇ ಇಲ್ಲ. ನನ್ನ ಮನಸ್ಸು ಮಾತ್ರ ಸುಮ್ಮನೇ ಒದ್ದಾಡ್ತಾ ಇದೆ. ಅವನು ಬಂದು

ತಿಳಿಸೋವರಿಗೂ ನನಗೆ ಸಮಾಧಾನವೇ ಆಗೋ ಹಾಗಿಲ್ಲ. ಮದುವೇ ನಿಶ್ಚಯಕ್ಕೆ ತಾವು ಬರ್ಲೇಬೇಕು ಶಾಸ್ತ್ರಿಗಳೇ!

ಶಾಸ್ತ್ರಿ—ಹೋಗೋಣ ಹೋಗೋಣ ಮುಂದಿನ ನಿಶ್ಚಯಕ್ಕೇನೇ ಹೋಗೋಣ. ಕೆಂಪಸಾಗರದವರೆಲ್ಲಾ ಮೂಗಿನ ಮೇಲೆ ಬೆರಳಿಟ್ಟು ಕೊಳ್ಳೋ ಹಾಗೆ, ವೈಭವದಿಂದ ಹೋಗೋಣ.

ಬೈರಪ್ಪ—ಆ ವೈಭವದ ಮಾತು ಈಗೇಕೆ! ಕೆಂಪಸಾಗರ ಹುಟ್ಟಿದಾಗಿನಿಂದ ಇಂಥಾ ಮದುವೆ ನೋಡಿರಬಾರದು. ಆದ್ರೇ ವೀರೆಗೌಡ ಇನ್ನೂ ಬರಲಿಲ್ಲವಲ್ಲಾ!

ಶಾಸ್ತ್ರಿ—(ಪಕ್ಕಕ್ಕೆ ನೋಡಿ,) ಅದೋ ಬರ್ತಾ ಇದ್ದಾರಲ್ಲ.

(ವೀರೇಗೌಡ ಬಂದು ಸಿಟ್ಟಿನಿಂದ ನಿಲ್ಲುವನು)

ಬೈರಪ್ಪ—ಯಾಕಯ್ಯಾ! ಹೋದ ಕೆಲಸ ಆಯ್ತೋ ಆಗ್ಲಿಲ್ವೋ?

ವೀರೇಗೌಡ—(ಬೇಸರದಿಂದ) ಆಗ್ಲಿಲ್ಲ.

ಬೈರಪ್ಪ—ಹಾಂ! ಆಗ್ಲಿಲ್ಲಾ!....ಯಾಕಯ್ಯ! ಏನಾಯ್ತು! ಜವರೇ ಗೌಡ್ರೇನಂದ್ರೂ?

ವೀರೇಗೌಡ—ಅವನನ್ನೋದೇನ್ ಬಂತು! ನಾನು ಅವನನ್ನ ಏನೋ ಅಂತ ತಿಳ್ಕೊಂಡಿದ್ದೆ. ಆದ್ರೆ ಅವನು ಮಹಾ ನೀಚ, ಚಂಡಾಲ.

ಬೈರಪ್ಪ—ಅವರೇನಯ್ಯ ಅಂದ್ರೂ!

ವೀರೇಗೌಡ—ಅವನಂತಾನೇ ಬೈರಪ್ಪನಿಗೆ ಕೋಡೋದಕ್ಕಿಂತ, ನನ್ನ ಮಗಳನ್ನು ಕಣ್ಣುಕಟ್ಟಿ ಹೊಳೇಗೆ ನೂಕೋದು ಮೇಲು. ನನ್ನ ಮಗಳ ಕತ್ತನ್ನು ನಾನೇ ಹಿಸ್ಕಿ ಸಾಯಿಸೋದು ಮೇಲು. ಬೈರಪ್ಪ ಕುಡುಕ, ವ್ಯಭಿಚಾರಿ, ಕಳ್ಳ, ದರೋಡೆ ಖೋರ, ಇನ್ನೂ ಏನೇನೋ ಅಂತ........

ಬೈರಪ್ಪ—ಎಲಾ ಅಯೋಗ್ಯ, ಹಾಗಂದನೇ! ಕೇಳದ್ರಾ ಶಾಸ್ತ್ರಿಗಳೇ, ಎಂಥಾ ಮಾತುಗಳು! ಆಡಬಹುದೇ ಅವನು?

ಶಾಸ್ತ್ರಿ—ಛೇ ಛೇ. ಆಡಬಾರದು, ಆಡಬಾರದು. ಯಾರಿಗೆ ಯಾರಾಡೋ ಮಾತಿದು! ಬಹಳ ಅನ್ಯಾಯ! ಬಹಳ ಅನ್ಯಾಯ!

ಬೈರಪ್ಪ—ನೀನಿವನ್ನೆಲ್ಲಾ ಕೇಳಿಕೊಂಡು ಸುಮ್ಮನಿದ್ದೇನಯ್ಯ?

ವೀರೇಗೌಡ—ನಾನೇ ಕೇಳ್ಕೊಂಡು ಸುಮ್ನಿರೋವ್ನಾ? ಕತ್ತಿ ಈಚೆಗೆಳ ಕೊಂಡು ಸಿದ್ಧನಾಗ್ಬಿಟ್ಟೆ, ಆ ಜವರೇಗೌಡನ್ನ ತುಂಡಾಕ್ಬೋದಕ್ಕೆ.

ಬೈರಪ್ಪ—ಬಹಳ ಒಳ್ಳೇದು ಮಾಡ್ದೆ, ಆಮೇಲೆ?

ವೀರೇಗೌಡ—ಆಮೇಲೆ ಆ ಹುಡುಗಿ ಮಧ್ಯೆ ಬಂದು ಸಮಾಧಾನ ಮಾಡಿ ದಳು. ಅವಳ ಮುಖ ನೋಡಿ ಸುಮ್ಮನೆ ಬಿಟ್ಟೆ. ಆದರೂ ಸರಿ ಯಾಗಿ ಅಂದು ಬಂದಿದ್ದೀನಿ. ಜವರೇಗೌಡ, ನಾನು ಇಚ್ಛೆಪಟ್ಟರೇ, ಈ ಭೂಮಿ ಮೇಲೆ ಕೆಂಪಸಾಗರ ಇರ್ಲಿಲ್ಲ ಅಂತ ಅನ್ನಿಸ್ಬಿಡ್ತೀನಿ. ನಿನ್ನನ್ನು ವಂಶ ಸಹಿತ ನಿರ್ಮೂಲ ಮಾಡ್ಬಿಡ್ತೀನಿ ಅಂತ ಅಂದು ಬಂದಿದ್ದೀನಿ.

ಬೈರಪ್ಪ—ಭೇಷ್! ಭೇಷ್! ಬಹಳ ಚನ್ನಾಗಂದೆ. ಬಹಳ ಚೆನ್ನಾಗಂದೆ ಈವತ್ತೇ ಕೂಡ್ಹಾಕು ನಮ್ಮವರನ್ನೆಲ್ಲಾ. ಇಡೀ ಕೆಂಪಸಾಗರವನ್ನೇ ಬೆಂಕಿಗೆ ಆಹುತಿಕೊಟ್ಟುಬಿಡೋಣ. ಎದುರು ಮಾತಾಡಿದವರನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸಿ ಚೆಲ್ಲೋಣ. ಆದ್ರೇ ಇಷ್ಟಾದ್ರೂ ಆ ಹುಡುಗಿ ನಮ್ಮ ಕೈಗೆ ಸಿಕ್ತಾಳ್ಯೇ! ಹುಡ್ಗೀ ನಮಗೆ ಸಿಕ್ಕೊ ಬಗೆ ಹೇಗೆ?

ವೀರೇಗೌಡ—ಅಯ್ಯೋ ಅದಕ್ಕೇಕೆ ಇಷ್ಟು ಚಿಂತೆ! ಇದಕ್ಯಾಕೇ ಮಹಾ ಸಾಹಸ. ನಾಳೆ ಸಾಯಂಕಾಲದೊಳ್ಗಾಗಿ ಜವರೇಗೌಡನನ್ನ ಮರಕ್ಕೆ ಕಟ್ಹಾಕಿ, ಆ ಹುಡುಗೀನ, ಎಳ್ಕೊಂಡ್ ಬಂದು, ನಿನ್ ಪಾದದ ಮೇಲೆ ಕೆಡವ್ದೇ ಇದ್ರೇ (ಮೀಸೆಯನ್ನು ತಿರುವುತ್ತ) ನಾನ್ ವೀರೇ ಗೌಡ್ನೇ ಅಲ್ಲ. ನಡೀ ಹೋಗೋಣ.

ಬೈರಪ್ಪ—ಆಗ್ಲಿ ನಡಿ (ಹೋಗುತ್ತ) ಬರ್ತೀವಿ ಶಾಸ್ತ್ರಿಗಳೇ?

ಶಾಸ್ತ್ರಿ—ಆಗ್ಲಿ ಆಗ್ಲಿ. ಹೊಗ್ಬನ್ನಿ (ಆ ಕಡೆ ನೋಡುತ್ತ) ಉರೀರಿ. ಮುಂಡೇ ಗಂಡ್ರಾ ಉರೀರಿ. ಎಣ್ಣೆ ಇರೋವರಿಗೆ ಉರ್ದೀರ. ಆ ಮೇಲೆಲ್ಲಿಂದ ಬಂತು. ಈ ಉರಿಯಾಟ! ಎಣ್ಣೆತಂದು ನಿಮ್ಮೇಲೆ ಸುರದ್ರೂ ನೀವು ಉರಿಯೋ ಹಾಗಿಲ್ಲ. ಆದ್ರೇ ಈಗುರೀತಾ ಇರುವಾಗ, ಇನ್ನೆಷ್ಟು ಮನೆಗಳನ್ನ ಜೊತೇಲೇ ಉರಸ್ತಿರೋ ಗೊತ್ತಿಲ್ಲ. ನಿಮಗೀದುರ್ಬುದ್ಧಿ ಹುಟ್ಟಿ ರೋದು, ಕೇಡ್ಗಾಲಕ್ಕೇನೆ ಹೊರ್ತು, ಒಳ್ಳೇದಕ್ಕಲ್ಲ. ನಿಮ್ ಮಧ್ಯೆ

ನಾನೂ ಸಿಕ್ಕೊಂಡು ಉರೀಬೇಕಾಗಿದೆ. ಏನೇನು ನಡಿಯುತ್ತೋ ನಡೆದೇ ಹೋಗ್ಲಿ. ಎಲ್ಲಾ ಆ ರಂಗನಾಥನ ಲೀಲೆ.

ದೃಶ್ಯ—೧೩

ಶಾಸ್ತ್ರಿ ಮನೆ

(ಸಾವಿತ್ರಮ್ಮ ದೇವರ ಎದುರಿನಲ್ಲಿ ಹಾಡುತ್ತಿರುವಳು.)

ಸಾವಿತ್ರಿ—ರಂಗನಾಥ! ರಂಗನಾಥ! ಓರ್ ಬಂದ್ರೇನೋ!

ರಂಗನಾಥ—ಇಲ್ಲಾವಮ್ಮ, ಹಳ್ಳಿಗ್ಹೋಗಿ ಬರ್‍ತಿನಿ ಅಂತ ಹೋದವ್ರು ಇನ್ನೂ ಬರ್‍ನೇ ಇಲ್ಲ.

ಸಾವಿತ್ರಿ—ನಿತ್ಯ ಇದೇ ಆಗ್ಹೋಯ್ತು ಬಿಡು. ಔರ್ ಸ್ವಭಾವವೇ ಹಾಗೆ. ಹಬ್ಬ ಅನ್ನೋಹಾಗಿಲ್ಲ, ಹರಿದಿನ ಅನ್ನೋ ಹಾಗಿಲ್ಲ. ಮನೆ ಬಿಟ್ಟು ಹೊರಟ್ಹೋಗ್ತಾ ಇರೋದೇ. ಅವರೇನ್ ಮಾಡ್ತಾರೇ, ಮುಖ್ಯ ನನ್ ಹಣೇಬರಹ ಅಂಥಾದ್ದು.

ರಂಗ—ಈ ದಿನ ಯಾಕೋ ಬಹಳ ಹಸಿವಾಗುತ್ತವಮ್ಮ, ಊಟಕ್ಕೆ ಅಪ್ಪ ಬರೋದು ಇನ್ನೆಷ್ಟೊತ್ತೋ ಏನೋ!

ಸಾವಿತ್ರಿ—ಕಡಬು ಕೊಡ್ತೀನಿ ತಿನ್ನು ಅಂತೆ. ನೋಡು, ಹಾಗೇ ಕೆಂಪನ್ಗೂ ಊಟಕೊಟ್ ಬಾಪ್ಪ. ಈ ದಿನ ತೋಟದಿಂದ ಬರೋದು ಎಷ್ಟೊತ್ತಾಗುತ್ತೋ ಏನೋ ಪಾಪ.

ರಂಗ—ಊಟಕ್ ತಗೊಂಡ್ಹೋಗಿ ಕೊಟ್ರೇ ಅಪ್ಪ ಹೊಡಿಯೋಕೇ ಬರ್ತಾ ನಮ್ಮ. ಬೆಳಗ್ಗೆ ಕೆಂಪನ್ನ ಬೈಯ್ತ ಇದ್ದದ್ದನ್ನ ನೀನೇನ್ ಕೇಳ್ಲಿಲ್ವೇ?

ಸಾವಿತ್ರಿ—ಸಾಕ್ ಸುಮ್ನಿರೋ. ಹೊಡಿಯೋದಕ್ಕೂ ಬರೋದಿಲ್ಲ, ಏನೂ ಇಲ್ಲ. ನಾನು ಔರ್‌ಗ್ಹೇಳ್ತೀನಿ ಹೋಗು. ಪಾಪ, ತಂದೆಯಿಲ್ಲದ್ ತಬ್ಲೀ. ಅವರಪ್ಪ ಬದುಕಿದ್ದಿದ್ರೇ ನಮ್ಮನೇಗ್ಯಾಕ್ ಜೀತಮಾಡೋಕ್ ಬರ್ತಿದ್ದ! ಈವತ್ತಿನ್ ನಮ್ಮನುಕೂಲಾನೆ ನೋಡ್ಕೊಂಡು, ಇತರರಿಗೆ ಉಪೇಕ್ಷೆಯಿಂದ ನೋಡ್ ಬಾರ್‍ದೂ ಕಣೋ. ನಾಳಿನ್ ವಿಚಾರ ಯಾರಿಗ್‌ಗೊತ್ತು! ದೇವರು ಯಾರ್‍ಯಾರ ಹಣೇಲಿ ಏನೇನ್ ಬರೆದಿರ್‍ತಾನೋ! ಹೋಗಪ್ಪ, ನಿನಗೆ ಎರಡು ಕಡ್ಬು ಹೆಚ್ಚಾಗ್‌ಕೊಡ್ತೀನಿ ಊಟಕೊಟ್ಬಿಟ್ ಬಾ ಹೋಗು.

ಸಾವಿತ್ರಮ್ಮ ರಂಗನಾಥ ಒಳಗೆ ಹೋಗುವರು. ಹೊರಗಿನಿಂದ ಕೆಂಪಮ್ಮ ಕೂಗುವಳು.

ಕೆಂಪಮ್ಮ—ಅವ್ವಾ! ಅವ್ವಾ! ಇದ್ದೀರೇನ್ರವ್ವಾ ಮನೇಲಿ!

ಸಾವಿತ್ರಮ್ಮ—(ಒಳಗಿನಿಂದ ಬಂದು) ಯಾರು! ಓಹೋ ಕೆಂಪಮ್ಮ! ಬಾಮ್ಮ, ಕೂತ್ಕೊ ಬಾ, ಏನು ಅಪರೂಪಕ್ಕೆ ಬಂದೆಯಲ್ಲ! ಲಕ್ಷ್ಮೀ ಚೆನ್ನಾಗಿದ್ದಾಳೈ! ಒಬ್ಬೇ ಬಂದ್ಬಿಟ್ಟೆಲ್ಲಾ, ಔಳನ್ನೂ ಕರ್ಕೊಂಡ್ ಬರೋದಕ್ಕಾಗ್ಲಿಲ್ವೇ!

ಕೆಂಪಮ್ಮ—ಇಲ್ಲಾ, ಔಳ್‌ಗ್ಯಾಕೋ ಮೈ ಅಷ್ಟ ಚೆನ್ನಾಗಿಲ್ಲ. ನೆನ್ನೆಯಿಂದ ಕೆಂಪ ಮನೇ ಕಡೇಗೇ ಬರ್ಲಿಲ್ಲ. ಅದಕ್ಕೇ ನೋಡ್‌ಕೊಂಡ್ ಹೋಗೋಣ ಅಂತ ಬಂದೆ ತಾಯಿ.

ಸಾವಿತ್ರಿ ಬಂದಿದ್ದು ಒಳ್ಳೇದೆ ಆಯ್ತು ಏನ್ ಬರಬಾರದೇನು! ಅದರಲ್ಲೂ ತಾಯಿ ಮಗನನ್ನ ನೋಡೋಕ್ ಬರೋದ್ರಲ್ಲಿ ತಪ್ಪೇನಿದೇ! ಎಷ್ಟಾದ್ರೂ ಹೆತ್ತ ಕರುಳಲ್ವೇ! ಆದ್ರೆ ಕೆಂಪಮ್ಮ, ಮೂರು ದಿನದಿಂದಾನು ತೋಟದಲ್ಲಿ ತುಂಬಾ ಕೆಲಸ ಮಾಡ್ತಿದ್ದಾರೆ. ಅದೇನೋ ಬಾಳೆಗೆಲ್ಲಾ ಅಗ್ತೇ ಆಗ್ಬೇಕಂತೆ. ಈ ದಿನ ತದಿಗೆ ಹಬ್ಬ. ಇಷ್ಟ್ ಹೊತ್ತಾದ್ರೂ ಔರು ಮನೆಗೇ ಬಂದಿಲ್ಲ. ಅದಕ್ಕೋಸ್ಕರಾನೇ ಕೆಂಪನಿಗೆ ಅಲ್ಲಿಗೇ ಊಟಾಕೊಟ್ಟ್ ಕಳುಹಿಸೋಣ ಅಂತ ತಂದೆ. ಅಷ್ಟರಲ್ಲೇ ನೀನೂ ಬಂದೆ. (ಪಕ್ಕಕ್ಕೆ ತಿರುಗಿ) ರಂಗನಾಥ ಹೋಗಪ್ಪಾ ಕೆಂಪನಿಗೆ ಊಟಾಕೊಟ್ಟು, ಔರು ಅಲ್ಲೇ ಇದ್ರೇ, ಬೇಗ ಕರ್ಕೊಂಡ್ ಬಾ ಹೋಗು.

ಕೆಂಪಮ್ಮ—ನೀವೇ ನಮ್ ಕೆಂಪನಿಗೆ ತಾಯಿ ಕಣ್ರವ್ವ ನಾನು ಹೆತ್ತವಳು ಮಾತ್ರ. ನಿಜವಾದ ತಾಯಿ ನೀವೇ. ಇನ್ನೂ ನಿಮ್ಮನೆಯವರಿಗೆ ಊಟ ಆಗಿಲ್ಲ. ಎಲ್ಲರಿಗಿಂತ ಮುಂಚೆ ಕೆಂಪನಿಗೇ ಊಟ ಕಳ್ಸ ಕೊಡ್ತಾ ಇದ್ದೀರಿ. ನಿಮ್ಮುಪಕಾರ ನಾವು ಎಷ್ಟ ಜನ್ಮಕ್ಕೆ ತೀರ್ಸೋದೂ! ಏನೋ ನಿಮ್ಮಂಥ ಒಳ್ಳೇ ತಾಯಿ ಕೈಯಿಂದ ಅನ್ನ ತಿಂದು ನಮ್ ಕೆಂಪ ಚೆನ್ನಾಗಿ ಬದುಕ್ಬೇಕು.

ಸಾವಿತ್ರಿ—ಹಾಗಂದ್ರೇನು ಕೆಂಪಮ್ಮ, ಮಕ್ಳು ಅಂದ್ಮೇಲೆ ಎಲ್ಲಾರ್‌ಮಕ್ಳು ಒಂದೇ ಅಲ್ವೇ! ನೀನು ಕೆಂಪನ್ ವಿಚಾರದಲ್ಲಿ ಸ್ವಲ್ಪನೂ ಚಿಂತೆ ಮಾಡ್‌ಬೇಡ. ನನಗೆ ಔನು ನನ್ ರಂಗನಾಥನಿಗಿಂತಾನೂ ಹೆಚ್ಚು. ಅವನು ನಮ್ಮ ಮನೆಗೆ ಬಂದಾಗಿನಿಂದಾನೂ ನೋಡ್ತಾನೇ ಇದ್ದೀನಿ. ಔನ್‌ಗುಣವ್ರೋ, ಔನ್ ಧೈರ್ಯವ್ರೋ, ಔನ್ ಶ್ರದ್ಧೇನ್ರೋ, ಎಲ್ಲಾ ಮೆಚ್ಚಿ ತಲೆದೂಗುವಂಥಾದ್ದೇ. ಇದನ್ನೆಲ್ಲಾ ನೋಡಿದ್ರೇ ಔನು ನಿಜವಾಗ್ಲೂ ಮುಂದೆ ಚೆನ್ನಾಗಿ ಬಾಳಿ ನಿಮ್ ವಂಶಕ್ಕೇ ಒಳ್ಳೇ ಕೀರ್ತಿ ತರ್ತಾನೆ.

ಕೆಂಪಮ್ಮ—ಏನೋ ತಾಯಿ, ನಿಮ್ಮಾತು ಸತ್ಯವಾಗ್ಬೇಕು. ಮಹಾದೇವಿ ನುಡ್‌ದ್ಹಾಗೆ ನುಡೀತ ಇದ್ದೀರಿ. ಆಗಲ್ರವ್ವ, ಬರ್‍ತೀನಿ ಮನೇಲಿ ಲಕ್ಷ್ಮೀ ಒಬ್ಳೇ ಇದ್ದಾಳೆ. ಕೆಂಪ ಬಂದ್ಮೇಲೆ ಮನೇಗೆ ಕಳ್ಸಿ ಕೊಡ್ರವ್ವಾ.

ಸಾವಿತ್ರಿ—ತಡಿ ಕೆಂಪಮ್ಮ ಹೋಗು ಅಂತೇ, ಅದೇನು ಅಷ್ಟಾತ್ರ! ತಿಂಡಿ ಕೊಡ್ತೀನಿ ತಗೋಂಡ್ಹೋಗು (ಒಳಗೆ ಹೋಗುವಳು)

ಕೆಂಪಮ್ಮ—ಅಯ್ಯೋ ಈ ದಿನ ಹಬ್ಬ. ಈ ಹಬ್ಬದ ದಿನ ನಾನು ಎಷ್ಟು ಜನರಿಗೆ ಇದೇ ಕೈಗಳಿಂದ. ಅನ್ನವನ್ನು ಇಕ್ಕುತ್ತಿದ್ದೆ. ಆದರೆ ಇದೇ ದಿನ ಮತ್ತೊಬ್ಬರ ಮನೆಯ ಬಾಗಿಲಲ್ಲಿ ನಿಂತು ಅವರು ನೀಡುವ ಅನ್ನಕ್ಕಾಗಿ ಇದೇ ಕೈಗಳನ್ನೊಡ್ಡುವಂತಾಯ್ತೇ! ದೇವ ದೇವ ರಂಗನಾಥ! ಇದು ನಿನ್ನ ಮಹಿಮೆಯೇ! ನನಗಾಗಿ ಅಲ್ಲದಿದ್ದರೂ ಕಣ್ಣುಗಳಂತಿರುವ ನನ್ನ ಕಂದಮ್ಮಗಳಿಗಾಗಿ ನಾನು ಬೇಡಲೆಬೇಕು. ಈ ನಮ್ಮ ನಿರ್ಗತಿಕ ಸ್ಥಿತಿಯಲ್ಲಿ ನಮ್ಮನ್ನು ಕರೆದು ನೀಡುವವರಿದ್ದಾರಲ್ಲ, ಇದೂ ನಿನ್ನ ಕರುಣಾಪ್ರಸಾದವೇ.

ಸಾವಿತ್ರಮ್ಮ—(ಬಂದು,) ಬಾ ಕೆಂಪಮ್ಮ ಬಾ ಕೂತ್ಕೋ, ನಿರ್‍ತಂದ್ ಕೊಡ್ತೀನಿ. ತಿಂಡಿ ತಿಂದ್ಹೋಗು ಅಂತೆ.

ಕೆಂಪಮ್ಮ—(ಕೈ ಬಡ್ಡಿ) ಬೇಡಾತಾಯಿ ಮನೇಗೆ ತಗೋಂಡ್‌ಹೋಗಿ ಮೊದ್ಲೂ ಲಕ್ಷ್ಮೀಗೆ ಕೊಡ್ಬೇಕು.

9462

ಸಾವಿತ್ರಿ—ಅಯ್ಯೋ ಕೂತ್ಕೊಂಡು ತಿನ್ನು ಬಾ ಕೆಂಪಮ್ಮ, ಲಕ್ಷ್ಮಿಗೂ ಕೊಡ್ತೀನಿ. ತಗೋಂಡ್ಹೋಗೂ ಅಂತೇ.

ಕೆಂಪಮ್ಮ—ಬೇಡ್ರವ್ವ, ಅಲ್ಲೇ ಹೋಗಿ ತಿಂತೀನಿ ಕೊಡಿ. ಅಂತೂ ಒಳ್ಳೇ ದಿನವೇ ಬಂದ್ಹಾಗಾಯ್ತು.

ಸಾವಿತ್ರಿ—ಇದೇನ್ ಕೆಂಪಮ್ಮ ಹೀಗ್ಹೇಳ್ತಾಯಿದ್ದೀಯ! ಹಬ್ಬ ಹರಿದಿನ ಅಂತ ಮಾಡೋದಾದ್ರೂ ಯಾತಕ್ಹೇಳು? ಮಾಡಿದ್ದನ್ನ ನಾಲ್ಕು ಜನಕ್ಕೆ ಕೊಟ್ಟ್ಕೊ, ನಾನೂ ಸಂತೋಷವಾಗಿ ತಿನ್ನೋದಕ್ಕಲ್ವೇ?

ಕೆಂಪಮ್ಮ—ಹೌದ್ರವ್ವ! ಹೌದು. ದೊಡ್ಡವರ ಮನಸ್ಸೇ ಹಾಗೇ, ಬರ್‍ತೀನ್ರವ್ವ, ಕೆಂಪ ಬಂದ್‌ಮೇಲೆ ಮರೀದೆ ಕಳ್ಸಕೋಡಿ (ಹೋಗುವಳು)

ಸಾವಿತ್ರಿ—ಖಂಡಿತ ಕಳ್ಸಕೊಡ್ತೀನಿ ಹೋಗು. ಇವ್ಳ ಗಂಡ ಬದುಕಿದ್ದಾಗ ಸಂಸಾರ ಎಷ್ಟ್ ಚೆನ್ನಾಗಿ ನಡೀತಾ ಇತ್ತು? ಇಂಥಾ ಹಬ್ಬಗಳಲ್ಲಿ ಇವಳ ಮನೆಯಿಂದ, ಎಷ್ಟೋ ಜನ ತಿಂದು ಉಂಡು ಹೊರಬೀಳ್ತಾ ಇದ್ರು. ಇಂಥಾ ಒಳ್ಳೆ ಜನರಿಗೆ ದೇವರು ಎಂಥಾ ಕಷ್ಟ ಕೊಟ್ಟ! ಬೈರಪ್ಪ ಕಂಡವರ ಮನೆಗಳನ್ನೆಲ್ಲಾ ದೋಚಿ, ಬೇಕಾದಷ್ಟು ತಂದು ತುಂಬ್‌ಕೋಂಡಿದ್ದಾನೆ. ಆದ್ರೇ ಅವನ ಮನೇಲಿ ತಿನ್ನೋರೇ ಗತಿಯಿಲ್ಲ. ಏನ್ ಭಗವಂತನಾಟಾನೋ. ಒಂದೂ ಅರ್ಥವಾಗೋದಿಲ್ಲ. ನೀತಿವಂತರು, ಗುಣವಂತರು ಅನ್ನಕ್ಕಾಗಿ ಬಾಯಿ ಬಾಯಿ ಬಿಡ್ತಾ ಇದ್ರೇ, ಅನ್ನ ನೀತಿ ಹೀನನ ಮನೇಲಿ ಬಿದ್ದು ಕೊಳೀತ ಇರುತ್ತೆ.

ದೃಶ್ಯ ೧೪

ಭಿಕ್ಷುಕ—ಅಯ್ಯೋ ಮಾನವಾ! ನಿನ್ನ ಅಜ್ಞಾನಕ್ಕೆ ಮಿತಿಯುಂಟೇ? ನಾನು ನಿನ್ನನ್ನು ಬುದ್ಧಿ ಪ್ರಧಾನ ಜೀವಿಯನ್ನಾಗಿ ಹುಟ್ಟಿಸಿದೆನು. ಬುದ್ಧಿಬಲದಿಂದಲೇ ಸಕಲ ಜೀವರಾಶಿಗಳ ಮೇಲೂ ನಿನ್ನ ಸ್ವಾಮ್ಯವನ್ನು ಸಂಸ್ಥಾಪಿಸಿಕೋ ಎಂದು ಅಧಿಕಾರವನ್ನು ಕೊಟ್ಟೆನು. ಈ ಬುದ್ಧಿ ಬಲದಿಂದಲೇ ನಿನ್ನ ಇಹಪರಗಳ ಶ್ರೇಯೋಭಿವೃದ್ಧಿಗೆ ಸಾಧಕವಾದ ಜ್ಞಾನವನ್ನು ಗಳಿಸಿಕೋ ಎಂದು ಪ್ರೇರೇಪಿಸಿದೆನು. ಜ್ಞಾನ

ಬಲದಿಂದಲೇ ನೀನು ನಿನ್ನನ್ನೂ, ನಿನ್ನ ಕರ್ತಾರನನ್ನೂ, ಆತನ ಮಹೋನ್ನತ ಸದಾಶಯಗಳನ್ನೂ ಅರಿತುಕೋ ಎಂದು ಸೂಚಿಸಿದೆನು. ನಿನ್ನ ನಿಜವಾದ ಸುಖ, ಸಂತೋಷಗಳು ಎಲ್ಲಿವೆ ಎಂಬುದನ್ನು ಅರಸಿ ಅವುಗಳನ್ನು ಗಳಿಸಿಕೋ ಎಂದು ಪ್ರಬೋಧಿಸಿದೆನು.

ಆದರೆ ಮೂಢಾ! ನೀನು ಕೊನೆಗೂ ನನ್ನನ್ನು ಮರೆತಿರುವೆ. ನನ್ನ ಧಾರ್ಮಿಕ ನಿಬಂಧನೆಗಳನ್ನೆಲ್ಲಾ ಉಲ್ಲಂಘಿಸಿರುವೆ, ನನ್ನ ಪವಿತ್ರ ಸೃಷ್ಟಿಯ ಸುಂದರೋದ್ಯಾನದಲ್ಲಿ ಕಾಡ್ಗಿಚ್ಚಿನಂತೆ ನುಗ್ಗಿ ಅದನ್ನು ದಹಿಸುತ್ತಿರುವೆ. ಅಹರ್ನಿಶಿಯೂ ಧನಕ್ಕಾಗಿ, ಕೀರ್ತಿಗಾಗಿ, ಪದವಿಗಾಗಿ, ಹೆಣ್ಣಿಗಾಗಿ ಹಾಹಾಕಾರಪಡುತ್ತಿರುವೆ. ಇದೇ ಜೀವನದ ಪೂರ್ಣ ಗುರಿಯೇ? ಇದೇ ನಿಜವಾದ ಸುಖ ಸಾಧನೆಯೇ? ಇದೇ ಸಂತೋಷದ ಪರಮಾವಧಿಯೇ? ಅಯ್ಯೋ ಮೂರ್ಖಾ! ಇದೇ ಜೀವನದ ಸರ್ವಸ್ವವೂ ಆಗಿದ್ದಿದ್ದರೆ, ಇದನ್ನೆಲ್ಲಾ ಪಡೆದುಕೊಂಡವರೂ ಶಾಂತಚಿತ್ತರಾಗಿಲ್ಲವೇಕೆ? ನೆಮ್ಮದಿಯ ಬಾಳನ್ನು ಬಾಳುತ್ತಿಲ್ಲವೇಕೆ? ಅವರ ಆಶೋತ್ತರಗಳು ದಿನ ದಿನಕ್ಕೂ ಅಧಿಕವಾಗುತ್ತಿರುವುವೇಕೆ? ಎಷ್ಟು ದಿನದ ಬಾಳಿಗಾಗಿ ಈ ರಾಕ್ಷಸೀ ಮಹತ್ವಾಕಾಂಕ್ಷೆ? ಈ ಪೈಶಾಚಿಕ ಮನೋವೃತ್ತಿ? ನಿನ್ನ ಆಯುಷ್ಯದ ಪರಿಮಿತಿಯಾದರೂ ಎಷ್ಟೆಂಬುದನ್ನು ಅರಿತಿರುವೆಯಾ? ಧನ, ಪದವಿ, ಕೀರ್ತಿ, ಸ್ತ್ರೀ ಇವುಗಳೇ ಸುಖ, ಸಂತೋಷಗಳ ಸಾರಸರ್ವಸ್ವವೆಂದು ನಂಬಿ ಕೆಡಬೇಡ. ಇವು ಸುಖ ಸಂತೋಷದ ಆಕರ್ಷಕ ಆವರಣವನ್ನು ಹೊದ್ದಿರುವ ಪ್ರಚಂಡ ಜ್ವಾಲೆಯ, ವಿವಿಧ ರೂಪಗಳು. ದುರಾಶೆಯಿಂದ ಇವುಗಳನ್ನೆಷ್ಟು ಬಾಚಿ ಬಾಚಿ ಮಡಿಲಲ್ಲಿ ತುಂಬಿಕೊಳ್ಳಲು ಪ್ರಯತ್ನಿಸುವೆಯೋ, ಅಷ್ಟೂ ದಗ್ಧನಾಗಿಹೋಗುವೆ. ಹೇ ಮಾನವಾ! ಎಪ್ಪತ್ತು ತಾಯಂದಿರ ಪ್ರೇಮವನ್ನು ನಾನು ನಿನ್ನ ಮೇಲಿಟ್ಟಿರುವೆನೆಂಬುದನ್ನು ಮರೆಯಬೇಡ. ನಾನು ಪ್ರೀತಿಯಿಂದ ನಿನ್ನನ್ನು ನನ್ನ ಸಮೀಪಕ್ಕೆ ಕರೆಯುತ್ತಿದ್ದೇನೆ. ನನ್ನ ಸಹಕಾರದ ಹಸ್ತಗಳನ್ನು ನೀಡಿ ನಿನ್ನನ್ನು ಹತ್ತಿರ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಆದರೆ ನೀನು ನನ್ನ ಕೈಯಿಂದ ತಪ್ಪಿಸಿಕೊಂಡು ದೂರ

ದೂರ ಸರಿದು ಹೋಗುತ್ತಿರುವೆ ಅಯ್ಯೋ ಅಜ್ಞಾನೀ! ಜಾತ್ರೆಯಲ್ಲಿ ತಂದೆ ತಾಯಿಗಳಿಂದಗಲಿದ ಮಗುವು ಹೇಗೆ ಸಂತೋಷದಿಂದಲೂ, ನೆಮ್ಮದಿಯಿಂದಲೂ ಇರಲಾರದೋ, ಹಾಗೆಯೇ ನೀನು ನನ್ನಿಂದ ದೂರವಿದ್ದು ಶಾಂತಿಯನ್ನೂ ಸುಖ ಸಂತೋಷ ನೆಮ್ಮದಿಯನ್ನೂ ಕಾಣಲಾರೆ.

ಭಿಕ್ಷುಕಿ—ಪ್ರಭು! ಅಲ್ಲಿ ಬರುತ್ತಿರುವ ಆ ಸ್ತ್ರೀಯು ಯಾರು?

ಭಿಕ್ಷುಕ—ಅವಳೇ ನನ್ನ ಮಹಾಭಕ್ತನಾಗಿದ್ದ ಬೆಂಗಳೂರು ಕೆಂಪೇಗೌಡನ ಮನೆಯ ಸೊಸೆ. ಕೆಂಪಮ್ಮ.

ಬಿಕ್ಷುಕಿ—ಪ್ರಭು! ಅವಳ ರಾಜತೇಜಸ್ಸು ಹೇಗೆ ಉಡುಗಿಹೋಗಿದೆ ನೋಡಿದೆಯಾ? ಅವಳು ಎಷ್ಟರ ಮಟ್ಟಿಗೆ ಸೊರಗಿಹೋಗಿದ್ದಾಳೆ ಕಂಡೆಯಾ?

ಬಿಕ್ಷುಕ—ಹೌದು ಆದಿಶೇಷಾ! ದಾರಿದ್ರ್ಯದ ಬೇಗೆಯು ಅವಳ ರಾಜತೇಜಸ್ಸನ್ನು ಹೀರಿ ಬಿಟ್ಟಿದೆ. ಮಿತಿಮೀರಿದ ದುಃಖ ಸಂಕಟಗಳಿಂದ ಅವಳ ಸತ್ವವೂ ಅಡಗಿಹೋಗಿದೆ.

ಬಿಕ್ಷುಕಿ—ಆದರೂ ಪ್ರಭು! ದಾರಿದ್ರ್ಯ, ದುಃಖ, ಸಂಕಟ; ಹಸಿವು, ಪೀಡನೆಗಳ ಧಾಳಿಯು ಅಧಿಕವಾಗುತ್ತಹೋದಂತೆ ಅವಳು ಕಲ್ಲಾಗುತ್ತಿದ್ದಾಳೆ. ಭೀತಿ, ಕಳವಳ, ಪ್ರಕ್ಷುಬ್ಧತೆಗಳನ್ನೆಲ್ಲಾ ಮೆಟ್ಟಿ ಮುಂದುವರೆಯುತ್ತಿದ್ದಾಳೆ. ಯಾವ ಸಂದರ್ಭದಲ್ಲಿಯೂ ಧೈರ್ಯಗುಂದುತ್ತಿಲ್ಲ. ಇಷ್ಟಾದರೂ ಉದಾರೆ, ಕರುಣಾಮಯಿ, ಸುಶೀಲೆ. ಅವಳ ಔದಾರ್ಯವನ್ನು ಪರೀಕ್ಷಿಸೋಣವೇ ಪ್ರಭು?

ಬಿಕ್ಷುಕ—ಪರೀಕ್ಷಿಸಬೇಕಾದ ಅಗತ್ಯವೇನಿದೆ ಆದಿಶೇಷಾ! ಉದಾರಿಗಳಿಗೆ ದಾರಿದ್ರ್ಯವು ಪೀಡಿಸುತ್ತಿರಲಿ, ಹಸಿವು ಬಾಧಿಸುತ್ತಿರಲಿ ಹೊಟ್ಟೆಗಿಲ್ಲ ಎಂಬ ಕೂಗು ಕೇಳಿ ಬಂದೊಡನೆಯೇ ಅವರ ಸಹಜವಾದ ಔದಾರ್ಯವು ತಾನಾಗಿ ಹೊರಹೊಮ್ಮುವುದು. ಅವರ ಉದಾರ ಹಸ್ತವು ನೀಡಲು ತಾನಾಗಿ ಮುಂದುವರೆಯುವುದು. ಆದರೆ ಕೃಪಣನಿಗೆ ಜಗತ್ಸರ್ವಸ್ವವೂ ಲಭ್ಯವಾಗಿದ್ದರೂ, ಅವನ ಇದಿರಿನಲ್ಲಿ ಹಸಿದವರು ಸಾಲು ಸಾಲಾಗಿ ಬಿದ್ದು ಸಾಯುತ್ತಿದ್ದರೂ, ಅವನ ನೇತ್ರಗಳಿಂದ

ಮರುಕದ ಹನಿಯು ಚಿಮ್ಮದು. ಅವನ ಹೃದಯದಲ್ಲಿ ಕರುಣೆ ಯುತ್ಪನ್ನವಾಗದು. ಅವನ ಕರಗಳಲ್ಲಿ ಚಲನಶಕ್ತಿಯುಂಟಾಗದು. ವಸ್ತುತಃ ಉದಾರೆಯಾದ ಈ ಪುಣ್ಯ ಚರಿತೆಯನ್ನೂ, ಸ್ವಯಂ ಪ್ರಕಾಶದಿಂದ ಬೆಳಗುತ್ತಿರುವ ಈ ನಾರೀರತ್ನವನ್ನು ಪರೀಕ್ಷಿಸಬೇಕಾದ ಅಗತ್ಯವೇನಿದೆ ಆದಿಶೇಷಾ!

ಬಿಕ್ಷುಕಿ—ಏನೇ ಆಗಲಿ ಪ್ರಭು! ಪುತ್ರನಿಗೆ ತಕ್ಕ ಮಾತೆಯೋ, ಮಾತೆಗೆ ತಕ್ಕ ಪುತ್ರನೋ ಪರೀಕ್ಷಿಸಲೇ ಬೇಕು.

ಬಿಕ್ಷುಕ—ನಿನ್ನಿಚ್ಛೆಯಿದ್ದರೆ ಹಾಗೆಯೇ ಆಗಲಿ.

ಅಯ್ಯಾ ದಾನಿಗಳೇ! ದಯಾದಾಕ್ಷಿಣ್ಯವನ್ನು ತಿಳಿದ ಧರ್ಮಾತ್ಮರೇ! ಮಕ್ಕಳ್ಹೆತ್ತ ಪುಣ್ಯಾತ್ಮರೇ! ನಮ್ಮಂಥ ಅನಾಥರಿಗೆ ಅನ್ನವನ್ನಿತ್ತು, ಹೋಗುತ್ತಿರುವ ಪ್ರಾಣವನ್ನು ರಕ್ಷಿಸಿ ಸ್ವಾಮಿ! (ಕೆಂಪಮ್ಮನ ಕಡೆಗೆ ತಿರುಗಿ) ಅಮ್ಮಾ ತಾಯಿ, ಎರಡು ದಿನದಿಂದ ಒಂದು ಒಳಲೆ ಗಂಜಿಕೂಡ ಗತಿಯಿಲ್ಲ. ಪ್ರಾಣ ಈಗಲೋ ಇನ್ನೊಂದು ಘಳಿಗೆಯಲ್ಲೋ ಹೋಗುವಂತಿದೆ. ಹಸಿವನಿಂದ ನನಗುಂಟಾಗಿರುವ ಈ ಮಹಾ ಸಂಕಟವನ್ನು ನಿವಾರಿಸು ತಾಯಿ! ನಿನ್ನನ್ನು ನೋಡಿದರೆ ರೈತಭಾಂಧವನ ಮಗಳಾಗಿ ತೋರುತ್ತೆ. ನನಗೆ ಒಂದೇ ಒಂದು ತುತ್ತು ಅನ್ನವನ್ನಿತ್ತು ನನ್ನ ಪ್ರಾಣವನ್ನುಳಿಸು ತಾಯಿ. ಅಮ್ಮಾ! ಅಮ್ಮಾ! ಅಮ್ಮಾ!

ಕೆಂಪಮ್ಮ—ದೇವ! ರಂಗನಾಥ! ಇದೆಂಥ ಪರೀಕ್ಷೆಯಪ್ಪ? ಸಾಕುಮಾಡು ಸ್ವಾಮಿ, ಈ ಪರೀಕ್ಷೆಯನ್ನು ಸಾಕುಮಾಡು. ಇವನಿಗೆ ಈ ತಿಂಡಿಯನ್ನು ಕೊಟ್ಟು ಬಿಡಲೇ? ಆದರೆ ಬೆಳಗಿನಿಂದಲೂ ಹಸಿದಿರುವ ನನ್ನ ಮಗಳು, ನನ್ನ ದಾರಿಯನ್ನೇ ನೋಡುತ್ತಿದ್ದಾಳೆ. ಅವಳಗೇನು ಉತ್ತರಕೊಡಲಿ? ಇವನಿಗೆ ಒಂದು ಮನೆಯಲ್ಲಿಲ್ಲದಿದ್ದರೆ, ಇನ್ನೊಂದು ಮನೆಯಲ್ಲಾದರೂ ಕೊಡುತ್ತಾರೆ. ನನ್ನ ಲಕ್ಷ್ಮಿಗಾಗಿ ನಾನ್ಯಾರ ಮನೆಗೆ ಬೇಡುವುದಕ್ಹೋಗಲಿ?

ಬಿಕ್ಷುಕ—ಅಮ್ಮಾ, ಅನ್ನಪೂರ್ಣೆ! ಎರಡು ದಿನವಾಯ್ತು ಅನ್ನವನ್ನು ಕಂಡು. ಅಮ್ಮಾ ನಿನ್ನ ದಮ್ಮಯ್ಯ, ನಿನ್ನ ಕೈ ಮುಗೀತಿನಿ, ಒಂದೇ ಒಂದು ತುತ್ತು ಅನ್ನವನ್ನಿತ್ತು, ನನ್ನನ್ನು ಕಾಪಾಡು ತಾಯಿ!

9462

ಕೆಂಪಮ್ಮ—ಮುಂದ್ಹೋಗಿ ಕೇಳಪ್ಪ ನನ್ನಲ್ಲೇನು ಇಲ್ಲ.

ಬಿಕ್ಷುಕ—ಏನೂ ಇಲ್ಲ! ಜಗತ್ತಿಗೇ ಅನ್ನವನ್ನಿಡುವ ರೈತನ ಮನೆಯ ಮಮತೆಯ ಮಗಳ ಬಾಯಿಂದ ಇಲ್ಲ ಎಂಬ ಸೊಲ್ಲೇ? ಮಹಾ ಮುನಿಗಳ ನಿವಾಸ ಸ್ಥಾನವಾದ ಮಾಕುಟ ಎಂದು ಹೆಸರಾಂತ ಈ ಪುಣ್ಯ ಭೂಮಿ ಮಾಗಡೀ ನಾಡಿನ ರೈತನ ಮಗಳ ಬಾಯಿಂದ ಇಲ್ಲ ಎಂಬ ಸೊಲ್ಲೇ! ನನ್ನಂಥ ದರಿದ್ರನಿಗೆ ಒಂದೇ ಒಂದು ತುತ್ತು ಅನ್ನ ವನ್ನಿಡದ ಒಕ್ಕಲು ಮಕ್ಕಳು ಈ ಜಗತ್ತಿಗೆ ಅನ್ನವನ್ನೆಂತು ಕೊಡು ವಿರಿ? ಈ ಊರಿನಲ್ಲಿ ಬಡವರಿಗಾಗಿ ಮರುಗುವ ಒಕ್ಕಲಿಗರಿಲ್ಲವೇ? ದೀನರಿಗಾಗಿ ನೀಡುವ ಒಕ್ಕಲಿಗರಿಲ್ಲವೇ? ಈ ಗ್ರಾಮದಲ್ಲಿ ಯಾರೂ ಪುಣ್ಯಾತ್ಮರಾದ ಒಕ್ಕಲಿಗರಿಲ್ಲವೇ? ಎಲ್ಲಾ ನಿರ್ಗತಿಕರೇ? ಎಲ್ಲಾ ನಿಷ್ಕರುಣಿಗಳೇ? ಎಲ್ಲಾ ಜಿಪುಣರೇ?

ಕೆಂಪಮ್ಮ—(ಗಟ್ಟಿಯಾಗಿ) ಸಾಕು ನಿಲ್ಲಿಸಿ, ನಾನು ಕೇಳಲಾರೆ ಸಾಕು ನಿಲ್ಲಿಸಿ. ಲೋಕಕ್ಕೆ ಪಡಿಯನ್ನಳೆಯುವ ಒಕ್ಕಲು ಮಕ್ಕಳ ದೂಷಣೆಯನ್ನು ನಾನು ಕೇಳಲಾರೆ. ಒಕ್ಕಲಿಗರು ಜಿಪುಣರಲ್ಲ ದಾನಿಗಳು, ಒಕ್ಕಲಿ ಗರು ನಿಷ್ಕರುಣಿಗಳಲ್ಲ ದಯಾಮಯರು. ಒಕ್ಕಲಿಗನು ಸ್ವಾರ್ಥಿ ಯಲ್ಲ ತ್ಯಾಗಿ, ಅವನೇ ಕರ್ಮಯೋಗಿ. ಅವನೇ ನಿಜವಾದ ನೇಗಿಲ ಯೋಗಿ. ಇದೋ ತೆಗೆದುಕೊಳ್ಳಿ, ರೈತನ ಮಗಳ ಬಾಯಿಂದ ಇಲ್ಲ ಎಂಬ ಸೊಲ್ಲು ಎಂದೂ ಬರುವುದಿಲ್ಲ.

ಬಿಕ್ಷುಕ—ಮೊದಲು ನಾನು ಬೇಡಿದಾಗ ಇಲ್ಲ ಎಂದವಳು ರೈತನ ಮಗಳಲ್ಲವೇ?

ಕೆಂಪಮ್ಮ—ಅಲ್ಲ, ಬಡವಳು. ನನ್ನ ಬಡತನ ಹಾಗೆ ಹೇಳಿಸಿತು. ನನ್ನ ಮಗಳ ಎರಡು ದಿನದ ಉಪವಾಸ ಆ ರೀತಿ ನುಡಿಸಿತು. ನನ್ನ ಕುಲ ಗೌರವನ್ನುಳಿಸಲು ನನ್ನ ಮಗಳು ಹಸಿವಿಗೆ ಆಹುತಿಯಾದರೂ ಚಿಂತೆ ಯಿಲ್ಲ. ತನ್ನ ಕುಲದ ಗೌರವಕ್ಕಾಗಿ, ತನ್ನ ನಾಡಿನ ಹಿತಕ್ಕಾಗಿ, ತನ್ನ ಜನರ ಏಳಿಗೆಗಾಗಿ, ನಮ್ಮ ಪೂರ್ವಜರ ಮನೆಯ ಸೊಸೆ ಬಸುರಿ ಎಂಬುದನ್ನು ಲೆಕ್ಕಿಸದೆ, ಎರಡು ಪ್ರಾಣವನ್ನು ಆಹುತಿಕೊಟ್ಟು ಕೀರ್ತಿ ಪಡೆದಿರುವಾಗ, ಅವಳ ವಂಶದ ಸೊಸೆಯಾದ ನನಗೆ ಕುಲ ಮರ್ಯಾದೆ ಗಿಂತ ನನ್ನ ಮಗಳೇನು ಹೆಚ್ಚಲ್ಲ.

ಬಿಕ್ಷುಕ—ತಾಯಿ ನಿನ್ನ ಮಾತುಗಳನ್ನು ಕೇಳಿದರೇ, ನೀನು ಬಾಳಿಬದುಕಿದ ಬಳಗದವಳೆಂದು ಕಾಣುವೆ. ನೀನಾರಮನೆಯ ಮಗಳಮ್ಮ?

ಕೆಂಪಮ್ಮ—ಬೆಂಗಳೂರು ಕೆಂಪೇಗೌಡರ ಮನೆಯ ಸೊಸೆ. ಕೆಂಪವೀರೇಗೌಡರ ಪತ್ನಿ. ಪಾಪಿಯಾದ ನನ್ನನ್ನು ಕೆಂಪಮ್ಮನೆಂದು ಕರೆಯುವರು.

ಬಿಕ್ಷುಕ—ಭೈರವನ ಕೃಪೆಯಿಂದ ಭವಿಷ್ಯದಲ್ಲಿ ಭವ್ಯನಗರವಾಗುವುದೆಂದು ತಿಳಿದು, ಭದ್ರವಾದ ಅಸ್ತಿಭಾರದ ಮೇಲೆ ಕಲ್ಯಾಣ ನಗರವನ್ನು ನಿರ್ಮಿಸಿದ ಕೆಂಪೇಗೌಡ! ಭಗವದ್ಭಕ್ತಿಪರಾಯಣ ಬೆಂಗಳೂರು ಕೆಂಪೇಗೌಡ! ನೀನು ಅವನ ವಂಶದ ಸೊಸೆಯೇ? ಅಮ್ಮಾ! ನೀನು ಮಹಾ ಪುಣ್ಯಶೀಲೆ. ನಿನ್ನ ಕರುಣಾರ್ದ್ರಹೃದಯವು ದೇವತಾ ಸದೃಷವಾದುದು. ನಿನ್ನ ಈ ವರ್ತನೆಯು ಭಗವಂತನಿಗೆ ಪ್ರಿಯವೆನಿಸಿರುವುದು. ಅದರ ಕೀರ್ತಿಯು ಸೂರ್ಯ ಚಂದ್ರರಿರುವವರೆಗೂ ಉಳಿದಿರುವುದು.

ಕೆಂಪಮ್ಮ—ಸ್ವಾಮಿ ತಮ್ಮ ವಾಕ್ಯಗಳು ದೈವ ವಾಕ್ಯಗಳಾಗಲಿ.

ಬಿಕ್ಷುಕ—ದೈವ ವಾಕ್ಯಗಳೆಂದೇ ತಿಳಿದುಕೊಳ್ಳಮ್ಮ. ಹೋಗು ಇದುವರೆಗಿನ ಕಷ್ಟದ ದಿನಗಳು ಕಳೆದುವು. ಮುಂದಿನ ನಿನ್ನ ದಿನಗಳೆಲ್ಲಾ ಭಾಗ್ಯದ ದಿನಗಳು. ಹೋಗಿಬಾಮ್ಮ, ಹೋಗುವಾಗ ಹಾಗೇ ಹೋಗಬೇಡ- ಭಿಕ್ಷುಕನ ಕೈಯಿಂದಲೂ ಏನಾದರು ಪ್ರಸಾದವನ್ನು ತೆಗೆದುಕೊಂಡು ಹೋಗಮ್ಮ

ಕೆಂಪಮ್ಮ—ಆಗಲಿ ಸ್ವಾಮಿ ಕೊಡಿ.

(ಬಿಕ್ಷುಕನು ಕಾಳನ್ನು ಕೊಡುವನು)

ಕೆಂಪಮ್ಮ—(ಆಶ್ಚರ್ಯದಿಂದ ನೋಡುತ್ತ) ಇದೇನು ಹುರಿದ ಹುರುಳಿ ಕಾಳು!

ಬಿಕ್ಷುಕ—ಹುರುಳೀ ಕಾಳಲ್ಲಮ್ಮ, ನಿಮ್ಮ ವಂಶವನ್ನೇ ದುಃಖ ಸಂಕಟಗಳಿಂದಲೂ, ಶತ್ರು ಬಾಧೆಯಿಂದಲೂ ರಕ್ಷಿಸಿ ನಿಮಗೆ ಸುಖ ಸಂತೋಷಗಳನ್ನು ಅನುಗ್ರಹಿಸುವ ಕಲ್ಪ ವೃಕ್ಷದ ಬೀಜಗಳು. ಇಂದಿಗೆ ಎರಡು ವರ್ಷಗಳ ಹಿಂದೆ ನನ್ನ ಒಬ್ಬ ಭಕ್ತನು ಹಸಿದಿದ್ದಾಗ ಅವನ ತಾಯಿ

ಅವನಿಗೆ ಕೊಟ್ಟಿದ್ದ ಹುರುಳೀ ಕಾಳನ್ನು ತಾನು ತಿನ್ನದೆ ನನಗೆ ಕೊಟ್ಟನು. ನಾನು ಆ ಕಾಳನ್ನು ದೇವ ದೇವನಾದ ರಂಗನಾಥನಿಗೆ ಅರ್ಪಿಸಿದೆನು. ಇದುವರೆವಿಗೂ ರಂಗನಾಥನು ತನ್ನ ಬಳಿಯಲ್ಲಿಟ್ಟಿದ್ದು, ಈ ದಿನ ನಿನಗೆ ಕಳುಹಿಸಿ ಕೊಟ್ಟಿರುತ್ತಾನಮ್ಮ. ತೆಗೆದುಕೊಂಡು ಹೋಗು.

ಕೆಂಪಮ್ಮ—ಎರಡು ವರ್ಷಗಳ ಹಿಂದೆ ಹಸಿದಿದ್ದಾಗ ಕೊಟ್ಟಿದ್ದ ಹುರುಳೀ ಕಾಳು! ಸ್ವಾಮಿ, ಆ ಭಕ್ತನಾರು? ಆತನ ಹೆಸರೇನು?

ಬಿಕ್ಷುಕ—ಅವನ ಹೆಸರು....ಕೆಂಪಣ್ಣನೆಂದಿರಬಹುದು.

ಕೆಂಪಮ್ಮ—ಧನ್ಯ ಕೆಂಪಣ್ಣ! ಧನ್ಯ ಕೆಂಪಣ್ಣ!

ಬಿಕ್ಷುಕ—ಯಾಕಮ್ಮ ಅವನು ನಿನಗೇನಾಗಬೇಕು?

ಕೆಂಪಮ್ಮ—ಅವನು ನನ್ನ ಮಗ ಸ್ವಾಮಿ.

ಬಿಕ್ಷುಕ—ಆಹ! ಏನು ಪುಣ್ಯವತಿಯಮ್ಮ ನೀನು? ಅಂತಹ ಉದಾರಿಯೂ ತ್ಯಾಗಿಯೂ ವೀರನೂ ಆದ ಪುತ್ರನನ್ನು ಪಡೆದು ನೀನು ನಿನ್ನ ಜನ್ಮವನ್ನು ಪುನೀತಗೊಳಿಸಿಕೊಂಡೆ. ಆದರೆ ತಾಯಿ ಕೆಂಪಣ್ಣನನ್ನು ಬಹುಹೆಚ್ಚಿನ ಜಗುರೂಕತೆಯಿಂದ ನೋಡಿಕೊಂಡಿರು. ಅವನೊಂದು ಜಗತ್ತಿನ ಅಪೂರ್ವ ವಸ್ತು.

ಕೆಂಪಮ್ಮ—ಸ್ವಾಮಿ ತಾವು ಯಾರೋ ನನಗೆ ತಿಳಿಯದು. ಆದರೂ ತಾವು ಮಹಾತ್ಮರು, ನನ್ನ ಪುತ್ರನನ್ನು ಆಶೀರ್ವದಿಸಿ ಕಾಪಾಡಬೇಕು ಸ್ವಾಮಿ (ಕಾಲಿಗೆ ಬಿಳುವಳು)

ಬಿಕ್ಷುಕ—ಏಳಮ್ಮ, ಅವನ ರಕ್ಷಣಾಭಾರವನ್ನು ರಂಗನಾಥನೆ ನೋಡಿಕೊಂಡಿದ್ದಾನೆ. ತಾಯಿಗೆ ತಕ್ಕ ಮಗ. ಮಗನಿಗೆ ತಕ್ಕ ತಾಯಿ, ಸೃಷ್ಟಿಯ ಎರಡು ಅಪೂರ್ವ ವಸ್ತುಗಳು.

ದೃಶ್ಯ—೧೫
ವನ

(ಲಿಂಗಾಂಬೆ ಜವರೇಗೌಡ ಮರಕ್ಕೆ ಕಟ್ಟಲ್ಪಟ್ಟಿರುವರು. ವೀರೇಗೌಡನು ತನ್ನ ಇಬ್ಬರು ಅನುಯಾಯಿಗಳೊಂದಿಗೆ ಚಾಟಿಯನ್ನು ಹಿಡಿದು ನಿಂತಿರುವನು)

ವೀರೇಗೌಡ—ನೋಡಿದೆಯ ದುರಹಂಕಾರಿ ಜವರೇಗೌಡ; ಈ ವೀರೇಗೌಡನ ಪ್ರತಾಪವೆಂತಹುದು ಎಂಬುದನ್ನು ಕಣ್ಣಾರ ನೋಡಿದೆಯ? ನಿನ್ನಂತೆ ಈ ವೀರೇಗೌಡನಿಗೆ ಇದಿರಾದವರು ಕೊನೆಗೆ ಹಣ್ಣಾಗಿ ಈ ಪಾದಗಳ ಮೇಲೆ ಬಿದ್ದು ಉರುಳಾಡಿಹೋದರು. ಇನ್ನು ನೀನೆಷ್ಟರವನು?

ಜವರೇಗೌಡ—ಥೂ ನೀಚ! ಚಂಡಾಲ! ದುರಾತ್ಮ! ನೀನು ವೀರನೆ? ನೀನು ಪರಾಕ್ರಮಿಯೆ? ದಾರಿಯಲ್ಲಿ ಹೋಗುತ್ತಿರುವಾಗ ಸಶಸ್ತ್ರ ಪುಂಡರ ಗುಂಪನ್ನು ತಂದು ಬಂಧಿಸುವುದು ಪರಾಕ್ರಮಿಯ ಲಕ್ಷಣವೇ? ಸತ್ಕುಲದಲ್ಲಿ ಹುಟ್ಟಿದ ಶೀಲ ಸಂಪನ್ನೆಯಾದ ಒಕ್ಕಲು ಮಗಳನ್ನು ಈ ರೀತಿ ತಂದು ಮರಕ್ಕೆ ಕಟ್ಟಿ, ಬಹಿರಂಗವಾಗಿ ಅಪಮಾನಗೊಳಿಸುತ್ತಿರುವ ನೀನು ವೀರನೇ? ಅಯ್ಯೋ ನಿರ್ಲಜ್ಜ! ವೀರರ ಮನೆಯಂಗಳದ ಕಸವನ್ನು ಬಾಚಲೂ ಯೋಗ್ಯತೆ ಇಲ್ಲದ ನರಾಧಮ! ನಿನ್ನ ವೀರತ್ವಕ್ಕೆ ಧಿಕ್ಕಾರವಿರಲಿ! ಧಿಕ್ಕಾರವಿರಲಿ!

ವೀರೇಗೌಡ—ಅಯ್ಯೋ ಪರಿಜ್ಞಾನವಿಲ್ಲದ ಮರುಳೆ! ಕೈಲಾಗದ ಹೇಡಿಯೆ! ನಿನ್ನ ಆಕ್ಷೇಪಣೆಗೆ ಬೆಲೆಯನ್ನು ಕೊಡುವವರಾರು? ನೀನೊಂದು ನಾಯಿ. ನಿನ್ನ ನಾಲಿಗೆಯನ್ನು ಎಷ್ಟುದ್ದ ಬೇಕಾದರೂ ನೀಡಿಕೋ. ಹೇಗೆ ಬೇಕಾದರೂ ಅರಚಿಕೋ. ನನಗೆ ಅದರ ಪರಿವೆಯೇ ಇಲ್ಲ. ನಮ್ಮ ಪರಾಕ್ರಮವನ್ನು ನಮ್ಮ ನಾಯಕನಾದ ಬೈರಪ್ಪ ಬಲ್ಲನು. ನಮಗೆ ಕಾಣಿಕೆಯನ್ನು ತಂದೊಪ್ಪಿಸುತ್ತಿರುವ ಸುತ್ತ ಮುತ್ತಿನ ಗ್ರಾಮಗಳ ಜನರು ಬಲ್ಲರು. ಪಾಪ ನೀನೇನು ಬಲ್ಲೆ? ಅದಿರಲಿ ಈಗಲಾದರೂ ಹೇಳು. ಬೈರಪ್ಪನಿಗೆ ನಿನ್ನ ಮಗಳನ್ನು ಕೊಟ್ಟು, ಗೌರವದಿಂದ ಬಾಳಲು ದಾರಿಮಾಡಿಕೊಳ್ಳುವೆಯೋ ಇಲ್ಲವೋ? ಯೋಚನೆ ಮಾಡಿ ಹೇಳು.

ಜವರೇಗೌಡ—ಏನಂದೇ? ನನ್ನ ಮಗಳನ್ನು ಬೈರಪ್ಪನಿಗೆ ಕೊಡಬೇಕೇ? ಎಲಾ ನೀಚ! ಬಲವಂತಕ್ಕೊಳಗಾಗಿ ಸಮ್ಮತಿಸುವನೆಂದು ಭಾವಿಸಿರುವೆಯಾ? ನಿಮ್ಮಂಥ ಅಜ್ಞಾನಿಗಳ, ನೀಚರ, ಪಾಪಿಷ್ಟರ ನಾಯಕನಿಗೆ ಸತ್ಕುಲ ಪ್ರಸೂತೆಯಾದ ಕನ್ಯೆಯನ್ನು ಕೊಡುವೆನೇ? ಅಂತಹ ನೀಚ ಕಾರ್ಯವನ್ನು ಮಾಡುವುದಕ್ಕಿಂತ ಮುಗ್ಗಿಡಿದುಕೊಂಡು ನೀರಿನಲ್ಲಿ ಮುಣುಗಿ ಪ್ರಾಣ ಬಿಡುವುದು ಮೇಲೆಂದು ಭಾವಿಸಿರುವೆನು.

ವೀರೇಗೌಡ—ಆಗಲಿ, ಈ ಒಣ ಅಹಂಕಾರವು ಎಷ್ಟೊತ್ತಿನವರೆಗೆ ಉಳಿದೀತು ಜವರೇಗೌಡ! ವಿವೇಕವನ್ನು ಮನಸ್ಸಿಗೆ ತಂದುಕೊಂಡು ಸರಿಯಾಗಿ ಕಣ್ಣು ಬಿಟ್ಟು ನನ್ನನ್ನು ನೋಡು. ಈಗ ನೀನು ಸಂಪೂರ್ಣವಾಗಿ ನನ್ನ ಹಿಡಿತಕ್ಕೆ ಸಿಕ್ಕಿರುವೆ. ನಿನ್ನ ಪ್ರಾಣ ನನ್ನ ಉರುಲಿನ ಕುಣಿಕೆಯಲ್ಲಿ ಸಿಕ್ಕಿಕೊಂಡಿರುವುದು ನಾನು ಬಯಸಿದರೆ ನಿನ್ನನ್ನು ಝುರ್ಝುರಿತ ಶರೀರಯನ್ನಾಗಿ ಮಾಡಬಲ್ಲೆನು. ನಿನ್ನ ದೇಹವನ್ನು ಛಿದ್ರ ಛಿದ್ರಗೊಳಿಸಿ ನಾಯಿನರಿಗಳಿಗೆ ಹಂಚಬಲ್ಲೆನು. ಈಗಲಾದರೂ ಹೇಳು, ಬಾಳಲು ಅನುಕೂಲವಾದ ಅಭಿಪ್ರಾಯಗಳನ್ನು ಹೇಳು.

ಜವರೇಗೌಡ—ನಾನು ನಿಜವಾದ ಒಕ್ಕಲಿಗನ ಮಗನಿದ್ದೇನೆ ವೀರೆಗೌಡ! ನಿನ್ನ ಈ ಪೊಳ್ಳು ಬೆದರಿಕೆಗಳಿಗೆ ಈ ಶುಷ್ಕ ಭಯ ಭೀತಿಗಳಿಗೆ ಅಳುಕುವವನು ನಾನಲ್ಲ. ಬೇಕಾದರೆ ನನಗೆ ನೀನು ನರಕ ಸದೃಷವಾದ ಯಾತನೆಗಳನ್ನು ಕೊಡು. ನನ್ನ ದೇಹದ ರಕ್ತವನ್ನು ಪ್ರವಾಹದಂತೆ ಹರಿಸಿಬಿಡು. ಗದಾ ಪ್ರಹಾರಗಳಿಂದ ನನ್ನ ಮೂಳೆ ಮೂಳೆಗಳನ್ನೆಲ್ಲಾ ಪುಡಿ ಪುಡಿ ಮಾಡಿಬಿಡು. ಇಷ್ಟಾದರೂ ನಿಮ್ಮಂತಹ ನೀಚರಿಗೆ ಮಗಳನ್ನು ಕೊಡಲು ನಾನು ಒಪ್ಪುವನಲ್ಲ. ಅಷ್ಟೇ ಅಲ್ಲ, ನಿಮ್ಮಂತಹ ಪಾಪಾತ್ಮರ ಮುಖದಮೇಲೆ ತಿರಸ್ಕಾರದಿಂದ ಥೂ ಎಂದು ಉಗುಳುವವನೂ ಅಲ್ಲ.

ವೀರೇಗೌಡ—ಮುಚ್ಚು ಬಾಯ್ (ಎರಡೇಟು ಕೊಡುವನು)

ಲಿಂಗಾಂಬೆ—ಅಪ್ಪಾ, ಅಪ್ಪಾ, (ಕೂಗಿಕೊಳ್ಳುವಳು)

ಜವರೇಗೌಡ—ಒಕ್ಕಲು ಮಗಳಾಗಿ ಬೆದರುವೆಯಾ? ಧೈರ್ಯಗೆಡುವೆಯಾ? ದೇವ ದೇವನಾದ ರಂಗನಾಥನನ್ನು ನಂಬಿರುವ ಶೀಲವಂತರೂ, ನೀತಿವಂತರೂ, ಕಷ್ಟ ಸಹಿಷ್ಣುಗಳೂ ಆದ ನಮ್ಮ ಮೇಲೆ ದುಷ್ಟ ಶಕ್ತಿಗಳು ಪರ್ವತಗಳಂತೆ ಏರಿ ಬರಲಿ, ಘನ ಘೋರ ಘರ್ಜನೆಯಿಂದ ಸಿಡಿದು ನಮ್ಮನ್ನು ತುಳಿದು ಪಪಾತಕ್ಕೆ ತಳ್ಳಿಬಿಡಲಿ, ಪ್ರಳಯ ಸದೃಶವಾದ ವಿನಾಶ ವರ್ಷವೇ ನಮ್ಮ ಮೇಲೆ ಸುರಿದು, ನಮ್ಮನ್ನು ವಿಧ್ವಂಸಗೊಳಿಸಿ ಬಿಡಲಿ. ಆದರೆ ಮಗಳೇ ಎಚ್ಚರಿಕೆ! ಪಾಪಾತ್ಮರನ್ನು ಪ್ರತಿಭಟಿಸಿ ನಿಲ್ಲುವಾಗ, ನಮ್ಮ ಬಾಯಿಂದ ಹಾ ಹಾ ಕಾರವು ಮಾತ್ರ ಹೊರ ಬೀಳದಿರಲಿ. ಸಹನ ಶೀಲೆಯಾಗು ಮಗಳೇ! ಸಹನ ಶೀಲೆಯಾಗು. ದೇವ ದೇವನೂ ವಿಶ್ವ ವಿಧಾಯಕನೂ ಆದ ರಂಗನಾಥನು ಕಾಪಾಡುವನು.

ವೀರೆಗೌಡ—ರಂಗನಾಥನು ಕಾಪಾಡುವನು, ನಿನ್ನ ರಂಗನಾಥನು ಕಾಪಾಡುವನು. (ನಗುವನು) ಅಯ್ಯೋ ಅವಿವೇಕಿ. ಈಗ ರಂಗನಾಥನು ಮಾತ್ರವಲ್ಲ, ತ್ರಿಮೂರ್ತಿಗಳೇ ಒಟ್ಟಾಗಿ ಬಂದರೂ ನಿಮ್ಮನ್ನು ನನ್ನ ಬಂಧನದಿಂದ ಬಿಡಿಸಲಾರರು. ನಾನು ಬಯಸಿದ್ಧರೆ ನಿಮ್ಮಿಬ್ಬರನ್ನು ಹಿಸುಕಿ ಪುಡಿಮಾಡಿ ಉಫ಼್ಫೆಂದು ಊದಿ ಬಿಡಬಲ್ಲೆನು. (ಲಿಂಗಾಂಬೆಯನ್ನು ನೋಡಿ) ಹೇಳು, ಮುಂದೆ ಬಾಳಿ ಬದುಕಬೇಕಾದವಳು ನೀನು. ಯೋಗ್ಯ ನಿರ್ಧಾರಕ್ಕೆ ಬಂದು ನಿನ್ನ ಅಭಿಪ್ರಾಯವನ್ನು ಹೇಳು. ನಿನ್ನ ತಂದೆಯಂತೆ ಒಣಛಲವನ್ನು ಸಾಧಿಸಲು ಯತ್ನಿಸಬೇಡ. ಬೈರಪ್ಪನನ್ನು ಮದುವೆಯಾಗುವೆಯಾದರೆ ಮಹಾರಾಣಿಯಂತೆ ಮೆರೆಯುವೆ. ಇಲ್ಲದಿದ್ದರೆ ಬೈರಪ್ಪನ ಮನೆಯ ತೊತ್ತಾಗಿ ಕೊಳೆಯುವೇ. ಹೇಳು, ಬೈರಪ್ಪನನ್ನು ವಿವಾಹವಾಗಲು ಸಮ್ಮತಿಸುವೆಯಾ ?

ಲಿಂಗಾಂಬೆ—ಥೂ ನೀಚ! ನಾನು ಶೀಲ ಸಂಪನ್ನಳೂ, ಸತ್ಕುಲ ಪ್ರಸೂತಳೂ, ಸತ್ಯ ಧರ್ಮನಿಷ್ಠಳೂ ಆದ ಒಕ್ಕಲು ಮಗಳು, ನಿನ್ನ ಬೆದರಿಕೆಯಿಂದ ಚಕಿತಳಾಗುವವಳಲ್ಲ. ಕಷ್ಟ ಪರಂಪರೆಗಳು ಎಷ್ಟೇ ಉಗ್ರವಾಗಲಿ. ತೀಕ್ಷ್ಣಬಾಣ ಸಮೂಹಗಳಂತೆ ವಹಿಲವೇಗದಿಂದ ಬಂದು,

ನನ್ನ ತನುವನ್ನೆಲ್ಲಾ ಛಿದ್ರ ಛಿದ್ರಗೊಳಿಸಿಬಿಡಲಿ. ಆದರೆ ನನ್ನ ಚಿತ್ತ ಸ್ಥೈರ್ಯವು ಕಂಪಿಸಲಾರದೆಂದು ತಿಳಿ. ಬೈರಪ್ಪನಿಗೆ ನಾನು ವಿವಾಹ ವಾಗಲು ಸಮ್ಮತಿಸುವುದಂತಿರಲಿ, ನನ್ನ ಎಡಗಾಲಿನ ಧೂಳು ಕೂಡ ಸಮ್ಮತಿಸಲಾರದು

ವೀರೇಗೌಡ—(ನಗುತ್ತ) ಒಂದೇ ಏಟಿಗೆ ಒಡೆದು ನುಚ್ಚು ನೂರಾಗಿ ಹೋಗುವ ಮಣ್ಣಿನ ಪಾತ್ರೆಯೇ, ನಿನ್ನ ಧ್ವನಿಯು ಎಷ್ಟು ಬಿರು ಸಾಗಿದೆ? ಆದರೆ ತಿಳಿದುಕೋ. ಇದುವರೆವಿಗೆ ನಿಮ್ಮೆಲ್ಲರ ಮನಸ್ವೀ ವಚನಗಳನ್ನು ಕೇಳುತ್ತಿದ್ದ ನನ್ನ ಸಹನೆಯು ಮೀರಿ ಹೋಗಿದೆ. ಈಗ ನಾನು ಯಾವುದೇ ಕಾರಣದಿಂದಲೂ ನಿಮ್ಮಿಬ್ಬರ ಬಾಯಿಗಳಿಂದ ಬರುವ ಉಗ್ರವಾಕ್ಯವನ್ನು ಕೇಳಲು ಸಿದ್ಧನಾಗಿಲ್ಲ. (ಜವರೇಗೌಡನ ಕಡೆಗೆ ತಿರುಗಿ) ನನ್ನ ಕೊನೆಯ ಎಚ್ಚರಿಕೆಯನ್ನು ಗಮನಿಸು ಜವರೇಗೌಡ! ಈಗ ನೀನು ಬೈರಪ್ಪನಿಗೆ ಮಗಳನ್ನು ಕೊಡಲು ಒಪ್ಪದೇ ಹೋದರೇ, ನಿನ್ನನ್ನು ಇಲ್ಲಿಯೇ ಸುಟ್ಟು, ಇವಳನ್ನು ಎಳೆದು ಕೊಂಡುಹೋಗಿ, ಬೈರಪ್ಪನ ಪಾದಗಳ ಮೇಲೆ ಕೆಡಹುವೆನು. ನಿಮ್ಮಿ ಬ್ಬರಿಗೂ ಯೋಚಿಸಲು ಹೋರಿ ನೀರು ಕುಡಿಯುವಷ್ಟು ಕಾಲವನ್ನು ಕೊಟ್ಟಿರುತ್ತೇನೆ.

(ಅನಂತರ ವೀರೇಗೌಡನೂ, ಅನುಯಾಯಿಗಳೂ ಕುಳಿತುಕೊಂಡು ಮದ್ಯ ಪಾನ ಮಾಡುವರು. ಲಿಂಗಾಂಬೆ ರಂಗನಾಥನನ್ನು ಪ್ರಾರ್ಥಿಸುವಳು.)

ವೀರೇಗೌಡ—(ತೂರಾಡಿಕೊಂಡು ಮೇಲಕ್ಕೆದ್ದು) ಹೇಳು ಜವರೇಗೌಡ, ಈಗ ನಿನ್ನ ತೀರ್ಮಾನವೇನು?

ಜವರೇಗೌಡ—ಇಲ್ಲ, ಏನೆ ಬಂದರೂ ನಾನು ಬೈರಪ್ಪನಿಗೆ ಮಗಳನ್ನು ಕೊಡಲು ಸಿದ್ಧನಿಲ್ಲ.

ವೀರೇಗೌಡ—(ಲಿಂಗಾಂಬೆಯ ಕಡೆಗೆ ತಿರುಗಿ) ನೀನೇನು ಹೇಳುವೆ?

ಲಿಂಗಾಂಬೆ—ಇಲ್ಲ, ಸಾಧ್ಯವಿಲ್ಲ.

ವೀರೇಗೌಡ—ಮುಂದಿನ ಪರಿಣಾಮಕ್ಕೆ ಸಿದ್ಧರಾಗಿ ಅಯೋಗ್ಯರೇ, ಲಕ್ಕೇ ಗೌಡ, ಹುಲ್ಲನ್ನೂ ಬೆರಣಿಯನ್ನು ಕಾಡಿನ ಸೌದೆಯನ್ನು ತಂದು, ಈ ಅಯೋಗ್ಯನನ್ನು ಇಲ್ಲಿಯೇ ಸುಟ್ಟುಬಿಡು. ಮಾಟೀಗೌಡ, ನೀವು ಈ

ಹುಡುಗಿಯನ್ನು ಎಳೆದುಕೊಂಡು ನಡೆಯಿರಿ. (ಲಿಂಗಾಂಬೆಯನ್ನು ಎಳೆದುಕೊಂಡು ಹೊರಡುವರು)

ಲಿಂಗಾಂಬೆ—ಅಪ್ಪಾ! ಅಪ್ಪಾ! (ಕೂಗಿ ಕೊಳ್ಳುವಳು)

ಜವರೇಗೌಡ—ಮಗಳೇ! ಲಿಂಗಾಂಬೆ! ಮಗಳೇ! ಮಗಳೇ!

ಲಿಂಗಾಂಬೆ—ಬಿಡೀ ದುಷ್ಟರೇ, ನಾನು ಬರುವುದಿಲ್ಲ ಬಿಡಿ. ನಾನು ಬರೋದಿಲ್ಲ ಬಿಡಿ. ಅಪ್ಪಾ! ಅಪ್ಪಾ! (ಕೂಗುವಳು. ಜವರೇಗೌಡ ತಲೆಯನ್ನು ತಗ್ಗಿಸುವನು.)

(ಕೆಂಪಣ್ಣನೂ, ಮಲ್ಲ, ಮಲ್ಲಿ, ಪ್ರವೇಶಿಸಿ ವೀರೇಗೌಡನ ಮೇಲೂ, ಅವನ ಕಡೆಯುವರ ಮೇಲೂ ಬಿದ್ದು ಹೋರಾಡುವರು. ಮಲ್ಲಿ ಲಿಂಗಾಂಬೆಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚುವಳು. ಲಿಂಗಾಂಬೆ ಜವರೇಗೌಡರಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚುವಳು. ಜವರೇಗೌಡರೂ ಎಲ್ಲರೊಡನೆ ಸೇರಿಕೊಂಡು ವೀರೇಗೌಡನ ಕಡೆಯವರಿಗೆ ಹೊಡೆಯುವರು ದುಷ್ಟರು ಪೆಟ್ಟುತಿಂದು ಉರುಳುವರು.)

ಕೆಂಪೇಗೌಡ—ಎಲ್ಲರೂ ಮಲಗಿದರು. ಇನ್ನು ಇವರಿಗೆ ಪ್ರಜ್ಞೆ ಬರಬೇಕಾದರೆ, ಎರಡು ಘಂಟೆಗಳ ಕಾಲಬೇಕು.

ಜವರೇಗೌಡ—ತರುಣ ವೀರಾ! ನೀನೂ ನಿನ್ನ ಕಡೆಯವರೂ ಬಾರದಿದ್ದರೆ, ನಮ್ಮ ಪಾಡೇನಾಗುತ್ತಿತ್ತೋ, ಭಗವಂತನೇ ಬಲ್ಲ. ನಿನಗೆ ನಮ್ಮ ವಂಶವೇ ಚಿರಋಣಿಯಾಗಿದೆ. ನೀನು ಯಾರು? ನಿನ್ನ ತಂದೆ ತಾಯಿಗಳಾರು? ನಿಮ್ಮ ಸ್ಥಳ ಯಾವುದು? ನಿನ್ನ ಜೊತೆಯಲ್ಲಿ ಬಂದಿರುವ ಇವರಿಬ್ಬರು ಯಾರು? ದಯವಿಟ್ಟು ನಿನ್ನ ಮತ್ತು ಇವರೆಲ್ಲರ ಪರಿಚಯ ಲಾಭವನ್ನು ಮಾಡಿಕೊಡು?

(ಕೆಂಪಣ್ಣ ಸುಮ್ಮನೆ ನಿಲ್ಲುವನು.)

ಮಲ್ಲ—ಅದ್ಯಾಕ್ ಕೆಂಪಣ್ಣ! ದ್ಯಾವ್ರಂಗೆ ಮಾತಾಡ್ದೆ ಸುಂಕೆ ನಿಂತ್ಬುಟ್ಟಿದ್ದೀಯ? ಸಾವ್ಮ್ಯೋರು ಒಂದೇ ಸಮ್ನೆ ಕೇಳ್ತಾವ್ರೇ. ಏಳ್ಬುಡು ನಿಮ್ಮಪ್ನೆಸ್ರೂ ನಿಮ್ಮಮ್ನೆಸ್ರೂ ನೀನು ಉಟ್ಟೆದ್ದು ಬೆಳ್ದಿದ್ದು ಮನೆ ಕೇರಿ ಎಲ್ಲಾ ಏಳ್ಬುಡು. ನೋಡಿ ಸಾಮಿ, ನಮ್ ಪೈಕೀಗೆಲ್ಲಾ ಇವ್ನೇ ಸೂರಾ........

ಕೆಂಪೇಗೌಡ—ಮಲ್ಲ! (ಬಾಯನ್ನು ಮುಚ್ಚಿ!) ಈಗ ನಮ್ಮ ಪರಿಚಯದಿಂದ ನಿಮಗಾಗಬೇಕಾದ ಪ್ರಯೋಜನವೇನು! ಹೇಗೂ ನಾವು

ಬಂದುದರಿಂದ ನಿಮ್ಮ ಆಗತ್ಯದಲ್ಲಿ ಸ್ವಲ್ಪ ಸಹಾಯವಾಯಿತಲ್ಲಾ! ಅಷ್ಟೇ ಸಾಕು, ನಡೀ ಮಲ್ಲಣ್ಣ.

ಮಲ್ಲ—ಒಟೇಸ್ಸೆ ಅಂತೀಯ? ಓಗ್ಲಿಬುಡು ಬಾ ಓಗಾನ. ತೋಟಕ್ಕೆ ದನಾ ಬಂದ್ಗಿಂದಾವು.

(**ಕೆಂಪಣ್ಣ, ಮಲ್ಲ, ಮಲ್ಲಿ ಹೊರಟು ಹೋಗುವರು**)

ಜವರೇಗೌಡ—ವೀರನೇನೋ ಹೌದು. ಆದರೆ ಮಹಾ ದುರಹಂಕಾರಿ, ತನ್ನ ಪರಿಚಯವನ್ನೇ ಹೇಳದೆ ಹೋದನಲ್ಲ!

ಲಿಂಗಾಂಬೆ—ದುರಹಂಕಾರಿ ಯಲ್ಲಪ್ಪ, ನಿಜವಾದ ವೀರ. ಪ್ರಪಂಚದಲ್ಲಿ ಇತರರ ಸಾಹಸ ಕೃತ್ಯಗಳ ಮೇಲೆ, ತಮ್ಮ ಮೀಸೆಯನ್ನು ತಿರುವುತ್ತ ತಮ್ಮನ್ನು ತಾವೇ ಹೊಗಳಿಕೊಳ್ಳುವವರೂ ಇದ್ದಾರೆ. ಆದರೆ ತಾವೇ ಎಷ್ಟೋ ಸಾಹಸ ಕಾರ್ಯಗಳನ್ನು ನಡೆಸಿದ್ದರೂ, ಮಹತ್ಪ್ರಯತ್ನ ಗಳನ್ನು ಸಾಧಿಸಿದ್ದರೂ ಹೊಗಳಿಕೊಳ್ಳಲೂ, ಹೊಗಳಿಸಿಕೊಳ್ಳಲೂ ಒಪ್ಪದ ಇಂತಹ ವೀರರೂ ಇದ್ದಾರೆ. ಏನು ಧೈರ್ಯ! ಏನು ಸಾಹಸ! ಎಂತಹ ಸುಂದರವಾದ ಮುಖಮುದ್ರೆ! ಎಂತಹ ಬಲಿಷ್ಠ ವಾದ ಮೈ ಕಟ್ಟು! ಅಬ್ಬ! (ಕೆಂಪಣ್ಣನು ಹೋದ ಕಡೆಯೇ ನೋಡು ತ್ತಿರುವಳು).

ಜವರೇಗೌಡ—(ಲಿಂಗಾಂಬೆಯ ಕಡೆ ನೋಡಿ ಅರ್ಥಮಾಡಿಕೊಂಡವನಂತೆ ನಗುತ್ತ) ನಡಿಯಮ್ಮಾ, ಹೋಗೋಣ ಊರು ಇನ್ನೂ ಬಹಳ ದೂರವಿದೆ. ಪುನಃ ಆದುಷ್ಟರು ಬಂದಾರು.

ಲಿಂಗಾಂಬೆ—ಬಂದರೆ ನಮ್ಮನ್ನೇನು ಮಾಡಿಯಾರಪ್ಪಾ! ಈಗ ಕಾಪಾಡಿದಂತೆ ಯೇ ಮುಂದೆಯೂ ರಂಗನಾಥನು ಕಾಪಾಡುವನು.

ವಿರಾಮ

ದೃಶ್ಯ ೧೬
ತೋಟದ ದೃಶ್ಯ

ಮಲ್ಲ—(ಹಾಡು) ವನಿತೆಯ ವನದೊಳು ನೋಡಾಲೂ ಬಂದಾನು ಲಂಕೆಯ ರಾವಣಾನು.... ಮಾತಾಡದಿರುವ ಸೀತವ್ವನಾ ಕಂಡು ಮಂಕಾಗಿ ಹೊರ ಜ್ಹೋದನು. ತಕ್ಕ ತಕ ತಕ್ಕ ಧಿಮ್ಮಿ ಧಿಮಿ ಧಿಮ್ಮಿ (ಎಂದು ಕುಣಿಯುತ್ತಿರುವನು) ಅಲೇ ಇವ್ಳು. ಏಟೇಳದ್ರೂ ದಿನಾಗ್ಲೂ ಇಂಗೆಮಾಡ್ತಾವ್ಳಲ್ಲಾ! ಗೂಳೀನಾ ಗೌರೀನಾ ಅಂಗೇ ಬುಟ್ಬುಟ್ಟೂ ಊ ತರಾಕ್ ಒಂಟ್ಬುಟ್ಟಾವ್ಳಲ್ಲಾ? ಅದೇನ್ ಇವ್ಳಾಗೇ ಊ ಮ್ಯಾಗ್ ಓಟಾಸೇನೋ. ಪಟೇಲ್ರು ಕಂಡ್ರೇ ಸುಮ್ಕಿರ್ತಾರಾ? ಬೆಂಕೀ ಆಗ್ಬುಟ್ಟಾರು. ಲೇ ಮಲ್ಲೀ! ಒಡ್ಕೋಳೇ ಗೌರೀನಾ ಇಂದ್ಕೇ. ಇತ್ಲಿಗ್ ನುಗ್ಗಾಕೋಯ್ತ್ತೈತೇ. ಪಟೇಲ್ರು ಕಂಡ್ರೇ ನಂಗೇ ಒಂದೇ ಸಮ್ಕೇ ಸದ್ಬುಟ್ಟಾರು.

ಮಲ್ಲಿ—ಊ ತರಾಕ್ ಓಗಿದ್ನೋ ಮಲ್ಲಾ. ಗೂಳೀನಾ, ಗೌರೀನಾ ನೀನೇ ವಸಿ ಅಂಗೇ ನೋಡ್ಕೋಳಾಕಾಗಾಕಿಲ್ವಾ? ನೀ ಯಾಕಿರಾದು?

ಮಲ್ಲ—ನಾ ಇರಾದು ನಿನ್ ದನಾಕಾಯಾಕೇನ್ಲೇ? ನಂಗೇ ನೀ ಏನಾರಾ ಕೂಲೀಗೀಲೀ ಕೊಟ್ಟಿಟ್ಟಿದ್ಯೋ ಎಂಗೇ? ಜೀತಾಗೇಯಾದು ಪಟೇಲ್ರಮನ್ಯಾಗೇ, ನಿನ್ ಮನ್ಯಾಗಲ್ಲಾ. ತಿಳ್ಕೋ, ಇನ್ಮ್ಯಾಕೇ ನಂತಾವಾ ಇಂಗೆಲ್ಲಾ ನಡಿಯಾಕಿಲ್ಲಾ.

ಮಲ್ಲಿ—ಓಟೇನಾ?

ಮಲ್ಲ—ಓಟೇ.

ಮಲ್ಲಿ—ಅಂಗಾದ್ರೇ ಓಟೇ ಸೈ ಬುಡು. ನಾನಿಂಗ್ ಬ್ಯಾಡಾ ಅಂದಾಗಾಯ್ತೂ. (ಹೊರಡುವಂತೆ ನಟಿಸುವಳು)

ಮಲ್ಲ—ಅಂ! ಅಂ! ಏನಂದೇ? ಲೇ! ಲೇ! ಮಲ್ಲಿ! ವಸಿ ಇತ್ಕಡೀಕೇ ನೋಡು, (ಮಲ್ಲಿ ತಿರುಗಿ ನಿಲ್ಲುವಳು) ಏನ್ಲೇ, ಈಟೇಟ್ ಮಾತ್ಗೆಲ್ಲಾ ಸಿಟ್ಮಾಡ್ಕೋಬುಡ್ತೈಲ್ಲಾ? ನೀನಂಗ್ ಬ್ಯಾಡಾ ಅಂತಾ ಯಾವಾಗ್ಲಾರ ನಾನಂದ್ನಾ ಸಿನ್ನಾ? ನನ್ ಪರಾಣ್ವೇ ನಿನ್ಮ್ಯಾಗೈತೇ?

ಮಲ್ಲಿ—ಅಂಗಾದ್ರೇ ನಿಂಗೇ ಸಾಬೇಕು ನನ್ ದನಾ ಬ್ಯಾಡ್ವಾ?

ಮಲ್ಲ—ಊಂ! ನೀಬೇಕು ಅಂದ್ಮ್ಯಾಕೇ ನಿನ್ ದನಾನೂ ಬೇಕು. ಸುಂಕಿರೂ, ಇನ್ಮ್ಯಾಕೇ ನಿಂಗ್ ಏಟ್ ಊ ಬೇಕಾದ್ರೂ ನಾನೇ ತಂದ್ಕೊಡ್ತೀನಿ. ನಿನ್ ದನಾ ನಾನೇ ನೋಡ್ಕೊಯ್ತೀನಿ. (ಪಕ್ಕಕ್ಕೆ ನೋಡಿ) ಅಗ ಅಗ, ಆ ಗೌರಿ ಮತ್ ನುಗ್ತಾ ಐತೇ. ಏ! ಎಲ ಎಲ, ಏ ಗೌರೀ! ಓಗೇ ಅತ್ಕಡೀಕೆ ಓಗತ್ಕಡೀಕೆ.

ಮಲ್ಲಿ—ಅಕ್ಕೊ, ಕಂಡ್ಯಾ ಮಲ್ಲ! ಗೌರೀ ನಿನ್ ಮಾತ್ ಎಂಗ್ ಕೇಳ್ತೈತೇ? ಸುಮ್ಕೇ ಅತ್ಕಡೀಕೆ ಎಂಗ್ ಒಂಟೋಯ್ತಾ ಐತೇ ಕಂಡ್ಯಾ?

ಮಲ್ಲ—ಗೌರೀ ಏನೋ ಎಳ್ದಾಗ್ ಕೇಳ್ತಾಳೇ, ಆದ್ರೇ ಗಂಗೇನೇ ಕೇಳಾಕಿಲ್ಲಾ.

ಮಲ್ಲಿ—ಆದ್ಯಾವಳ್ಳಾ ಆ ಗಂಗೇ ನಿನ್ ಮಾತ್ ಕೇಳ್ದಂಗಿರೋಳು?

ಮಲ್ಲ—ಎದ್ರಿಗೇ ನಿಂತೌಳಲ್ಲಾ ಕೈನಾಗ್ ಊ ಇಡ್ಕೊಂಡು.

ಮಲ್ಲಿ—ಓಟೇನಾ? ಮಲ್ಲ, ನಿನ್ಮಾತ್ ನಾ ಕೇಳಾಕಿಲ್ವಾ? ಅದಾಗ್ರಗೂ ನನ್ ಸಾಮಿಾ ಮಾತ್ ನಾ ಕೇಳಕಿಲ್ವಾ? (ನಿವಾಳಿಸಿ ಕೊಳ್ಳುವಳು) ನಿನ್ ಮಾತ್ ನಾ ಕೇಳ್ದೇ ಬುಟ್ಬುಟ್ರೇ ನಂಗ್ ಗತೀನೇ ಇಲ್ಲಾ. ನೋಡು ಮಲ್ಲ, ಪಟೇಲ್ರೂ ನನ್ಮ್ಯಾಲ್ ಕಣ್ಣಿಟ್ಬುಟ್ಟಾರೇ ನಿನ್ಮಾತ್ ನಾ ಕೇಳ್ದೇ ಇದ್ಬುಟ್ರೇ ನಂಗ್ ಬಾಳೇ ಇಲ್ಲಾ.

ಮಲ್ಲ—ಆಂ! ಕಣ್ಣಿಟ್‌ಬುಟ್ಟಾನಾ! ಅದ್ಯಂಗಂತೀಯಾ?

ಮಲ್ಲಿ—ನಿನ್ನೆ ಬಾವಿಂತಾವಾ ಪದಾಏಳ್ಕೊಂಡು ಬಿಂದ್ಗೇ ಬೆಳಗ್ತಾಕುಂತಿದ್ದೆ, ಇಂದ್ಕಡೀಂದಾ ಪಟೇಲ್ರು ಬಂದೂ ಮಲ್ಲೀ, ನೀನೂ ಚಂದಾ ನಿನ್ ಪದಾನೂ ಚಂದಾ ಅಂತಾ ಇಂಗ್ ಕಣ್‌ಬುಟ್ಬುಟ್ರೂ (ಕಣ್ಣನ್ನು ಆರಳಿಸಿ ತೋರಿಸಿ) ದುರು ದುರಾಂತಾ ನೋಡದ್ರೂ.

ಮಲ್ಲ—ಎಲಾ ಮನೆಹಾಳ! ಆ ಮ್ಯಾಕೇನಾಯ್ತಲ್ಲೇ?

ಮಲ್ಲಿ—ಆ ಮ್ಯಾಕೇ ರಾತ್ರೀನೇ ಮನ್ಯಾಗೆ ಕಾರಸ್ತಾನಾ ನಡೀತಾ ಐತೇ. ಆ ಏನೋರಿಲ್ವಾ ಸಾನ್‌ಬೋಗ್ರೂ, ಔರೂ ನಮ್ಮಯ್ಯನ್ಗೇ ಕರ್ದೂ ಎಂಗೂ ಬೈರಪ್ಪನ್ಗೇ ಕೊಟ್ಬುಡೂ, ಬದಕ್ಕೊಂತಾಳೇ, ನಾನೂ

ಏಳಿನ್ನಿ, ಸಾಲಾನೂ ಬುಟ್ಬುಡ್ತಾನೇ ಕೈತುಂಬಾ ತೆರಾನೂ ಕಟ್ಕೊಡ್ತಾನೇ ಅಂತಾ ಬುದ್ವಾದಾ ಏಳದ್ರಂತೇ. ಅದ್ಕೇ ನಮ್ಮಯ್ಯಾನೂ ಕಿವಿ ಸಡ್ಲಾ ಬುಟ್ಬುಟ್ವಾನೇ. ಕೊಟ್ಬೇಬುಡ್ತೀನಿ. ಏನಾರಾ ಆಗ್ಲುಬಡ್ಲೀ ಅಂತಾ ಏಳ್ತಾನೇ!

ಮಲ್ಲ—ಆಂ! ಒನ್ನಲ್ಗಿ ಮಾವಾ ಅಂಗೇಳ್ತಾನಾ? (ತೂರಾಡುವುದಕ್ಕಾರಂಭಿಸುವನು)

ಮಲ್ಲಿ—(ಗಾಬರಿಯಿಂದ) ಮಲ್ಲ! ಮಲ್ಲ!

ಮಲ್ಲ—ವಸಿ ತಡೀ ಮಲ್ಲಿ, ನಂಗ್ ತಲೇ ಸುತ್ ಬಂದ್‌ಬುಟ್ಬೈತೇ. (ತಲೆಗೆ ಕೈ ಹೊತ್ತಿ ಕುಳಿತು ಕೊಳ್ಳುವನು)

ಮಲ್ಲಿ—ಇದೇನ್ ಮಲ್ಲಾ, ನೀನೇ ಇಂಗ್ ಎಸ್ನಾ ಮಾಡ್ಕೊಂಡ್ ಕುಂತ್ಬುಟ್ಟಿದ್ರ್ಯಾ? ಏನಾರಪಾಯ ಉಡ್ಕೀ ನಂಗ್ ದಡಾಮುಟ್ಸೊ. ಇಲ್ದಿದ್ರೇ ನಾನ್ ಬಾವಿಂಗೋ ಒಳೀಗೋ ಬಿದ್ದು ಜೀವಾ ತಕ್ಕೊಳ್ಳೀ ಬುಡ್ತೀನಿ.

ಮಲ್ಲ—ಆಂ! ಆಂ! ಅಂಗ್ ಮಾಡ್ಕೋಬ್ಯಾಡಾ, ಅಂಗ್ ಮಾಡ್ಕೋಬ್ಯಾಡಾ. ನಾನೂ ಇರೋ ಬುದ್ದೀನೆಲ್ಲಾ ಒಮ್ಮಾಕೇ ಪಣಾ ಕಟ್ಟಿ, ಏನಾರಾ ಮಾಡಿ ಒಂದ್‌ಪಾಯಾ ಉಡ್ಕೀ ತಗ್ದೇಬುಡ್ತಿನಿ. ಅದೇನಾರಾ ಕೈಕೊಟ್ರೇ ನೋಡ್ ಮಲ್ಲೀ, ನಾನೂ ನಿನ್ನಿಂದೇನೇ ಒಳೀಗೋ ಬಾವೀಂಗೋ ಬಿದ್ದು ಜೀವಾ ತಕ್ಕೊಳ್ಳೀಬುಡ್ತೀನಿ. (ಪಕ್ಕಕ್ಕೆ ತಿರುಗಿ ನೋಡಿ) ಅಗ ಅಗ, ಅ ಗೌರೀನೂ, ಗೂಳೀನೂ ಬೇಲಿ ಮುರ್ಕೊಂಡು, ಇತ್ಲ ಒಳಿಕ್ಕೇ ನುಗ್ ಬಂದ್ಬುಟ್ವೂ. ಓಡ್ಸಲೇ ರವಸ್ಟ ಓಡ್ಸಲೇ, (ಒಳಗಿನಿಂದ ಶಬ್ದ) ಹೋಯ್ತುಲ್ಲೋ, ಹಂಬೆಲ್ಲಾ ಹಾಳಾಗ್ಹೋಯ್ತುಲ್ಲೋ, ಯಾರ್ಮನೇವೋ ಆ ಹಾಳ್ ದನಗಳೂ?

ಮಲ್ಲ—ಮಲ್ಲಿ, ಬೈರಪ್ಪ ಬತ್ತೌನೇ. ನೀಸಿಲ್ಲೇ ಪದಾಯೇಳ್ತಾ ಕುಂತಿರೂ. ನಾನ್ಯಾಸಾಕಟ್ಕೋ ಬಂದ್ ಎದ್ರುಸ್ತೀನಿ (ಪಕ್ಕಕ್ಕೆ ತಿರುಗಿ) ಲೇ ಪಟೀಲಪ್ಪ, ಒಂಗೇ ಮರದ್ ಬೀದಿ ಹನುಮಪ್ಪನ ಗರಡಿ ವಸ್ತಾದಿ ಹನುಮೇಗೌಡ್ರ ಮರಿ ಮಲ್ಲಣ್ಣ ಅಂದ್ರೇ ಏನ್ ತಿಳ್ಕೋ

ಬುಟ್ಟಿದ್ದೀಯಾ? ಮಾರೀ ಗುಡೀಗ್ ಬಲೀಕೊಟ್ಟೇನೂ. ಕಣ್ಲೇ ಮಾರಿಗುಡೀಗ್ ಬಲೀಕೊಟ್ಟೇನು. (ಹೋಗುವನು)

ಬೈರಪ್ಪ—(ಪ್ರವೇಶಿಸುತ್ತ) ಯಾರ್ಮನೇವೋ ಆ ಹಾಳ್ ದನಗಳೂ? ಹೋಯ್ತುಲ್ಲೋ? ತೋಟಾಯೆಲ್ಲಾ ನೆಗದ್‌ಬಿಡ್ಹೋಯ್ತುಲ್ಲೋ?

ಮಲ್ಲಿ—(ಹಾಡುತ್ತಿರುವಳು) ದೂರ ನಿಲ್ಲಿತ್ತ ಬರಬೇಡವೋ ಬರಬೇಡವೋ। ಘೋರ ಅಡವೀಯೊಳಗೆ ನಾರೀ ಸಣ್ಣೋಳು ನಾನು ॥

ಬೈರಪ್ಪ—(ಸಮೀಪಕ್ಕೆ ಬಂದು) ಆ ಹಾ ಹಾ ಹಾ! ಮಲ್ಲಿ ಏನ್ ಚೆನ್ನಾಗಿ ಪದಾ ಹೇಳ್ತೀಯೇ? ನೀನೆಷ್ಟು ಚಂದಾಗಿದ್ದೀಯೋ, ನಿನ್ ಪದ್ವೂ ಅಷ್ಟೇ ಚಂದಾ.

ಮಲ್ಲಿ—ಅಯ್ಯೋ ಬುಡ್ರೀ, ನನ್ದೇನ್ ಚಂದಾ, ನನ್ ಪದ್ವೇನ್ ಚಂದಾ? ಮನ್ನೇ ನಮ್ಮೂರ್ನಾಗೇ ಆ ಲಂಕಾದಾನದ ವ್ಯಾಳಾ ಆಡ್ಲಿಲ್ವಾ? ಆ ಸೀತವ್ವ ಯಾಸದೌರು ಅಂತಿದ್ ಪದಾ ಕಲ್ತ್‌ಕೋಬುಟ್ಟಿದ್ದೇ. ಅಂಗೇ ಗ್ಯಾಂಪ್ಕಾ ಬಂತೂ. ಅಂತಾ ಕುಂತಿದ್ದೇ ಓಟೇ.

ಬೈರಪ್ಪ—ಹೌದ್ ಮಲ್ಲೀ, ನೀನ್ ನಿಜ್ವಾಗ್ಲೂ ಸೀತವ್ವಾ ಇದ್ವಾಗೇ ಇದ್ದೀಯಾ.

ಮಲ್ಲಿ—ಅಯ್ಯೋ ಬುಡ್ರೀ ಅದ್ಯಾಕಂಗಂತೀರಾ? ಇನ್ನೇಸ್ ಜನ್ಮಾ ಎತ್ತಿದ್ರೇ ನಾನ್ ಆ ಮಾತ್ಯಾ ಅಂಗಾದೇನೂ? ಆ ನನ್‌ತ್ಯಾ ಪಾದ್ವೇಗತಿ.

ಬೈರಪ್ಪ—ಅದಿರ್ಲೀ ಮಲ್ಲಿ ಪತೀ ಬರ್ತಾನೇ ಅಂತಾ ಪದಾ ಹೇಳ್ತಿದ್ದಲ್ಲಾ, ನಿಮ್ಮಪ್ಪ ನಿನ್ಗ್ ಲಗ್ನಾ ಯಾವಾಗ ಮಾಡ್ತಾನೇ? ನಿನ್ ಪತಿ ಯಾವಾಗ್ ಬರ್ತಾನೇ?

ಮಲ್ಲಿ—ಅಯ್ಯಪ್ಪಿ, ಅ ದೆ ಲ್ಲಾ ನಂಗೇನ್ರಿ ಗೊತ್ತೈತೇ? ನಮ್ಮಂತಾ ಬಡೌರ್ಗೇ ಲಗ್ನಾ ಅಂದ್ರೇ........

ಬೈರಪ್ಪ—ಅದ್ಯಾಕ್ ಮಲ್ಲಿ ಹಾಗ್ಹೇಳ್ತೀ? ನಿನ್ಗೇನೂ ಲಗ್ನಾ ಆಗೌರೂ ಯಾರೂ ಇಲ್ಲಾ ಅಂತಾ ತಿಳ್ಕೋಬಿಟ್ಟೇನೂ? ಬೇಕಾದಷ್ಟು ಜನಾ ಇದ್ದಾರೇ. ಹೆದರ್ಬ್ಯಾಡಾ. ನಿನ್ಗ್ ಪತೀನೂ ಸಿಗ್ತಾನೇ. ಹಾಗಂತಾ ಮಲ್ಲೀ, ಆ ದಿನ ಕೆರೆ ದಾರೀಲಿ ನಿನ್ನ ನಾನ್ ಮಾತಾಡಸ್ಲಿಲ್ವೇ? ಮನೇಲೇನೋ ಕೆಲ್ಸಾಯಿದೇ ಅಂತಾ ಹೇಳಿ ನೀನ್ ಹೊರ್ಟ್‌ಬಿಟ್ಟೆ.

ನಿನ್ಗ್ ಒಂದ್ವಿಚಾರಾ ತಿಳ್ಸೋದಿತ್ತೂ. ಈಗದಕ್ಕೊಳ್ಳೇ ಔಕಾಶಾ ಸಿಕ್ತೂ. ಯಾರ್ಹತ್ರಾನೂ ಬಾಯ್ಬಿಡ್ದಿದ್ರೇ ಹೇಳ್ತೀನ್ ನೋಡು.

ಮಲ್ಲಿ—ಅಯ್ಯೊ ಏಳ್ರೀ ಅದ್ಕೇನೂ? ನಾ ಏನ್ ನಿಮ್ಗ್ ದುರ್ದೋರೀಳಾ? ನಾಯಾರ್ ಕುಟ್ಟೇನೂ ಬಾಯ್ಬಿಡಾಕಿಲ್ಲಾ ಏಳಿ.

ಬೈರಪ—ನೋಡು ಮಲ್ಲಿ, ಯಾಗ್ಹತ್ರಾನೂ ಹೇಳ್ಬ್ಯಾಡಾ. ನಿನ್ಮೇಲೆ ನನ್ಗೇ ಬಹ್ಳಾ....ಬಹ್ಳಾ....

ಮಲ್ಲಿ—ಊಂ. ಊಂ, ಏಳಿ, ಏಳಿ.

ಬೈರಪ್ಪ—ನೋಡು ಮಲ್ಲಿ. ನಿನ್ ಮೇಲೆ ನನ್ಗೇ ಬಹ್ಳಾ....ಬಹ್ಳಾ....ಪ್ರೀತಿ ಹುಟ್ಬಿಡ್ತೂ ಮಲ್ಲಿ—

ಮಲ್ಲ—ಆಂ! ಪಿರೀತಿ ಉಟ್ಬುಡ್ತಾ? ನನ್ಮ್ಯಾಕೇ? ಇದೇನ್ ಪಟೇಲ್ರೇ ದೊಡ್ಡೋರಾಗಿ ನಂತಾವ್ ಇಂಗೆಲ್ಲಾ ಮಾತಾಡ್ತೀರಲ್ಲಾ, ನಿಮ್ಗೇ ನಾಚ್ಕೇ ಆಗಾಕಿಲ್ವಾ?

ಬೈರಪ್ಪ—ನಾಚ್ಕೇ? (ವ್ಯಂಗವಾಗಿ ನಗುತ್ತ) ಅಯ್ಯೋ ಹುಚ್ಚಿ, ನಾಚ್ಕೇಗೂ ಗಂಡ್ಸರ್ಗೂ ಏನೇ ಸಂಬಂಧಾ? ನಾಚ್ಕೇ ಇರ್ಬೇಕಾದ್ದೂ ಹೆಂಗ್ಸರ್ಗೇ ಗಂಡ್ಸರ್ಗಲ್ಲಾ ತಿಳೀತೇ?

ಮಲ್ಲಿ—ಅಂಗಾದ್ರೇ ಗಂಡ್ಸರೆಲ್ಲಾ ನಾಚ್ಕೇ ಬುಟ್ಬುಟ್ಟೌರೇ ಅನ್ನಿ.

ಬೈರಪ—ಇದ್ರೇ ಅಲ್ವೇನೇ ಬಿಡೋದೂ? ಇಲ್ನೋಡು, ನಾಚ್ಕೇಗೀಚ್ಕೇ ವಿಚಾರಾ ಇರ್ಲೀ, ಬಾ ಮನೇಗ್ಹೋಗೋಣಾ. ಇನ್ನೂ ಹೇಳ್ಬೇಕಾದ್ ಗುಟ್ಟಿನ ವಿಚಾರಾ ಬಹ್ಳಾ ಇದೆ.

ಮಲ್ಲಿ—ನೀವೇಳಾದೂ ಬೇಕಿಲ್ಲಾ. ನಾ ಕೇಳಾದೂ ಬೇಕಿಲ್ಲಾ. ನಾ ನಿಮ್ಮನೇಗ್ ಬರಾಕಿಲ್ಲಾ,

ಬೈರಪ್ಪ—ಅಲೇ ಇರ್ಲಿ ಬಾರೇ, ಏನಾದ್ರೂ ಕೊಟ್ಟೇನಂತೇ (ಕೈ ಹಿಡಿದು ಕೊಳ್ಳಲು ಹೋಗುವನು)

ಮಲ್ಲಿ—ಬ್ಯಾಡಾ, ನೀವೇನೂ ನಂಗೆ ಕೊಡಾದ್ ಬೇಕಿಲ್ಲ. ನನ್ ಕೈ ಇಡೀ ಬ್ಯಾಡಿ. ನಾ ಕೂಕ್ಕೊಳ್ತೀನಿ. ಕೈ ಕಚ್ಬುಡ್ತೀನಿ.

(ಬೈರಪ್ಪ ಮಲ್ಲಿಯ ಕೈಹಿಡಿದುಕೊಳ್ಳುವನು-ಮಲ್ಲಿ ಕೂಗಿ ಕೊಳ್ಳುವಳು)

ಮಲ್ಲಿ—ಆಯ್ಯೋ ದ್ಯಾವ್ರೇ, ನನ್ನಾಪಾಡಪ್ಪಾ! ನನ್ ಮರ್ವಾದೇ ಉಳ್ಸಪ್ಪಾ!

ಬೈರಪ್ಪ—ಇಲ್ಲೆಲ್ಲೇ ದೇವ್ರಿದ್ದಾನೇ! ಸುಮ್ನೇ ಯಾಕ್ಕೂಗ್ಕೋತ್ಯಾ? ಔನೆಲ್ಲ ಬರ್ತಾನೇ? ಕಣ್ಬಿಟ್ ನೋಡು. ನಿನ್ದೇವ್ರು ನಿನ್ನೆದುರ್ಗೇ ನಿಂತಿದ್ದಾನೆ.

ಮಲ್ಲಿ—(ಕೈ ಜಗ್ಗಿಸುತ್ತ) ಬುಟ್ಬುಡೀ. ಆ ವ್ಯಾಕೇ ನಾ ಸುಂಕಿರೋ ಎಣ್ಣಲ್ಲಾ. ನನ್ ಕೈ ಬುಟ್ಬುಡೀ.

ಬೈರಪ್ಪ—ನಾನ್ ಹಿಡ್ದಿದ್ ಕೈನಾ ಇದುವರೆಗೆ ಬಿಟ್ಟವ್ನೇ ಅಲ್ಲಾ. ಯಾಕ್ಕಿರಚ್ಕೋತ್ಯಾ? ನನ್ನತ್ರಾ ನಿನ್ದೇನೂ ನಡಿಯೋದಿಲ್ಲಾ. ನಾನ್ಹೇಳ್ದಂಗ್ ಕೇಳು. ನಿನ್ಗೆ ಬೇಕ್ಬೇಕಾದ್ದೂ ಸಿಗುತ್ತೇ. ಮರ್ಯಾದೇನೂ ಉಳ್ಕೋಳುತ್ತೇ.

ಮಲ್ಲಿ—ಥೂ ನೀಚ! ಬಿಡೂ ನನ್ ಕೈ. ಅಯ್ಯೋ ದ್ಯಾವ್ರೇ! ನನ್ನಾಪಾಡಪ್ಪಾ! ನನ್ನಾಪಾಡಪ್ಪಾ!

(ಮಲ್ಲಣ್ಣ ದೆವ್ವದ ವೇಷದಲ್ಲಿ ಬಂದು ಬೈರಪ್ಪನನ್ನು ಕಟ್ಟಹಾಕುವನು. ಮಲ್ಲಿ ಓಡಿಹೋಗುವಳು.)

ಬೈರಪ್ಪ—(ನರಳುತ್ತ ಪಕ್ಕಕ್ಕೆ ತಿರುಗಿ) ಕೆಂಪಣ್ಣಾ! ಕೆಂಪಣ್ಣಾ! (ಕೂಗುವನು)

ಕೆಂಪಣ್ಣ—(ಪ್ರವೇಶಿಸಿ) ಏನ್ ಪಟೇಲ್ರೇ? ಯಾಕ್ಕರದ್ರೀ? ಇದೇನೂ?

ಬೈರಪ್ಪ—ಸ್ವಲ್ಪ ಬಿಚ್ಚಪ್ಪ ಹೇಳ್ತಿನಿ.

ಕೆಂಪಣ್ಣ—(ಬಿಚ್ಚುತ್ತ) ಬಹ್ಳಾ ಆಶ್ಚರ್ಯಾ. ಬಹ್ಳಾ ಆಶ್ಚರ್ಯಾ ನಿಮ್ಮಂಥೌರ್ನಾ ಕಟ್ಹಾಕೋದಂದ್ರೇನು ಪಟೇಲ್ರೆ? (ಬಿಚ್ಚುವನು)

ಬೈರಪ್ಪ—ಏನ್ಹೇಳ್ಲಪ್ಪಾ, ಎರ್ಡ್ ವರ್ಷದಿಂದಾನೂ ತೋಟ್ದಮ್ಮನ್ಗೇ ಹರ್ಕೆ ಒಪ್ಪಿಸ್ಲಿಲ್ಲಾ. ಈ ದಿನ್ವೇ ದೇವೀಗೆ ಕೋಪಾ ಬಂದ್ಬಿಡ್ಬೇಕೇ? ರೋಷದಿಂದ ಬಂದ್ ಕಟ್ಹಾಕ್ಬೋಗ್ಬಿಟ್ಳೂ. ಬರ್ತೀನಪ್ಪಾ, ಛಳೀ ಬರೋ ಹಾಗಾಗ್ತಾಯಿದೆ. ಹೋಗಿ ಮಲಕ್ಕೋತೀನಿ. ಏನ್ಮಾಡೋದು ಗ್ರಹಚಾರ (ಹೋಗುವನು)

ಕೆಂಪಣ್ಣ—(ಅವನು ಹೋದ ಕಡೆಯೇ ನೋಡುತ್ತ) ನಿಮ್ಮಂಥೌರ್ಗೆ ತೋಟದ ಮಾರಮ್ಮಾ ಶಿಕ್ಷೇ ಕೊಡ್ದೇಯಿದ್ರೇ ಇನ್ಯಾರ್ ಕೊಡ್ಬೇಕಾಗುತ್ತೇ. ಸರಿಯಾದ ಶಾಸ್ತೀನೇ ಆಗಿದೇ ಅಂತಾ ಕಾಣ್ಸುತ್ತೇ. ಭೂಪ ನಡ್‌ಗ್ಹೋಗ್ಬಿಟ್ಟದ್ದಾನೇ. ಎಂಥಾ ದೇವ್ರೋ ಅಂಥಾ ಪೂಜೆ.

ದೃಶ್ಯ—೧೭

ರಸ್ತೆಯ ದೃಶ್ಯ

ದೆವ್ವದ ವೇಶದಲ್ಲಿ ಮಲ್ಲಣ್ಣನೂ, ಮತ್ತು ಮಲ್ಲಿ ಪ್ರವೇಶಿಸುವರು.

ಮಲ್ಲಿ—ತಾಯಿ ನಮ್ಮವ್ವ, ತೋಟದಮ್ಮ, ನಿನ್ನ ಕಾಲಿಗೆ ಬಿದ್ದನವ್ವಾ.

ಮಲ್ಲ—ಎಲೌ ಭಕ್ತೆ ನಿನಗೆ ಮಂಗಳವಾಗಲಿ. ಮೇಲೆಕ್ಕೇಳು.

ಮಲ್ಲಿ—ಮಲ್ಲ ಬೈರಪ್ಪ ಬಂದ. (ಹೆದರಿಸುವಳು)

ಮಲ್ಲ—(ಗಾಬರಿಯಾಗಿ) ಎಲ್ ಬಂದ? (ಎಂದು ವೇಶ ಕಿತ್ತಾಕಿ, ಓಡುವನು)

ಮಲ್ಲಿ—(ಹಿಡಿದು ನಿಲ್ಲಿಸಿ) ಅಲ್ಲೋ ಮಲ್ಲ. ನಾನು ಸುಮ್ ಸುಮ್ಕೆ ಅಂಗಂದ್ರೆ ಅದಕೇ ಇಷ್ಟ್ ಬೆದರದಲ್ಲೋ ನನ್ ಜಾಣ?

ಮಲ್ಲ—ಆದರು ಬಲು ನಕ್ರಾರದ್ ಹುಡುಗಿ ನೀನು. ನನ್ ದೊಡ್ ಜೀವ್ವೆ ಹಾರೋಗ್ಬುಟ್ಟಿತ್ತು.

ಮಲ್ಲಿ—ಅಲ್ಲ ಮಲ್ಲ, ಯಾಕೀಟ್ ತಡಾ ಮಾಡ್ದೆ ನೀನು? ನನ್ ಜೀವ ದಡಕ್, ದಡಕ್ ಅಂತ ಹೊಡೊಕೋತ ಇತ್ತು.

ಮಲ್ಲ—ಅಲ್ಲೇ, ಯಾಸಾಪೂರ್ತಿಯಾಗ್ ಬೇಕೊ ಬ್ಯಾಡ್ವೋ?

ಮಲ್ಲಿ—ಆ ಮನೆಹಾಳನ ಮಾತ್ ಕೇಳಿ, ನಂಗೇಟ್ ಸಿಟ್ ಬಂದ್ಬುಟ್ಟಿತ್ತು ಅಂತ್ಯಾ? ಆದ್ರೇ ಆಟಾನೇ ಕೊಟ್ಹೋಯ್ತಿತೇ ಅಂತ ಸುಮ್ಕಿದ್ದೆ.

ದೃಶ್ಯ ೧೮

ಪಟೇಲ್ ಬೈರಪ್ಪನ ಮನೆ

ಬೈರಪ್ಪ—ಎಂಥಾ ಅಪಮಾನ! ಪಟೇಲ್ ಬೈರಪ್ಪನಿಗೆ ಅಪಮಾನ! ಪಾಳೈಗಾರ ಬೈರಪ್ಪನಿಗೆ ಅಪಮಾನ! ಮಾಗಡಿ ನಾಡಿನ ಪ್ರಭುವಾಗಲಿರುವ ಬೈರಪ್ಪನಿಗೆ ಅಪಮಾನ' ಜೀವಮಾನದಲ್ಲೇ ಕಾಣಲಿಲ್ಲ ಇದುವರೆಗೆ ಯಾರಿಗೂ ಜಗ್ಗಲಿಲ್ಲ. ಯಾರ ಇದಿರಿನಲ್ಲಿಯೂ ತಲೆಯನ್ನು ತಗ್ಗಿಸಲಿಲ್ಲ. ಯಾರಿಂದಲೂ ಹಿಮ್ಮೆಟ್ಟಲಿಲ್ಲ. ಆದರೆ ಇಂದೇಕೆ ಹೀಗಾಯಿತು? ನನ್ನ ಗ್ರಹಚಾರವೆನ್ನಲೇ? ಯಾರಾದರೂ ಕೇಳಿದರೆ ಏನೆಂದಾರು? ಪಟೇಲ್ ಬೈರಪ್ಪನೆಂದರೇನು? ಅವನ ಸ್ಥಾನಮಾನಗಳೇನು? ಸುತ್ತು ಮುತ್ತಿನ ಪ್ರದೇಶದಲ್ಲಿ ಅವನ ಪ್ರಭಾವವೇನು? ಇಂಥವನು ತನ್ನ ಹಿತ್ತಿಲಿನಲ್ಲಿಯೇ ಮರಕ್ಕೆ ಬಿಗಿಯಲ್ಪಟ್ಟಿದ್ದನೆಂದರೆ, ಜನರ ಇದಿರಿನಲ್ಲಿ ನಾನೆಷ್ಟು ಹಗುರವಾಗಿಹೋದೇನೂ? (ಉಪೇಕ್ಷೆಯಿಂದ) ಹೂಂ, ಏನು ಮಾಡುವುದಕ್ಕಾಗುತ್ತೇ? ತೋಟದಮ್ಮನ ವಿಚಾರದಲ್ಲಿ ನಾನು ಸರಿಯಾಗಿ ನಡೆದುಕೊಳ್ಳದೆ ಹೋದದ್ದು ನನ್ನದೇ ದೊಡ್ಡ ತಪ್ಪು. ಹೇಗಾದರೂ ನನ್‌ಮೇಲೆ ಕೈ ನಡ್ಡಿರೋದಾದ್ರೇ ದೇವತೇದೆ. ನರಪಿಳ್ಳೆ ನನ್ ವಿರುದ್ಧ ಉಸ್ರೆತ್ತೋದಕ್ಸಾಧ್ಯವಿದೆಯೇ? ನರಪಿಳ್ಳೇ ನನ್‌ವಿರುದ್ಧ ಉಸ್ರೆತ್ತೋದಕ್ಸಾಧ್ಯವಿದೆಯೇ? ಹ್ಹ ಹ್ಹ ಹ್ಹ ಹ್ಹ! ಉಸ್ರೆತ್ತೋದಿರ್ಲಿ ಕಣ್ಬಿಟ್‌ನೋಡೋದಕ್ಸಾಧ್ಯವಿದೆಯೇ? (ಮದ್ಯದ ಹೂಜಿಯಿಂದ ಬಟ್ಟಲಿನಲ್ಲಿ ಮದ್ಯವನ್ನು ಸುರಿದುಕೊಂಡು ಕುಡಿದು ತೂರಾಡುತ್ತ) ಯಾವನಾದ್ರೂ ನನ್ನ ಕಣ್ಬಿಟ್ ನೋಡದ್ರೇ ಕಣ್ಣಿನ ಗುಡ್ಡೇ ಕಿತ್ತಾಕ್ಬಿಟ್ಟೇನೂ.ಉಸ್ರೆತ್ತದ್ರೇ ಕತ್ತಿಸ್ಕಹಾಕ್ಬಿಟ್ಟೇನೂ. ಬಾಯ್ಬಿಟ್ರೇ ನಾಲ್ಗೇ ಸೀಳ್ಬಿಟ್ಟೇನೂ. ಬೈರಪ್ಪ ನೀನೇ ಗತಿ ಅಂತಾ ಶರಣಾಗತರಾದೌರ್ಗೆ ಮಾತ್ರ ಸುಮ್ನೇ ಬಿಟ್ಟೇನೂ. ನಾನ್ಯಾರು? ನಾನೇ ಭೀಮ, ನಾನೇ ಅರ್ಜುನ. ಈ ಊರೇ ನನ್ದೂ. ಈ ಸೀಮೇನೇ ನನ್ದೂ. ಈ ಮನೆಯೆಲ್ಲಾ ನನ್ದೂ. ಈ ಮನೆಯೆಲ್ಲಾ ನನ್ದೂ. ಹ್ಹ ಹ್ಹ ಹ್ಹ ಹ್ಹ! ಹ್ಹ ಹ್ಹ ಹ್ಹ ಹ್ಹ!! (ಹಾಸಿಗೆಯ ಮೇಲೆ ಮಲಗಿ

ಕೊಳ್ಳುವನು. ಬೈರಪ್ಪನ ಮೊದಲನೇ ಹೆಂಡತಿ ದೇವ್ವದ ರೂಪಿನಲ್ಲಿ ಪ್ರವೇಶಿಸುವಳು ಬೈರಪ್ಪ ಮಲಗಿರುವಂತೆಯೇ) ಯಾರದೂ? ಯಾರ್ ನನ್ ಅಪ್ಣೇಯಿಲ್ದೇ ಬಂದಿರೋವ್ರು?

ಪ್ರೇತ—ಅಪ್ಪಣೇ? ನಿನ್ನಪ್ಪಣೇ? ನನಗೆ ಯಾರ ಅಪ್ಪಣೆಯ ಅಗತ್ಯವೂ ಇಲ್ಲ. ಇಚ್ಛೆ ಬಂದಾಗ ಬರುತ್ತೇನೆ. ಇಚ್ಛೆಯಿಲ್ಲದಿದ್ದಾಗ ಹೊರಟು ಹೋಗುತ್ತೇನೆ. ನಾನು ಸ್ವತಂತ್ರಳು. ಎಲ್ಲಿ ಬೇಕಾದರೂ ಇರ ಬಲ್ಲವಳು. ನನಗೆ ಯಾರೂ ಬಾ ಎಂದು ಕರೆಯಬೇಕಾಗಿಲ್ಲ. ಹೋಗು ಎಂದು ಕಳಿಸಬೇಕಾಗಿಲ್ಲ. ತಿಳಿಯಿತೇ?

ಬೈರಪ್ಪ—ತೊಲ್ಗೂ ಇಲ್ಲಿಂದಾ. ಮೊದ್ಲು ತೊಲ್ಗೂ ಇಲ್ಲಿಂದಾ. ಇದ್ ನನ್ ಮನೇ. ತಿಳೀತೇ? ಇದ್ ನನ್ ಮನೇ.

ಪ್ರೇತ—ನಿನ್ನ ಮನೇ! ನಿನ್ನ ಮನೇ! ಅಯ್ಯೋ ಅಜ್ಞಾನೀ! ನಿನಗೆ ಷ್ಟೊಂದು ಅಹಂಕಾರ! ಏನು ನಿನ್ನ ಮಮಕಾರ! ಎಂತಹ ಅಹಂ ಭಾವ! ಆಯ್ಯೋ ಅವಿವೇಕಿ! ಇದು ನಿನ್ನ ಮನೆಯೇ? ಬರುವಾಗ ಹೊತ್ತು ತಂದೆಯಾ? ಹೋಗುವಾಗ ಹೊರಿಸಿಕೊಂಡು ಹೋಗು ವೆಯಾ? ಎಲೆ ಮರುಳೇ! ಎರಡು ದಿನ ಆಶ್ರಯವಿತ್ತು ಅನಂತರ ನಿನ್ನನ್ನು ದೂಡಿಬಿಡುವ ಈ ವಿದ್ರೋಹಿ ನೆಲೆಗೆ ನನ್ನ ಮನೆ, ನನ್ನ ಮನೆಯೆಂದು ಭ್ರಮೆಪಡುವೆಯಾ?

ಬೈರಪ್ಪ—ಯಾರು ನೀನು? ಬಾಯಿಗೆ ಬಂದಂತೆ ಹರಟುತ್ತಿರುವೇ? ಯಾರು? ನೀನ್ಯಾರು?

ಪ್ರೇತ—ಆಯ್ಯೋ ಮೂಢಾ! ನಾನಾರೆಂಬುದು ನಿನಗಿನ್ನೂ ತಿಳಿಯ ಲಿಲ್ಲವೇ? ಧ್ವನಿಯಿಂದಲೂ ಗುರುತು ಹತ್ತಲಿಲ್ಲವೇ? ಕಣ್ಣು ಬಿಟ್ಟು ನೋಡು. ಚನ್ನಾಗಿ ನೋಡು. ನಾನು ಚನ್ನಮ್ಮ. ನೀನು ಪ್ರೀತಿ ಯಿಂದ ಕರೆಯುತ್ತಿದ್ದ ಚನ್ನಿ. ನಿನ್ನ ಮೊದಲನೇ ಹೆಂಡತಿ.

ಬೈರಪ್ಪ—(ಅರ್ಧ ಮೇಲಕ್ಕೆದ್ದು) ಹಾಂ! ಹಾಂ! ನೀನ್ ಸತ್ಹೋಗಿಲ್ವೇ? ನೀನ್ ಸತ್ಹೋಗಿಲ್ವೇ? ಮತ್ತಿನ್ ಹ್ಯಾಗ್ ಬಂದೇ ಇಲ್ಲಿಗೇ? ಮತ್ತಿನ್ ಹ್ಯಾಗ್ ಬಂದೇ ಇಲ್ಲಿಗೇ? ಹೋಗ್ಬಿಡೂ. ಇಲ್ ನಿಲ್ ಬ್ಯಾಡಾ ಹೋಗ್ಬಿಡೂ, ಹೊರ್ಟ್‌ಹೋಗ್ಬಿಡೂ.

ಪ್ರೇತ—ಹೋಗಲೇ? ಹೊರಟು ಹೋಗಲೇ? ಎಲ್ಲಿಗೆ ಹೋಗಲಿ? ಯಾರಲ್ಲಿ ಹೋಗಲಿ? ಪರಲೋಕದಲ್ಲಿ ನನಗೆ ಸ್ಥಾನವಿದೆಯೇ? ನಾನು ಆಯುಷ್ಯ ತೀರಿ ಸತ್ತಿರುವೆನೇ? ಅಯ್ಯೋ ಪಾಪಿ! ನಮ್ಮ ತಂದೆಯು ನಿನ್ನ ದುರಾಚಾರಗಳನ್ನೂ,ದುರ್ಗುಣಗಳನ್ನೂ ಅರಿಯದೆ, ನಿನ್ನ ಐಶ್ವರ್ಯಕ್ಕೆ ಮರುಳಾಗಿ ನನ್ನನ್ನು ನಿನಗೆ ಕೊಟ್ಟು ವಿವಾಹ ಮಾಡಿದನು. ಆದರೆ ನೀನು ಕುಡುಕನು. ವ್ಯಭಿಚಾರಿಯು ಕ್ರೂರಿಯು, ದುರಾಚಾರಿಯು. ನೀನು ನನ್ನನ್ನು ಅಸಹ್ಯ ವಚನ ಗಳಿಂದ ಬೈದೆ. ಮೂಳೆಗಳು ಮುರಿದು ಹೋಗುವಂತೆ ಹೊಡೆದೆ. ನಿನ್ನ ಮದ್ಯ ಕುಡಿದ ಬಾಯಿಂದ ನನ್ನನ್ನು ಮನಸ್ಸಿಗೆ ಉಗುಳಿದೆ. ನಾನು ನಿನ್ನ ಚಿತ್ರಹಿಂಸೆಗಳನ್ನು ಸಹಿಸಿದೆನು. ಬಹುವಾಗಿ ಸಹಿಸಿ ದೆನು. ಕೊನೆಗೆ ನಿರುಪಾಯಳಾಗಿ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ವನ್ನು ಮಾಡಿಕೊಂಡೆನು. ಅಯ್ಯೋ ಚಂಡಾಲ! ನಿನ್ನ ದೆಸೆಯಿಂದ ನನಗೆ ಪರಲೋಕದಲ್ಲಿಯೂ ಸ್ಥಾನವಿಲ್ಲ. ಈಗ ನಾನು ಈ ನರಲೋಕ ದಲ್ಲಿ ಪ್ರೇತ ಜನ್ಮವನ್ನು ಹೊತ್ತು ತಿರುಗುತ್ತಿದ್ದೇನೆ. ಒಬ್ಬಂಟಿಗಳಾಗಿ ಅಲೆಯುತ್ತಿದ್ದೇನೆ. ನೀನು ನನ್ನ ಕೈ ಹಿಡಿದ ಗಂಡನು. ನಿನ್ನನ್ನು ಬಿಟ್ಟು ನಾನು ಒಂಟಿಯಾಗಿರಲಾರೆ. ಈಗ ನೀನೂ ನನ್ನ ಜೊತೆಗೆ ಬರಲೇಬೇಕಾಗಿದೆ. ಆದ್ದರಿಂದ ಆತ್ಮ ಹತ್ಯವನ್ನು ಮಾಡಿಕೋ. ಮಾಡಿಕೋ. ಬಾ! ಭಾವಿಯಲ್ಲಿ ಹಾರಿಬಿಡು. ಉರುಲಿನ ಕುಣಿಕೆ ಯಲ್ಲಿ ಕೊರಳನ್ನು ಸೇರಿಸಿ ಬಿಡು. ವಿಷವನ್ನು ಕುಡಿದುಬಿಡು. ಅನಂತರ, ಅನಂತರ ಇಬ್ಬರೂ ಸ್ಮಶಾನದಲ್ಲಿ ಚಲ್ಲಾಟವಾಡೋಣ. ಕೆರೆಯಲ್ಲಿ ನೀರಾಟವಾಡೋಣ. ವೃಕ್ಷಗಳ ಮೇಲೆ ಮರಕೋತಿಯಾ ಡೋಣ. ಬಾ! ಬಾ! ತಡಮಾಡಬೇಡ ಬಾ! (ಹಿಂದಿನಿಂದಲೇ ಹೋಗುವಳು)

ಬೈರಪ್ಪ—(ಗಾಬರಿಯಿಂದ) ಇಲ್ಲಾ, ಇಲ್ಲಾ. ನಾನ್ ಬರೋದಿಲ್ಲಾ. ನನ್ನನ್ ಕರೀಬ್ಯಾಡಾ, ಹೋಗ್ಬಿಡೂ, ಹೊರ್ಟ್‌ಹೋಗ್ಬಿಡೂ. (ಕೈಗಳಿಂದ ಮುಖವನ್ನು ಮುಚ್ಚಿಕೊಂಡು) ಅಯ್ಯೋ! ಅಯ್ಯೋ! ಅಯ್ಯೋ! ಅಯ್ಯೋ! (ನಿಧಾನವಾಗಿ ಮುಖದ ಮೇಲಣ ಕೈಗಳನ್ನು

ತೆಗೆದು ಸುತ್ತಲೂ ನೋಡುತ್ತ ಎದೆಯ ಮೇಲೆ ಕೈ ಆಡಿಸುತ್ತ) ಅಬ್ಬಾ! ಏನ್ ಭಯಾನಕವಾದ ದೃಶ್ಯ! ಈಗ್ಲೂ ಮೈಯೆಲ್ಲಾ ನಡಗ್ತಾಯಿದೆ. ಈವತ್ತಿಂದೇನ್ ಗ್ರಹಚಾರದ ದಿನ! ಹಗಲ್ ನೋಡದ್ರೇ ಹಾಗಾಯ್ತೂ. ರಾತ್ರೀ ನೋಡದ್ರೇ ಹೀಗಾಯ್ತೂ. (ಸುತ್ತಲೂ ನೋಡಿ) ಮಲ್ಗಿದ್ ದಿಕ್ಕೆ ಸರಿ ಇಲ್ವೋ ಏನೋ? (ಹಾಸಿಗೆಯನ್ನು ಹಿಂದಕ್ಕೂ ಮುಂದಕ್ಕೂ ಎಳೆದು ಕೊಳ್ಳುವನು. ಹೂಜಿಯಿಂದ ಮದ್ಯವನ್ನು ತೆಗೆದು ಕುಡಿದು ಮಲಗಿಬಿಡುವನು. ಪಕ್ಕದಿಂದ ಎರಡನೇ ಪ್ರೇತವು ಪ್ರವೇಶಿಸುವುದು. ಬೈರಪ್ಪನು ಮಲಗಿರುವಂತೆಯೇ ಗಾಬರಿಯಿಂದ) ಯಾರದೂ? ಯಾರ್ಮನೇಲ್ ಬಂದಿರೋವ್ರು?

ಪ್ರೇತ—ನಾನೂ!!! ನಾನೂ!!!!

ಬೈರಪ್ಪ—(ಮಲಗಿರುವಂತೆಯೇ) ನೀನೂ? ನಿನೂ ಅಂದ್ರೆ ಯಾರೂ?

ಪ್ರೇತ—ಅಷ್ಟೂ ಗೊತ್ತಾಗುವುದಿಲ್ಲವೇ? ನನ್ನ ಪರಿಚಯವು ನಿನಗಿಲ್ಲವೇ? ಧ್ವನಿಯಿಂದಲೂ ಗುರುತು ಹತ್ತುವುದಿಲ್ಲವೇ?

ಬೈರಪ್ಪ—ಇಲ್ಲ, ನಿನ್ನ ಗುರುತು ನನಗಿಲ್ಲ. ನೀನು ಯಾರೋ ಗೊತ್ತಿಲ್ಲ. ಯಾರೋ ಗೊತ್ತಿಲ್ಲ.

ಪ್ರೇತ—ಗೊತ್ತಿಲ್ಲ? ಕಣ್ಬಿಟ್ಟು ನೋಡು, ಚೆನ್ನಾಗಿ ನೋಡು. ನಾನು ಗಂಗಮ್ಮ—ನಿನ್ನ ಪ್ರೀತಿಯ ಗಂಗೂ. ನಿನ್ನ ಎರಡನೇ ಹೆಂಡತಿ.

ಬೈರಪ್ಪ—(ಅರ್ಧ ಮೇಲಕ್ಕೆದ್ದು) ಹಾಂ! ಹಾಂ! ನೀನ್ ಹಳ್ಳದಲ್ಬಿದ್ ಸಾಯ್ಲಿಲ್ವೆ? ಸಾಯ್ಲಿಲ್ವೇ? ಮತ್ತಿನ್ ಹ್ಯಾಗ್ ಬಂದೇ ಇಲ್ಲಿಗೇ? ಮತ್ತಿನ್ ಹ್ಯಾಗ್ ಬಂದೇ ಇಲ್ಲಿಗೇ? ಹೋಗ್ಬಿಡೂ, ಹೊರ್ಟ್ ಹೋಗ್ಬಿಡೂ. ಹೊರ್ಟ್ ಹೋಗ್ಬಿಡೂ.

ಪ್ರೇತ—ಹೋಗಲೇ? ಹೊರಟು ಹೊಗಲೇ? ಎಲ್ಲಿಗೆ ಹೋಗಲಿ? ಯಾರಲ್ಲಿ ಹೋಗಲಿ? ಹೇಗೆ ಹೋಗಲಿ? ನಾನು ಸತ್ತಿರುವೆನಾದರೂ ಪರ ಲೋಕದಲ್ಲಿ ನನಗೆ ಸ್ಥಾನವಿದೆಯೇ? ನಾನು ಆಯುಷ್ಯ ತೀರಿ ಸತ್ತಿರುವೆನೇ? ಅಯ್ಯೋ ಚಂಡಾಲಾ! ನೀನು ಕುಡುಕನೂ, ವಿಷಯಾಸಕ್ತನೂ, ನಿರ್ದಯಿಯೂ ಎಂಬುದನ್ನರಿಯದೆ ನನ್ನ ತಂದೆಯು

ನಿನ್ನ ಮಾತಿಗೂ, ಐಶ್ವರ್ಯಕ್ಕೂ, ಮರುಳಾಗಿ ನನ್ನನ್ನು ನಿನಗೆ ಕೊಟ್ಟು ಮದುವೆಮಾಡಿದನು. ನನ್ನ ದೇಹ ಹೂವಿಗಿಂತಲೂ ಕೋಮಲವಾಗಿತ್ತು. ಅಯ್ಯೋ ನಿಷ್ಕರುಣಿ! ನಿನ್ನ ಅಸಹ್ಯ ವಚನಗಳಿಂದ ನನ್ನ ಕೋಮಲ ಹೃದಯವು ಬಾಡಿತು. ನಿನ್ನ ಹೊಡೆತಗಳಿಂದ ಹೂವಿನಂಥ ಶರೀರವು ಹಣ್ಣಾಯಿತು. ನಿನ್ನ ರಾಕ್ಷಸ ಭೋಗದಿಂದ ನಾನು ಸೊರಗಿಹೋದೆನು. ಕೃಶಳಾದೆನು. ಕೊನೆಗೆ ನಿನ್ನ ಹಿಂಸೆಯನ್ನು ತಡೆಯಲಾರದೆ ಹಳ್ಳಕ್ಕೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡೆನು. ಆ ತಪ್ಪಿಗಾಗಿ ನನಗೆ ಈ ಪಿಶಾಚಿಯ ಜನ್ಮವು ಬಂದಿದೆ. ನಾನು ಈಗ ಒಬ್ಬಂಟಿಗಳಾಗಿ ಅಲೆಯುತ್ತಿದ್ದೇನೆ. ನೀನ ನನ್ನ ಕೈಹಿಡಿದ ಗಂಡನು. ನಿನ್ನನ್ನು ಬಿಟ್ಟು ನಾನು ಒಂಟಿಯಾಗಿರಲಾರೆ. ಈಗ ನೀನೂ ನನ್ನ ಜೊತೆಗೆ ಬರಲೇಬೇಕಾಗಿದೆ. ಆದ್ದರಿಂದ ಆತ್ಮಹತ್ಯವನ್ನು ಮಾಡಿಕೋ. ಮಾಡಿಕೋ ಬಾ, ಭಾವಿಯಲ್ಲಿ ಹಾರಿಬಿಡು. ಕತ್ತಿಗೆ ನೇಣನ್ನು ಬಿಗಿದುಬಿಡು. ವಿಷವನ್ನು ಕುಡಿದುಬಿಡು. ಅಟ್ಟಕ್ಕೆ ಹತ್ತಿ ನೆಗೆದುಬಿಡು. ಮರಕ್ಕೆ ಹತ್ತಿ ಧುಮುಕಿಬಿಡು. ಅನಂತರ ನಾವಿಬ್ಬರೂ ಸೇರಿ ಸ್ಮಶಾನದಲ್ಲಿ ಚಲ್ಲಾಟವಾಡೋಣ. ಕೆರೆಯಲ್ಲಿ ನೀರಾಟವಾಡೋಣ. ವೃಕ್ಷಗಳ ಮೇಲೆ ಮರಕೋತಿಯಾಡೋಣ. ಕುಣಿಯೋಣ, ಕುಪ್ಪಳಿಸೋಣ, ಅರಚೋಣ ಕಿರಚೋಣ. ಬಾ! ಬಾ!

ಎರಡೂ ಕಡೆಯಿಂದಲೂ—ಬಾ! ಬಾ! ಬೇಗ ಬಾ! ಬೇಗ ಬಾ! ಹೂಂ, ಬೇಗ ಬಾ!

ಬೈರಪ್ಪ—(ಎರಡು ಕಡೆಯೂ ಗಾಬರಿಯಿಂದ ಕೈ ಆಡಿಸುತ್ತ) ಇಲ್ಲಾ, ಇಲ್ಲಾ. ನಾನ್ ಬರೋದಿಲ್ಲಾ, ನಾನ್ ಬರೋದಿಲ್ಲಾ. ನನ್ನನ್ ಕರೀಬ್ಯಾಡೀ, ಹೊರ್ಟ್‌ಹೋಗ್ಬಿಡಿ, ಹೊರ್ಟ್‌ಹೋಗ್ಬಿಡೀ. (ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು) ಅಯ್ಯೋ! ಅಯ್ಯೋ! ಅಯ್ಯೋ! (ನಿಧಾನವಾಗಿ ಮುಖದ ಮೇಲಣ ಕೈಗಳನ್ನು ತೆಗೆದು ಸುತ್ತಲೂ ನೋಡಿ ಎದೆಯ ಮೇಲೆ ಕೈ ಆಡಿಸುತ್ತ) ನೀರೂ! ನೀರೂ! ನೀರೂ! ನೀರೂ! (ಸುತ್ತಲೂ ನಿರಾಶೆಯಿಂದ ನೋಡಿ) ಅಯ್ಯೋ! ನೀರ್

ಕೊಡೋದಕ್ಕೂ ಒಬ್ರೂ ಗತಿಯಿಲ್ವೇ! ಗ ತಿ ಯಿ ಲ್ವೆ! ಇಲ್ಲಾ, ಇದ್ದೌರ್ನೆಲ್ಲಾ ನಾನಾಗಿಯೇ ಕ ಳ್ಕೊ ೦ ಡೇ. ನಾನಾಗಿಯೇ ಕಳ್ಕೊಂಡೇ. (ಪುನಃ ಎದೆಯ ಮೇಲೆ ಕೈಯಿಟ್ಟುಕೊಂಡು) ಅಬ್ಬಾ! ಅಬ್ಬಾ! ಏನ್ ಗ್ರಹಚಾರ! ಯಾವತ್ತೂ ಕಾಣ್ದೇ ಇದ್ದಂಥಾ ಅಪಶಕುನಗಳು! ಒಂದರ್ ಹಿಂದೊಂದ್ ಬೇಟೆ ನಾಯ್ಗಳಾಗ್ ಬೆರಸ್ಕೊಂಡ್ ಬರ್ತಾಯಿವೆ. ಏನಾದ್ರೂ ಮರ್ಣಾ ಗಿರ್ಣಾ ಸಮೀಪಿಸಿದೆಯೋ ಏನೋ? ಏನೋ? ಏನೋ? (ಎದ್ದು ಹೂಜಿಯಿಂದ ಮದ್ಯವನ್ನು ಬಗ್ಗಿಸಿಕೊಂಡು ಚನ್ನಾಗಿ ಕುಡಿಯುವನು. ಬಟ್ಟಲನ್ನು ತೆಗೆದು ಬಿಸಾಡುವನು. ಅನಂತರ ದಿಂಬನ್ನು ತೆಗೆದು ಕೆಳಗೆ ಹಾಕಿ ಅದರ ಮೇಲೆ ಹೊದಿಕೆಯನ್ನು ಹಾಸುವನು. ಹಾಸಿಗೆಯನ್ನು ಕಗಲ ಮೇ ಲೆ ಎಳೆದುಕೊಂಡು) ಹೆದ್ರೌರಿದ್ರೇ ಹೆದರ್ಸೌರ್ ಬರ್ತಾ. ಆಳೌರಿದ್ರೇ ಆಳ್ಸೌರ್ ಬರ್ತಾ. ಹೆದರ್ದಿದ್ರೇ, ಅಳ್ದಿದ್ರೇ ಹೆದರ್ಸೌರೂ ಇಲ್ಲ. ಆಳ್ಸೌರೂ ಇಲ್ಲಾ. ದೇವ್ರೇ ಬಂದ್ರೂ ನಾನ್ ಹೆದ್ರೌನಲ್ಲಾ (ಹಾಸಿಗೆಯನ್ನು ಮೈಮೇಲೆ ಎಳೆದುಕೊಂಡು ಮಲಗಿಕೊಳ್ಳುವನು)

ಅನಂತಶಾಸ್ತ್ರಿ—(ಪ್ರವೇಶಿಸಿ) ಪಟೇಲ್ರೇ! ಪಟೇಲ್ರೇ! ಬೈರಪ್ನೌರೇ! ಬೈರಪ್ನೌರೇ!

ಬೈರಪ್ಪ—(ಮಲಗಿರುವಂತೆಯೇ) ಯಾವನೋ ಔನೂ ಕೂಗ್ಕೊತಾಯಿರೋವ್ನೂ!

ಶಾಸ್ತ್ರಿ—ಬೇರೇವ್ನೆ ಯಾವ್ನೂ ಅಲ್ಲಾ ನಾನು ಅನಂತ ಶಾಸ್ತ್ರಿ ಶಾನ್‌ಭೋಗ.

ಬೈರಪ್ಪ—ಊಂ! (ಶಾಸ್ತ್ರಿಗಳನ್ನು ನೋಡಿ) ಊಂ!....ಹೂಂ!....ಶಾಸ್ತ್ರಿಗಳು. ಹೌದು, ಹೌದು, ಶಾಸ್ತ್ರಿಗಳು ಕೂತ್ಕೊಳೀ ಶಾಸ್ತ್ರಿಗಳೇ! ಏನ್ ಇಷ್ಟ್ ರಾತ್ರೀಲಿ ಬಂದ್ರೀ?

ಶಾಸ್ತ್ರಿ—ಈಗ ರಾತ್ರೀನೇ? ಆಗ್ಲೇ ಬೆಳ್ಕ್ ಹರ್ದೂ ದನಾ ಅಟ್ಕೊಂಡ್ ಹೋಗೋ ಹೊತ್ತಾಯ್ತೂ, ನಾನ್ ನಿತ್ಯ ಕರ್ಮಾ ಎಲ್ಲಾ ಮುಗಸ್ಕೊಂಡು ಹಳ್ಳೀಗ್ಹೊರ್ಟಿದ್ದೀನಿ.

ಬೈರಪ್ಪ—ಸುಳ್ಳೂ, ಈ ವಯಸ್ನಲ್ಲಿ ಸುಳ್ ಹೇಳೋದ್ನ ಕಲೀತಿದ್ದೀರಾ ಶಾಸ್ತ್ರಿಗಳೇ. ಇನ್ನೂ ನನ್ ನಿದ್ದೇನೇ ಮುಗ್ದಿಲ್ಲಾ. ಆಗ್ಲೇ ದನಾ ಅಟ್ಕೊಂಡ್ಹೋಗೋ ಹೊತ್ತಾಯ್ತೂ ಅಂತಾ ಸುಳ್ಹೇಳ್ತಿರಾ?

ಶಾಸ್ತ್ರಿ—ಆಗ್ಲೀ, ನಾನೇ ಸುಳ್ ಹೇಳ್ತಾಯಿದ್ದೀನಿ. ನಿಮ್ಮಾತೇ ನಿಜಾ ಆಗ್ಲೀ ನಾನ್ ಹೋಗ್ತೀನಿ. ಹಾಗೇ ಸ್ವಲ್ಪ ಮದ್ವೇ ವಿಚಾರಾ ಹೇಳ್ಬಿಟ್ ಹೋಗೋಣಾ ಅಂತಾ ಬಂದೇ.

ಬೈರಪ್ಪ—ಮದ್ವೇ ವಿಚಾರ? ಯಾರ್ ಮದ್ವೇ? ಯಾರ್ ಮದ್ವೇ ವಿಚಾರಾ?

ಶಾಸ್ತ್ರಿ ಆದೇ ನಿಮ್ಮದ್ವೇ, ನಿಮ್ಮದ್ವೇ ವಿಚಾರ.

ಬೈರಪ್ಪ—ಆಂ; ನನ್ ಮದ್ವೇ! ಯಾರ್ ಜೊತೇಲಿ ನನ್ ಮದ್ವೇ? ಭಾವಿಂಗ್ ಬಿದ್ ಸತ್ಲಲ್ಲಾ ಆ ಚೆನ್ನಿ, ಔಳ್ ಜೊತೇಲೋ? ಇಲ್ದಿದ್ರೇ ಹಳ್ಳಕ್ ಹಾರಿ ಜೀವಾ ಕೊಟ್ಳಲ್ಲಾ ಆ ಗಂಗೂ ಔಳ್ ಜೊತೇಲೋ? ಯಾರ್ ಜೊತೇಲಿ?

ಶಾಸ್ತ್ರಿ—(ಆಶ್ಚರ್ಯದಿಂದ) ಏನಾಶ್ಚರ್ಯ ಇದೂ? ಮಾಡಿದ್ ಪಾಪ ವನ್ನೆಲ್ಲಾ ನಾಲ್ಗೇನುಡಿತಾಯಿದೆಯಲ್ಲಾ? ಅಂತೂ ಏನೋ ವಿಪತ್ ಕಾದಿದೆ. ಶುಕ್ರದೆಸೆ ಕಳೀತಾ ಬಂತೂ. ಇನ್ ಮುಂದಿನ್ ದಿನ ಗಳೆಲ್ಲಾ ಗ್ರಹಚಾರದ ದಿನಗಳೇ.

ಬೈರಪ್ಪ—ಏನ್ ಶಾಸ್ತ್ರಿಗಳೇ? ಏನ್ ಯೊಚ್ನೇ ಮಾಡ್ತಾಯಿದ್ದೀರಾ? ಆಂ!

ಶಾಸ್ತ್ರಿ—ಏನೂ ಇಲ್ಲಾ, ಹಳ್ಳೀಲಿ ತುಂಬಾ ಕೆಲ್ಸಾಯಿದೆ. ಹೋಗ್ಬೇಕೂ ಅಂತಾ ಅಂದ್ಕೊಂಡೆ ಅಷ್ಟೇ.

ಬೈರಪ್ಪ—ಹೂಂ, ಹೂಂ ಹೋಗ್ಬೇಕೂ. ಕೆಲ್ಸಾಯಿದ್ರೇ ಹೋಗ್ಬೇಕು. ಹೂಂ....ಹೂಂ....ಏನ್ ಶಾಸ್ತ್ರಿಗಳೇ! ವಿಲಿಯದ್ ಕಡೇ ಅರ್ಜು ನನಗೇನ್ ಕೆಲ್ಸಾ; ಭೀಮಾಯಿದ್ ಕಡೇ ರಾಮುನ್‌ಗೇನ್ ಕೆಲ್ಸಾ? ನಾನಿದ್ ಕಡೇ ನನಗೇನ್ ಕೆಲ್ಸಾ? ನೀವಿದ್ ಕಡೇ ನಿಮ್‌ಗೇನ್ ಕೆಲ್ಸಾ?

ಶಾಸ್ತ್ರಿ—(ಆಶ್ಚರ್ಯದಿಂದ) ಆಂ!

ಬೈರಪ್ಪ—ಪಾತ್ರೇಗೆ ಜಾತ್ರೇಲೇನ್ .ಕೇಲ್ಸಾ? ಜಾತ್ರೇಗೆ ಪಾತ್ರೇಲೇನ್ ಕೆಲ್ಸಾ?

ಶಾಸ್ತ್ರಿ—(ಪಕ್ಕಕ್ಕೆ ತಿರುಗಿ) ಅಯ್ಯೋ ಗ್ರಹಚಾರವೇ? ಏನೋ ಬರ್ಬಾ ದ್ದೂ ಬಂದ್ಬಿಡ್ತಲ್ಲಾ!

ಬೈರಪ್ಪ—ಏನ್ ಶ್ಸ್ತ್ರಿಗಳೇ? ಯಾರ್ಗೇನ್ ಕೆಲ್ಸ!

ಶಾಸ್ತ್ರಿ—ಇಲ್ಲಾ, ಇಲ್ಲಾ, ಯಾರ್ಗೇನೂ ಕೆಲ್ಸಾಯಿಲ್ಲಾ. ನೀವ್ ಹೇಳಿದ್ದೇ ಸರಿ.

ಬೈರಪ್ಪ—(ಶಾಸ್ತ್ರಿಗಳ ಮುಖದ ಹತ್ತಿರಕ್ಕೆ ಬಂದು) ಊಂ! ನಾನ್ಹೇಳಿದ್ದೇ ಸರಿನೋ? ತಿಳ್ಕೊಳಿ, ನಾನ್ಯಾವಾಗ್ಲೂ ತಪ್ಹೇಳೋದಿಲ್ಲಾ.

ಶಾಸ್ತ್ರಿ—(ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡು) ಊಂ ಹೂಂ ಹೂಂ ಹೂಂ. ದುರ್ವಾಸ್ನೇ ಕೊಟ್ ಕೆಡೌತಾಯಿದೆ.

ಬೈರಪ್ಪ—ಆಂ! ದುರ್ವಾಸ್ನೇ! ಎಲ್ಲಿದೆ ದುರ್ವಾಸ್ನೇ? ನಿಮ್ಮೂಗೆಲ್ಲೋ ಕೊಳ್ತ್ಹೋಗ್ಬಿಟ್ಟದೇ.

ಶಾಸ್ತ್ರಿ—ಹೌದು, ಹೌದು. ನನ್ ಮೂಗ್ ಕೊಳ್ತ್ಹೊಗ್ಬಿಟ್ಟದೇ.

ಬೈರಪ್ಪ—ಹೂಂ, ಹೂಂ. ಕೊಳ್ತ್ಹೋಗ್ಬಿಟ್ಟದೇ, ಕೊಳ್ತ್ಹೊಗ್ಬಿಟ್ಟದೇ. ಔಷ್ಧೀ ಹಾಕ್ಸಿ.

ಶಾಸ್ತ್ರಿ—ಹಾಕಸ್ತೀನಿ, ಹಾಕಸ್ತೀನಿ. ಪೂರ್ತಿ ಕೊಳ್ತ್ಹೋಗ್ಲಿ ಹಾಕಸ್ತೀನಿ.

ಬೈರಪ್ಪ—ಹೂಂ, ಹೂಂ. ಪೂರ್ತಿ ಕೊಳ್ತ್ಹೋಗ್ಲಿ, ಪೂರ್ತಿ ಕೊಳ್ತ್ಹೋಗ್ಲಿ.

ಶಾಸ್ತ್ರಿ—ಆಗ್ಲಿ. ಕೊಳ್ತ್ಹೋಗ್ಲಿ, ಕೊಳ್ತ್ಹೋಗ್ಲಿ. ಈಗ ನೀವ್ ಮಲಕ್ಕೊಳ್ಳಿ. ನಾನ್ಹಳ್ಳೀಗ್ಹೋಗ್ಬಿಟ್ ಬರ್ತೀನಿ.

ಬೈರಪ್ಪ—ಹೂಂ. ನೀವ್ ಹಳ್ಳೀಗ್ಹೋಗಿ. ನಾನ್ ಮಲಕ್ಕೋತೀನಿ. (ಹೂಜಿಯಿಂದ ಮದ್ಯವನ್ನು ತೆಗೆದು ಕುಡಿಯುವನು. ತೂರಾಡುತ್ತ) ವಾಲಿಯಿದ್ ಕಡೇ ಅರ್ಜುನನ್ಗೇನ್ ಕೆಲ್ಸಾ? ಭೀಮಾಯಿದ್ ಕಡೇ ರಾಮನ್ಗೇನ್ ಕೆಲ್ಸಾ? ಜಾತ್ರೇಲಿ ಪಾತ್ರೇಗೇನ್ ಕೆಲ್ಸಾ? ಪಾತ್ರೇಲಿ ಜಾತ್ರೆಗೇನ್ ಕೆಲ್ಸಾ? (ಬೀಳುವನು)

ಶಾಸ್ತ್ರಿ—ಹೂಂಹ್ ಮಾಡ್ವಾಗಾ ಎಲ್ಲಾ ಚನ್ನಾಗಿತ್ತು. ಆನ್ಭೌಸ್ವಾಗಾ ಫಲಾಕಂಡ್ ಬರ್ತಾಯಿದೆ. ಏನೋ ಹಳ್ಳೀಗ್ಹೋಗ್ಬಿಟ್ ಬಂದೂ ಒಂದಷ್ಟ್ ಗ್ರಹಶಾಂತಿ ಮಾಡ್ತೀನಿ. ಚನ್ನಾಗಾದ್ರೂ ಆಕ್ಕೋಳ್ಲೀ.

ಹೋಗುವರು

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ದೃಶ್ಯ ೧೯

ರಸ್ತೆ

(ವೀರೇಗೌಡನು ಇಬ್ಬರೂ ಜೊತೆಗಾರರೊಡನೆ ಪ್ರವೇಶಿಸುವನು)

ವೀರೇಗೌಡ—ಎಂಥಾ ಅಪಮಾನ! ಯೋಚಿಸಿಕೊಂಡರೆ ಈಗಲೂ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಳ್ಳುವಂತಾಗುತ್ತದೆ. ಇದುವರೆಗೆ ಹಿಡಿದ ಕಾರ್ಯದಲ್ಲಿ ಸೋಲು ಎನ್ನುವುದನ್ನೇ ಕಂಡವರಲ್ಲ ನಾವು. ಸಾಹಸ, ಜಯ—ಸಾಹಸ, ಜಯ ಇದು ನಮ್ಮ ನಿತ್ಯ ವ್ಯವಹಾರ. ಸಿಂಹ, ಶಾರ್ದೂಲಗಳೊಡನೆ ಸ್ಪರ್ಧಿಸಲು ಹಿಂಜರಿಯಲಿಲ್ಲ. ಬಂಡೆಗಳೊಡನೆ ಘರ್ಷಿಸಲು ಹಿಮ್ಮೆಟ್ಟಲಿಲ್ಲ. ಆದರೆ ಅಲ್ಪ ಅಚಾತುರ್ಯದಿಂದ ಮದ್ಯ ಸೇವನೆ ಮಾಡಿ ಕೈಗೆ ಸೆಕ್ಕಿದ ಬೇಟೆಯನ್ನು ಕಳೆದುಕೊಂಡು ಬಂದೆವಲ್ಲಾ! ಸಾಲದ್ದಕ್ಕೆ ಮೂರ್ಛೆ ಹೋಗುವಂಥಾ ಹೊಡೆತಗಳು ಬೇರೆ. ಹೀಗಾಗುವುದೆಂದು ನಾವು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಆ ಕೆಂಪಾ! ನೆನ್ನೆ ಮೊನ್ನೆಯ ಹುಡುಗ! ನಮ್ಮ ಸಾಹಸಾ, ನಮ್ಮ ಪ್ರಯತ್ನ, ನಮ್ಮ ಉದ್ದೇಶ ಎಲ್ಲದರ ಮೇಲೂ ನೀರ್ಹಾಯಿಸಿಬಿಟ್ಟನಲ್ಲಾ! ಏನೋ ತಬ್ಬಲಿ, ಹೇಗಾದರೂ ಬದುಕಿಕೊಳ್ಳಲಿ ಏಂದು ಕರುಣೆಯನ್ನು ತೋರಿಸುತ್ತ ಬಂದಿದ್ದಕ್ಕೆ, ಆ ಕರುಣೆಯೇ ನಮ್ಮ ಕಣ್ಣಿನ ಸೂಜಿಯಾಯಿತು. ಆಗಲಿ, ಇದರ ಸೇಡನ್ನು ಒಂದಕ್ಕೆ ನೂರುಪಾಲಿನಂತೆ ತೀರಿಸಿಕೊಳ್ಳದೆ ಹೋದರೆ ನಾನು ವೀರೇಗೌಡನೇ? ಮೊದಲು ಕೆಂಪನ ಗತಿಯನ್ನು ಪೂರೈಸಿ ಅನಂತರ ಜವರೇಗೌಡನನ್ನು ನೋಡಿಕೊಳ್ಳುತ್ತೇನೆ. ಆದರೆ ಕೆಂಪನ ಸಹಾಯಕ್ಕೆ ಬಂದ ಆ ಹೆಣ್ಣು ಗಂಡು ಯಾರು? ಹೂಂ. ಕುಡಿದಿದ್ದರಿಂದ ಸರಿಯಾಗಿ ಗೊತ್ತಾಗಲೇಯಿಲ್ಲ. ಇರಲಿ ಯಾರೇ ಇರಲಿ ಅನಂತರ ವಿಚಾರಿಸಿಕೊಳ್ಳುತ್ತೇನೆ. (ಪಕ್ಕಕ್ಕೆ ತಿರುಗಿ) ಮಾಟೇಗೌಡ ನೀನಿನ್ನಿಬ್ರನ್ನಾ ಜೊತೇಲ್ ಕರ್ಕೊಂಡ್ ಬಾ. ಒಳ್ಳೇ ಹರಿತವಾದ್ ಕತ್ತಿಗಳ್ ತರ್ಬೇಕೂ. ಕೆಂಪಾ ಹ್ಯಾಗೂ ಶಾಸ್ತ್ರಿಗಳ್ ತೋಟದಲ್ಲಿ ತರ್ಾನೇ. ಅಲ್ಲೇ ಔನ್ನಾ ತುಂಡ್ ತುಂಡ್ ಮಾಡಿ ಚೆಲ್ಲಾಡಿ

ಬಂದ್ಬಿಡೋಣ. ಬೇರೇವ್ರುಗ್ಯಾರ್ಗೂ ಈ ಸುದ್ದೀ ತಿಳಸ್‌ಕೂಡ್ದೂ. ಏನೂ? ಗೊತ್ತಾಯ್ತೇ?

ಮಾಟೇಗೌಡ– ಹೂಂ, ಹೂಂ. ಗೊತ್ತಾಯ್ತು.

ವೀರೇಗೌಡ—ಬೇರೇವ್ರ್ ಯಾರ್‌ಹತ್ರಾ ಆದ್ರೂ ಬಾಯ್ಬಿಟ್ಟೆಯಾ ಜೋಕೆ.

ಮಾಟೇಗೌಡ—ನಾನೇನ್ರಣ್ಣ ಬಾಯ್ಬಿಡೌನು? ನಾಲ್ಗೇ ಕುಯ್‌ದ್ರೂ ಉಸ್ರೆತ್ತೌನಲ್ಲಾ.

ವೀರೇಗೌಡ—ಹಾಂ! ಹಾಗಿರ್ಬೇಕೂ, ಆಗ್ಲೀ, ಈಗ್ ನೀನ್ಹೋಗು, ನಾನೂ ಈ ಕಡೇಯಿಂದ ಹೋಗಿ ಬೈರಪ್ಪನ್ನ್ ನೋಡ್ಕೊಂಡು ಬೇಗ್ ಬಂದ್ಬಿಡ್ತೀನಿ. (ಹೋಗುವರು)

ದೃಶ್ಯ ೨೦

ಶಾಸ್ತ್ರಿಗಳ ತೋಟ

(ಕೆಂಪಣ್ಣ ಹಾಡುತ್ತ ಪ್ರವೇಶಿಸುವನು)

ಕೆಂಪಣ್ಣ—ಹೇ ದೇವ ದೇವಾ! ವಿಶ್ವವಿಧಾಯಕ ರಂಗನಾಥಾ! ಕಾರ್ಯಾ ಕಾರಣಗಳನ್ನರಿತು ಜಗನ್ನಾಟಕದ ಸೂತ್ರಧಾರಿತ್ವವನ್ನು ನಿರ್ವಹಿಸಿ ಮೆರೆಯುತ್ತಿರುವ ಉಪಮಾತೀತ ಅನಂತ ರೂಪಧಾರನೇ! ನೀನು ನಿರತ್ಯಯನು, ನಿಲಿಂಪನು, ನಿಸ್ತುಲನು. ನಿನ್ನ ಮಹಿಮಾತಿಶಯ ಗಳನ್ನರಿಯಲು ನಾನು ಸಮರ್ಥನೇ ಪ್ರಭು! ನೀನೇಕೆ ನನ್ನ ಮೇಲೆ ವಿಲಕ್ಷಣ ಪರಿಣಾಮವನ್ನುಂಟು ಮಾಡುತ್ತಿರುವೇ? ಆದೇಕೆ ದೀನರ, ದಲಿತರ, ನಿಸ್ಸಹಾಯಕರ, ನಿರ್ಗತಿಕರ, ನಿರಾಶ್ರಿತರ, ವಿಧವೆಯರ, ಅನಾಥರ ಆಕ್ರಂದನಗಳು ನನ್ನ ಕರ್ಣ ಕುಹರಗಳಲ್ಲಿ ಪ್ರತಿಧ್ವನಿತ ವಾಗುತ್ತಿವೆ? ನಿರಾಧಾರಿಗಳ ಕರುಣಾಜನಕ ಚಿತ್ರಗಳು ನನ್ನ ನಯನ ಭಿತ್ತಿಯ ಮೇಲೇಕೆ ಚಿತ್ರಿತವಾಗುತ್ತಿವೇ? ದುಷ್ಟರ ವಜ್ರಮುಷ್ಟಿ ಯಲ್ಲಿ ಸಿಲುಕಿ ನರಳುತ್ತಿರುವ ಲಕ್ಷಾಂತರ ನಿಸ್ಸಹಾಯಕರ ಮ್ಲಾನ ವದನಗಳು ಆಶಾಭರಿತ ದೃಷ್ಟಿಯಿಂದ ಅದೇಕೆ ನನ್ನ ಕಡೆಯೇ ನೋಡುತ್ತಿವೇ? ಅವರ ಹೃದಯ ವಿದ್ರಾವಕ ದೀನಸ್ವರಗಳು ನನ್ನ

ಲ್ಲಿಯೇ ಮೊರೆಯಿಡುತ್ತಿರುವಂತೇಕೆ ಭಾಸವಾಗುತ್ತಿವೇ? ಬಾ! ಬಾ! ನಮ್ಮನ್ನು ರಕ್ಷಿಸು ಎಂದು ಲಕ್ಷಾಂತರ ಕರಗಳು ನನ್ನನ್ನೇಕೆ ಸ್ವಾಗತಿಸುತ್ತಿವೆ? ಈಗ ಗುದ್ದಲಿಯನ್ನು ಕೈಯಲ್ಲಿ ಹಿಡಿಯುವುದಂತಿರಲಿ ಕಣ್ಣೆತ್ತಿ ನೋಡಲೂ ಇಚ್ಛೆಯಾಗುತ್ತಿಲ್ಲ. ಖಡ್ಗವು ಪ್ರಾಣಕ್ಕಿಂತಲೂ ಪ್ರಿಯವಾಗಿ ಕಾಣುತ್ತಿದೆ. ಖಡ್ಗವನ್ನು ಕರದಲ್ಲಿ ಧರಿಸಿ, ದುಷ್ಟರನ್ನೆಲ್ಲಾ ನಿಗ್ರಹಿಸಿ ಅವರ ಹಿಡಿತದಿಂದ ಶಿಷ್ಟರನ್ನೆಲ್ಲಾ ಸಂರಕ್ಷಿಸಲೇ? ನಾಡಿನಿಂದ ದುಃಖ, ಸಂಕಟ, ಹಾಹಾಕಾರಗಳನ್ನೆಲ್ಲಾ ಬಡಿದೋಡಿಸಿ ಸುಖ, ಶಾಂತಿ, ಸಂಮೋದದ ಅಮೃತಪ್ರವಾಹವನ್ನೇ ಹರಿಸಿಬಿಡಲೇ? ಆದರೆ....ಆ ದ ರೆ....ನಾನು ಯಾರು? (ಮೈಮೇಲೆಲ್ಲಾ ನೋಡಿಕೊಂಡು) ಹ್ಹ ಹ್ಹ ಹ್ಹ ಹ್ಹ! ಹೊಟ್ಟೆಯ ಕೂಳಿಗಾಗಿ ಅನ್ಯರ ಮನೆಗಳಲ್ಲಿ ದುಡಿಯುತ್ತಿರುವ ಬಡ ಕೂಲಿಗಾರ. ಸ್ವತಃ ನಿರ್ಗತಿಕ, ಸಿಸ್ಸಹಾಯಕ. ನನ್ನದೇನು ಮನೋದೌರ್ಬಲ್ಯ? ಏನು ತಿರುಕನ ಕನಸು? (ಗುದ್ದಲಿಯನ್ನು ತೆಗೆದುಕೊಂಡು ಅಗೆಯಲಾರಂಭಿಸುವನು)

ಮಲ್ಲ—(ಪ್ರವೇಶಿಸಿ) ಕೆಂಪಣ್ಣಾ! ಕೆಂಪಣ್ಣಾ! ಏನ್ ಬೋ ಕೆಲ್ಸಾ ಮಾಡ್ತಾಯಿದ್ದೀಯಾ?

ಕೆಂಪಣ್ಣ—ಏನೂ ಇಲ್ಲ ಮಲ್ಲಾ. ಈವತ್ತು ಇಲ್ಲೆಲ್ಲಾ ಬಾಳೇಗಿಡಾ ಹೊಸ್ದಾಗ್ ಕೂರ್‍ಸ್‌ಬೇಕಾಗಿದೆ. ಅದಕ್ಕೋಸ್ಕರಾ ಗುಂಡಿಗಳ್ ತೋಡ್ತಾಯಿದ್ದೀನಿ.

ಮಲ್ಲ—ಅಂಗಾದ್ರೇ ನಾನೂ ವಸಿ ಕೆಲ್ಸಾಮಾಡ್ತೀನಿ ಬುಡು ಕೆಂಪಣ್ಣಾ! (ಗುದ್ದಲಿಯನ್ನು ತೆಗೆದುಕೊಂಡು ಕೂಗುವನು) ಲೇಯ್, ಮಲ್ಲೀ, ಇಲ್ಬಾರೇ ಇಲ್ಲಿ; ಕೆಂಪಣ್ಣಾನೂ ಇಲ್ಲೇ ಅವ್ನೇ ಬಾರ್ಲೇ?

ಮಲ್ಲಿ—(ಪ್ರವೇಶಿಸಿ) ಗೌರೀನ ಇಲ್ಲೇ ಬುಟ್‌ಕೋಂಡಿವ್ನೀ ಕಣ್ಲಾ. ಅಂಗೇ ಬುಟ್ಬುಟ್ರೇ ಯಾರ್ ಇತ್ಲಿಗಾದ್ರೂ ನುಗ್ಬುಟ್ಟಾತೂ.

ಮಲ್ಲ—ಯಾರಿತ್ಲೀಗೂ ನುಗ್ಗಾಕಿಲ್ಲಾ. ಅಲ್ಲೇ, ಅಂಗೇ ಮೆಯ್ಕೊಂಡಿತ್ತೈತೇ ಬಾರ್ಲೇ ಕೆಂಪಣ್ಣಂಗೆ ವಸಿ ಸಾಯಾನಾದ್ರಾಂವಾಂ. (ಗುದ್ದಲಿಯನ್ನು ತೆಗೆದುಕೊಳ್ಳುವನು)

ಮಲ್ಲಿ—(ಹಾಡು) ನಮ್ಮ ಭೂಮಿ ತಾಯಿಯ ಸೇವೇನ

ಎಲ್ಲರೂ ಹಾಡಲಾರಂಭಿಸುವರು

ಅನಂತಶಾಸ್ತ್ರಿ—(ಪ್ರವೇಶಿಸಿ) ಓಹೋಹೋ! ಇಲ್ ತೋಟದಲ್ಲಿ ಕೆಲ್ಸಾ ನಡೀತಾಯಿಲ್ಲಾ, ಮೇಳಾ ನಡೀತಾಯಿದೆ. ಕೆಂಪಾ ಬಹ್ಳಾ ಕೊಬ್ಬೋಗ್ಬಿಟ್ಟದ್ದಾನೆ. ಇವ್ನನ್ನ ಈಗ್ ಹೊರ್ಗ್‌ಹಾಕ್ದೇಯಿದ್ರೇ, ನನ್ ತೋಟಾ ಉಳಿಯೋ ಹಾಗೇನೇ ಇಲ್ಲಾ (ಮುಂದೆ ಬಂದು) ಏ ಕೆಂಪಾ! ಏನೋ ಮೇಳಾ ಕುಣೀತಿದ್ದೀರೇನ್ರೋ? (ಎಲ್ಲರೂ ತಟಸ್ಥರಾಗಿ ನಿಲ್ಲುವರು) ಏನೋ ಮಲ್ಲ, ನಿನ್ಗೇ ಬೇರೇ ಕೆಲ್ಸಾಗಿಲ್ಸಾ ಇಲ್ವೇನೋ ? ನೀನ್ ಕೆಟ್ಟಿದ್ದಲ್ದೇ ಕೆಂಪನ್ನೂ ಕೆಡಸ್ಬಿಟ್ಟೇನೋ? (ಮಲ್ಲ ತಟಸ್ಥನಾಗಿರುವನು)

ಮಲ್ಲ—ಇಲ್ರಿ ಬುದ್ದೀ, ನಾವೆಲ್ಲಾ ಕೆಲ್ಸಾ ಮಾಡ್ತಿದ್ದೀವ್ರೀ ಬುದ್ದಿ

ಶಾಸ್ತ್ರಿ—ಊಂ ಹೂಂ ಹೂಂ ಹೂಂ. ನೀನಿದ್ದೀಯಲ್ಲಾ ಗಂಡ್ಬೇರೀ ನೀನೂ! ನಿನ್ಗ ಹೀಗೇ ಬಿಟ್ಬಿಟ್ರೇ ಈ ಊರ್ನೇ ಹುದ್ಗ್ ಹಾಕ್ಬಿಡ್ತೀಯಾ. ನಿನ್ಗ ಸರಿಯಾದ್ ಮೂಗ್ದಾರಾ ಹಾಕಸ್ತೀನಿ ತಡಿ. (ಸಿಟ್ಟನಿಂದ) ಇಲ್ಲೇನ್ಮಾಡ್ತಾಯಿದ್ದೀಯಾ ನಡಿಯೇ. ಹುಡ್ಗರ್ ಜೊತೇಲಿ ಏನ್ ಕೆಲ್ಸಾ ನಿನ್ಗೇ?

ಮಲ್ಲಿ—(ಪಕ್ಕದಲ್ಲಿ ಹೋಗಿ ನಿಂತುಕೊಂಡು) ಈ ಐನೋರು ನಂಕಂಡ್ರೇ ಆದ್ಯಾಕಿಂಗ್ ಉರ್ದುರ್ದು ಬೀಳ್ತಾರೇ ? ನಾ ಏನೂ ಕೇಳಾ ಮಟ್ಟಾ ಕೇಳ್ತೀನಿ, ತಿರ್ಗ್ ಬಿದ್ರೇ ಯಾಗ್ರೂ ಎದ್ರೋ ಎಣ್ಣಲ್ಲಾ.

ಶಾಸ್ತ್ರಿ—(ಸಿಟ್ಟನಿಂದ) ಮತ್ತಿಲ್ ನಿಂತ್ಕೊಂಡೇನೇ ಯೋಚ್ನೇ ಮಾಡ್ತಾಯಿದ್ದೀಯಾ? ನಡಿಯೇ ? ನಡಿಯೇ ಇಲ್ಲಿಂದಾ? ಹೂಂ.

(ಮಲ್ಲಿ ಸಿಟ್ಟನಿಂದ **ಕೊರಳನ್ನು ಕೊಂಕಿಸಿ ಹೊರಟುಹೋಗುವಳು**)

ಶಾಸ್ತ್ರಿ—(ಮಲ್ಲನ ಕಡೆಗೆ ತಿರುಗಿ) ಏನೋ ಮಲ್ಲ, ಇದೇಯೇನೋ ಕೆಲ್ಸಾ ನಿನ್ಗೇ? ಪೂರ್ತಿ ಕೆಟ್ಟೇ ಹೋದಲ್ಲೋ? ಹೀಗ್ ಸೋಮಾರಿ ಆಗ್ಬಿಟ್ರೇ ನೀನೂ, ಆ ಬೈರಪ್ಪನ ಹತ್ರಾ ನಿಮ್ಮಪ್ಪ ಮಾಡಿರೋ ಸಾಲಾ ತೀರ್ಸ್ನೋದ್ಹ್ನಿಜ್ವೇ? ಮದ್ವೇ ಆಗಿ ಮನೆ, ಮಠಾ ಉದ್ಧಾರಾ ಮಾಡಿ ತಂದೇ ತಾಯ್ಗಳ್ ಹೆಸ್ರು ಕಾಪಾಡೋದ್ನಿಜ್ವೇ?

ಮಲ್ಲ—ಇಲ್ರಿ ಬುದ್ಧಿ, ನಾ ಏನ್ ಕೆಲ್ಸಾ ಮಾಡಾಕಿಲ್ವಾ? ದನಾ ಮೆಯ್ಸಾ ಕಿಲ್ವಾ? ನಂಗೇನ್ ಗ್ನ್ಯಾನಾ ಇಲ್ವಾ? ಕೆಂಪಣ್ಣೋಬ್ನೇ ಬೆವ್ರು ಸುರ್ಸೋದ್ ನೋಡಾಕಾಗ್ದೇ ಕೆಂಪಣ್ಣನ್ಗೇ ವಸಿ ಸಾಯಾ ಮಾಡಾಂ ವಾಂ ಅಂತಾ ಬಂದೇ ಓಟೇ.

ಶಾಸ್ತ್ರಿ—ನೀನೇನೂ ಸಹಾಯಾ ಮಾಡೋದ್ಬೇಕಿಲ್ಲಾ. ಹೊರ್ಟ್ ಹೋಗ್ಬಿಡೂ ಇಲ್ಲಿಂದಾ. ನೀನ್ ಕೆಟ್ಟದ್ದಲ್ದೆ ಕೆಂಪನ್ನೂ ಪೂರಾ ಕೇಡ್ಸಿಟ್ಟೆಟ್ಟೇ. ಹೂಂ ಹೊರ್ಡ್ರೂ. ಏನ್ ಮುಕಾ ನೊಡ್ತಾ ಯಿದ್ದೀಯಾ, ಹೊರ್ಡೋ? (ಮಲ್ಲ ಹಿಂದು ಮುಂದು ನೋಡುತ್ತ ಹೋಗುವನು. ಶಾಸ್ತ್ರಿಗಳು ಕೆಂಪಣ್ಣನ ಕಡೆಗೆ ತಿರುಗಿ) ಏನೋ ಗುಲಾಮ, ನಿನ್ನನ್ನ ಮನೇ ಮಗಾ ಅನ್ನೋ ಅಷ್ಟರ ಮಟ್ಟಿಗೆ ಸಾಕಿ, ಇಷ್ಟೆಲ್ಲಾ ಜವಾಬ್ದಾರಿ ಕೊಟ್ರೇ ಇದೆಯೇನೋ ನೀನ್ ಕೆಲ್ಸಾಮಾಡೋದು?

ಕೆಂಪಣ್ಣ—ಕೆಲ್ಸಾ ಮಾಡ್ತಾನೇಯಿದ್ದೀನಿ ಸ್ವಾಮಿ.

ಶಾಸ್ತ್ರಿ—ಏನೋ ಕೆಲ್ಸಾ ಮಾಡ್ತಾಯಿದ್ದೀಯಾ? ನಾನ್ ನೋಡ್ಲಿಲ್ವೇ ಹಾಡ್ತಾ ಕುಣೀತಾಯಿದ್ದಿದ್ದೂ? ಅದೇ ತಾನೇ ಕೆಲ್ಸಾ? ನೆನ್ನೇನೇ ಹೇಳಿದ್ದೀನಿ. ಆ ಮಾವಿನ ಮರ್ದಿಂಡಾ ಹಿಡ್ದು ಬಾಂವೀ ಕಟ್ಟೇವ ರೆಗೆ ಗುಂಡಿಗಳಾಗ್ಬೇಕೂ ಅಂತಾ. ಗುಂಡಿಗಳೆಲ್ಲಾ ತೋಡ್ದೇನೋ?

ಕೆಂಪಣ್ಣ—ತೋಡ್ತಾನೇಯಿದ್ದೀನಲ್ಲಾ ಸ್ವಾಮಿ? ನೆನ್ನೆಯಿಂದಾನೇ ಪ್ರಾರಂಭ ಮಾಡಿದ್ದೀನಿ. ಈವತ್ ಬೆಳಗ್ಯೆಯಿಂದಾನೂ ಅದೇ ಕೆಲ್ಸಾಮಾಡ್ತಿರೋದು?

ಅನಂತಶಾಸ್ತ್ರಿ—ಹತ್ತೋ, ಹನ್ನೆರ್ಡೋ ಗುಂಡೀ ತೋಡ್ಬಿಟ್ರೇ ಆಗ್ಹೋ ಯ್ತೇನೋ? ತಿಂದ್ ತಿಂದೂ ಮೈ ಬೆಳ್ಸ್‌ಕೋಂಡು ಶುಧ್ ಸೋಮಾರೀ ಆಗ್ಬಿಟ್ಟೇ. ನಿನ್ ಕೈಯಿಂದಾ ನಾನ್ ಕೆಲ್ಸಾ ತಗೋ ಳೋದಕ್ಸಾಧ್ಯವಿಲ್ಲ. ನೀನಿನ್ ಮೇಲೆ ನನ್ ಮನೇಲಿಬ್ಯಾಡಾ ನನ್ ತೋಟಕ್ ಬಬ್ಯಾಡಾ. ಹೊರ್ಟ್‌ಹೋಗ್ಬಿಡೂ. ನಾನ್ ಬೇರೇ ವ್ರನಾ ನೇಮ್ಸ್ಕೊ ಮಾಡ್ಕೋತೀನಿ.

ಕೆಂಪಣ್ಣ—ಹಾಗನ್‌ಬ್ಯಾಡೀ ಸ್ವಾಮಿ. ತಂದೆಯಂತೆ ಸಾಕಿದ್ದೀರಾ. ಈಗ್ ನಿಮ್ಮನೇ ಬಿಟ್ಟು ನಾನೆಲ್ ಹೋಗ್ಲಿ?

ಶಾಸ್ತ್ರಿ—ಕೂಡ್ದೂ ಅಂದ್ಮೇಲೇ ಕೂಡ್ದೂ. ಹೋಗ್ಬಿಡ್ಬೇಕೂ ಅಂದ್ಮೇಲೆ ಮುಗ್ದ್‌ಹೋಯ್ತೂ. ಇನ್ ನೀನಿರೋದ್ಬೇಕಿಲ್ಲಾ. ಹೋಗ್ಬಿಡೂ. ಸುಮ್ನೇ ಹೊರ್ಟ್‌ಹೋಗ್ಬಿಡೂ.

ಕೆಂಪಣ್ಣ—ಹಾಗನ್‌ಬ್ಯಾಡಿ ಸ್ವಾಮಿ. ಅಷ್ಟ್‌ಕೋಪಾಮಾಡ್‌ಬ್ಯಾಡಿ. ನಿಮ್ಮನೇ ಬಿಟ್ಬಿಟ್ರೆ ನಮ್ಮಾತ್ಯೆಗೇ ನಾನೇನ್ ಮುಖಾ ತೋರಸ್ಲೀ? ಲಕ್ಷ್ಮೀ ಅನಾರೋಗ್ಯದಿಂದ ಮಲ್ಗಿದ್ದಾಳೇ. ಈ ಸುದ್ದೀನಾ ಔಳ್ ಗ್ಯಾರ್ಗ್ ತಿಳಸ್ಲೀ? ಏನೋ ನಿಮ್ಮನೇ ಆಶ್ರಯದಿಂದ ನಮ್ಮನೇವ್ರು ಹಾಗೂ ಹೀಗೂ ಜೀವ್ನಾ ಮಾಡ್ಕೋತಾಯಿದ್ರು. ಈಗದೂ ತಪ್ಪೋಗ್ಬಿಟ್ರೇ, ನಮ್ಮನೇವ್ರು ಪಾಡೇನೂ? ನಾನ್ ಕೈ ಮುಗ್ದೂ ಬೇಡ್ಕೋತೀನಿ. ನನ್ನನ್ನೋಡಸ್ಬ್ಯಾಡೀ ಸ್ವಾಮಿ, ನನ್ನನ್ನೋಡ ಸ್ಬ್ಯಾಡೀ. (ಕೈ ಜೋಡಿಸುವನು)

ಶಾಸ್ತ್ರಿ—(ದೊಣ್ಣೆಯಿಂದ ಹೊಡೆಯುತ್ತ) ಹೋಗ್ಬಿಡೂ ಅಂತಾ ಒಂದ್ಸಲಾ ಅಲ್ವೇನೋ ಹೇಳಿದ್ದೂ? ಮತ್ತೇ ಕೈ ಮುಗ್ದೂ ಒಲಸ್ಕೋಳೋದ ಕ್ಬತ್ರ್ಯಾ? ನಡಿಯೋ, ತೋಟಾಬಿಟ್ ನಡಿಯೋ, ಆಚೆ. (ದೊಣ್ಣೆಯಿಂದ ನೂಕುವರು)

ಕೆಂಪಣ್ಣ—(ಕಾಲಿಗೆ ಬೀಳುತ್ತ) ಕಾಲಿಗ್ ಬಿದ್ ಬೇಡ್ಕೋತೀನಿ. ಇನ್ಮೇಲೆಂದೂ ತಪ್‌ಮಾಡೋದಿಲ್ಲಾ. ಇದೊಂದ್ ಸಲಾ ಕ್ಷಮಿಸ್ಬಿಡೀ.

ಶಾಸ್ತ್ರಿ—(ಕಾಲಿನಿಂದ ಒದೆಯುತ್ತ)ಕಾಲಿಗ್‌ಬೀಳೋದಕ್ಬತ್ರ್ಯಾ! ನಡಿಯೋ ಆಚೇ. ನಡಿಯೋ ಆಚೆ.

(ಕೆಂಪಣ್ಣ ಸಿಟ್ಟಿನಿಂದ ಎದ್ದು ನಿಂತು ಶಾಸ್ತ್ರಿಗಳನ್ನು ದುರುಗುಟ್ಟಿ ನೋಡುವನು. ಶಾಸ್ತ್ರಿಗಳು ಹೆದರಿಕೆಯಿಂದ ಬಾಯಿ ಬಾಯಿ ಬಿಡುವರು)

ಕೆಂಪಣ್ಣ—(ಸಿಟ್ಟನ್ನು ನುಂಗಿಕೊಂಡು) ಆಗ್ಲಿ, ಹೋಗ್ತೀನೀ, ಹೋಗ್ತೀನೀ (ಹೋಗುವನು)

ಶಾಸ್ತ್ರಿ—(ಉಸಿರನ್ನು ಬಿಡುತ್ತ) ತೊಲ್ಗ್ಯೊ ಒಂದ್ಸಲಾ, ಮೊದಲ್ ತೊಲ್ಗ್ಯೊ (ಹೊರಡುವರು. ಇದಿರಿನಿಂದ ರಂಗನಾಥನು ಊಟವನ್ನು ತೆಗೆದುಕೊಂಡು ಬರುವನು. ಅವನನ್ನು ಆಶ್ಚರ್ಯದಿಂದ ನೋಡಿ) ಇದೇನೋ ಇದು!

ರಂಗನಾಥ—ಕೆಂಪಣ್ಣೆಗೆ ಊಟಾ ತಂದಿದ್ದೀನಿ.

ಶಾಸ್ತ್ರಿ—ಅ ಹಾ ಹಾ ಹಾ ಹಾ ಹಾ! ಏನ್ ನಿನ್ ಬುದ್ಧೀಗೆ ತಲೇ ಚಚ್ಕೊಳ್ಳೋ! ಅವಿವೇಕದ ಮುಂಡೇದೇ, ಬ್ರಾಹ್ಮಣನ್ ಮನೇಲಿ ಒಳ್ಳೇ ಬಾಲಗ್ರಹ ಹುಟ್ದ್ಹಾಗ್ ಹುಟ್ಟಿದ್ದೀಯಲ್ಲೋ! ಸ್ಥಾನಾ ಮಾನಾ, ಬ್ರಾಹ್ಮಣಿಕೆ ಗೌರವ, ಒಂದ್ ಚೂರೂ ಇಲ್ಲಾ. ಊಟಾ ಹೊತ್ಕೊಂಡ್ ಬಂದಿದ್ದೀಯಾ! (ಬೆರಸಿ ಹೊಡೆಯುವರು)

ರಂಗನಾಥಾ—(ತಲೆಯನ್ನು ಕೆರೆದುಕೊಳ್ಳುತ್ತ) ನಾನೇನಣ್ಣಾ ಮಾಡ್ಲೀ? ಅಕ್ಕಾ ಹೇಳದ್ಲೂ ನಾನ್ ತಂದೆ.

ಶಾಸ್ತ್ರಿ—ನೀನೇನೋ ಮಾಡ್ತ್ಯ! ಔಳ್ಗೇಳೋದಕ್ಕಾದ್ಲೂ, ನೀನ್ ಕೇಳೋದಕ್ಕಾದೆ. ಎಲ್ಲಾ ನಿಮ್ಮಿಚ್ಛೇನೆ ಆಗ್ಹೋದ್ಮ್ಯಾಲೇ ನಾನ್ಯಾ ತಕ್ಕೋಯಿರೋದು? ಮನೇಗೊಬ್ಬೆಜ್ಮಾನಾಯಿದ್ದಾನೇ ಅನ್ನೋ ಪರಿಜ್ಞಾನಾ ಆದ್ರೂ ಇದೆಯೇನ್ರೋ ನಿಮ್ಗೇ? (ಸಿಟ್ಟಿನಿಂದ) ತಗೊಂಡ್ ನಡಿಯೋ ಹಿಂದಕ್ಕೆ ಸೋಮಾರೀಗನ್ನಾ ಹೊತ್ಕೊಂಡ್ ಬಂದಿದ್ದಾನೇ. ಹೋಗೋ ಮನೇಗೆ ಹೋಗೋ? ಏನ್ ತಿರ್ಗ್ ನೋಡ್ತ್ಯ? ನಡಿಯೋ. (ದೊಣ್ಣೆಯನ್ನೆತ್ತುವರು. ರಂಗನಾಥಾ ಹೊರಟುಹೋಗುವನು) ಸ್ವಲ್ಪ ಸದ್ರಾ ಕೊಟ್ಟಿದ್ದಕ್ಕೆ ಹುಚ್ಚಾರ್ ಬಾರ್ ನಡಸ್ತಾಯಿದ್ದೀರಾ! ಹೊಲದ್ ಕಡೆ ಹೋಗ್ಬಿಟ್ಬಂದ್ ವಿಚಾರಸ್ಕೋತೀನಿ, ನಿಮ್ಮನ್ನೆಲ್ಲಾ. (ಹೋಗುವರು)

ದೃಶ್ಯ—೨೧

ರಸ್ತೆ

(**ಕೆಂಪಣ್ಣ ಹಾಡುತ್ತ ಪ್ರವೇಶಿಸುವನು**)

ಕೆಂಪಣ್ಣ—ಎಷ್ಟ್ ದಿವ್ಸಾ ಕಂಡೌರ್ ಮನೇಲಿ ಜೀತಾ ಮಾಡದ್ರೂ ಪರಿಣಾಮ ಇಷ್ಟೇನೇ. ಒಂದಲ್ಲ ಒಂದ್ ದಿನ ಬೈಸ್ಕೊಂಡೋ, ಉಗಸ್ಕೊಂಡೋ, ಹೊರ್ಬೀಳ್ಳೇಬೇಕು. ಎಷ್ಟೇ ಕಷ್ಟಾಪಟ್ರೂ, ಶ್ರದ್ಧೆಯಿಂದ, ಉತ್ಸಾಹದಿಂದ, ದುಡದ್ರೂ ದುಡಸ್ಕೊಳ್ಳೌನಿಗೆ ಆದರ್

ಸ್ಮರಣೇನೇ ಉಳಿಯೋದಿಲ್ಲಾ. ನೆನ್ನೆ ಮನ್ನೆಯ ದುಡಿಮೆ, ಕಷ್ಟ ನಷ್ಟ, ತ್ಯಾಗ, ಎಲ್ಲಾ ಮತ್ತೂರ್ ಈ ದಿನಾ ಎಷ್ಟ್ ದುಡ್ಡೇ! ನಾಳೆ ಎಷ್ಟ್ ದುಡೀತೀಯಾ! ಅಂತಾ ಕೇಳೌರೇ ಬಹು ಮಂದಿ. ಹೂಂ ಯಾರ್ಗ್ ದೂರೀ ತಾನೇ ಏನ್ ಪ್ರಯೋಜ್ನಾ? ಒಂದ್ ಬಾಗ್ಲಿಂದ ಒದಸ್ಕೊಂಡೋ ನೂಕಸ್ಕೊಂಡೋ ಹೊರ್ಬಿದ್ರೇ, ಮತ್ತೊಂದ್ ಬಾಗ್ಲ್ ಹುಡುಕ್ಕೊಂಡ್ಹೋಗು ಅಂತಾ ರಂಗ್ನಾಥಾನೇ ನಮ್ಹಣೇಲಿ ಬರ್ದಿರ್ವಾಗಾ ಯಾರ್ಮೇಲೇನಾಕ್ಷೇಪ್ಣೇ! ಏನು ಪರಾಕ್ರಮ ವಿದ್ದರೇನು! ದೇಹದಾರ್ಢ್ಯತೆಯಿದ್ದರೇನು! ರೂಪಿದ್ದರೇನು ಸುಗುಣ ಸಂಪತ್ತೇಯಿದ್ದರೇನು. ದಾರಿದ್ರ್ಯವೆಂಬ ಭೂತ ಬೆನ್ನುಹಿಡಿದರೆ, ಈ ಸೌಭಾಗ್ಯವನ್ನೆಲ್ಲಾ ಒಂದೇ ತಡವೆಗೆ ನುಂಗಿ ಹಾಕುವುದು. ಹೂಂಹ್ ಕಂಡೌರ್ ಬಾಗ್ಲ್ ಕಾಯೋದು, ಔರ್ ಹೊಲ, ಗದ್ದೆ, ತೋಟಗಳಲ್ಲಿ ದೇಹದ ಬೆವರನ್ನು ಹರಿಸುವುದು ಆಯುಷ್ಯದ ಜೊತೆಯಲ್ಲಿಯೇ ಹೆಣೆದುಕೊಂಡು ಬಂದಿರುವಾಗ, ದುಃಖ, ಸಂಕಟ, ಅಪಮಾನಗಳ ಗಣನೆಯೇಕೆ? ಇತರ ವಿಚಾರಗಳ ಚಿಂತೆಯೇಕೆ? ಆದರೆ ಏನೇ ಆಗಲಿ, ಅಪಮಾನವಾದ ಊರಿನಲ್ಲಿ ಮಾತ್ರ ಇರಬಾರದು. ಹೋಗೋಣ. ಹೊರಟು ಹೋಗೋಣ. ಬಹಳ ದೂರ ಹೊರಟು ಹೋಗೋಣ. (ಹೊರಡುವನು. ಇದಿರಿನಿಂದ ಕೆಂಪಮ್ಮ ಬರುವಳು)

ಕೆಂಪಮ್ಮ—ಇದೇನ್ ಮಗ್ನೇ! ಕೆಂಪಣ್ಣಾ! ಎಲ್ಲಪ್ಪಾ ಹೊರ್ಟೇ? ಶಾಸ್ತ್ರಿಗಳ್ ಮನೇಗ್ಹೋಟ್ಟೀನೂ? ತೋಟದ್ ಕೆಲ್ಸಾ ಎಲಾ ಮುಗೀತೇನೂ?

ಕೆಂಪಣ್ಣ—(ತಾಯಿಯ ಕಾಲಿಗೆ ನಮಸ್ಕರಿಸುತ್ತ) ಅಮ್ಮಾ, ನನ್ಗಾಶೀರ್ವಾದ ಮಾಡಮ್ಮಾ, ನಾನ್ ದೇಶದ್ಮೇಲ್ ಹೊರ್ಟಿದ್ದೀನಿ.

ಕೆಂಪಮ್ಮ—ಹಾಂ! ಏನ್ಹೇಳ್ತಾಯಿದ್ದೀಯಾ ನೀನು? ಬುದ್ಧಿಗಿದ್ದೀ ಕೆಟ್ಹೋಗ್ಬಿಟ್ಟದೆಯೋ ಹ್ಯಾಗ್ ನಿನ್ಗೇ?

ಕೆಂಪಣ್ಣ—ಅಮ್ಮಾ ನನ್ಗ ಬುದ್ಧಿ ಸರಿಯಾಗಿದೆಯಮ್ಮಾ. ಅದಕ್ಕೋಸ್ಕರ್ವೇ ದೇಶದ್ಮೇಲ್ ಹೊರ್ಟಿದ್ದೀನಿ.

ಕೆಂಪಮ್ಮ—ದೇಶದ್ಮೇಲ್ ಹೊರ್ಟಿದ್ದೀಯಾ? ನನ್ನನ್ನೂ ನಿನ್‌ತಂಗಿನೂ ಏನ್‌ಮಾಡ್ಬಿಟ್ ಹೋಗ್ತೀಯಾ? ಹೋಗ್ಲಿ, ನಮ್ವಿಚಾರ ಬ್ಯಾಡಾ, ನಿನ್ಗೇ ತಂದೆತಾಯ್ಗಳಿಗಿಂತ ಹೆಚ್ಚಾಗ್ ಸಾಕದ್ರಲ್ಲಾ ಶಾಸ್ತ್ರಿಗಳು, ಔರ್‌ಮನೇ ಬಿಟ್‌ಹೋಗ್ತ್ಯಾ? ಔರ್‌ತೋಟಾ ಬಿಟ್‌ಹೋಗ್ತ್ಯಾ?

ಕೆಂಪಣ್ಣ—ಇನ್ನೆಲ್ಲಮ್ಮಾ ಔರ್‌ಮನೇ! ಇನ್ನೆಲ್ ಔರ್‌ತೋಟಾ! ಶಾಸ್ತ್ರಿಗಳೇ ನನ್‌ಗ್ಹೊಡ್ದು ಬಬ್ಯಾರ್ಡಾಹೋಗೂ ಅಂತಾ ನೂಕ್ಬಿಟ್ರು.

ಕೆಂಪಮ್ಮ—ನೀನ್ ಸರಿಯಾಗ್ ಕೆಲ್ಸಾಮಾಡ್ತಾಯಿರ್ಲಿಲ್ವೇನೋ?

ಕೆಂಪಣ್ಣ—ಅಯ್ಯೋ! ಎಷ್ಟ್ ಕೆಲ್ಸಾಮಾಡದ್ರೂ, ಎಷ್ಟ್ ದುಡದ್ರೂ ಔರ್ಗ್ ಸಮಾಧಾನ್ವೇಇಲ್ಲಾ. ಏನಮ್ಮಾ! ನಾನೀ ವಯಸ್ನಲ್ಲಿ ಔರ್‌ಕೈಯಿಂದಾ ಹೊಡಸ್ಕೋಭೌದೇನಮ್ಮಾ?

ಕೆಂಪಮ್ಮ—ಮಗ್ನೇ! ಎಲ್ಲಾ ಧರ್ಮ, ನೀತಿ, ಆಚಾರ, ವಿಚಾರಗಳಿಗೆ ನಿಯಮಗಳಿರುವಂತೆ ವೃತ್ತಿಗಳಿಗೂ ಇರುತ್ತವೆ. ಹಾಗೆಯೇ ಸೇವಾವೃತ್ತಿಗೂ ಇರುತ್ತದೆಯಪ್ಪಾ, ಯಜಮಾನನಾದವನು ಹೊಡಿಯಲಿ, ಬಡಿಯಲಿ, ಬೈಯಲಿ, ಉಗಿಯಲಿ ಎಲ್ಲವನ್ನು ಸೇವಕನಾದವನು ಸಹಿಸಿಕೊಂಡು ಹೋಗಬೇಕಾಗುತ್ತದೆ. ಮಾನಾಪಮಾನದ ಪ್ರಶ್ನೆಯನ್ನು ಸೇವಕನಾದವನು ಎತ್ತಬಾರದು

ಕೆಂಪಣ್ಣ—ಹಾಗಾದರೆ ಸೇವಕನಿಗೆ ದಣಿವಾಗುವುದಿಲ್ಲವೇ? ಹಸಿವಾಗುವುದಿಲ್ಲವೇ? ಬಾಯಾರಿಕೆಯಾಗುವುದಿಲ್ಲವೇ? ಸೇವಕನಿಗೂ ಮಾನ ಮರ್ಯಾದೆ, ಅಭಿಮಾನಗಳಿರುವುದಿಲ್ಲವೇ? ಇದನ್ನೆಲ್ಲಾ ನಿರ್ಧರಿಸಲೇ ಬೇಕಲ್ಲವೇ?

ಕೆಂಪಮ್ಮ—ಇದನ್ನೆಲ್ಲಾ ನಿರ್ಧರಿಸಬೇಕಾದವನು ಸೇವಕನಲ್ಲ ಮಗನೇ! ಇವನ್ನೆಲ್ಲಾ ನಿರ್ಧರಿಸಬೇಕಾದವನು ಧಣಿಯಾದವನು.

ಕೆಂಪಣ್ಣ—ಏನಮ್ಮ ನೀನು ಹೇಳುತ್ತಿರುವುದು? ಸೇವಕನಾದ ಮಾತ್ರಕ್ಕೆ ಆತನೇನು ಮನುಷ್ಯನಲ್ಲವೇ?

ಕೆಂಪಮ್ಮ—ಮಗನೇ, ಸೇವಾವೃತ್ತಿಯೇ ಪಶುವೃತ್ತಿಯು, ಇನ್ನು ಮನುಷ್ಯತ್ವದ ಪ್ರಶ್ನೆ ಬಹಳದೂರ ಉಳಿಯಿತು.

ಕೆಂಪಣ್ಣ—ಯಾವ ಪ್ರಶ್ನೆ ಎಲ್ಲಿಯಾದರೂ ಉಳಿಯಲಿ. ನಾನಂತೂ ಹೊರಟಿರುವುದು ನಿಶ್ಚಯ.

ಕೆಂಪಮ್ಮ—ನೀನು ಹೊರಟಿರುವುದು ನಿಶ್ಚಯವೇ ಆದರೆ—ನನ್ನನ್ನೂ, ಅನಾರೋಗ್ಯದಿಂದ ನರಳುತ್ತಿರುವ ನಿನ್ನ ತಂಗಿಯನ್ನೂ ಕೊಂದು ಹೊರಟುಹೋಗು.

ಕೆಂಪಣ್ಣ—ಅಮ್ಮಾ, ನಾನು ಮೊದಲೇ ನೊಂದಿರುತ್ತೇನೆ. ಪುನಃ ನೀನೇಕೆ ಇಂತಹ ಚುಚ್ಚುಮಾತುಗಳನ್ನಾಡುತ್ತಿರುವೇ? ನನಗೇಕೆ ನೋವನ್ನು ಕೊಡುತ್ತಿರುವೇ?

ಕೆಂಪಮ್ಮ—ಇವು ಚುಚ್ಚುಮಾತುಗಳಲ್ಲ ಮಗ್ನೇ, ಹೃದಯದ ವೇದನೆ ಈ ರೀತಿ ಆಡಿಸುತ್ತಿದೆ. ರಾಜ್ಯವು ಹೋಯಿತು. ಅರಮನೆಗಳು ಹೋದುವು. ಪರಿವಾರವು ಕಣ್ಮರೆಯಾಯಿತು. ಸುಖ, ಸಂಪತ್ತುಗಳು ಮಾಯವಾಗಿ ದಟ್ಟದಾರಿದ್ರ್ಯವು ಪ್ರಾಪ್ತವಾಯಿತು. ಗಂಡನ ಆಶ್ರಯವು ತಪ್ಪಿಹೋದ ದುಃಖದೊಂದಿಗೆ ತೌರುಮನೆಯಿಂದಲೂ ಹೊರಬೀಳಬೇಕಾಯಿತು. ಇಷ್ಟಾದರೂ ದುಃಖವು ಬಾಧಿಸಲಿಲ್ಲ. ಚಿಂತೆಯು ಪೀಡಿಸಲಿಲ್ಲ. ಏಕೆಂದರೆ ನಿನ್ನ ಮುಖದರ್ಶನದಿಂದ ಎಲ್ಲಾ ದುಃಖ ಸಂಕಟಗಳೂ ನಿವಾರಣೆಯಾಗುತ್ತಿದ್ದುವು. ನಿನ್ನನ್ನೇ ನಂಬಿ ನಿನಗೋಸ್ಕರವೇ ಬಾಳುತ್ತಿದ್ದ ನನ್ನನ್ನು ಬಿಟ್ಟು ಹೊರಟುಹೋಗುವೆಯ? ರೋಗದಿಂದ ನರಳುತ್ತಿರುವ ತಂಗಿಯನ್ನು ಲಕ್ಷಿಸದೆ ಹೋಗುವೆಯಾ? ಹೋಗು, ನಿರ್ದಯಿಯಾಗಿ ಹೋಗು. ನೀನು ಹೋದಕೂಡಲೇ ನಾವಿಬ್ಬರೂ ಭಾವಿಗೆ ಹಾರಿ ಪ್ರಾಣಕಳೆದುಕೊಳ್ಳುತ್ತೇವೆ. ನಮಗಿನ್ನಾರು ಗತಿ? (ಸೆರಗಿನಿಂದ ಮುಖವನ್ನು ಮುಚ್ಚಿಕೊಳ್ಳುವಳು)

ಕೆಂಪಣ್ಣ—ಅಮ್ಮಾ, ನೀನೇಕೆ ಇಂತಹ ಮಾತುಗಳನ್ನಾಡುತ್ತಿರುವೆ? ನೀನೇಕೆ ಅಳುತ್ತಿರುವೇ? (ಕೈಗಳನ್ನು ಎಳೆಯುತ್ತ) ಅಳಬೇಡಮ್ಮಾ ಅಳಬೇಡಮ್ಮಾ! ನೀನತ್ತರೆ ನನಗೂ ಅಳುಬಂದು ಬಿಡುತ್ತೆ. ಇನ್ನು ಮೇಲೆ ನಿನ್ನನ್ನು ಬಿಟ್ಟುಹೋಗುವುದಿಲ್ಲಮ್ಮಾ! ಎಲ್ಲಿಗೂ ಹೋಗುವುದಿಲ್ಲಮ್ಮಾ! ಹೇಳಮ್ಮಾ? ಏನುಮಾಡಲಿ ಹೇಳಮ್ಮಾ?

ಕೆಂಪಮ್ಮ—(ಕಣ್ಣೀರನ್ನು ಒರೆಸಿಕೊಳ್ಳುತ್ತ) ಹೋಗುವುದಿಲ್ಲವೇ? ನನ್ನನ್ನು ಬಿಟ್ಟು ಹೋಗುವುದಿಲ್ಲವೇ? ಎಷ್ಟಾದರೂ ನನ್ನ ಮಗನಲ್ಲವೇ? (ನೀವಾಳಿಸಿಕೊಂಡು) ರಾಜನಾಗಿ ಸಾವಿರವರುಷ ಬಾಳು.

ಕೆಂಪಣ್ಣ—ಈಗ ನಾನೇನಮ್ಮಾ ಮಾಡ್ಲೀ ?

ಕೆಂಪಮ್ಮ—ಏನೂ ಮಾಡಬೇಡ. ನೇರವಾಗಿ ತೋಟಕ್ಕೆ ಹೋಗು. ಗುದ್ದಲಿಯನ್ನು ತೆಗೆದುಕೊಂಡು ಗುಂಡಿಗಳನ್ನು ತೋಡು. ಬಾಳೆಯ ಗಿಡಗಳನ್ನು ನೆಡು.

ಕೆಂಪಣ್ಣ—ಹಾಂ! ತೋಟಕ್ ಹೋಗ್ಬೇಕೇ?

ಕೆಂಪಮ್ಮ—ಹೌದು, ಹೌದು. ತೋಟಕ್ಕೇ ಹೋಗ್ಬೇಕು.

ಕೆಂಪಣ್ಣ—ಏನಮ್ಮಾ, ನೀನೇ ಹೀಗ್ಹೇಳ್ತೀಯಾ! ಅಕಸ್ಮಾತ್ ನಾನ್ ಹೋದ್ರೂ ಶಾಸ್ತ್ರಿಗಳು ಸುಮ್ನಿರ್ತಾರೇನಮ್ಮಾ!

ಕೆಂಪಮ್ಮ—ನಾನ್ ಹೋಗಿ ಸಾವಿತ್ರಮ್ನೋರ್ಗೆ ಎಲ್ಲಾ ಹೇಳ್ತೀನಿ. ಔರ್ ಹ್ಯಾಗೂ ನಿನ್ನನ್ನ ಔರ್ ರಂಗ್ನಾಥನ್ಗಿಂತಾ ಹೆಚ್ಚಾಗ್ ಪ್ರೀತಸ್ತಾರೇ. ಔರೂ ಶಾಸ್ತ್ರಿಗಳಿಗೆ ಸಮಾಧಾನಹೇಳ್ತಾರೇ. ಹೋಗು ತೋಟಕ್ ಹೋಗು.

ಕೆಂಪಣ್ಣ—(ತಲೆ ಕೆರೆದುಕೊಳ್ಳುತ್ತಾ) ಹ್ಯಾಗಮ್ಮಾ ಹೋಗೋದು ?

ಕೆಂಪಮ್ಮ—(ಮಗನನ್ನು ತಳ್ಳುತ್ತ) ನೀನ್ ಹೋಗಪ್ಪಾ, ನನ್ ಮಾತ್ ಕೇಳು, ಹೋಗು.

ಕೆಂಪಣ್ಣ—ನೀನೆಲ್ಲಮ್ಮಾ ಹೋಗ್ತ್ಯೆ?

ಕೆಂಪಮ್ಮ—ನಾನು ಶಾಸ್ತ್ರಿಗಳ ಮನೇಗ್ಹೋಗಿ, ಸಾವಿತ್ರಮ್ನೋರಿಗೆ ಹೇಳಿ ಹಾಗೇನೇ ಗುಡ್ಡದ ಹತ್ರಕ್ಹೋಗ್ಬಿಟ್ಟೂ ಪೋರ್ಕಗಳನ್ನ ಕಟ್ಕೊಂಡ್ ಬರ್ತೀನಿ. ಹೋಗು, ತೋಟಕ್ಹೋಗು.

ಕೆಂಪಣ್ಣ—(ಬೇಸರದಿಂದ) ಏನಮ್ಮಾ ನೀನ್ ನನ್ಗ್ಹೀಗ್ ಒತ್ತಾಯ ಮಾಡ್ತ್ಯೆ?

ಕೆಂಪಮ್ಮ—(ಮಗನನ್ನು ತಳ್ಳುತ್ತ) ಚಿಂತೆಯಿಲ್ಲಾ ನಡಿಯಪ್ಪಾ! ಇದೇ ಕಾಲ ಶಾಶ್ವತವಾಗಿರೋದಿಲ್ಲ. ಕಷ್ಟಾಕೊಟ್ಟ ದೇವ್ರಿಗೆ ಸುಖಾ ಕೊಡೋದೂ ಗೊತ್ತಿದೆ. (ತಳ್ಳಿಕೊಂಡು ಹೋಗುವಳು)

ದೃಶ್ಯ—೨೨

ತೋಟ

(ಕೆಂಪಣ್ಣನು ಪ್ರವೇಶಿಸುವನು)

ಕೆಂಪಣ್ಣ—ಇದೇನಿದು? ಎಲ್ಲೆಲ್ಲಿಯು ಶುಭ ಶಕುನಗಳೇ ಕಾಣಿಸಿಕೊಳ್ಳು ತ್ತಿವೆ! ಬಲಗಣ್ಣು ಅದರುತ್ತಿದೆ! ಹೃದಯದ ಭಾರವು ಮಾಯ ವಾಗುತ್ತ ಹೃದಯವು ಗಾಳಿಯು ಪೂರೆಯಂತೆ ಹಗುರವಾಗುತ್ತಿದೆ. ಮೋಹಕ ಮಂದಾನಿಲವು ದಿವ್ಯ ಸೌರಭವನ್ನು ಹೊತ್ತು ಸಂಚಲಿಸು ತ್ತಿದೆ! ವಾತಾವರಣವೇ ಮನೋಜ್ಞವಾಗಿಯೂ, ಸುಬಂಧುರ ವಾಗಿಯೂ ಕಂಗೊಳಿಸುತ್ತಿದೆ! ಎಲ್ಲೆಲ್ಲಿಯೂ ಪ್ರಶಾಂತತೆಯೂ ಶುಭ್ರ ಮಂದಹಾಸವೂ ತಾನೇ ತಾನಾಗಿ ಮಧುರ ಲಾಸ್ಯವೆಸಗುತ್ತಿರು ವಂತೆ ಭಾಸವಾಗುತ್ತಿದೆ! ಏನು ಪ್ರಕೃತಿ ಮಾತೆಯ ಅಲೌಕಿಕ ಅಪೂರ್ವ ಸೌಂದರ್ಯವಿದೂ? ನಿಸರ್ಗದೇವತೆಯ ನಿರುಪಮ ನಿಗರ ಲಾವಣ್ಯವಿದು? ಈ ಅನಿರೀಕ್ಷಿತ ಪರಿವರ್ತನೆಗೇನು ಕಾರಣ? ಯಾರಿಗೇನರಿವು? ಹುಲುಮಾನವರಾದ ನಮ್ಮಿಂದ ಇದನ್ನು ಊಹಿಸ ಲಾದರೂ ಸಾಧ್ಯವಾದೀತೇ? (ಎರಡು ಕೈಗಳನ್ನೂ ಮೇಲಕ್ಕೆತ್ತಿ) ಹೇ! ಅಚ್ಯುತಾನಂತಾದ್ಯಂತ ರಹಿತನಾದ ಮಹಿಮಾನ್ವಿತ ರಂಗ ನಾಥ! ಹೇ ಸರ್ವವಿನುತ ಸರ್ವೋತ್ತಮ ಪರಾತ್ಪರ ಪರಮಾನಂದ ಪ್ರರಬ್ರಹ್ಮ ಜಗನ್ನಾಥ! (ಮಂಡಿಗಳನ್ನೂರಿ ಕುಳಿತುಕೊಳ್ಳುತ್ತ) ನಿನ್ನ ಪಾವನ ಪದಾಬ್ಜದಲ್ಲಿ ಸಹಸ್ರ ಶರಣಾರ್ತಿಗಳು (ಕಣ್ಣುಗಳನ್ನು ಮುಚ್ಚಿಕೊಂಡು ಪ್ರಾರ್ಥನೆ ಮಾಡಲಾರಂಭಿಸುವನು. ಬಾಳೆಯ ಮರಗಳು ತಾವಾಗಿಯೇ ನೆಡಲ್ಪಡುವುವು. ಕಣ್ಣು ಬಿಟ್ಟು ನೋಡಿ) ಏನು ಶಬ್ದ! ಇದೇನು ಶಬ್ದ! ಇದೇನು ಶಬ್ದ! ಶಬ್ದ ಮಾಡಿದವ ರೊಬ್ಬರೂ ಕಾಣಿಸುತ್ತಲೇ ಇಲ್ಲವಲ್ಲ? (ಪಕ್ಕಕ್ಕೆ ನೋಡಿ) ಇದೇನೂ?

ಬಾಳೇ ಗಿಡಗಳು! ಇವುಗಳನ್ನು ಯಾರು ನೆಟ್ಟರು? ಒಂದೂ ಅರ್ಥವೇ ಆಗುತ್ತಿಲ್ಲವಲ್ಲ? ಪ್ರಭು ರಂಗನಾಥಾ! ಏನು ನಿನ್ನ ಮಹಿಮೆಯೋ? ಆಗಲಿ, ಉಳಿದ ಗುಂಡಿಗಳನ್ನೂ ತೋಡಿ ಗಿಡಗಳನ್ನೆಲ್ಲಾ ನೆಟ್ಟೇಬಿಡುತ್ತೇನೆ. ತಾಯಿಯ ವಾಕ್ಯ ಪರಿಪಾಲನೆ ಮಾಡಲೇಬೇಕು. (ಗುದ್ದಲಿಯನ್ನು ಎತ್ತಿಕೊಂಡು ಅಗೆಯಲಾರಂಭಿಸುವನು.)

ಅನಂತಶಾಸ್ತ್ರಿ—(ಊಟವನ್ನು ತೆಗೆದುಕೊಂಡು ಪ್ರವೇಶಿಸಿ) ಏನ್ಮಾಡ್ಲೀ? ಮನೆಗ್ಹೋಗಿ ಜಬರ್ದಸ್ತ್ ತೋರ್ಸೋಣ. ಅಧಿಕಾರಾ ಚಲಾಯ್ಸೋಣಾ ಅಂತಾ ಹೋಗ್ತೀನಿ. ಆದ್ರೇ ಔಳ್ ಮುಖಾ ನೊಡ್ತೂ ಅಂದ್ರೇ, ನನ್ನಧಿಕಾರ, ದರ್ಪ ಎಲ್ಲಾ ಮಾಯಾವಾಗ್ಹೋಗ್ಬಿಡುತ್ತೇ. ಔಳ್ ಹೇಳ್‌ದ್ಹಾಗ್ ಕೇಳ್ಬೇಕೂ ಅಂತಾ ಅನ್ಸುತ್ತಲ್ಲಾ! ಭಗವಂತಾ ಹೆಂಡ್ತೀ ಮುಖದಲ್ಲಿ ಏನ್ ಅದ್ಭುತವಾದ ಮಹಿಮೆ ಅಡಗಿಸಿಟ್ಟಿದ್ದೀಯೋ? ಆ ಮುಖಾ ನೋಡಿದ್ ತಕ್ಷಣಾ ಗಂಡ್ಸಿನ್ ಸಾಹಸವೆಲ್ಲಾ ಹಣ್ಣಾಗ್ಹೋಗ್ಬಿಡುತ್ತಲ್ಹೋಪ್ಪಾ ಪರಮಾತ್ಮಾ! ಕೆಂಪನ್ಗೇ ಊಟಾ ನನ್‌ಮಗಾ ತಂದಿದ್ದಕ್ಕೆ, ನಾನ್ ಔನ್ನಾ ಹೊಡ್ದೋಡಿಸ್ಬಿಟ್ಟೇ. ಆದ್ರೇ ಹೆಂಡ್ತೀ ಅದೇ ಊಟಾ ತಗೋಂಡ್ಹೋಗಿ ಅಂತಾ ಹೇಳಿದ್ದಕ್ಕೆ ನಾನೇ ಹೊತ್ಕೊಂಡ್ ತಂದಿದ್ದೀನಲ್ಲಾ? ಗಂಡಾ ಹೇಳ್ದಾಗ್ ಹೆಂಡ್ತೀ ಕೇಳ್ಬೇಕೂ ಅಂದ್ಮೇಲೇ ಹೆಂಡ್ತಿ ಹೇಳ್ದಾಗ್ ಗಂಡಾನೂ ಕೇಳ್ಲೇಬೇಕು. (ಪಕ್ಕಕ್ಕೆ ತಿರುಗಿ ನೋಡಿ) ಇದೇನಿದು? ಎಷ್ಟೊಂದ್ ಕೆಲ್ಸಾ ನಡ್ಹೋಗ್ಬಿಟ್ಟದೇ! ಇವ್ನೇನ್ ಮನುಷ್ಯನೋ, ರಾಕ್ಷಸ್ನೋ ಗೊತ್ತಾಗ್ಲಿಲ್ವಲ್ಲಾ? ಭಲಾಹಿಡ್ದು ಮಾಡ್ತಾಯಿದ್ದಾನೇ ಅಂತಾ ಕಾಣ್ಸುತ್ತೆ. ಮಾಡ್ಲಿ, ಮಾಡ್ಲಿ, ನಾನ್ ಮಾತ್ರ ಮೆಚ್ಗೇ ತೋರಸ್ಬಾರ್ದೂ. (ಕೆಂಪಣ್ಣನ ಕಡೆಗೆ ತಿರುಗಿ) ಕೆಂಪಾ! ಇನ್ನೂ ಇಷ್ಟೇ ಏನೋ ಕೆಲ್ಸಾ ಆಗಿರೋದು?

ಕೆಂಪಣ್ಣ—ಮಾಡ್ತಾನೇ ಇದ್ದೀನಲ್ಲಾ ಸ್ವಾಮಿ?

ಶಾಸ್ತ್ರಿ—ಮಾಡು, ಮಾಡು ಸೋಮಾರಿಯಾಗ್ ಕಾಲಾಕಳೀಬ್ಯಾಡಾ. (ಊಟವನ್ನು ಕೊಡುತ್ತ) ಇದ್ ತಗೋ, ಊಟಾತಂದಿದ್ದೀನಿ. ನೋಡು, ಮೊದ್ಲು ಕೆಲ್ಸಾ ಆಮೇಲೂಟಾ. ಮೊದ್ಲುಕೆಲ್ಸಾ ಆ

ಮೇಲೂಟಾ, ತಿಳ್ಕೋ. ಚೆನ್ನಾಗ್ ಜ್ಞಾಪಕದಲ್ಲಿಟ್ಕೋ. ಇಲ್ನೋಡು (ಗುದ್ದಲಿಗಳನ್ನು ತೋರಿಸುತ್ತ) ಒಂದು ಎರಡು, ಮೂರು, ನಾಲ್ಕು ಒಂದ್ ಸೋತ್ರೆ ಒಂದ್ ತಗೋಬೇಕು. ಒಂದ್ ಸೋತ್ರೆ ಒಂದ್ ತಗೋಬೇಕು. ಕೂತ್ಕೊಂಡೋ, ಆಟಾಆಡ್ಕೊಂಡೋ, ಪದಾ ಹೇಳ್ಕೊಂಡೋ ಕಾಲಾಹಾಕದ್ರೆ ಓಡ್ಸೇಬಿಡ್ತೀನಿ. ಇನ್ನೇನಾದ್ರೂ ಸೇರ್ಸೋದಿಲ್ಲಾ. ಇದೇ ಕೊನೇ ಎಚ್ಚರ್ಕೆ. ತಿಳೀತೇನೋ?

ಕೆಂಪಣ್ಣ—ತಿಳೀತೂ ಸ್ವಾಮಿ.

ಶಾಸ್ತ್ರಿ—ಹೂಂ. ಇಲ್ಲೇ, ಹೊಲದ ಕಡೇ ಹೋಗ್ಬಿಟ್ ತಿರ್ಗಾಡ್ಕೊಂಡ್ ಬರ್ತೀನಿ. ನೋಡೋಣ ಇನ್ನೆಷ್ಟ್ ಕೆಲ್ಸಾಮಾಡಿತ್ಯಾ? (ಹೊರಡುವರು).

ಕೆಂಪಣ್ಣ—ಆಗ್ಲಿ ಸ್ವಾಮಿ, ಹೋಗ್ಬಿಟ್ ಬನ್ನಿ. (ಊಟದ ಕಡೆಗೆ ನೋಡುತ್ತ) ಏಕೋ ಹೊಟ್ಟೆ ಬಹಳವಾಗಿ ಹಸೀತಾಯಿದೆ. ಊಟಾಮಾಡ್ಕೊಂಡೇ ಮುಂದಿನ ಕೆಲ್ಸ ಮಾಡೋಣ. (ಗುದ್ದಲಿಯನ್ನು ಕೆಳಗಿಳಿಸುತ್ತ ಯೋಚಿಸಿಕೊಂಡವನಂತೆ) ಇಲ್ಲಾ, ಇಲ್ಲಾ ಸ್ವಾಮಿಯ ಆಜ್ಞೆ ದೇವರ ಆಜ್ಞೆಗೆ ಸಮಾನ. ಮೊದ್ಲು ಕೆಲ್ಸಾ ಆಮೇಲೂಟಾ. ಮೊದ್ಲು ಕೆಲ್ಸಾ ಆಮೇಲೂಟಾ. (ಅಗೆಯಲು ಗುದ್ದಲಿಯನ್ನೆತ್ತುವನು. ಹಿಂದಿನಿಂದ ವೀರೇಗೌಡನೂ, ಇತರರೂ ಬಂದು ಗುದ್ದಲಿಯನ್ನು ಕಿತ್ತುಕೊಳ್ಳುವರು. ಹಗ್ಗದಿಂದ ಕಟ್ಟಿ ಕೆಳಗೆ ಕೂರಿಸುವರು.)

ಕೆಂಪಣ್ಣ—ಅಯ್ಯೋ! ನೀವೇಕೆ ನನ್ನನ್ನು ಹಿಂಸಿಸಲು ಬಂದಿರುವಿರಿ? ನಾನು ನಿಮಗುಂಟುಮಾಡಿದ ಅನ್ಯಾಯವಾದರೂ ಏನು?

ವೀರೇಗೌಡ—ಏನೂ ಅನ್ಯಾಯವನ್ನೇ ಮಾಡಲಿಲ್ಲವೇ? ಅಯೋಗ್ಯಾ, ಆ ದಿನ ನಮ್ಮ ಕೈಗೆ ಸಿಕ್ಕಿದ ಬೇಟೆಯನ್ನು ಬಂದು ತಪ್ಪಿಸಿದೆಯಲ್ಲಾ, ನಾವೇನೋ ಅನ್ಯಾಯಮಾಡಿದ್ದೆವು ನಿನಗೆ?

ಕೆಂಪಣ್ಣ—ಬೇಟೇ? ಎಂಥಾಬೇಟೆ? ಯಾವ ಬೇಟೆ? ನಾನ್ಯಾವಾಗ ಬೇಟೆಗೆ ಬಂದಿದ್ದೆ? ನಾನ್ಯಾವಾಗ ನಿಮ್ಮ ಬೇಟೆಯನ್ನು ತಪ್ಪಿಸಿದೇ?

ವೀರೇಗೌಡ—ಏನೂ ಅರಿಯದವನಂತೆಮಾತನಾಡುತ್ತಿರುವೆಯಾ ದ್ರೋಹಿ? ಆ ದಿನ ಕೈಗೆ ಸಿಕ್ಕಿದ ಹುಡುಗಿಯನ್ನು ನೀನು ಬಂದು ತಪ್ಪಿಸಲಿಲ್ಲವೇ?

ಜೀವಮಾನದಲ್ಲಿ ಎಂದೂ ಕಾಣದೆ ಇದ್ದಂಥಾ ಸೋಲು! ಅನುಭವಿಸದೆ ಇದ್ಧಂಥಾ ಅಪಮಾನ! ತಿನ್ನದೆ ಇದ್ದಂಥಾ ಹೊಡೆತಗಳು! ಎಲ್ಲಾ ನಿನ್ನ ದೆಸೆಯಿಂದಲೇ ಅಲ್ಲವೇ! ಅದಕ್ಕೆಲ್ಲಾ ನೀನೇ ಕಾರಣನಲ್ಲವೇ!

ಕೆಂಪಣ್ಣ—ನಾನು ಕಾರಣನಲ್ಲ. ಶ್ರೀರಂಗನಾಥನು ಅದಕ್ಕೆ ಕಾರಣನು. ಎಲ್ಲಾ ಆತನ ಇಚ್ಛೆಯಿಂದಲೇ, ಆತನ ದೆಸೆಯಿಂದಲೇ ನಡೆದು ಹೋಗಿದೆ

ವೀರೇಗೌಡ—ರಂಗನಾಥನೇ ಕಾರಣನೋ? ಆತನ ದೆಸೆಯಿಂದಲೇ ಎಲ್ಲವೂ ನಡೆದುಹೋಗಿದೆಯೋ? ಹಾಗಾದರೆ ಕೇಳು, ಆ ದಿನ ನಮಗುಂಟಾದ ಸೋಲಿನ, ಅಪಮಾನದ, ಹೊಡೆತಗಳ ಸೇಡನ್ನು ಈ ದಿನ ತೀರಿಸಿಕೊಳ್ಳಲು ಬಂದಿದ್ದೇವೆ. ನಿನ್ನ ದೇಹವನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸಿ ನಾಯಿನರಿಗಳಿಗೂ, ಹದ್ದು ಕಾಗೆಗಳಿಗೂ ಹಂಚಬೇಕೆಂದಿದ್ದೇವೆ. ಇದಕ್ಕೂ ರಂಗನಾಥನೇ ಕಾರಣ. ಇದೂ ಆತನ ದೆಸೆಯಿಂದಲೇ ನಡೆದು ಹೋಗುತ್ತಿದೆಯೆಂದು ಭಾವಿಸಿಕೋ.

ಕೆಂಪಣ್ಣ—ನಿಶ್ಚಯ, ಸಕಲ ಜಗದ್ವ್ಯವಹಾರಗಳೂ ಆ ವಿಶ್ವಂಭರ ವಾಸುದೇವನ ಇಚ್ಛಾನುಸಾರವಾಗಿಯೇ ಜರಗಿಹೋಗುತ್ತಿವೆ. ಆತನ ಆಜ್ಞಾವಿನಹ ಒಂದು ಮಣ್ಣಿನ ಹೆಂಟೆಯಾಗಲೀ, ಒಂದು ಗಿಡದ ಎಲೆಯಾಗಲೀ. ಒಂದು ಹುಲ್ಲಿನ ಕಡ್ಡಿಯಾಗಲೀ ತನ್ನ ತನ್ನ ಸ್ಥಳದಿಂದ ಅಲುಗಲಾರದು. ಸಕಲ ಚರಾಚರ ವಸ್ತುಗಳೂ ಆ ಜಗನ್ನಿಯಂತನ ಆಜ್ಞಾ ಸೂತ್ರಕ್ಕೆ ಕಟ್ಟುಬಿದ್ದಿವೆ. ಹೀಗಿರುವಲ್ಲಿ ಕೊಲ್ಲಲು ನೀವು ಯಾರು! ಕೊಲಿಸಿಕೊಳ್ಳಲು ನಾನು ಯಾರು! ಆಶ್ರಿತಭಕ್ತವತ್ಸಲ ಕರುಣಾಸಿಂಧು ರಂಗನಾಥನ ಇಚ್ಛೆಯಿಲ್ಲದಿದ್ದರೆ. ನಿನ್ನಂತಹ ಹತ್ತುಲಕ್ಷ ನಾಯಿಕುನ್ನಿಗಳು ಬಂದರೂ ನನ್ನನ್ನೇನು ಮಾಡಿಯಾವು!

ವೀರೇಗೌಡ—ಎಲಾ ಕೊಬ್ಬಿನ ಕುರಿಯೇ! ಏನು ನಿನ್ನ ಧೋರಣೆ! ಏನು ನಿನ್ನ ಮನೋಭ್ರಾಂತಿ! ಸಾವು ಸನ್ನಿಹಿತವಾಗಿರಲೂ ಏನು ನಿನ್ನ ಅಜ್ಞಾನದ ಅಮಲು? ನಿನ್ನ ದುರ್ದೆಸೆಗಾಗಿ ಚಕಿತನಾಗು, ಕಂಪಿತನಾಗು, ಅಳು ಭೋ ಎಂದು ಗೋಳಿಡು. ಈಗ ನನ್ನ

ಹಸ್ತದಿಂದ ಹತ್ತುಸಾವಿರ ರಂಗನಾಥರೂ ನಿನ್ನನ್ನು ಕಾಪಾಡಲಾರರು. ನನ್ನ ಖಡ್ಗದ ಒಂದೇ ಪ್ರಹರದಿಂದ ನಿನ್ನ ಪ್ರಾಣವು ದಿಕ್ಕುಕೆಟ್ಟು ಓಡಿಹೋಗುವುದು.

ಕೆಂಪಣ್ಣ—ಅಯ್ಯೊ, ಸೊಕ್ಕಿದ ಸೊಣಗವೇ? ಏನು ನಿನ್ನ ಅಜ್ಞಾನ? ತ್ರಿ ಕ ರ ಣ ಶುದ್ಧಿಯಿಂದ ಭಕ್ತಪರಾಧೀನನಾದ ರಂಗನಾಥನನ್ನು ನಂಬಿದ ವೀರ ಒಕ್ಕಲಿಗನಿಗೆ ವಿರುದ್ಧವಾಗಿ ಹದಿನಾಲ್ಕು ಲೋಕಗಳೇ ಬಂದರೂ ಆ ತ ನು ಬೆದರುವವನಲ್ಲ. ಇನ್ನು ನಿನ್ನಂತಹ ಅತ್ಯಲ್ಪರನ್ನು ಆತನು ಲಕ್ಷಿಸುವನೇ?

ವೀರೇಗೌಡ—ಎಲಾ ದುರಭಿಮಾನೀ! ಸಾವಿನ ದವಡೆಯಲ್ಲೂ ಏನು ನಿನ್ನ ಅಜ್ಞಾನ! ಇನ್ನು ಕೆಲವೇ ನಿಮಿಷಗಳಲ್ಲಿ ನಿನ್ನ ಗತಿಯು ಪೂರೈಸಿತೆಂದು ತಿಳಿ. ನಿನ್ನ ಇಹಲೋಕ ವ್ಯಾಪಾರವೇ ಮುಗಿದು ಹೋಗುತ್ತಿರುವಾಗಲೂ ನಿನಗಿಷ್ಟೊಂದು ಅಹಂಕಾರವೇ! ನಿನ್ನ ಈ ದುರಹಂಕಾರ! ನಿನ್ನ ಧೋರಣೇ! ನಿನ್ನ ಅಜ್ಞಾನ! ನಿನ್ನ ಪಾಲಿನ ಯಮಕಿಂಕರರಾಗಿ ನಿನ್ನ ಬಾಳನ್ನು ಮುಗಿಸುತ್ತಿರುವರೆಂದು ಭಾವಿಸಿಕೋ. ಸಿದ್ಧನಾಗು, ಸಾಯಲು ಸಿದ್ಧನಾಗು. ನಿನ್ನ ರಂಗನಾಥನನ್ನು ಅರಚಿಕೋ, ಕೂಗಿಕೋ ಮೊರೆಯಿಡು. ಅಳು, ಗೋಳಾಡು ನಿನಗೆ ಕರು ನೀರು ಕುಡಿಯುವಷ್ಟು ಕಾಲವನ್ನು ಕೊಟ್ಟಿರುತ್ತೇನೆ.

ಕೆಂಪಣ್ಣ—ಒಳ್ಳೆಯದೇ ಆಯಿತು. ಸಾಯುವ ಕಾಲವಲ್ಲಿ ರಂಗನಾಥನ ಧ್ಯಾನ. ವಿಶ್ವವಿಧಾಯಕ ರಂಗನಾಥನ ಪಾ ವ ನ ನಾಮಸ್ಮರಣೆ ಮಾಡುತ್ತಲೇ ಸಾಯುವ ಮಹಾ ಭಾಗ್ಯ ರಂಗನಾಥನ ಕೃ ಪಾ ನು ಕಂಪದಿಂದಲೇ ಲಭಿಸಿತು. (ಧ್ಯಾನಮಾಡಲಾರಂಭಿಸುವನು)

ವೀರೇಗೌಡ—ಹೊಡೆಯಿರಿ. ಇವನ ದೇಹವನ್ನು ನುಚ್ಚುನುರಿಮಾಡಿಬಿಡಿ. ಇವನನ್ನು ಜಗತ್ತಿನಮೇಲಿರಲಿಲ್ಲ ಎನ್ನಿಸಿಬಿಡಿ. ಮುಖವನ್ನೇನು ನೋಡುತ್ತಿರುವಿರಿ! ಹೊಡೆಯಿರಿ.

(ಎ ಲ್ಲ ರೂ ಚೂರಿಗಳನ್ನೆತ್ತಿ ಹೊಡೆಯಲು ಬರುವರು. ಆದಿಶೇಷನು ಭುಸ್ಸೆಂದು ಮೇಲೇಳುವನು, ಎಲ್ಲರೂ ಅಯ್ಯೋ ಸರ್ಪ! ಅಯ್ಯೋ ಸರ್ಪ! ಎಂದು ಓಡಿಹೋಗುವರು. ಕೆಂಪಣ್ಣ ಹಾಡುತ್ತಲೇ ಮಲಗಿಕೊಳ್ಳುವನು. ಆದಿಶೇಷಾ ಹೆಡೆಯನ್ನಾಡಿಸುತ್ತಿರುವನು

ಸರಸ್ವತಿ ಭಂಡಾರ

ಅನಂತಶಾಸ್ತ್ರಿ—(ಪ್ರವೇಶಿಸಿ) ಏನು ಮಹಾಶ್ಚರ್ಯಗಳಿವು! ಇದೇನು ಬಾಳೆಯ ತೋಟವೋ ಅಥವಾ ಇಂದ್ರನ ನಂದನವನವೋ! ಒಂದೂ ತಿಳಿಯದಂತಾಗಿದೆ. ಏನು ಅಪೂರ್ವವಾದ ಉತ್ಸಾಹ! ಏನು ಪ್ರಶಾಂತ ವಾತಾವರಣ! ಏನು ಸುವಾಸಿತ ಮಂದಸಮೀರಣನ ಸಂಚಾಲನ; ಪ್ರಕೃತಿದೇವಿಯು ಸರ್ವಾಲಂಕೃತೆಯಾಗಿ ಆನಂದೋಲ್ಲಾಸದಿಂದ ನಾಟ್ಯವಾಡುತ್ತಿರುವಳೋ ಎಂಬಂತೆ ಭಾಸವಾಗುತ್ತಿದೆ! ಈ ಅನಿರೀಕ್ಷಿತವಾದ ಮಹತ್ಪರಿವರ್ತನೆಗೇನು ಕಾರಣವಿರಬಹುದು! ಒಂದೂ ಅರ್ಥವಾಗುತ್ತಿಲ್ಲವಲ್ಲ! ಒಂದೂ ಅರ್ಥವಾಗುತ್ತಿಲ್ಲವಲ್ಲ! ಆದರೆ ಕೆಂಪ ಎಲ್ಲಿ ಹೊರಟುಹೋದ? (ಸುತ್ತಲೂ ನೋಡಿ) ಇದೇನಿದು! ಧರ್ಮದೇವನೆಂದು ಪ್ರಖ್ಯಾತನಾಗಿರುವ ಆದಿಶೇಷನು ತನ್ನ ವಿಸ್ತಾರವಾದ ಹೆಡೆಯನ್ನೆತ್ತಿ ಆನಂದೋಲ್ಲಾಸದಿಂದ ಓಲಾಡುತ್ತಿರುವನು. ಮಹಾಶ್ಚರ್ಯ! ಮಹಾಶ್ಚರ್ಯ! ಆ ಹಾ ಹಾ ಹಾ! ಆದಿಶೇಷನ ಫಣವಿತಾನಾಶ್ರಯದಲ್ಲಿ ಶಯನಿಸಿರುವ ಪುಂಡರೀಕಾಕ್ಷನಂತೆ ಬೆಳಗುತ್ತಿರುವ ಮಹಾನುಭಾವ! ಇದೋ, ನಿನ್ನ ಚರಣ ಕಮಲಗಳಿಗನಂತ ವಂದನೆಗಳು. (ಕೆಂಪಣ್ಣನಿಗೆ ಸಾಷ್ಟಾಂಗ ಪ್ರಣಾಮ ಮಾಡುವರು. ಆದಿಶೇಷನು ಮಾಯವಾಗುವನು. ಶಾಸ್ತ್ರಿಗಳು ಎದ್ದು ನೋಡಿ) ಓಹೋ ಆದಿಶೇಷನು ಮಾಯವಾದನು. ಆಗಲಿ, ಮಾಗಡಿನಾಡಿನ ಪ್ರಭುವು ದೊರಕಿದನು. (ಕೆಂಪಣ್ಣನನ್ನು ಎಳಿಸುತ್ತ) ಕೆಂಪ! ಕೆಂಪ! ಕೆಂಪನಲ್ಲ, ಕೆಂಪನಲ್ಲ. ಇಂದಿನಿಂದ ಕೆಂಪೇಗೌಡ, ಮುಂದೆ ಮಾಗಡಿನಾಡಿನ ರಾಜನಾಗಲಿರುವ ಮಾಗಡಿ ಕೆಂಪೇಗೌಡ. ಕೆಂಪೇಗೌಡ! ಕೆಂಪೇಗೌಡ!

ಕೆಂಪಣ್ಣ—(ಜಾಗ್ರತನಾಗಿ) ಓಹೋ! ದಯುವಿಟ್ಟು ಕ್ಷಮಿಸ್ಸೀ ಸ್ವಾಮಿ, ಕೆಲ್ಸಾಮಾಡ್ತಾಯಿದ್ದೆ ಹಾಗೇ ನಿದ್ದೇ ಬಂದ್ಬಿಡ್ತು. ಕೋಪಾ ಮಾಡ್ಕೋಬ್ಯಾಡಿ. ಇನ್ಮೇಲೇ ಹೀಗೆಲ್ಲಾ ಮಾಡೋದಿಲ್ಲಾ. ಈಗ ಬೇಗ್ ಬೇಗಾ ಆಕಡೇ ಕೆಲ್ಸಾಯೆಲ್ಲಾ ಪೂರೈಸ್ಬಿಡ್ತೀನಿ (ಗುದ್ದಲಿಯನ್ನು ತೆಗೆದುಕೊಳ್ಳುವನು.

ಶಾಸ್ತ್ರಿ—(ಗುದ್ದಲಿಯನ್ನು ಕಿತ್ತು ಬಿಸಾಡಿ) ಇನ್ನು ಮೇಲೆ ಈ ಹಸ್ತಗಳು ಗುದ್ದಲಿ ಪಿಕಾಸಿಯನ್ನು ಹಿಡಿಯಲಾರವು. ನಮ್ಮ ಧರ್ಮವನ್ನುದ್ಧರಿಸುವ, ನಮ್ಮ ರಾಷ್ಟ್ರವನ್ನು ಸಂರಕ್ಷಿಸುವ ಮಂಗಳಕರ ಖಡ್ಗವನ್ನು ಹಿಡಿಯುವುವು.

ಕೆಂಪಣ್ಣ—ಸ್ವಾಮಿ, ತಾವು ಹೇಳುವುದೊಂದೂ ನನಗೆ ಅರ್ಥವೇ ಆಗುತ್ತಿಲ್ಲವಲ್ಲಾ ?

ಶಾಸ್ತ್ರಿ—ಕೆಂಪೇಗೌಡ! ನಾನು ನಿನಗೆ ಬಹುವಾಗಿ ಹಿಂಸಿಸಿದ್ದೇನೆ. ವಿವಿಧ ರೀತಿಯ ಸಂಕಟಗಳನ್ನಿತ್ತಿದ್ದೇನೆ. ನಿನಗೆ ಅನ್ನವನ್ನೂ ಹಾಕದೆ ಹಗಲು ರಾತ್ರಿಯೂ ದುಡಿಸಿದ್ದೇನೆ. ನಿನ್ನ ಈ ಪವಿತ್ರವಾದ ದೇಹಕ್ಕೆ ಬಲವಾದ ಪ್ರಹರಗಳನ್ನಿತ್ತು ನೋಯಿಸಿದ್ದೇನೆ. ನಿನ್ನನ್ನು ಮನಸ್ವೀ ಬೈದು ಅಪಮಾನಗೊಳಿಸಿದ್ದೇನೆ. ಆದರೆ ಅದನ್ನೆಲ್ಲಾ ಮರೆತು ಬಿಡು ಕೆಂಪೇಗೌಡ! ತಪ್ಪು ಮಾನವನಿಂದ ಜರಗಿಹೋಗುವುದು ಸ್ವಾಭಾವಿಕ, ತಪ್ಪು ಮಾಡದಿದ್ದರೆ ಮಾನವನು ದೇವತೆಯಾದಾನು. ಆದರೂ ನಾನೂ ಮಾಡಿದ ಮಹಾಪರಾಧಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದೇನೆ ಕೆಂಪೇಗೌಡ ;

ಕೆಂಪಣ್ಣ—ತಾವು ಹೇಳುವ ಮಾತುಗಳೆಲ್ಲವೂ ವಿಚಿತ್ರವಾಗಿವೆ. ನನಗೊಂದೂ ಅರ್ಥವೇ ಆಗುತ್ತಿಲ್ಲವಲ್ಲ!

ಶಾಸ್ತ್ರಿ—ಕೆಂಪೇಗೌಡ! ನಿನ್ನ ಈ ಹಸ್ತವು ರಾಜ ಖಡ್ಗವನ್ನು ಹಿಡಿದರೆ, ನಿನ್ನ ದೇಹವು ರಾಜಪೋಷಾಕನ್ನು ತೊಟ್ಟರೆ, ನಿನ್ನ ಶಿರವು ರಾಜ ಕಿರೀಟವನ್ನು ಧರಿಸಿದರೆ, ನನ್ನನ್ನು ಹಿಂಸಿಸುವುದಿಲ್ಲ. ತಾನೇ! ನಾನು ಮಾಡಿದ ಮಹಾಪರಾಧಕ್ಕಾಗಿ ನನಗೆ ಶಿಕ್ಷೆಯನ್ನು ವಿಧಿಸುವುದಿಲ್ಲ ತಾನೇ! ನನಗೆ ರಾಜ್ಯ ಭ್ರಷ್ಟನನ್ನಾಗಿ ಮಾಡುವುದಿಲ್ಲ ತಾನೇ!

ಕೆಂಪಣ್ಣ—ಸ್ವಾಮಿ, ನನ್ನನ್ನು ಅಪಹಾಸ್ಯ ಮಾಡುತ್ತಿರುವಿರಾ! ಹೊಟ್ಟೆಯ ಪಾಡಿಗಾಗಿ ಗುದ್ದಲಿ ಪಿಕಾಸಿಯನ್ನು ಹಿಡಿದು ಕೂಲಿ ಮಾಡುತ್ತಿರುವ ಈ ಹಸ್ತಗಳು ರಾಜ ಖಡ್ಗವನ್ನು ಧರಿಸುವುವೇ? ಮಲಿನವಾದ ಹರಕು ವಸ್ತ್ರಗಳನ್ನು ತೊಟ್ಟಿರುವ ಈ ದೇಹವು ರಾಜಪೋಷಾಕಿನಿಂದ

ಪ್ರಭೂಷಿತವಾಗುವುದೇ? ಸಗಣಿಯ ಬುಟ್ಟಿಯನ್ನು ಹೊರುತ್ತಿರುವ ಈ ಶಿರವು ರಾಜಮುಕುಟದಿಂದ ರಂಜಿಸುವುದೇ? ನಿರ್ಗತಿಕ, ನಿರಾಶ್ರಿತ ಬಡಕೂಲಿಗಾರನಾದ ನಾನು ಮಾಗಡಿನಾಡಿನ ರಾಜನಾಗುವುದೆಂದರೇನು? ನಿಮ್ಮನ್ನು ಹಿಂಸಿಸುವುದೆಂದರೇನು? ಶಿಕ್ಷಿಸುವುದೆಂದರೇನು! ರಾಜ್ಯ ಭ್ರಷ್ಟರನ್ನಾಗಿ ಮಾಡುವುದೆಂದರೇನು? ನೀವು ನನ್ನನ್ನು ಅಣಕಿಸುತ್ತಿಲ್ಲತಾನೇ?

ಶಾಸ್ತ್ರಿ—ಇಲ್ಲಾ, ಅಣಕಿಸುತ್ತಿಲ್ಲ. ಅಪಹಾಸ್ಯ ಮಾಡುತ್ತಿಲ್ಲ ಕೆಂಪೇಗೌಡ! ಸತ್ಯ ಸಂಗತಿಯನ್ನು ನಿನಗೆ ತಿಳಿಸುತ್ತಿದ್ದೇನೆ. ಹೇಳು, ನೀನು ಮಾಗಡಿ ನಾಡಿಗೆ ರಾಜನಾದರೆ ನನಗೇನು ಕೊಡುವೇ?

ಕೆಂಪಣ್ಣ—ಏನು ಕೊಡಲಿ? ತಾವು ನನ್ನ ಆಶ್ರಯದಾತರು. ಅನ್ನದಾತರು ನಾನು ತಮ್ಮ ಸೇವಕನು. ಸೇವಕನಿಗೆ ಏನು ಲಭ್ಯವಾದರೂ ಅದು ಪ್ರಭುವಿಗೇ ಸಲ್ಲಬೇಕು. ಆದ್ದರಿಂದ ನನಗೆ ರಾಜ್ಯಪದವಿ ಲಭಿಸಿದರೆ, ಅದನ್ನು ತಮಗೇ ಕೊಟ್ಟುಬಿಡುತ್ತೇನೆ. ಮನಸ್ಸಿಗೆ ಸಮಾಧಾನ ವಾಯಿತೇ?

ಶಾಸ್ತ್ರಿ—ಬೇಡ, ಬೇಡಾ. ರಾಜಪದವಿ ನನಗೆ ಬೇಡ. ರಾಜ ಖಡ್ಗವನ್ನು ಹಿಡಿಯುವ ಚೈತನ್ಯ ನನ್ನ ಬಾಹುಗಳಲ್ಲಿಲ್ಲ. ರಾಜನಾಗುವ ಸಲು ವಾಗಿಯೇ ನೀನು ಜನ್ಮಧಾರಣ ಮಾಡಿರುವೆ. ರಾಜಪದವಿಯು ನಿನಗೇ ಭೂಷಣವಾದುದು.

ಕೆಂಪಣ್ಣ—ಹಾಗಾದರೆ ಮತ್ತೇನುಕೊಡಲಿ? ಅಮಾತ್ಯ ಪದವಿಯನ್ನು ಕೊಡಲೇ? ತಮಗೆ ಸಮ್ಮತವೇ?

ಶಾಸ್ತ್ರಿ—ಕೊಡುವೆಯಾ? ನಿಶ್ಚಯವಾಗಿಯೂ ಕೊಡುವೆಯಾ?

ಕೆಂಪಣ್ಣ—ನಿಶ್ಚಯವಾಗಿಯೂ ಕೊಡುವೆನು. ನನ್ನಾಣೆಗೂ ಕೊಡುವೆನು. ನನ್ನ ವಂಶದಾಣೆಗೂ, ನನ್ನ ಕುಲದೇವರಾಣೆಗೂ ಕೊಡುವೆನು. ನಿಖಿಲ ಭುವನತ್ರಯುಗಳನ್ನೂ ತನ್ನ ಕರಪದ್ಮದಲ್ಲಿಟ್ಟು ಪರಿಪೋಷಿಸುತ್ತಿರುವ ನಟನ ಸೂತ್ರಧಾರಿ ಪುರುಷೋತ್ತಮ ರಂಗನಾಥನ ಆಣೆಗೂ ಕೊಡುವೆನು.

ಶಾಸ್ತ್ರಿ—ನನ್ನ ಮೇಲೆ ಸೇಡನ್ನು ತೀರಿಸಿಕೊಳ್ಳುವುದಿಲ್ಲ ತಾನೇ?

ಕೆಂಪಣ್ಣ—ಸೇಡನ್ನು ತೀರಿಸಿಕೊಳುವುದೇ? ತಂದೆಯ ಮೇಲೆ ಮಗನು ಸೇಡನ್ನು ತೀರಿಸಿಕೊಳ್ಳುವುದೇ? ಗುರುವಿನ ಮೇಲೆ ಶಿಷ್ಯನು ಸೇಡನ್ನು ತೀರಿಸಿಕೊಳ್ಳುವುದೇ? ಆಶ್ರಯವಿತ್ತು, ಅಶನವಿತ್ತು ಪೋಷಿಸಿದ ಪ್ರಭುವಿನ ಮೇಲೆ ಭೃತ್ಯನು ಸೇಡನ್ನು ತೀರಿಸಿಕೊಳ್ಳುವುದೇ? ಸ್ವಾಮಿ, ತಮಗೆ ಭರವಸೆಯಿರಲಿ ವೀರ ಒಕ್ಕಲಿಗನು ತನ್ನ ಜೀವಮಾನದಲ್ಲಿ ಎಲ್ಲಾ ವಿಧವಾದ ದುರಾಚಾರಗಳನ್ನು ಅರಿಯುಬಲ್ಲನು. ಆದರೆ ದ್ರೋಹ ವಚನಭ್ರಷ್ಟತೆ ಹಾಗೂ ಕೃತಜ್ಞತೆಗಳೆಂದರೇನೆಂಬುದನ್ನು ಮಾತ್ರ ಅರಿಯಲಾರನು.

ಶಾಸ್ತ್ರಿ—ಈಗ ನನ್ನ ಭೀತಿ ನಿವಾರಣೆಯಾಯಿತು ಕೆಂಪೇಗೌಡ! ನಿನ್ನ ವಿಚಾರದಲ್ಲಿ ನನಗೆ ಪೂರ್ಣ ಭರವಸೆಯುಂಟಾಯಿತು.

ಕೆಂಪಣ್ಣ—ಆದರೆ ಸ್ವಾಮಿ, ನಾನು ತಮಗೊಂದು ಪ್ರಶ್ನೆಯನ್ನು ಕೇಳಲೇ?

ಶಾಸ್ತ್ರಿ—ಕೇಳು! ಕೇಳು! ಅಗತ್ಯವಾಗಿ ಕೇಳು!

ಕೆಂಪಣ್ಣ—ನನ್ನಂತಹ ಬಡಕೂಲಿಕಾರನಲ್ಲಿ ರಾಜತ್ವದ ಲಕ್ಷಣವನ್ನು ಕಾಣುವ ಭ್ರಮೆ ತಮಗೆ ಹೇಗುಂಟಾಯಿತು?

ಶಾಸ್ತ್ರಿ—ಕೇಳು ಕೆಂಪೇಗೌಡ, ನಾನು ಹೊಲದ ಕಡೆಗೆ ತಿರುಗಾಡಲು ಹೋಗಿದ್ದವನು, ಹಿಂದಿರುಗಿ ತೋಟಕ್ಕೆ ಬಂದೆನು. ಆದರೆ ಎಂದೂ ಕಾಣದಿದ್ದಂತಹ ಅಪೂರ್ವವಾದ ಆನಂದೋತ್ಸಾಹವೂ, ಅಪ್ಯಾಯನವೂ ತೋಟದಲ್ಲಿ ಕಂಡು ಬರಲಾರಂಭಿಸಿತು ಮತ್ತೊಂದು ಅತ್ಯಾಶ್ಚರ್ಯಕರವಾದ ಘಟನೆಯೆಂದರೆ, ನೀನು ನೆಲದ ಮೇಲೆ ಮಲಗಿದ್ದೆ. ಆದರೆ ಬಿಸಿಲಿನ ಝಳವು ನಿನ್ನ ಮುಖಕ್ಕೆ ತಾಕದಂತೆ ಆದಿಶೇಷನು ತನ್ನ ವಿಸ್ತಾರವಾದ ಹೆಡೆಯನ್ನೆತ್ತಿ ನಿನ್ನ ಮುಖಕ್ಕೆ ಆಸರೆಯಾಗಿದ್ದನು. ಇದೊಂದೇ ನಿದರ್ಶನ ಸಾಕು ಕೆಂಪೇಗೌಡ! ನೀನು ಮಹಾರಾಜನಾಗುವುದರಲ್ಲಿ ತಿಲಾರ್ಧವೂ ಸಂದೇಹವಿಲ್ಲ. ಜಗತ್ತಿನಲ್ಲಿ ಮಹತ್ಕಾರ್ಯ ಸಾಧನೆಗಾಗಿ ಜನ್ಮಧಾರಣ ಮಾಡುವ ಮಹಾಪುರುಷರ ಜೀವಿತದಲ್ಲಿ ನಿಂತಹ ಘಟನೆಗಳು ಜರಗುತ್ತವೆ.

ಕೆಂಪಣ್ಣ—ಆದರೆ ಸ್ವಾಮಿ, ರಾಜನಾಗುವುದೆಂದರೇನು ಸುಲಭವೇ? ಕೋಟೆಕೊತ್ತಲುಗಳನ್ನು ನಿರ್ಮಿಸಬೇಕು. ಸೈನ್ಯವನ್ನು ಕಟ್ಟಬೇಕು.

ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಬೇಕು. ಇದಕ್ಕೆಲ್ಲಾ ಅಪಾರವಾದ ಹಣವು ಬೇಕಲ್ಲವೇ? ಅದನ್ನು ತರುವುದಾದರೂ ಎಲ್ಲಿಂದ!

ಶಾಸ್ತ್ರಿ—ಅದಕ್ಕಾಗಿ ಚಿಂತಿಸಬೇಕಾಗಿಲ್ಲ ಕೆಂಪೇಗೌಡ! ಭೂಗರ್ಭದಲ್ಲಿರುವ ಸಮಸ್ತನಿಧಿಗೂ ಆದಿಶೇಷನೇ ಅಧಿಪತಿಯು. ಆತನೇ ನಿನಗೆ ನಿಧಿಯನ್ನು ಕರುಣಿಸುವನು. ಈ ವಿಚಾರದಲ್ಲಿ ಸಂಶಯಕ್ಕೆ ಕಾರಣವೇ ಇಲ್ಲ. ಮತ್ತೊಂದು ಮುಖ್ಯ ವಿಚಾರವನ್ನು ನಿನಗೆ ತಿಳಿಸಬೇಕಾಗಿದೆ ಕೆಂಪೇಗೌಡ! ನಿಮ್ಮ ಪೂರ್ವಿಕರ ಒಂದು ಜೊತೆ ಉಡುಪೂ, ಒಂದು ಕಿರೀಟವೂ, ಆಭರಣಗಳೂ, ಒಂದು ಖಡ್ಗವೂ ನಮ್ಮ ಮನೆಯಲ್ಲಿವೆ. ಒಂದು ಪೆಟ್ಟಿಗೆಯಲ್ಲಿ ಅವುಗಳೆಲ್ಲಾ ಭದ್ರವಾಗಿಟ್ಟು, ನಮ್ಮ ಪೂರ್ವೀಕರ ಕಾಲದಿಂದಲೂ ಕಾಪಾಡಿಕೊಂಡು ಬಂದಿದ್ದೇವೆ. ಈ ದಿನ ಅದನ್ನು ತೆಗೆದು ನಿನಗೆ ಧರಿಸಲು ಕೊಡುತ್ತೇನೆ. ಆದ್ದರಿಂದ ತಡಮಾಡದೆ ಬೇಗನೆ ಮನೆಗೆ ಬಂದುಬಿಡು. ನಾನು ಮುಂಚಿತವಾಗಿಯೇ ಹೋಗುತ್ತೇನೆ. (ಹೋಗುವರು)

ದೃಶ್ಯ ೨೩
ರಸ್ತೆ

(ಭಿಕ್ಷುಕನು ಹಾಡುತ್ತ ಪ್ರವೇಶಿಸುವನು)

ಈಗ ಕಾಲವು ಪರಿಪಕ್ವವಾಗುತ್ತ ಬಂದಿದೆ. ಪ್ರಜಾರಕ್ಷಣಾಧುರೆಯನ್ನು ನಿರ್ವಹಿಸುವ ಮಹಾನಾಯಕನ ಆಗಮನಕ್ಕೆ ಸನ್ನಿವೇಶವು ಹಿತಕರವಾಗಿದೆ. ದುಷ್ಟ ಶಿಕ್ಷಣ ಶಿಷ್ಟ ರಕ್ಷಣಾ ಕಾರ್ಯ ನಿರ್ವಹಣೆಗೆ ವಾತಾವರಣವು ಅನುಕೂಲವಾಗಿದೆ, ಈಗ ನಾಡಿನಲ್ಲಿ ಸುಖದ ಸುಗ್ಗಿಯು ಅಡಿಯಿಡುವುದು. ಹರ್ಷೋಲ್ಲಾಸದ ಮಧುರ ಸಮೀರಣವು ಸಂಚಲಿಸುವುದು. ನಾಡು ಸತ್ಯ ಧರ್ಮಗಳ ನೆಲೆವೀಡಾಗುವುದು. ನನ್ನ ಭಕ್ತಾಗ್ರಣಿ ಕೆಂಪೇಗೌಡ ರಾಜಗದ್ದುಗೆಯನ್ನೇರುವನು. ನನ್ನ ಭಕ್ತರ ಮಡಿಲುಗಳು ಬಯಕೆಯ ಪುಷ್ಪಗುಚ್ಛಗಳಿಂದ ತುಂಬಿಹೋಗುವುವು. ಇನ್ನು ದೌರ್ಜನ್ಯ, ದಬ್ಬಾಳಿಕೆ, ಅರಾಜಕತೆ, ಅಜ್ಞಾನದ ಅಂಧಕಾರವು ಛಿದ್ರವಿಚ್ಛಿದ್ರವಾಗಿ, ನಾಡಿನ ಗಡಿಯಿಂದ ಬಹುದೂರ ಓಡಿಹೋಗುವುದು.

ನನ್ನ ಭಕ್ತರಿಗೆ ಕಷ್ಟನಷ್ಟಗಳು ಒದಗಿಬಂದಾಗ, ದುಃಖ ಸಂಕಟಗಳು ಪ್ರಾಪ್ತವಾದಾಗ, ದುಷ್ಟ ಆಡಳಿತವು ತಲೆದೋರಿದಾಗ, ನನ್ನ ಭಕ್ತರು ಅಳುವರು. ಗೋಳಾಡುವರು. ಮೊರೆಯಿಡುವರು. ಅನಂತರ ನನ್ನನ್ನು ಮನಸ್ವೀ ದೂರುವರು. ಕೊನೆಗೆ ನಾನು ಈ ಜಗತ್ತನ್ನು ಸೃಷ್ಟಿಸಿರುವುದೂ ಸುಳ್ಳು. ನಾನಿರುವುದೂ ಸುಳ್ಳು ಎಂಬ ತೀರ್ಮಾನಕ್ಕೆ ಬರುವರು.

ಆದರೆ ನಾನು ಸತ್ಪುರುಷರ ಕಾರ್ಯಚಟುವಟಿಕೆಗಳಿಗೂ ಅವಧಿಯನ್ನು ನಿರ್ಧರಿಸಿರುವಂತೆ ದುರ್ಜನರ ಕಾರ್ಯಚಟುವಟಿಕೆಗಳಿಗೂ ಅವಧಿಯನ್ನು ನಿರ್ಧರಿಸಿರುತ್ತೇನೆ. ದುರಾಚಾರವು ಹೇಗೆ ಹೇಯವೂ, ಅನುಕರಣ ಅಯೋಗ್ಯವೂ, ಸದಾಚಾರವು ಹೇಗೆ ಪವಿತ್ರವೂ, ಪ್ರಿಯವೂ, ಅನುಕರಣ ಯೋಗ್ಯವು ಎಂಬುದನ್ನು ನನ್ನ ಭಕ್ತರು ಅರ್ಥಮಾಡಿಕೊಳ್ಳಲಿ, ಎಂದು ಸದಾಚಾರ ದುರಾಚಾರಗಳೆರಡನ್ನೂ ನನ್ನ ಭಕ್ತರ ಇದಿರಿನಲ್ಲಿ ಪ್ರದರ್ಶಿಸುತ್ತೇನೆ. ನನ್ನ ಭಕ್ತರಿಗೆ ದುಃಖ, ಸಂಕಟಗಳು ಪ್ರಾಪ್ತವಾದಾಗ ಅವರು ನನ್ನನ್ನು ಧ್ಯಾನಿಸುವರು. ಅವು ತಕ್ಷಣವೇ ನಿವಾರಣೆಯಾಗದಿದ್ದರೆ ನಾನು ಅವರನ್ನು ನೋಡುತ್ತಿಲ್ಲವೆಂತಲೂ, ನನಗೆ ಕಣ್ಣಿಲ್ಲವೆಂತಲ್ಲೂ ದೂರುವರು. ನಾನು ಸರ್ವಾಂತರ್ಯಾಮಿ, ವಿಶ್ವವ್ಯಾಪಕ, ಕರುಣಾಸಿಂಧು, ಜಗದ್ರಕ್ಷಕನೆಂಬ ಬಿರುದುಗಳನ್ನು ಧರಿಸಿದ್ದೇನೆ. ನನ್ನ ಭಕ್ತರ ಅಗತ್ಯಗಳೇನೆಂಬುದನ್ನು ನಾನು ತಿಳಿಯದಿರುವೆನೇ? ನನ್ನ ಸನ್ನಿಧಿಯಲ್ಲಿ ನಿಧಾನವಿರುವುದಾದರೂ ಅದಾನವಿಲ್ಲ. ನಿರ್ಮಲ ಚಿತ್ತದಿಂದ ನನ್ನ ಕೃಪಾಕಟಾಕ್ಷಕ್ಕಾಗಿ ಸೆರಗೊಡ್ಡಿ ಬೇಡುವ ಭಕ್ತನಿಗೆ ನಾನು ನನ್ನ ಘನತೆ, ಗಾಂಭೀರ್ಯ, ಉನ್ನತಸ್ಥಾನಗಳಿಗೆ ತಕ್ಕಂತೆ ಪುರಸ್ಕರಿಸುವೆನು. ಅವರ ಮನೋಕಾಮನೆಗಳೇನಿದ್ದರೂ ಪೂರ್ಣಗೊಳಿಸುವೆನು. ಜಗತ್ಸರ್ವಸ್ವವನ್ನೂ ಅವರ ಪಾದಗಳ ಮೇಲೆ ಕೆಡಹುವೆನು. (ಪಕ್ಕಕ್ಕೆ ನೋಡಿ) ಅಗೋ ಬರುತ್ತಿದ್ದಾನೆ. ನನ್ನ ಭಕ್ತತಿಲಕ, ಮಾಗಡಿ ನಾಡಿನ ಅಧಿರಾಜ ಬರುತ್ತಿದ್ದಾನೆ.

ಕೆಂಪಣ್ಣ—(ಪ್ರವೇಶಿಸಿ) ಪೂಜ್ಯರಿಗೆ ಅನಂತ ಪ್ರಣಾಮಗಳು (ನಮಸ್ಕರಿಸುವನು)

ಬಿಕ್ಷುಕ—ಚಿರಂಜೀವಿಯಾಗು. ಸುಖಿಯಾಗು ಕೆಂಪಣ್ಣಾ! ಏನು ವಿಶೇಷ? ಮುಖವು ಗೆಲುವಿನಿಂದ ಕೂಡಿದೆಯಲ್ಲಾ? ಮನಸ್ಸಿನಲ್ಲೇನೋ ಸಂತೋಷವೇ ಸಂತೋಷ ತುಂಬಿಕೊಂಡಿರುವಂತಿದೆಯಲ್ಲಾ?

ಕೆಂಪಣ್ಣ—ನಿಶ್ಚಯವಾಗಿಯೂ ಸಂತೋಷದ ಸುದ್ದಿ. ನಿಜಕ್ಕೂ ಗೆಲುವನ್ನುಂಟುಮಾಡುವ ವಿಚಾರ. ಆಃ! ಜೀವಮಾನದಲ್ಲೇ ಅನುಭವಿಸದಿದ್ದಂತಹ ಆನಂದ. ಹೇಳಲೇ ಸ್ವಾಮಿ?

ಬಿಕ್ಷುಕ—ಹೇಳು, ಹೇಳು? ಬೇಗ ಹೇಳು?

ಕೆಂಪಣ್ಣ—ನೋಡಿಸ್ವಾಮಿ, ನಾನು ತೋಟದಲ್ಲಿ ನಿದ್ರಾಪರವಶನಾಗಿ ಮಲಗಿದ್ದಾಗ ನನ್ನ ಮುಖಕ್ಕೆ ಬಿಸಿಲಿನ ಝಳವು ತಾಕದಂತೆ ಆದಿಶೇಷನು ಆಸರೆಯಾಗಿ ತನ್ನ ಹೆಡೆಯನ್ನು ಎತ್ತಿಹಿಡಿದಿದ್ದನಂತೆ. ಶಾಸ್ತ್ರಿಗಳು ನನ್ನನ್ನು ಎಚ್ಚರಗೊಳಿಸಿ ನೀನು ರಾಜನಾಗುವುದು ಖಂಡಿತ ಎಂದರು,

ಬಿಕ್ಷುಕ—ಶಾಸ್ತ್ರಿಗಳು ನಿಶ್ಚಯವನ್ನೇ ಹೇಳಿರುತ್ತಾರೆ ಕೆಂಪಣ್ಣಾ! ನೀನು ರಾಜನಾಗುವುದು ಖಂಡಿತ.

ಕೆಂಪಣ್ಣ—ನನ್ನಲ್ಲಿ ರಾಜತ್ವದ ಲಕ್ಷಣಗಳಿವೆಯೇ ಸ್ವಾಮಿ?

ಬಿಕ್ಷುಕ—ನಿಶ್ಚಯವಾಗಿಯೂ ನಿನ್ನಲ್ಲಿ ರಾಜತ್ವದ ಪರಿಪೂರ್ಣ ಲಕ್ಷಣಗಳಿವೆ ಕೆಂಪಣ್ಣಾ! ಆದರೆ ಅವು ಗೋಪ್ಯವಾಗಿವೆ. ವಸ್ತ್ರಾಭರಣಗಳ ಮೆರಗನ್ನು ಕೊಟ್ಟರೆ ನೀನು ನಿಜಕ್ಕೂ ರಾಜಕುಮಾರನಂತೆ ಗೋಚರಿಸುವೆ. ಅಷ್ಟಲ್ಲದೆ ನೀನು ರಾಜವಂಶದವನೂ ಹೌದು. ನಿನ್ನ ಪೂರ್ವಿಕರು ಸಾಮ್ರಾಜ್ಯಗಳನ್ನು ಸ್ಥಾಪಿಸಿದರು. ಕೋಟೆಕೊತ್ತಲುಗಳನ್ನು ನಿರ್ಮಿಸಿದರು. ಧರ್ಮದಿಂದ ರಾಜ್ಯಗಳನ್ನಾಳಿ ಬಾಳಿಬೆಳಗಿದರು. ನೀನೂ ಅವರಂತೆಯೇ ಕೀರ್ತಿಶಾಲಿಯಾಗುವೆ.

ಕೆಂಪಣ್ಣ—ಸ್ವಾಮಿ, ನಿಮಗೆ ನಮ್ಮಪೂರ್ವಿಕರ ಚರಿತ್ರೆಯು ಗೊತ್ತಿದೆಯೇ?

ಬಿಕ್ಷುಕ—ಗೊತ್ತಿದೆ, ಚನ್ನಾಗಿ ಗೊತ್ತಿದೆ ಕೆಂಪಣ್ಣಾ! ಕೇಳು ಹೇಳುತ್ತೇನೆ. ನಿಮ್ಮ ವಂಶದ ಮೂಲ ಪುರುಷರಾದ ರಣಭೈರೇಗೌಡರೆಂಬುವರು ಇಂದಿಗೆ ನಾಲ್ಕು ಶತಮಾನಗಳ ಹಿಂದೆ ದಕ್ಷಿಣ ದೇಶದಲ್ಲಿ ಪ್ರಸಿದ್ಧವಾದ ಕಾಂಚಿಪುರದ ಸಮೀಪದಲ್ಲಿರುವ ಯಣಮಂಜಿಪುತ್ತೂರು ಎಂಬ ಗ್ರಾಮದಲ್ಲಿ ವಾಸವಾಗಿದ್ದರು. ಅದೇ ಸಂದರ್ಭದಲ್ಲಿ ಆ ಪ್ರಾಂತ್ಯದ ಪಾಳೆಯಗಾರನಾಗಿದ್ದ ಕಿರಾತನ ಉಪಟಳವನ್ನು ತಡೆಯಲಾರದೆ ಹಠಾತ್ತನೇ ಮನೇ, ಮಠ, ಆಸ್ತಿಪಾಸ್ತಿಯನ್ನೂ ಸಕಲ ಬಂಧು

ಬಳಗದವರನ್ನೂ ಬಿಟ್ಟು, ಕೃಷ್ಣಪಕ್ಷದ ಒಂದು ರಾತ್ರಿಯಲ್ಲಿ ತಮ್ಮ ಪತ್ನಿ ಮತ್ತು ಪುತ್ರಿ ಹಾಗೂ ಏಳುಜನ ಸಹೋದರರೊಡನೆ ಕೂಡಿ ಆ ಗ್ರಾಮದಿಂದ ಹೊರಟರು. ಮಾರ್ಗದಲ್ಲಿ ಒದಗಿಬಂದ ದುರ್ವಿಪತ್ತನ್ನು ದೈವ ಕೃಪೆಯಿಂದ ದಾಟಿ ಕೊನೆಗೆ ದೇವನಹಳ್ಳಿಯ ಸಮೀಪದಲ್ಲಿರುವ ಆವತಿ ಗ್ರಾಮಕ್ಕೆ ಬಂದು ನೆಲಸಿದರು. ನಿರ್ಜನವಾಗಿದ್ದ ಅರಣ್ಯ ಪ್ರದೇಶವನ್ನು ಕಡಿದು ಪಟ್ಟಣವನ್ನಾಗಿ ಪರಿವತಿಸಿ ರಾಜ್ಯವನ್ನು ಸ್ಥಾಪಿಸಿದರು. ಕ್ರಮಕ್ರಮೇಣ ಅವರ ನಾಲ್ಕುಮಕ್ಕಳೂ, ಏಳು ಜನ ತಮ್ಮಂದಿರೂ ಬೇರೆಬೇರೆ ಭಾಗಗಳಲ್ಲಿ ರಾಜ್ಯಗಳನ್ನು ಸ್ಥಾಪಿಸಿದರು.ಕೆಲವರು ಯಲಹಂಕ,ಬೆಂಗಳೂರುಮಾಗಡಿನಾಡುಗಳನ್ನೂ ಕೆಲವರು ಆನೆಗೊಂದಿ, ದೇವಂಡಹಳ್ಳಿ, ದೊಡ್ಡಬಳ್ಳಾಪುರ; ಚಿಕ್ಕಬಳ್ಳಾಪುರ ನಾಡುಗಳನ್ನೂ, ಇನ್ನು ಕೆಲವರು ಸುಗಟೂರು ಆನೇಕಲ್ಲು ತುಮಕೂರು, ಕೊಟಗೆರೆ ನಾಡುಗಳನ್ನೂ, ಕೆಲವರು, ಮಿಡಿಗೇಶಿ, ಮುಳಬಾಗಿಲು, ನಂದಿಗ್ರಾಮಗಳನ್ನೂ ಕಟ್ಟಿ ಸ್ವಸಾಮರ್ಥ್ಯದಿಂದ ನಾಲ್ಕು ದಿಕ್ಕುಗಳಲ್ಲಿಯೂ ರಾಜ್ಯಗಳನ್ನು ಸ್ಥಾಪಿಸಿದರು. ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ, ಧರ್ಮಾತ್ಮರಾಗಿ, ಸತ್ಯಾತ್ಮರಾಗಿ, ಪ್ರಜಾಸೇವಾಧುರಂಧರರಾಗಿ, ಆಳಿ, ಬಾಳಿ, ಬೆಳಗಿದವರ ಪವಿತ್ರ ವಂಶದಲ್ಲಿ ಜನ್ಮಧಾರಣಮಾಡಿರುವೆ—ಕೆಂಪಣ್ಣಾ ! ಅವರೆಲ್ಲರ ಜೀವನದಲ್ಲಿಯೂ ಅನೇಕ ಆಶ್ಚರ್ಯಕಾರಕವಾದ ಘಟನೆಗಳು ಜರಗಿವೆ. ನೀನೂ ಮುಂದೆ ಮಹತ್ಪದವಿಗೇರುವವನಾದ್ದರಿಂದ ನಿನ್ನ ಜೀವನದಲ್ಲಿಯೂ ಅದ್ಭುತ ರಮ್ಯ ಘಟನೆಗಳು ಜರಗುವುದು ಸಂಭವವು. ಮುಂದೆ ಬರುವ ಒಂದು ಮಳೆಯ ಆನಂತರ ನಿನ್ನ ಭಾಗ್ಯವಸಂತನ ಉದಯವಾಗುವುದು ಕೆಂಪಣ್ಣಾ! ಹೋಗು, ಶಾಸ್ತ್ರಿಗಳು ನಿನ್ನ ನಿರೀಕ್ಷಣೆಯಲ್ಲಿರುವರು.

ದೃಶ್ಯ ೨೪

ಶಾಸ್ತ್ರಿಗಳ ಮನೆ

ಸಾವಿತ್ರಮ್ಮ—ನೋಡೀಂದ್ರೇ, ಕೆಂಪ ಗುಣವಂತ, ಸತ್ಯವಂತ, ಸ್ವಾಮಿ ಭಕ್ತ ಅಂತಾ ನಾನ್ ಮೊದ್ಲಿಂದಾನೂ ಹೇಳ್ತಾಯಿದ್ದಿದ್ದು ಈಗ್ ನಿಜ್ವಾಯ್ತೋ? ಔನ್ ಒಳ್ಳೇ ಸ್ಥಾನಕ್ಕೇರ್ತಾನೇ. ಔನ್ ಮುಖ ಲಕ್ಷಣವೇ ಹಾಗಿದೇ ಅಂತಾ ನಾನ್ಹೇಳ್ತಾಯಿದ್ದಿದ್ದೂ ಈಗ್ ಸತ್ಯ ವಾಯ್ತೋ?

ಶಾಸ್ತ್ರಿ—ನಿಶ್ಚಯ ಸಾತೂ, ನಿನ್ನಂಥಾ ಪತಿವ್ರತೆಯ ಬಾಯಿಂದಾ ಹೊರಟ ವಚನಾ, ಸುಳ್ಳಾಗೋದೆಂದ್ರೇನೂ? ನಿನ್ನಂಥಾ ಭಾಗ್ಯಲಕ್ಷ್ಮೀ ನನ್ ಗೃಹಲಕ್ಷ್ಮೀಯಾಗಿರೋದು ನನ್ನದೃಷ್ಟವೇ ಸರಿ. ನಿನ್ನಂಥಾ ಪತಿ ವ್ರತಾ ಶಿರೋಮಣಿಗಳಾದ ನಾರೀರತ್ನಗಳಿರೋದ್ರಿಂದಾನೇ ನಮ್ ಧರ್ಮಾ ಶಾಶ್ವತವಾಗಿ ಉಳ್ದಿರೋದು.

ಸಾವಿತ್ರಿಮ್ಮ—ನಂದೇನಿದೇಂದ್ರೇ? ಎಲ್ಲಾ ರಂಗನಾಥನ ಅನುಗ್ರಹಾ. ತಮ್ ಪಾದಸೇವೆಯ ಪುಣ್ಯ. ಸ್ತ್ರೀ ವಚನಾ ಸತ್ಯವಾಗ್ಬೇಕಾದ್ರೇ ಪತಿಪಾದಸೇವೆಯ ಮಹತ್ವಾನೂ ಬೇಕು. ಅಂತೂ ಹೇಗಾದ್ರೂ ಆಗ್ಲಿ, ಕೆಂಪಮ್ಮನ್ ಕಷ್ಟಾ ನಿವಾರ್ಣೇ ಆದ್ಹಾಗಾಯ್ತೂ. ಔಳು ಹಗ್ಲೂ ರಾತ್ರಿ ಕೆಂಪಾಂಬಿಕೇನ ಧ್ಯಾನಾಮಾಡಿದ್ದಕ್ಕೆ ಕೋನೆಗಾದ್ರೂ ದೇವಿ ಅನುಗ್ರಹಾಮಾಡಿದ್ಲಲ್ಲಾ! ಹಾಗಂತಾ ಆ ಬೈರಪನ್ ಪಾಡೇ ನಾಯ್ತೂ ಅಂದ್ರೇ? ಹುಚ್ಚೆದ್ದೂ ಬೀದೀ ಬೀದೀ ಅಲೀತಾಯಿದ್ದಾ ನಂತೇ? ಎಷ್ಟೈಶ್ವರ್ಯಾ ಇದ್ರೇನೂ? ಮನೇ ಮಠಾ ಇದ್ರೇನೂ? ಬಾಯ್ಗ್ ಒಂದ್ ಗುಟ್ಕು ನೀರ್ ಹಾಕೋದಕ್ಕೂ ಯಾರೂ ಗತಿಯಿಲ್ವೋ?

ಶಾಸ್ತ್ರಿ—ಏನ್ಮಾಡೋದಕ್ಕಾಗುತ್ತೇ ಸಾತೂ? ಅವಶ್ಯಂ ಅನುಭೋಕ್ತವ್ಯಂ ಕೃತಕೃತ್ಯ ಶುಭಾ ಶುಭಃ! ಅನ್ನೋ ಹಾಗೆ ಕರ್ಮಫಲ ದೇವಾದಿ ದೇವತೆಗಳಿಗೂ ಬಿಡಲಿಲ್ಲ. ಇನ್ನುಮನುಷ್ಯರಾದವರನ್ನ ಬಿಟ್ಟೀತೇ?

ಸಾವಿತ್ರಿಮ್ಮ—ಹ್ಯಾಗಾದ್ರೂ ಆಗ್ಲೀಂದ್ರೇ, ನೀವಾದ್ರೂ ಹಿಡ್ದೂ ಒಂದಷ್ಟು ಔಷ್ಧೀಗಿವ್ಷ್ಧೀ ಮಾಡ್ಸೀ.

ಶಾಸ್ತ್ರಿ—ಅಯ್ಯೋ, ಆದ್ ಬೇರೆ ನನ್ ಕರ್ಮಾ. ನಿತ್ಯಾ ಔನಗ್ದಿಡ್ದ್ಹೊ, ನಿಂಬೇಹಣ್ ತಿಕ್ಸೀ, ತಣ್ಣೀರ್ ಹಾಕ್ಸೋದಾಗ್ಹೋಗಿದೆ. ವಾಸಿ ಆದ್ರೇ ಔನ್ ಆಸ್ತೀಲಿ ಅರ್ಧಾ ಆಸ್ತೀ ರಂಗ್ನಾಥನ್ಗೇ ಅಂತಾ ಹರ್ಕೇ ತಗ್ದಿಟ್ಟಿದ್ದೀನಿ. ಸಾಲದ್ದಕ್ಕೆ ಮೂರ್ ದಿನದಿಂದಾನೂ ನವಗ್ರಹ ಜಪಾ ಬೇರೆ ಮಾಡಸ್ತಾಯಿದ್ದೀನಿ. ಈ ವ ತ್ ಪರ್ವಾಯಿಲ್ಲ, ಇದ್ದಿದ್ರಲ್ಲೇ ಚನ್ನಾಗಿದ್ದಾನೆ,

ಸಾವಿತ್ರಮ್ಮ—ಹೋಗ್ಲಿ ಪಾಪ, ಹ್ಯಾಗೋ ಚನ್ನಾಗಿ ಬದಕ್ಕೊಳ್ಳೀ, ಯಾರೇ ಆಗ್ಲಿ ಕೆಟ್ರೆ ನಮ್ಗೇನ್ ಬರುತ್ತೇ?

(ರಂಗನಾಥ ರಾಜಪೋಷಾಕನ್ನು ಧರಿಸಿರುವ ಕೆಂಪೇಗೌಡನನ್ನು ಒಳಗಿನಿಂದ ಕರೆದುಕೊಂಡು ಬರುವನು)

ಶಾಸ್ತ್ರಿ—ಈಗ ನೀನು ನಿಜವಾಗಿಯೂ ರಾಜಕುಮಾರನಂತೆ ಕಾಣಿಸುತ್ತಿರುವೆ ಕೆಂಪೇಗೌಡ!

ಕೆಂಪಣ್ಣ—ಎಲ್ಲಾ ತಮ್ಮ ಅನುಗ್ರಹಾಸ್ವಾಮಿ.

ಶಾಸ್ತ್ರಿ—ನನ್ನ ಅನುಗ್ರಹದಲ್ಲೇನಿದೆ ಕೆಂಗೇಗೌಡ! ನಮ್ಮೆಲ್ಲರ ನ್ಯಾಯಾನ್ಯಾಯಗಳನ್ನು ತುಲನೆ ಮಾಡಿ, ಅವುಗಳಿಗೆ ತಕ್ಕ ಫಲಾಫಲಗಳನ್ನು ಕರುಣಿಸುತ್ತಿರುವ ನ್ಯಾಯ ಮೂರ್ತಿ ಶ್ರೀರಂಗನಾಥನ ಅನುಗ್ರಹ ಬೇಕು.

ಸಾವಿತ್ರಮ್ಮ—ಅಷ್ಟೇ ಸಾಲದಪ್ಪಾ! ನಿನ್ನಂಥಾ ಭಾಗ್ಯಶಾಲಿಗೆ ಜನ್ಮವಿತ್ತು ಅಹರ್ನಿಶಿಯೂ ನಿನ್ನ ಶ್ರೇಯಸ್ಸಿಗಾಗಿ ಶ್ರಮಿಸುತ್ತ ಕುಲದೇವಿಯಾದ ಕೆಂಪಾಂಬಿಕೆಯನ್ನು ಆರಾಧಿಸುತ್ತಿರುವ ನಿನ್ನ ತಾಯಿಯ ಅನುಗ್ರಹವೂ ಬೇಕು. ಹೋಗಪ್ಪಾ, ಮನೆಗೆ ಹೋಗಿ ನಿಮ್ಮ ತಾಯಿಗೆ ಈ ಸಂತೋಷದ ವಿಚಾರವನ್ನು ಜಾಗ್ರತೆಯಾಗಿ ತಿಳಿಸು ಹೋಗು.

ಕೆಂಪಣ್ಣ—ಆಗಲಿ ತಾಯಿ, ನೀವಿಬ್ಬರೂ ನನ್ನನ್ನು ತಂದೆ ತಾಯಿಗಳಂತೆ ಪೋಷಿಸಿರುವಿರಿ. ಗುರುಗಳಂತೆ ಜ್ಞಾನ ಬೋಧೆಯನ್ನು ಮಾಡುತ್ತಿರುವಿರಿ. ತಮ್ಮಿಬ್ಬರ ಆಜ್ಞೆಯನ್ನು ದೈವಾಜ್ಞೆಯೆಂದು ಭಾವಿಸಿ ಸದಾ ಪಾಲಿಸುತ್ತೇನೆ.

ಶಾಸ್ತ್ರಿ—ಕೆಂಪೇಗೌಡ! ನಿನ್ನ ಖಾಸಾ ಸವಾರಿಗಾಗಿ ಒಳ್ಳೆಯ ಕುದುರೆಯನ್ನು ತಂದು ಕಟ್ಟಿದ್ದೇನೆ. ಅದರ ಮೇಲೆ ಹತ್ತಿ ಸುತ್ತಾಡಿಕೊಂಡು ಬಾ. ಅನಂತರ ಮನೆಗೆ ಹೋಗುವಿಯಂತೆ.

ಕೆಂಪಣ್ಣ—ಹಾಗೇ ಆಗಲಿ.

ದೃಶ್ಯ—೨೫

(ಅನಂತಶಾಸ್ತ್ರಿಗಳೂ, ಮಲ್ಲನೂ ಇದಿರುಬದಿರಾಗುವರು)

ಮಲ್ಲ—ಕೈ ಮುಗ್ದೆ ಬುದ್ದಿ.

ಶಾಸ್ತ್ರಿ—ಓಹೋ! ಏನೋ ಮಲ್ಲ, ಚನ್ನಾಗಿದ್ದೀಯಾ ಏನೋ?

ಮಲ್ಲ—ನಮ್ದೇನ್ ಚಂದಾ ಬುಡ್ರೀಬುದ್ದಿ. ಇನ್ನೂ ನಿಮ್ಮಂತಾ ಮಾರಾಯ್ರು ಬೂಮಿಾ ಮ್ಯಾಗೆ ಚಂದಾಗಿರ್ಬೇಕು.

ಶಾಸ್ತ್ರಿ—ನಮ್ದೇನ್ ಚಂದ್ವೋ? ಮದ್ವೇ ಮುಂಜಿ ಆಯ್ತು. ಮಕ್ಕಳ್ಮರಿಗಳಾದ್ವು. ವಯಸ್ಸೂ ಆಗ್ತಾಬಂತೂ. ಇನ್ನಮ್ದೇನ್ ಲೆಕ್ಕ? ಈವತ್ತೋ, ನಾಳೇನೋ ಘಟಾ ಒಪ್ಸೀ ಹೊರ್ಟ್‌ಹೋಗೋ ಜನ್ರು ನಾವು. ಇನ್ನೂ ನಿಮ್ಮಂಥಾ ಹುಡುಗ್ರು ಬದ್ಕೀಬಾಳಿ, ಪ್ರಪಂಚಾ ನಡ್ಸೋವ್ರು. ನೀವ್ ಚನ್ನಾಗಿರ್ಬೇಕೂ ಕಣ್ರೋ.

ಮಲ್ಲ—ಅಂಗಂದ್ರೇ ಎಂಗಾಯ್ತೈತೇ ಬುಡ್ರಿಬುದ್ದಿ, ನಮ್ ತಲೇಮ್ಯಾಕಿದ್ಕೊಂಡು, ಆದಿ ತಪ್ಪೋಗ್ದಂಗೆ ಬುದ್ವಾದಾ ಏಳ್ಕೊಂಡು ದ್ಯಾವ್ರಿದ್ದಂಗೆ ಇರ್ಬೇಕ್ರಿ ಬುದ್ದಿ. ನಿಮ್ಮಂತಾವ್ರಿದ್ರೇನೇ ಪರಪಂಚಾ.

ಶಾಸ್ತ್ರಿ—ಆಗ್ಲಿ ಅಪ್ಪಾ, ಬಹ್ಳಾ ಒಳ್ಳೇದು.

ಮಲ್ಲ—ಏನ್ರಾಬುದ್ದಿ, ನನ್ ಗ್ರಾಚಾರ ಎಂಗೈತೇ ವಸಿ ನೋಡಿ ಏಳ್ತೀರಾ ಕೇಳಾವಾಂ!

ಶಾಸ್ತ್ರಿ—ನಿನ್‌ಗೇನೋ ಮುಖದ್ಮೇಲಿನ್ ಕಳೇನೇ ಹೇಳ್ತಾಯಿದೆ, ಶುಕ್ರದೆಸೆ ಒದ್ಕೊಂಡ್ ಬರ್ತಾಯಿದೇ ಅಂತಾ! ಒಳ್ಳೇ ಅದೃಷ್ಟಾಪಡ್ಕೊಂಡ್ ಹುಟ್ಟಿದ್ದೀಯಾ ಕಣೋ ಮಲ್ಲಾ! ಮನೇ, ಮಠಾ, ನಗಾ, ನಾಣ್ಯ, ಹೊಲ, ಗದ್ದೇ, ತೋಟಾ ಎಲ್ಲಾ ಸಿಗುತ್ತೇ. ಸದ್ಯದಲ್ಲೇ ಮದ್ವೇ ಬೇರೆ ಆಗುತ್ತೇ ಕಣೋ.

ಮಲ್ಲ—ಆಂ! ಓಟೆಲ್ಲಾ ಒಮ್ಮೆಕೇ ಆಯ್ತೈತಾ ?

ಶಾಸ್ತ್ರಿ—ಆಗುತ್ತೇ ಕಣೋ, ಆಗುತ್ತೆ. ಅದೃಷ್ಟಾ ಯಾರ್ನ್ಮನೇದೋ ?

ಮಲ್ಲ—ಏನ್ರಾ ಬುದ್ದಿ, ಆ ಮಲ್ಲೀ ಸಂಗಾಟಾನೇ ನನ್ ಲಗ್ನಾ ಆಯ್ತೈತಾ?

ಶಾಸ್ತ್ರಿ—ಹೂಂ ಕಣೋ, ಔಳ್ ಜೊತೇಲೇ ನಿನ್ ಲಗ್ನಾ.

ಮಲ್ಲ—ಅಂಗಾದ್ರೇ, ಆ ಬೈರಪ್ಪ ಎಲ್ಲವ್ನೇ ಬುದ್ದಿ ? ಎಂಗವ್ನೇ ?

ಶಾಸ್ತ್ರಿ—ಮನೇಲೇಯಿದ್ದಾನೆ. ಏನೋ ನನ್ ಶ್ರಮಾ ದೇವ್ರು ಸಾರ್ಥಕಾ ಮಾಡ್ದಾ.

ಮಲ್ಲ—ಏನ್ರಾಬುದ್ದಿ, ಬೈರಪ್ಪಾ ಬದಕ್ಕೋ ಬುಟ್ನಾ? ಔನ್ ಗ್ಯಾನಾ ನೆಟ್ಗಾಗ್ಬುಡ್ತಾ ?

ಶಾಸ್ತ್ರಿ—ಹೂಂ ಕಣೋ. ಬದಕ್ಕೋಳ್ದೇ ಔನ್ಗೇನಾಗಿತ್ತೊ? ಜ್ಞಾನಾ ಮೊದ್ಲಿಗಿಂತಾ ಚನ್ನಾಗಿದೇ ಕಣೋ ಈಗ.

ಮಲ್ಲ—ಅಂಗಾದ್ರೇ ಬೈರಪ್ಪಾ ಬದಕ್ದಾ ?

ಶಾಸ್ತ್ರಿ—ಹೂಂ ಕಣೋ, ಬದಕ್ಕೊಂಡಾ.

ಮಲ್ಲ—ಬುಡ್ರೀ ಬುದ್ದಿ, ಬೈರಪ್ಪಾ ಬದಕ್ದಾ, ಮಲ್ಲಾ ಸತ್ತಾ. (ಪಕ್ಕಕ್ಕೆ ತಿರುಗಿ) ಬೈರಪ್ಪಾ ಬದಕ್ದಾ, ಮಲ್ಲಾ ಸತ್ತಾ. ಬೈರಪ್ಪಾ ಬದಕ್ದಾ ಮಲ್ಲಾ ಸತ್ತಾ.

ಶಾಸ್ತ್ರಿ—ಏನೋ ನೀನ್ ಹೇಳ್ತಿರೋದು ?

ಮಲ್ಲ—ಏಳಾಕಿನ್ನೇನುಳ್ದೈತ್ರೀ ಬುದ್ದಿ? ಬೈರಪ್ಪಾ ಬದಕ್ದಾ. ಮಲ್ಲಿ, ಮಲ್ಲನ್ಗ್ ಕೈ ಕೊಟ್ಳು. ಇನ್ನೇನ್ ಸಂಕೂ ಜಾಗ್ಟೇ ಇಡಿಯಾದೇ. ತಿರ್ಪತಿ ತಿಮ್ಮಪ್ಪನ್ ಪಾದ್ವೇ ಗತಿ. (ಹೊರಡುವನು)

ಶಾಸ್ತ್ರಿ—ಇಲ್ಬಾರೋ ಇಲ್ಲಿ, ನಾನ್ಹೇಳೋದ್ ಸ್ವಲ್ಪಾ ಕೇಳೋ.

ಮಲ್ಲ—ನೀವೇಳಾದೂ ಬ್ಯಾಡಾ. ನಾ ಕೇಳಾದೂ ಬ್ಯಾಡಾ. ತಿರ್ಪತಿ ತಿಮ್ಮಪ್ಪಾ ನಿನ್ ಪಾದ್ವೇ ಗತಿ. (ಹೊರಟು ಹೋಗುವನು)

ಶಾಸ್ತ್ರಿ—ಅಯ್ಯೋ! ಬುದ್ಧಿಯಿಲ್ಲದ್ ಮುಂಡೇಗಂಡಾ ಹೋಗು. ನಿನ್ನುದ್ಧಾರಕ್ಕೆ ನಾನೇನೋ ಪ್ರಯತ್ನಾಪಡ್ತಾಯಿದ್ರೇ ಆತ್ರದಲ್ಹೋಗ್ತೀಯಾ? ಹೋಗು, ನನ್ಗೇನೂ? (ಹೋಗುವರು)

ದೃಶ್ಯ—೨೬

ಮಳೆ

(ಕೆಂಪಮ್ಮ ಪೊರಕೆಗಳನ್ನು ಕಟ್ಟಿ ತರುತ್ತಿರುವಳು. ಮಳೆ ಬೀಳುವುದು. ಕೆಂಪಮ್ಮ ಜಾರಿ ಬೀಳುವಳು. ಪೊರಕೆಗಳು ಬಿದ್ದು ತೇಲಿ ಹೋಗುವುವು. (ಭಾವ ಗೀತೆ)

ದೃಶ್ಯ ೨೭

ರಸ್ತೆ

(ಮಲ್ಲ ದಾಸಯ್ಯನ ವೇಶ ಹಾಕಿಕೊಂಡು ಭಿಕ್ಷೆ ಬೇಡುತ್ತ ಪ್ರವೇಶಿಸುವನು. ಇದಿರಿನಿಂದ ಅನಂತಶಾಸ್ತ್ರಿಗಳು ಪ್ರವೇಶಿಸುವರು. ಮಲ್ಲ ಅವರನ್ನು ನೋಡುತ್ತ ನಿಲ್ಲುವನು. ಆದರೆ ಶಾಸ್ತ್ರಿಗಳು ಅವನನ್ನು ಗುರುತಿಸದೆ ಪಕ್ಕದಿಂದ ಹೋಗುವರು)

ಮಲ್ಲ—(ಅವರ ಕಡೆಯೇ ನೋಡುತ್ತ) ಕೈ ಮುಗ್ದೇ ಬುದ್ಧಿ.

ಶಾಸ್ತ್ರಿ—(ಹಿಂದಿರುಗಿ) ಯಾರು ? ಒಹೋ ! ಮಲ್ಲ ಅಲ್ವೇನೋ ?

ಮಲ್ಲ—ಔದ್ರೂ ಬುದ್ಧಿ ಮಲ್ಲಾನೇ.

ಶಾಸ್ತ್ರಿ—ಇದೇನೋ ಇದು ? ಇದೆಂಥಾ ವೇಷಾನೋ ?

ಮಲ್ಲ—ಯಂತಾ ಯಾಸಾ ಅಂದ್ರೇ ? ದಾಸಯ್ಯನ್ ಯಾಸಾ. ಓಟೂ ಗೊತ್ತಾಗಾಕಿಲ್ವಾ ?

ಶಾಸ್ತ್ರಿ—ಗೊತ್ತಾಗುತ್ತೇ ಕಣೋ, ಗೊತ್ತಾಗ್ದೇಯೇನೂ ? ದಾಸಯ್ಯನ್ ವೇಷಾ ಗೊತ್ತಾಗೋದಿಲ್ವೇ ? ಅದ್ರಲ್ಲೂ ಈ ಬೂಟಾಟ್ಕೇ ದಾಸಯನ್ದೂ ?

ಮಲ್ಲ—ಏನಾರಾ ಅನ್ಕೊಳೀ ಬುದ್ಧಿ. ಯಾಸಾ ಕಟ್ಬಾಗೋಯ್ತು. ಇನ್ ತಗ್ದಾಕಾಕ್ಯಾತೈತಾ ?

ಶಾಸ್ತ್ರಿ—ಇಲ್ಲಾ ಕಣೋ, ಇಲ್ಲಾ. ಕಟ್ಟಿದ್ ವೇಷಾ ತಗ್ದ್ಹಾಕೋಕಾಗೋದಿಲ್ಲಾ. ಆದಿರ್ಲಿ, ಈಗೆಲ್ಲೀಗ್ ಹೊರ್ಟೆ ? ಎಲ್ಲಿತ್ತ್ಯಾ ? ಏನ್ ನಿನ್ ಸಮಾಚಾರ ?

ಮಲ್ಲ—ಎಲ್ಲೀಗಂತಾ ಎಳ್ಳೀ ಬುದ್ಧಿ ? ದೇಶದವ್ಯಾಕ್ ಒಂಟವ್ನಿ. ಎಲ್ಲೋ ಯ್ತೀನೋ! ಎಲ್ಲಿರ್ತೀನೋ! ಏನಾಯ್ತಿನೋ! ಯಾರ್ ಕಂಡವ್ರೇ ಬುದ್ಧಿ! ಸಂಕೂ ಜಾಗ್ಟೇ ಕೈನಾಗೈತೇ. ಕಳಾಸ್ ಏಗಲ್ ವ್ಯಾಗೈತೇ ಚೌನಾಸೇ ಕಂಕ್ಯಾಗೈತೇ. ಆ ನಮ್ಮಪ್ಪ ಔನಲ್ಲಾ ತಿರ್ಪತಿ ತಿಮ್ಮಪ್ಪ, ಔನ್ ದ್ಯಾನಾ ನಾಲ್ಗೇ ವ್ಯಾಗೈತೇ. ಔನ್ ಪಾದ್ವೇ ಗತಿ ಅನ್ ಕೋಂಡು ಒಂಟೋಯ್ತೀನಿ.

ಶಾಸ್ತ್ರಿ—ಹುಚ್‌ಮುಂಡೇ ಗಂಡಾ! ಹುಚ್‌ಮುಂಡೇ ಗಂಡಾ ಹೋಗು. ನಾನೇನೋ ಊರಿನ್ ಪಟೇಲ್ಕೆ ಕೊಡ್ಸೋಣಾ, ಮನೇ ಮಠಾ, ಹೊಲಾಗದ್ದೇ, ತೋಟಾತುಡ್ಕೇ ಎಲ್ಲಾ ಮಾಡಸ್ಕೊಡೋಣಾ, ಆ ಮಲ್ಲೀ ಜೊತೇಲಿ ನಿನ್ ಲಗ್ನಾಮಾಡ್ಸೋಣಾ ಅಂತಾ ಇದ್ರೇ, ನೀನು ಶಂಖೂ ಜಾಗ್ಟೇ ಹಿಡ್ಕೊಂಡು ದೇಶದ್ಮೇಲ್ಹೊರ್ಟಿದ್ದೀಯಾ!

ಮಲ್ಲ—ಏನಂದ್ರೀ ಬುದ್ಧಿ! ಈಟೆಲ್ಲಾ ಒಮ್ಮಾಕೇ ಮಾಡ್ತಾಂವಾಂ ಅಂತಿದ್ರಾ!

ಶಾಸ್ತ್ರಿ—ಹೌದೂ ಕಣೋ, ಹೌದು. ಮತ್ತಿನ್ನೇನೂ ಅಂತಾ ತಿಳ್ಕೊಂಡಿದ್ದೇ!

ಮಲ್ಲ—ಏನ್ರಾ ಬುದ್ಧಿ, ನಿವ್ಗೇ ವೈ ಜಿಗ್ಟಾಕೂ ಬತ್ತೈತೇ. ತೊಟ್ಲ್ ತೂಗಾಕೂ ಬತ್ತೈತೇ, ಅಲ್ಲವ್ರಾ!

ಶಾಸ್ತ್ರಿ—ಅಯ್ಯೋ ಅಯೋಗ್ಯ ಮುಂಡೇ ಗಂಡಾ. ಏನೋ ನೀನ್ ಹೇಳ್ತಾಯಿರೋದು! ನಾನೇನೋ ಅಂಥಾ ವೈ ಜಿಗ್ಟೇ ತೊಟ್ಲ್ ತೂಗೋ ಕೆಲ್ಸಾ ಮಾಡಿರೋದು!

ಮಲ್ಲ—ಅಲ್ರಾ ಬುದ್ಧಿ, ಒನ್ನಲ್ಗಿ ಮಾವನ್ಗೊಪ್ಸೀ, ಮಲ್ಲೀ ಕುಟ್ಟೇ ಬೈರಪ್ಪನ್ ಮದ್ವೇ ಮಾಡ್ತಾಕೇ ಕಾರಸ್ತಾನ ನಡ್ಸೀ. ಬೈರಪ್ಪನ್ ಬುದ್ಧಿ ಕೆಟ್ಕೋಗ್ಬುಟ್ರೇ ಜಪಾಮಾಡ್ಸೀ, ಮಂತ್ರಾ ಆಕ್ಸೀ, ಅರ್ಕೆ ಒರ್ಸೀ, ಅದ್‌ಮಾಡ್ಸೀ, ಇದ್‌ಮಾಡ್ಸೀ, ಔನ್ ಗ್ಯಾನಾ ಸುದ್ದಾ ಆದ್ಮ್ಯಕೇ ಮಲ್ಲೀ ಕುಟ್ಟೇ ನಿನ್ ಲಗ್ಣಾ ನಡಸ್ತೀನ್ ಕಣ್ಲೇ ಮಲ್ಲಾ ಅಂತಾ ಎಳ್ತಿವ್ರಲ್ಲಾ, ನಿಮ್ಮಾತ್ ನಂಬೈದಾ ಅಂತಾ! ಆಂ! ನೀನ್ ಈಟ್ ದೊಡ್ಮನ್ಸ್ರಾಗಿ ನಮ್ಮಪ್ನ್ ವಾರ್ಗ್ಯವ್ರಾಗಿ ನನ್ ತಲ್ಗೇ ಕುಲಾವಿ ಇಕ್ಕಾಕ್ ಬತ್ತೀರಾ! ಏನ್ ಕಲ್ಕೇ ಕಲ್ತೀವ್ರಿ ಬುದ್ಧಿ, ಏನ್ ಕಲ್ಕೇ ಕಲ್ತೀವ್ರೀ!

ಶಾಸ್ತ್ರಿ—ಥೂ ಹೂಚ್ ಮುಂಡೇ ಗಂಡಾ ಸುವ್ನಿರೂ. ಬಾಯ್ಗ್ ಬಂದ್ದಂಗೆಲ್ಲಾ ಒದರ್ಬ್ಯಾಡಾ. ನಿನ್‌ಗೆಲ್ಲೋ ಆ ಮಲ್ಲೀ ಯೋಚ್ನೇಲೇ ತಲೇ ಕೆಟ್ ಹೋಗ್ಬಿಟ್ಟದೇ. (ಮಲ್ಲ ಪಕ್ಕಕ್ಕೆ ತಿರುಗಿ ತಲೆ ತಗ್ಗಿಸಿಕೊಂಡು ನಿಂತಿರುವನು.) ಇಲ್ನೋಡೋ ಇಲ್ಲಿ, ಆ ಬೈರಪ್ಪನ್ನ ಹಿಂದಿನ್ ಬೈರಪ್ಪಾ ಅಂತಾ ತಿಳ್ಕೋಬ್ಯಾಡಾ. ಔನ್ಗೇ ಈಗ ವೈರಾಗ್ಯ ಬಂದ್ಬಿಟ್ಟದೇ ಕಣೋ. ತಾನ್ ಹಿಂದೆ ಮಾಡಿದ್ದನ್ನೆಲ್ಲಾ ನೆನಸ್ಕೋಂಡ್ ಕಣ್ಣೀರ್ ಹಾಕ್ತಾಯಿರ್ತಾನೇ. ಔನ್ಗಿನ್ನೇನೂ ಬೇಕಾಗಿಲ್ಲಾ. ಬದ್ಕಿರೊ ಅಷ್ಟ್ ದಿನಾ ದೇವರ್ ಧ್ಯಾನಾ ಮಾಡಿ ಕಾಲಾಹಾಕ್ಬಿಡೋಣಾ ಅಂತಾ ಇದ್ದಾನೇ. ಅದಕ್ಕೋಸ್ಕರಾನೇ ನಿನ್ನನ್ನ ದತ್ತೂ ಮಾಡ್ಕೋಂಡು ಪಟೇಲ್ಕೀ, ವ್ಯವಹಾರ, ಎಲ್ಲಾ ನಿನ್ಗೇ ಒಪ್ಪಸ್ಬೇಕೂ ಅಂತಾ ಇದ್ದಾನೋ! ಔನ್ ಮದ್ವೇಗಿದ್ದೇ ಏನೂ ಆಗೋದಿಲ್ಲಾ. ಮುಂದಿನ್ ಮುಹೂರ್ತದಲ್ಲೇ ಮಲ್ಲೀ ಜೊತೇಲಿ ನಿನ್ ಲಗ್ನಾ. ಅದನ್ನ ಆಗ್ಲೇ ನಿನ್ಗ್ಹೇಳೋಣಾ ಅಂತಾಯಿದ್ರೇ, ಹೇಳ್ದೇ ಕೇಳ್ದೇ ಓಡ್ಹೋಗಿ ಶಂಖೂ, ಜಾಗ್ಟೇ ಹಿಡ್ಕೋಂಡ್ಬಂದ್ಬಿಟ್ಟದ್ದೀಯಲ್ಲೋ!

ಮಲ್ಲ—ಈಟೆಲ್ಲಾ ನಿಜ್ವಾ ಬುದ್ಧಿ!

ಶಾಸ್ತ್ರಿ—ನಿಜಾ ಕಣೋ, ರಂಗ್ನಾಥನ್ ಆಣೇಗೂ ನಿಜಾ

ಮಲ್ಲ—(ತನ್ನ ತಲೆಯ ಮೇಲೆ ರಪ್ಪೆಂದು ಹೊಡೆದುಕೊಂಡು) ಹಯ್ಯೋ, ಆಗ್ಲೇ ನನ್ ಬುದ್ದೀಗೇನ್ ಸಗ್ಣೀ ಉಂಡೇ ಮೆತ್ಕೋಂಡಿತ್ತಾ! ನಂಗ್ಯಾಕ್ ದೆವ್ವಾ ಬಡ್ದಿತ್ತೂ! ಕೈಗ್ ಬಂದಿದ್ ಮಲ್ಲೀನ್ ಕಂಡೋರ್ ಪಾಲ್ ಮಾಡಿ, ದೇಸದ್ಮ್ಯಾಕ್ ಒಂಟ್ಬುಟ್ಟದ್ನಲ್ಲಾ! (ಶಂಖು ಜಾಗಟೆಯನ್ನೂ ತಲೆಗೆ ಸುತ್ತಿದ್ದ ರುಮಾಲನ್ನೂ ಪಕ್ಕಕ್ಕಿಟ್ಟು) ಬುದ್ದಿ, ನೀವ್ ನಮ್ಮೂರ್ಗೇ ದಾವ್ರು ಬುದ್ದಿ. ನಿಮ್ ಪಾದ್ವೇ ಗತಿ. ನನ್ ಗೂಡ್ ಕಟ್ಸಾಕಾರಾ ಕಟ್ಸೀ, ಮುದ್ರಾಕ್ಸಾಕಾರಾ ಮುದ್ರಾಕ್ಸೀ. ನಿವ್ನೇ ನಂಬುಟ್ಟವ್ನೀ ಬುದ್ದಿ, ಕೈ ಇಡ್ದ್ ಉದ್ದಾರಾಮಾಡಿ. ನೂರ್ ನೂರ್ ಜನ್ಮಾಕ್ಕೂ ನಿಮ್ಮುಪ್ಕಾರಾ ಮರಿಯಾಕಿಲ್ಲಾ ಬುದ್ದಿ.

ಶಾಸ್ತ್ರಿ—ಏಳೇಳೂ. ಈ ದಾಸಯ್ಯನ್ ವೇಶಾ ಕಿತ್ಹಾಕ್ಬಿಟ್ಟು, ಬೇರೇ ಬಟ್ಟೇ ಹಾಕ್ಕೋಂಡೂ ಬೈರಪ್ಪನ್ ಮನೇಗ್ಬಾ. ನಾನೂ ಅಲ್ಲೇ ಯಿರ್ತೀನಿ.

ದೃಶ್ಯ—೨೮

(ಲಿಂಗಾಂಬೆ, ಚನ್ನಮ್ಮ, ಪುಟ್ಟಮ್ಮ ಹಾಡುತ್ತಿರುವರು)

ಚನ್ನಮ್ಮ—(ಪಕ್ಕಕ್ಕೆ ತಿರುಗಿ ನೋಡಿ) ಲಿಂಗಾಂಬೇ! ಅಲ್ನೋಡು, ಯಾವನೋ ಹೊಲದಲ್ಲಿ ಕುದ್ರೇ ಓಡಾಡಸ್ತಾಯಿದ್ದಾನೆ. ಪೈರೆಲ್ಲಾ ಹಾಳಾಗ್ಹೋಗ್ತಾಯಿದೆ.

ಚಿಕ್ಕಮ್ಮ—ಎಷ್ಟ್ ಸೊಕ್ಕಿರ್ಬೇಕೂ! ಹೇಳ್ದೇ ಕೇಳ್ದೇ ಹೊಲದಲ್ಲಿ ಕುದ್ರೇನಾ ನುಗ್ಸಿ, ಪೈರೆಲ್ಲಾ ತುಳ್ಸಹಾಕ್ತಾಯಿದ್ದಾನಲ್ಲಾ!

ಲಿಂಗಾಂಬೆ—ಏಯ್! ಯಾವನೋ ಔನೂ ಹೊಲದಲ್ಲಿ ಕುದ್ರೇ ಓಡಾಡಸ್ತಿರೌನೂ! ಇಳಿಯೋ. ಯಾರೂ ಇದುವರೆಗೆ ಸರಿಯಾಗ್ ಬುದ್ಧಿ ಕಲಸ್ಲಿಲ್ಲಾ ಅಂತಾ ಕಾಣ್ಸುತ್ತೇ. ಅದಕ್ಕೋಸ್ಕರಾನೇ ನಮ್ಹೊಲಾ ಹುಡುಕ್ಕೊಂಡ್ಬಂದಿದ್ದಾನೇ. ಪುಟ್ಟಮ್ಮ ನೀನ್ ಹೋಗಿ ಅಪ್ಪಾವ್ರನಾ ಕರ್ಕೊಂ ಬಾ ಹೋಗು. ಹಾಗೇನೇ ನೀನೂ ಹೋಗು ಚನ್ನಮ್ಮಾ! ಈವತ್ತಿವ್ನಿಗೇ ಸರಿಯಾದ್ ಪೂಜೇ ಮಾಡ್ಸೋಣಾ. (ಇಬ್ಬರೂ ಹೋಗುವರು. ಲಿಂಗಾಂಬೆ ಹೊಲದ ಕಡೆಗೆ ತಿರುಗಿ ಆಶ್ಚರ್ಯದಿಂದಲೂ, ಭೀತಿಯಿಂದಲೂ ನೋಡುತ್ತ) ಆಯ್ಯೋ ಇದೇನೂ! ಕುದುರೆಯಿಂದಿಳಿದು ನನ್ನ ಕಡೆಯೇ ಬರುತ್ತಿರುವನಲ್ಲಾ! ಬಂದು ಏನಾದರೂ ತೊಂದರೆಯನ್ನು ಕೊಟ್ಟರೆ ಗತಿಯೇನೂ! ಒಬ್ಬರೂ ಸಹಾಯಕ್ಕಿಲ್ಲವಲ್ಲಾ! ಈಗೇನು ಮಾಡಲಿ! (ಧೈರ್ಯವನ್ನು ತಾಳಿ ಕೈಯಲ್ಲಿರುವ ಕುಡುಗೋಲನ್ನು ಎತ್ತಿಹಿಡಿದು) ಈ ಕುಡುಗೋಲು ನನ್ನ ಹಸ್ತದಲ್ಲಿರುವವರೆಗೂ ನನ್ನನ್ನು ಕೆಣಕುವ ಧೈರ್ಯ ಯಾರಿಗಿದೆ! ಯಾರಾದರೂ ನನ್ನನ್ನು ಮುಟ್ಟಲು ಬಂದರೆ, ದೇಹವನ್ನೆಲ್ಲಾ ಹರಿದು ಹೋಳು ಹೋಳು ಮಾಡಿಬಿಡುವೆನು. (ಪಕ್ಕಕ್ಕೆ ತಿರುಗಿ) ಇದೇನೂ! ಬಂದೇಬಿಟ್ಟನಲ್ಲಾ! ಈಗೇನು ಗತಿ ಮಾಡಲಿ! (ಸೆರಗನ್ನು ಸೊಂಟಕ್ಕೆ ಬಿಗಿದು ಕಟ್ಟಿ ಕುಡುಗೋಲನ್ನು ಸರಿಯಾಗಿ ಹಿಡಿದು ನಿಲ್ಲುವಳು) ಯಾರ್ ನೀವು! ಇಲ್ಯಾಕ್ ಬಂದ್ರೀ! ಏನ್ ಕೆಲ್ಸಾ ನಿಮ್ಗೇ!

ಕೆಂಪಣ್ಣ—ನಾನ್ಯಾರಾದ್ರೇ ನಿಮ್ಗೇನೂ? ನನ್‌ಗೇನಾದ್ರೂ ಕೆಲ್ಸಾ ಇರ್‍ಲಿ, ಅದ್‌ಕಟ್ಕೊಂಡ್ ನಿಮ್ಗೇನಾಗ್ಬೇಕೂ?

ಲಿಂಗಾಂಬೆ—ನೀವ್ಯಾರಾದ್ರೂ ಆಗಿ ನನ್ಗೇನೂ? ನಿಮ್ಗೇನಾದ್ರೂ ಕೆಲ್ಸಾ ಇರ್‍ಲಿ. ಅದ್‌ಕಟ್ಕೊಂಡ್ ನನ್ಗೇನಾಗ್ಗೇಕು? ಆದ್ರೇ ನಮ್ತೋಟ್ದಲದ ಲ್ಯಾಕ್ ಕುದ್ರೇ ಓಡಾಡಸ್ತ ಇದ್ರೀ ಅಂತಾ?

ಕೆಂಪಣ್ಣ—ಯಾಕ್ ಓಡಾಡಸ್ತಾಯಿದ್ರೀ ಅಂದ್ರೇ, ಇಷ್ಟಾ ಬಂತೂ ಓಡಾಡಸ್ದೇ.

ಲಿಂಗಾಂಬೆ—ಇಷ್ಟಾ ಬಂತೂ ಓಡಾಡಸ್ದೇ....! ಇಷ್ಟಾ ಬರುತ್ತೇ ಕಂಡೌರ್ ಹೊಲಾಗದ್ದೇ ಹಾಳ್ಮಾಡೂ, ಮನೇ ಮಠಾ ಹಾಳ್ಮಾಡೂ, ಮಾಡ್ಬಾರ ದ್ದನ್ನೆಲ್ಲಾ ಮಾಡೂ ಅಂತಾ, ಮಾಡ್ಬಿಡ್ತಿರೇನೂ?

ಕೆಂಪಣ್ಣ—ಇಷ್ಟಾ ಬಂದ್ರೇ ಎಲ್ಲಾ ಮಾಡೋದೇ? ಇಷ್ಟಕ್ ವಿರುದ್ಧವಾಗಿ ನಡೆಯೋದಕ್ಕಾಗುತ್ತೇನೂ? ನೀವೇ ಹೇಳಿ?

ಲಿಂಗಾಂಬೆ—ಸಾಕ್, ಸಾಕ್ ಬಾಯ್ ಮುಚ್ಚಿ. ಮಹಾಂ ದೊಡ್ಮನಷ್ರೂ, ವೇಷ ಭೂಷಣಾ ನೋಡದ್ರೇ ರಾಜಬಂಧುಗಳೋ, ರಾಜಪರಿವಾರ ದವರೋ ಅನ್ನೋ ಹಾಗ್ ಕಾಣಸ್ತೀರಾ? ಮಾತ್ ಕೇಳ್ತೂ ಅಂದ್ರೇ ಎಂಥೌರ್ಗೂ ಅಸಹ್ಯ ಉಂಟಾಗುತ್ತೇ. ಇಲ್ಲಿಂದಾ ಮೊದ್ಲ್ ಹೊರ್ಡೀ. ನಿಮ್ ಕುದ್ರೇ ತಗೊಂಡ್ತೋಟ್ದಲದಿಂದ ಆಚೇಗ್ ಹೊರ್ಟ್‌ಹೋಗ್ಬಿಡೀ.

ಕೆಂಪಣ್ಣ—ಹೋಗ್ದೇಯಿದ್ರೇ?

ಲಿಂಗಾಂಬೆ—ಹೋಗ್ದೇಯಿದ್ರೇ ಪರಿಣಾಮ ನೆಟ್ಗಾಗೋದಿಲ್ಲಾ.

ಕೆಂಪಣ್ಣ—ಏನಾಗುತ್ತೇ?

ಲಿಂಗಾಂಬೆ—ಏನಾಗುತ್ತೇ ಅನ್ನೋದು ನಮ್ತಂದೇವ್ರು ಬಂದ್ಮೇಲೆ ಗೊತ್ತಾ ಗುತ್ತೇ.

ಕೆಂಪಣ್ಣ—ಅದೇ ನಾನು ಕೇಳ್ತಾಯಿರೋದು ನಿಮ್ ತಂದೇವ್ರು ಬಂದ್ಮೇಲೇ ಏನಾಗುತ್ತೇ ಅಂತಾ?

ಲಿಂಗಾಂಬೆ—ಬರಿ ಬಾಯ್‌ಲ್ಹೇಳದ್ರೇ ಹ್ಯಾಗ್ ಗೊತ್ತಾಗುತ್ತೇ? ಇಲ್ಲಿಂದಾ ಎಳ್ಕೊಂಡ್ಹೋಗಿ ಊರ್ ಮುಂದಿನ್ ಕಲ್ಲಿನ್ ಕಂಬಕ್ಕಕಟ್ಟಿ........

ಕೆಂಪಣ್ಣ—ಕಲ್ಲಿನ್ ಕಂಬಕ್ಕಟ್ಟೇ........?

ಲಿಂಗಾಂಬೆ—ಚಾಟೀ ತಗೊಂಡ್ ನಾಲ್ಕ್ ಬಿಟ್ರೇ ಆಗ್ ಗೊತ್ತಾಗುತ್ತೇ?

ಕೆಂಪಣ್ಣ—(ತಲೆದೂಗುತ್ತ) ಚ್! ಚ್! ಚ್! ಚ್! ಚ್! ಚ್! ನೀವ್ ಎಂಥಾ ಧೈರ್ಯಶಾಲಿಗಳೂ? ಸಾಹಸಿಗಳೂ? ಶೂರ್ರೂ?

ಲಿಂಗಾಂಬೆ—ಹೌದೂ, ಹೌದೂ. ನಾವು ಧೈರ್ಯಶಾಲಿಗಳೇ! ಸಾಹಸಿಗಳೇ! ಶೂರ್ರೇ! ನಾವ್ ಯಾವಾಗ್ಲಾದ್ರೂ ಯಾರ್ಗೇನಾದ್ರೂ ಹೆದರ್ತೀವೇನೂ?

ಕೆಂಪಣ್ಣ—ಇಲ್ಲಾ, ಇಲ್ಲಾ. ನೀವ್ ಯಾರ್ಗೂ ಯಾವಾಗ್ಲೂ ಹೆದ್ರೋರಲ್ಲಾ. ಯಾರಾದ್ರೂ ತಪ್‌ಮಾಡದ್ರೇ ಔರ್ನಾ ಕಲ್ಲಿನ್ ಕಂಭಕ್ ಕಟ್ಟಿ ಚಾಟೀ ತಗೋಂಡ್ಹೊಡೀತಿರಾ? ಆದ್ರೇ ನಿಮ್ಮಿಬ್ಬರ್ನ ಆ ದಿನ ಬೈರಪ್ಪನ್ ಕಡೆಯೌರು ಕಂಬಗಳಿಗೆ ಕಟ್ಟಿ ಚಾಟೀ ತಗೋಂಡ್ಹೊಡೀತಿದ್ದಾಗ ಆವಾಗ್ಯಾಕ್ ಬಾಯ್ಮುಚ್ಕೋಂಡ್ ತೆಪ್ಗಿದ್ರೀ!

ಲಿಂಗಾಂಬೆ—(ಕೆಂಪಣ್ಣನ ಕಡೆ ಆಶ್ಚರ್ಯದಿಂದ ನೋಡುತ್ತ) ಸುಳ್ಳೂ, ಶುದ್ಧ ಶುಳ್ಳೂ, ನಿಮ್ಗ್ಯಾರ್ ಆದನ್ನೆಲ್ಲಾ ಹೇಳ್ದೌರೂ! ನಿಮ್ಗ್ಯಾಗ್ ಗೊತ್ತಾಯ್ತೂ! (ಕೆಂಪಣ್ಣನನ್ನು ದುರುಗುಟ್ಟಿ ನೋಡಿ) ಓಃ! ನೀವೂ?

ಕೆಂಪಣ್ಣ—(ನಗುತ್ತ) ಹೂಂ. ನಾನೇ.

ಲಿಂಗಾಂಬೆ—ಓಃ! ಗುರ್ತೇ ಗೊತ್ತಾಗ್ಲಿಲ್ಲ. ದಯವಿಟ್ ಕ್ಷಮಿಸ್ಸಿ. ನಾನೇನೇನೋ ಅಂದ್ಬಿಟ್ಟೇ. ಮನಸ್ಸಿಗೇನೂ ಬೇಸ್ರಾಪಟ್ಕೋಬ್ಯಾಡಿ. ದಯ್‌ವಿಟ್ ಕ್ಷಮಿಸ್ಸಿ.

ಕೆಂಪಣ್ಣ—ಕ್ಷಮ್ಸೋದೇನ್ ಬಂತೂ? ತಪ್‌ಮಾಡಿರೋವ್ನೂ ನಾನು. ಕ್ಷಮಾಪಣೆ ಕೇಳ್ಕೋಬೇಕಾಗಿರೋವ್ನೂ ನಾನು. ಪ್ರತಿಯಾಗಿ ನೀವೇ ಕ್ಷಮಾಪಣೇ ಕೇಳ್ತಾಯಿದ್ದೀರಲ್ಲಾ?

ಲಿಂಗಾಂಬೆ—ಕೇಳ್ಲೇ ಬೇಕು. ಅಗತ್ಯವಾಗಿಯೂ ಕೇಳ್ಲೇಬೇಕು. ತಪ್‌ಮಾಡಿರೌಳು ನಾನು. ಅಸಭ್ಯವಾಗಿ ವರ್ತಿಸಿರೌಳು ನಾನು. ನಾನ್ ಕ್ಷಮಾಪಣೆ ಕೇಳ್ಕೋಬೇಕಾದ್ದೇ ಧರ್ಮ ಅಲ್ವೇ? ಆದ್ರೇ

ಪೂರ್ಣಾಪರಾಧ ನನ್ದೇ ಅಂತಾ ಹೇಳೋದಕ್ಕಾಗೋದಿಲ್ಲಾ. ಯಾಕಂದ್ರೇ, ಆ ದಿನ್ವೇ ಒಂದ್ ವೇಷದಲ್ಲಿದ್ರೀ, ಈ ದಿನ್ವೇ ಒಂದ್ ವೇಷದಲ್ಲಿದ್ದೀರಾ. ಗುರ್ತಾಗೋದಾದ್ರೂ ಹ್ಯಾಗೇ! ಒಂದೊಂದ್ ವೇಳೇಗೆ ಒಂದೊಂದ್ ವೇಶಾ ಬದ್ಲಾಯ್ಸೋದಕ್ಕೆಕಾರ್ಣಾ ಏನೂ?

ಕೆಂಪಣ್ಣ—ಆ ದಿನ ಆ ವೇಶದಲ್ಲಿರ್ಬೇಕೂ ಅಂತಾ ರಂಗ್ನಾಥನ್ ಇಚ್ಛೆಯಿತ್ತು. ಈ ದಿನ ಈ ವೇಶದಲ್ಲಿರ್ಬೇಕೂ ಅಂತಾ ರಂಗ್ನಾಥನ್ ಇಚ್ಛೆಯಾಗಿದೆ. ನಾಳೆ ಯಾವ ವೇಶದಲ್ಲಿರ್ಬೇಕೂ ಅಂತಾ ಔನಿಚ್ಛೆಯಾಗುತ್ತೋ, ನನ್ಗೇನರಿವು? ನಾನಂತೂ ಔನಿಚ್ಛಾನುಗತಿಗನುಸಾರವಾಗಿಯೇ ನಡೀಬೇಕಾಗುತ್ತಲ್ವೇ?

ಲಿಂಗಾಂಬೆ—ಹೌದು, ಸತ್ಯ ವಚನವನ್ನೇ ಹೇಳದ್ರೀ. ದೇವಾಧಿ ದೇವನಾದ ರಂಗನಾಥನನ ಇಚ್ಛಾನುಗತಿಗನುಸಾರವಾಗಿಯೇ ನಾವು ನಡೀಬೇಕಾಗುತ್ತೆ.

ಕೆಂಪಣ್ಣ—ಆಗ್ಲೀ, ತುಂಬಾ ಸಂತೋಷ. ನಾನ್ ಹೋಗ್ಬಿಟ್ ಬರ್ತೀನಿ. ಅಂತೂ ನನ್ನನ್ನ ಮರ್ತಿಲ್ವಲ್ಲಾ?

ಲಿಂಗಾಂಬೆ—ಹಾಗಂದ್ರೇನೂ? ನೀವು ನಮ್ಮ ಪ್ರಾಣದಾತರು. ಮಾನದಾತರು. ನಮ್ಮ ವಂಶದ ಕೀರ್ತಿ ಗೌರವಗಳನ್ನು ಕಾಪಾಡಿದ ಮಹಾನುಭಾವರು. ನಿಮ್ಮನ್ನು ಮರೆಯಲು ಹೇಗೆ ತಾನೇ ಸಾಧ್ಯವಾಗುವುದು? ನಿಮ್ಮನ್ನು ನೋಡಿದ ದಿನದಿಂದಲೇ ನೀವು ಚಿತ್ರವಾಗಿ ನನ್ನ ನಯನಭಿತ್ತಿಯ ಮೇಲೆ ಅಂಕಿತರಾಗಿರುವಿರಿ. ನೀವು ನನ್ನನ್ನು ನಿರ್ಲಜ್ಜೆಯೆಂದು ಭಾವಿಸಿದರೂ ಚಿಂತೆಯಿಲ್ಲ. ನಿಮ್ಮನ್ನು ಸ್ಮರಿಸದ ದಿನವೇ ಇಲ್ಲ.

ಕೆಂಪಣ್ಣ—ಆಃ! ನಾನೆಂಥಾ ಭಾಗ್ಯ ಶಾಲಿಯು! ಪ್ರಫುಲ್ಲ ಚಂದ್ರಬಿಂಬವೇ ಸ್ತ್ರೀರೂಪದಂತಿರುವ, ನಿಮ್ಮ ಅಭಿಮಾನಕ್ಕೇ ಪಾತ್ರನಾದ ನಾನೇ ಸುದೈವಿಯು. ನಿಮ್ಮ ಸೌಂದರ್ಯ, ನಿಮ್ಮ ಸೌಶಿಲ್ಯ, ನಿಮ್ಮ ಸೌಜನ್ಯವನ್ನು ಕಂಡು ತಣಿದ ನಾನೇ ಭಾಗ್ಯ ಶಾಲಿಯು. ನಿಮ್ಮ ನಿರುಪಮ ವಾತ್ಸಲ್ಯಕ್ಕಾಗಿ ನಾನು ನಿಮಗೆ ಯಾವಜ್ಜೀವವೂ ಕೃತಜ್ಞನಾಗಿದ್ದೇನೆ. ಆಗಲಿ, ಭಗವದಿಚ್ಛೆಯಿದ್ದರೆ, ತ್ವರಿತದಲ್ಲಿಯೇ ಪರಸ್ಪರರ ಸಂದರ್ಶನವಾಗಬಹುದು. ಈಗ ನಾನು ಹೊರಡುತ್ತೇನೆ.

ಲಿಂಗಾಂಬೆ—ಇಷ್ಟೇನು ಆತುರ? ಇನ್ನೇನು ನಮ್ಮ ತಂದೆಯವರು ಬರಬಹುದು ನಿಮ್ಮನ್ನು ಕಂಡಾಗ, ಅವರಿಗಾಗುವ ಆನಂದಕ್ಕೆ ಪಾರವೇ ಇಲ್ಲ. ನೀವು ನಮ್ಮ ಮನೆಗೆ ಬಂದರೆ, ನಿಮ್ಮ ಪವಿತ್ರ ಪಾದಸ್ಪರ್ಶದಿಂದ ನಮ್ಮ ಮನೆಯು ಪುಣ್ಯ ಮಂದಿರವಾಗುವುದು. ನೀವು ನಮ್ಮ ಮನೆಯಲ್ಲಿ ಒಂದು ಬಟ್ಟಲು ಹಾಲನ್ನು ಕುಡಿದರೂ ನಾವು ಧನ್ಯರಾಗುವೆವು.

ಕೆಂಪಣ್ಣ— ಎಷ್ಟು ದೊಡ್ಡ ಮಾತುಗಳನ್ನಾಡುತ್ತಿರುವಿರೀ? ನಿಮ್ಮ ಅಮೂಲ್ಯವಾದ ವಚನಗಳಿಂದ ನನ್ನನ್ನು ಕೊಂಡುಕೊಳ್ಳುತ್ತಿರುವಿರಿ. ನಾನು ನಿಮಗೆಷ್ಟು ಆಭಾರಿಯಾಗಿದ್ದರೂ ಅತ್ಯಲ್ಪವೇ. ಆಗಲಿ, ಈಗ ಹೋಗಿಬರುತ್ತೇನೆ. ಅಗತ್ಯವಾದ ಕೆಲಸವಿದೆ. ಪುನಃ ಬೇಗನೆ ಬರುತ್ತೇನೆ. ಹೋಗಲೇ?

ಲಿಂಗಾಂಬೆ—ಈಗಲೇ ಅಷ್ಟೇನು ಆತುರ? ಇಷ್ಟೇ ಹೊತ್ತು ಕಳೆದಿರುವಿರಂತೆ, ಇನ್ನು ಸ್ವಲ್ಪಹೊತ್ತು ಕಳೆಯುವುದಕ್ಕಾಗುವುದಿಲ್ಲವೆ? ಇನ್ನೇನು ನಮ್ಮ ತಂದೆಯವರು ಬರಬಹುದು. (ಪಕ್ಕಕ್ಕೆ ತಿರುಗಿ ನೋಡಿ) ಆಗೋ ಅಲ್ಲಿ ನೋಡಿ, ದೂರದಿಂದಲೇ ಓಡಿ ಬರುತ್ತಿದ್ದಾರೆ. ಇನ್ನು ಸ್ವಲ್ಪ ಹೊತ್ತು ತಡೆಯಿರಿ, ಬಂದೇ ಬಿಡುತ್ತಾರೆ.

ಕೆಂಪಣ್ಣ—ಆಗಲಿ, ಅವರು ಬರಲಿ. ನಾನು ಹೋಗುತ್ತೇನೆ. ನನಗೆ ಅಗತ್ಯವಾದ ಕೆಲಸವಿದೆ. ನಾನು ಹೋಗಲೇಬೇಕಾಗಿದೆ. ಪುನಃ ಬರುತ್ತೇನೆ. ಬಹಳ ಬೇಗ ಬಂದೇಬಿಡುತ್ತೇನೆ. (ಹೊರಡುವನು)

ಲಿಂಗಾಂಬೆ—ಹೋಗಲೇಬೇಕು ಎನ್ನುವಿರಾದರೆ, ನಾನು ತಾನೇ ಹೇಗೆ ತಡೆಯಲಿ? ಆದರೆ ಹೋಗುತ್ತ ಹೋಗುತ್ತ ಪರಿಚಯವನ್ನಾದರೂ ತಿಳಿಸಿ ಹೋಗಿ.

ಕೆಂಪಣ್ಣ—(ಹಿಂದಿರುಗಿ) ಪರಿಚಯದ ಅಗತ್ಯ ಈಗಲೇ ಅಷ್ಟಾಗಿ ಏನಿದೇ? ಕ್ರಮೇಣ ತಾನಾಗಿ ಎಲ್ಲಾ ತಿಳಿದುಹೋಗುತ್ತದೆ. (ಹೊರಡುವನು)

ಲಿಂಗಾಂಬೆ—ಅಯ್ಯೋ! ನೀವೆಷ್ಟು ಕ್ರೂರಿಗಳು? ಪರಿಚಯವನ್ನೂ ತಿಳಿಸಿ ಹೋಗುತಿಲ್ಲವಲ್ಲ!

ಕೆಂಪಣ್ಣ—ನನ್ನನ್ನ ಕ್ರೂರಿಯೆಂದು ಆಕ್ಷೇಪಿಸಬೇಡಿ. ಈಗಲೇ ಪರಿಚಯ ವನ್ನು ತಿಳಿಸಬಾರದೆಂದಿದ್ದೆನು. ತಿಳಿಯಲೇ ಬೇಕೆನ್ನುವಿರಾದರೆ ಕೇಳಿ, ನನ್ನನ್ನು ಕೆಂಪಣ್ಣ ಎಂದು ಕರೆಯುತ್ತಾರೆ. ನನ್ನ ಹೆಸರು ಕೆಂಪೇ ಗೌಡ ಎಂದು. ನಮ್ಮ ತಂದೆಯುವರ ಹೆಸರು ಕೆಂಪವೀರೇಗೌಡ. ನಮ್ಮ ತಾಯಿಯುವರ ಹೆಸರು ಕೆಂಪಮ್ಮ. ನಮ್ಮ ತಾಯಿಯುರ ಜನ್ಮಸ್ಥಳ ಕೆಂಪಸಾಗರ. ನನ್ನ ಜನ್ಮಸ್ಥಳ ಮಾಗಡಿ, ಇಷ್ಟಾದರೆ ಸಾಕೇ? (ಲಿಂಗಾಂಬೆ ತಲೆದೂಗುವಳು) ಹಾಗೆಯೇ ನಿಮ್ಮ ಪರಿಚಯುವನ್ನೂ ತಿಳಿಸಿಬಿಡಿ.

ಲಿಂಗಾಂಬೆ—ನಾವು ಇದೇ ಕೆಂಪಸಾಗರದವರು. ನನ್ನ ಹೆಸರು ಲಿಂಗಾಂಬೆ ಎಂದು. ನಮ್ಮ ತಂದೆಯುವರ ಹೆಸರು ಜವರೇಗೌಡರೆಂದು.

ಕೆಂಪಣ್ಣ—ಆಗಲಿ ಸಂತೋಷ. ತುಂಬಾ ಸಂತೋಷ. ಆಗೋ ನಿಮ್ಮ ತಂದೆಯುವರು ಬಂದೇಬಿಟ್ಟರು. ಇನ್ನು ನಾನು ಹೋಗುತ್ತೇನೆ. (ಹೊರಡುವನು)

ಲಿಂಗಾಂಬೆ—ನಿಲ್ಲಿ, ಕೊಂಚನಿಲ್ಲಿ.

ಕೆಂಪಣ್ಣ—ಇಲ್ಲಾ ನಾನು ಹೋಗಲೇಬೇಕಾಗಿದೆ. ಹೋಗುತ್ತೇನೆ. (ಹೊರಟು ಹೋಗುವನು)

ಲಿಂಗಾಂಬೆ—ಹೋಗಲೇಬೇಕಾಗಿದೆ. ಹೋಗುತ್ತೇನೆ. ಅಯ್ಯೋ ನಿರ್ದಯಿ! ಹೋಗುವವನು. ಹೋಗುತ್ತಿರುವೆ. ಆದರೆ ಹೋಗುತ್ತ ಹೋಗುತ್ತ ನನ್ನ ಹೃದಯುವನ್ನೇಕೆ ಅಪಹರಿಸಿಕೊಂಡು ಹೋಗುತ್ತಿರುವೇ? ಹೃದಯುವು ನಿನ್ನ ಬಳಿಯಲ್ಲಿ. ಬರಿ ದೇಹ ಮಾತ್ರ ಇಲ್ಲಿ. ಹೃದಯು ವನ್ನು ನಿನಗರ್ಪಿಸಿ ನಾನು ಹೇಗೆ ತಾನೇ ಜೀವದಿಂದಿರಲಿ?

ಜವರೇಗೌಡ—(ಸಿಟ್ಟನಿಂದ ಪ್ರವೇಶಿಸಿ) ಎಲ್ಹೋದಾ ಔನೂ? ಎಲ್ಹೋದಾ? ಎಲ್ಹೋದ್ನಮ್ಮಾ?

ಲಿಂಗಾಂಬೆ—ಯಾರಪ್ಪಾ!

ಜವರೇಗೌಡ—ಔನೇಕಣಮ್ಮಾ! ಕುದ್ರೇ ಮೇಲ್ಕುತ್ಕೋ ಬಂದೂ ಹೊಲಾ ಎಲ್ಲಾ ತುಳ್ಸ ಹಾಕ್ತಾಯಿದ್ನಂತಲ್ಲಾ ಆ ಘಟಂಗಾ, ಎಲ್ಹೋದ್ನಮ್ಮಾ ಔನು!

ಲಿಂಗಾಂಬೆ—ಔರ್ಯಾರೂ ಬೇರೇವ್ರು ಅಲ್ಲಾಪ್ಪಾ, ಆ ದಿನ ನಮ್ಮನ್ನ ಬೈರಪ್ಪನ್ ಕಡೇವ್ರುಕೈಯಿಂದಾ ಬಿಡಸ್ಲಿಲ್ವೇ! ಆ ಪುಣ್ಯಾತ್ಮರೇ ಕಣಪ್ಪಾ.

ಜವರೇಗೌಡ—ಓಹೋ! ಆತನೇ ಏನೂ! ಅಷ್ಟ್ ಒಳ್ಳೇವ್ನೂ ಹೊಲಾಯಾಕ್ ತುಳಸ್ತಾಯಿದ್ನಂತೇ!

ಲಿಂಗಾಂಬೆ—ಹೊಸ್‌ಕುದ್ರೇ ಅಂತಪ್ಪಾ! ಇನ್ನೂ ಪಳ್ಗಿಲ್ವಂತೇ. ಹತೋಟಿ ಹೊಲದ್ ಕಡೇ ತಿರ್ಗ್‌ಬಿಡ್ತಂತೇ. ಪಾಪ, ಬಂದೂ ದಯ್‌ವಿಟ್ ಕ್ಷಮಿಸ್ಸೀ. ಕೈ ತಪ್ಪಿ ಈ ಅಪರಾಧ ನಡ್‌ದ್ಹೋಯ್ತೂ ಅಂತಾ ಕೇಳ್ಕೊಂಡ್ರಪ್ಪಾ. ಔರೆಷ್ಟ್ ಒಳ್ಳೇವ್ರು ಅಂತ್ಯಾಪ್ಪಾ? ಅಪ್ಪಾ! ಈ ದಿನ ಔರು ರಾಜ್‌ಕುಮಾರನ್ ವೇಷದಲ್ಬಂದಿದ್ರೂ. ಔರ್ ಕುದ್ರೇಮೇಲ್ಕೂತಿದ್ದಾಗ, ನೀನ್ ಔರನ್ನಾ ನೋಡ್ಬೇಕಾಗಿತ್ತಪ್ಪಾ! ದೇವಲೋಕದಿಂದ ಮನ್ಮಥಾನೇ ಇಳ್ದ್ ಬಂದ್ಹಾಗಿದ್ರೂ. (ಕೆಂಪಣ್ಣ ಹೋದ ಕಡೆಯೇ ನೋಡುತ್ತ) ಏನ್‌ರೂಪು! ಏನ್‌ಗುಣಾ! ಏನ್ ಪರಾಕ್ರಮ! ಎಂಥಾ ಸಾಹಸ! ಆಹಾಹಾ! ವರ್ಣಿಸೋದಕ್ಕೆ ಒಂದ್ ನಾಲ್ಗೇನೇ ಸಾಲ್ದು.

ಜವರೇಗೌಡ—(ಆಶ್ಚರ್ಯದಿಂದ) ಮಗಳೇ! ಲಿಂಗಾಂಬೇ! ನೀನಿನ್ನೂ ಕನ್ಯೆ. ಪರಪುರುಷನ ರೂಪನ್ನ ಹೀಗ್ ವರ್ಣಸ್ತಾರ್ದೂ.

ಲಿಂಗಾಂಬೆ—ನಾನ್ ಔರ್ ರೂಪನ್ನ ವರ್ಣಸ್ತಾಯಿಲ್ಲಾಪ್ಪಾ! ಔರ್ ಗುಣವನ್ನ ಕೊಂಡಾಡ್ತಾಯಿದ್ದೀನಿ, ಅಷ್ಟೇ. ಆ ಹಾ ಹಾ! ಎಂಥಾ ಮುದ್ದಾದ ಮುಖ ಮುದ್ರೇ! ಏನ್ ಸುಂದರವಾದ ಮೈ ಕಟ್ಟೂ! ಎಂಥಾ ಮಧುರವಾದ ಭಾಷೆ! ಔರನ್ನಾ ನೋಡ್ತಾ ನಿಂತ್ರೇ ಮೈಮೇಲಿನ್ ಪರಿವೇನೇ ಇರೋದಿಲ್ಲಾ. ಔರ್ ಮಾತಾಡ್ತಾಯಿದ್ರೇ ಅನ್ನಾ, ನೀರೂ, ನಿದ್ರೇ ಬಿಟ್ಟೂ ಮೂರ್ ದಿನ್ವಾದ್ರೂ ಕೂತ್ಕೊಂಡ್ ಕೇಳ್ಬೇಕೂ ಅಂತಾ ಅನ್ಸುತ್ತೆ. ಹೃದಯವಂತೂ ಕರುಣಾ ರಸಾಯನದಿಂದ ನಿರ್ಮಿಸಿದಂತೆ ತೋರುತ್ತೆ.

ಜವರೇಗೌಡ—(ಆಶ್ಚರ್ಯದಿಂದ ತನ್ನಲಿಯೇ) ಇದೇನೂ! ಇವಳು ಸಂಪೂರ್ಣವಾಗಿಯೂ ಅವನಲ್ಲಿ ಮೋಹಿತಳಾಗಿದ್ದಾಳಲ್ಲಾ! ಏನೂ ಅರಿಯದ ಮುಗ್ಧೇ! ಇವ್ಳ ಹೃದಯದಲ್ಯಾಕೇ ಇಂಥಾ ಭಾವನೆ

ಉತ್ಪನ್ನವಾಯ್ತೂ! ಇನ್ ಔನು ಎಲ್ಲಿಯುವ್ನೋ! ಏನೋ! ಎಂತೋ! ಔನನ್ನ ಕಂಡ್ಹಿಡಿಯೊದಾದ್ರೂ ಹ್ಯಾಗೇ! ಕಂಡ್ಹಿಡದ್ರೂ ಔನಿವ್ನಸ್ನಾ ಮದ್ವೇ ಆಗೋದಕ್ಕೊಪ್ತಾನೋ ಇಲ್ವೋ? ಒಂದ್ ವೇಳೆ ಒಪ್ಪದ್ರೂ ಔನ್ಯಾವ್ ಕುಲದೌನೋ! ಯಾವ್ ಅಚಾರ ದೌನೋ! ಒಳ್ಳೇ ಸಂಕ್ಟಕ್ಕಿಟ್ಕೋತಲ್ಲಾ! (ಲಿಂಗಾಂಬೆಯ ಕಡೆಗೆ ತಿರುಗಿ) ಏನಮ್ಮಾ!

ಲಿಂಗಾಂಬೆ—ಅಪ್ಪಾ!

ಜವರೇಗೌಡ—ಔನೇನಾದ್ರೂ ಗುರ್ತೂ ಪರಿಚಯಾ ಹೇಳ್ಹೋಗಿದ್ದಾನೇ ನಮ್ಮ!

ಲಿಂಗಾಂಬೆ—ಹೌದಪ್ಪಾ, ಹೇಳ್ಹೋಗಿದ್ದಾರೆ. ಔರೂರು ಮಾಗಡೀ ಅಂತೇ.

ಜವರೇಗೌಡ—ಮಾಗಡಿ!

ಲಿಂಗಾಂಬೆ—ಹೂಂ, ಮಾಗಡೀ ಅಂತೇ. ಔರ್ ತಂದೇವ್ರ ಹೆಸ್ರೂ ಕೆಂಪ ವೀರೇಗೌಡರಂತೆ.

ಜವರೇಗೌಡ—ಕೆಂಪವೀರೇಗೌಡ!

ಲಿಂಗಾಂಬೆ—ಹೌದಪ್ಪಾ ಕೆಂಪವೀರೇಗೌಡರಂತೆ. ಔರ್ ತಾಯಿಯೌರ್ ಹೆಸ್ರೂ ಕೆಂಪಮ್ಮಾ ಅಂತೇ.

ಜವರೇಗೌಡ—ಕೆಂಪಮ್ಮಾ! .... ಕೆಂಪಮ್ಮಾ!

ಲಿಂಗಾಂಬೆ—ಹೌದೂ, ಹೌದಪ್ಪಾ! ಕೆಂಪಮ್ಮಾ ಅಂತೇ. ಔರ್ ಹೆಸ್ರೂ ಕೆಂಪೇಗೌಡ ಅಂತೇ. ಕೆಂಪಣ್ಣಾ ಅಂತಾ ಕರೀತಾರಂತೇ.

ಜವರೇಗೌಡ—(ಏನೋ ಯೋಚಿಸುವವನಂತೆ ಮುಖವನ್ನು ಮೇಲ ಕ್ಕೆತ್ತಿ) ಹೆಸರೂ ಕೆಂಪೇಗೌಡಾ ಅಂತೇ. ಕೆಂಪಣ್ಣಾ ಅಂತಾ ಕರೀ ತಾರಂತೇ. ಆಂ!

ಲಿಂಗಾಂಬೆ—ಹೂಂ ಕಣಪ್ಪಾ, ಔರೇ ಹೇಳದ್ರೂ.

ಜವರೇಗೌಡ—ಮಾಗಡಿ! ಕೆಂಪವೀರೇಗೌಡ! ಕೆಂಪಮ್ಮ! ಕೆಂಪೇಗೌಡ! (ಯೋಚಿಸುವವನಂತೆ ನಿಲ್ಲುವನು. ಲಿಂಗಾಂಬೆ ಅವನ ಮುಖವನ್ನೇ ನೋಡುವಳು) ಆಂ, ಏನಮ್ಮಾ! ಔರ್ ತಾಯಿ ಯಾವೂರ್ನೌರೂ ಅನ್ನೋ ವಿಚಾರ ಏನಾದ್ರೂ ಹೇಳ್ಹೋಗಿದ್ದಾನೇನಮ್ಮಾ?

ಲಿಂಗಾಂಬೆ— ಹೌದಪ್ಪಾ, ಹೇಳ್ಹೋಗಿದ್ದಾರೆ. ಔರ್ ತಾಯಿ ಇದೇ ಕೆಂಪ್ಸಾಗರದೌರಂತೇ.

ಜವರೇಗೌಡ— (ಆಶ್ಚರ್ಯದಿಂದ) ಏನೂ? ಇದೇ ಕೆಂಪ್ಸಾಗರದೌರಂತೇ! (ಸ್ವಲ್ಪ ಹೊತ್ತು ತಟಸ್ಥನಾಗಿ ನಿಲ್ಲುವನು. ಅನಂತರ ತಲೆದೂಗಿ) ಹೂಂ; ...ಹೂಂ; (ಮಂದಹಾಸವನ್ನು ಬೀರುವನು)

ಲಿಂಗಾಂಬೆ—ತಿಳೀತೇನಪ್ಪಾ? ಔರ್ಯ್ಯಾರಪ್ಪಾ?

ಜವರೇಗೌಡ—ಔನ್ ನಮಗೆ ಅನ್ಯನಲ್ಲಾವ್ಮಾ; ನಮ್ಮ ಹತ್ತಿರದ ಸಂಬಂಧಿ. ಬಹಳ ಹತ್ತಿರದ ಸಂಬಂಧಿ. ಔನ್ ನನ್ ಸೋದರಳಿಯಾ ಕಣಮ್ಮಾ; ಔನ್ ತಾಯಿ ನನ್‌ಸ್ವಂತ್ ತಂಗಿ.

ಲಿಂಗಾಂಬೆ—ನಿಶ್ಚಯವೇನಪ್ಪಾ?

ಜವರೇಗೌಡ—ನಿಶ್ಚಯಾ ಕಣಮ್ಮಾ, ನಿಶ್ಚಯ.

ಲಿಂಗಾಂಬೆ—ಹಾಗಾದ್ರೇ ಅತ್ತೇವ್ರ್‌ನಾ ಯಾಕಪ್ಪಾ ಇದುವರೆಗೆ ನಮ್ಮನೇಗೆ ಕರ್ಕೊಂಡು ಬರ್ಲಿಲ್ಲಾ; ನನ್ನನ್ ಒಂದ್ ದಿನ್ವಾದ್ರೂ ಯಾಕಪ್ಪಾ ಔರ್ ಮನೇಗ್ ಕರ್ಕೊಂಡ್ ಹೋಗ್ಲಿಲ್ಲಾ?

ಜವರೇಗೌಡ—ಏನ್ಮಾಡೋದಮ್ಮಾ? ಔಳ್ ಗಂಡಾ ತೀರ್ಕ್ಹೋದ್ ಹೊಸದ್ರಲ್ಲಿ ಆಸ್ತೀಪಾಸ್ತೀ ಎಲ್ಲಾ ಕಳ್ಕೊಂಡ್ ನಮ್ಮನೇಗ್ ಬಂದ್ಲೂ. ನಾನ್ ಐಶ್ವರ್ಯದ ಅಹಂಕಾರದಲ್ಲಿ ಔಳನ್ನಾ ಉಪೇಕ್ಷೆಯಿಂದಾ ಕಂಡೇ. ಔಳ್ ಮಹಾ ಸ್ವಾಭಿಮಾನಿ. ಕೂಲೀ ಮಾಡ್ಕೊಂಡ್ ತಿಂದ್ರೂ ಚಿಂತೇಯಿಲ್ಲಾ. 'ಪುನಃ ತೌರ್ ಮನೇಗ್ ಕಾಲಿಡೋದಿಲ್ಲಾ ಅಂತಾ ಹೊರ್ಟ್‌ಹೋಗ್ಬಿಟ್ಲೂ. ನಾನ್ ಮತ್ತೋಗ್ ಕರ್ದೇ. ಆದ್ರೇ ಔಳು ಬರ್ಲಿಲ್ಲಾ. ಕ್ರಮ ಕ್ರಮೇಣ ನಮ್ ಸಂಬಂಧಾ ದೂರ ದೂರವಾಗಿಯೇ ಉಳ್ದ್‌ಹೋಯ್ತಮ್ಮ. ಆಗ್ಲಿ. ಈಗೌಳ್ ಮನೇಗೆ ನಾನಾಗಿಯೇ ಹೋಗ್ತೀನಿ. ಹೆಣ್ಹೆತ್ತಿದ್ದೀನಿ, ನನಗ್ಯಾಕ್ ದುರಭಿಮಾನ?

ದೃಶ್ಯ—೨೧

ರಸ್ತೆ

(ಬೈರಪ್ಪ ಸಾಮಾನ್ಯ ಉಡುಪಿನಲ್ಲಿಯೂ ಮಲ್ಲ ಕೈಯಲ್ಲಿ ಹಿಡಿಯ ದೊಣ್ಣೆಯನ್ನು ಹಿಡಿದುಕೊಂಡು ಪಟೇಲರ ವೇಶದಲ್ಲಿ ಪ್ರವೇಶಿಸುವರು

ಬೈರಪ್ಪ—ನೋಡು ಮಲ್ಲ, ನಿನ್ ಮೇಲೆ ಈಗ್ ಬಹಳ ದೊಡ್ಡ ಜವಾಬ್ದಾರಿಯಿದೆ. ಊರಿನ್ ಪಟೇಲ್ಕೆ ನೋಡ್ಕೊಳ್ಳೋದಲ್ದೇ, ಆಸ್ತೀ ಪಾಸ್ತೀ ವ್ಯವಹಾರ ನೊಡ್ಕೊಳ್ಳೋದಲ್ದೇ, ನನ್ಗ್ ಬಂದಿರೋ ಕೆಟ್ಟೆಸ್ರನ್ನೂ ತೊಳಿಯೋದಕ್ ಪ್ರಯತ್ನಾಪಡ್ಬೇಕಾಗುತ್ತೇ. ಅಧಿಕಾರ ಇದೆ, ಐಶ್ವರ್ಯಾ ಇದೇ ಅಂತಾ ಬಡೌರನ್ನ ತುಳೀಬ್ಯಾಡ. ಅನ್ಯಸ್ತ್ರೀಯರನ್ನ ಮೊಹಿಸ್ಬೇಡ. ಕಂಡೌರ್ ಮನೆಗಳನ್ನ ದೋಚ್ಬೇಡ. ಇವು ಇಹಪರಗಳೆರಡಕ್ಕೂ ಕೆಡಕನ್ನುಂಟು ಮಾಡುವ ಕೃತಿಗಳು. ಬಾಯಿಗೆ ರುಚಿಕರವಾಗಿಯೂ, ದೇಹಕ್ಕೆ ಅನಾರೋಗ್ಯಕರವಾಗಿಯೂ ಇರುವಂಥಾ ಫಲವನ್ನ ಹೇಗ್ ತಿನ್ಬಾರ್ದೋ? ಹಾಗೆಯೇ ಆರಂಭದಲ್ಲಿ ಸುಖಕರವಾಗಿಯೂ, ಅಂತ್ಯದಲ್ಲಿ ದುಃಖಕರವಾಗಿಯೂ ಇರುವಂಥಾ ಕೃತಿಯನ್ನೂ ಮಾಡ್ಬಾರ್ದೋ. ಇದಕ್ಕಿಂತಾ ನಾನ್ ನಿನ್ಗೇ ಇನ್ನೇನೂ ಹೆಚ್ಚಿಗ್ಹೇಳೋದಿಲ್ಲಾ. ಈಗ್ ಶಾಸ್ತ್ರಿಗಳ್ ಮನೇಗ್ಹೋಗಿಬಿಟ್ಟೂ ಕಂದಾಯದ ಲೆಕ್ಕಾಯೆಲ್ಲಾ ಬರಸ್ಕೊೞ ಬಾ. ಆ ರಂಗ್ನಾಥನ್‌ಗ್ಹೇಳಿದ್ದೀನಿ ನಿತ್ಯಾ ಬಂದ್ ಪಾಠಾ ಹೇಳ್ಕೊಡ್ತಾನೇ. ಒಂದಷ್ಟ್ ಅಕ್ಷರ ಕಲ್ತ್ಕೊೞ. ತಿಳೀತೇನೋ?

ಮಲ್ಲ—ಊಂ. ತಿಳೀತ್ರೂ.

ಬೈರಪ್ಪ—ಈಗ್ ನಾನ್ ಮನೇಗ್ಹೋಗ್ತೀನಿ ಮದ್ವೇಗ್ ಬೇಕಾದ್ ಸಿದ್ಧತೆಯೆಲ್ಲಾ ಮಾಡ್ಬೇಕಾಗಿದೆ. ಇನ್ನುಳ್ದಿರೋದು ನಾಲ್ಕೇದಿನಾ. ನೀನೂ ಶಾಸ್ತ್ರಿಗಳ್ ಮನೆಯಿಂದ ಬೇಗ್ ಬಂದ್ಬಿಡೂ.(ಹೊರಡುವನು)

ಮಲ್ಲ—ಊಂ ನಾನೋಗ್ಬಿಟ್ ಬತ್ತೀನಿ. ನೀವ್ ಓಗೀ. (ಸಭೆಯ ಕಡೆ ತಿರುಗಿ) ಅಲ್ಲಾ, ಈ ಮನ್ಸ್ರು ದೊಡ್ಡೋರ್ಕಾಗೇಕೂ, ಮನೇ ಮಟಾ ಕಟ್ಟಸ್ಬೇಕೂ, ಆಸ್ತೀ ಪಾಸ್ತೀ ಮಾಡ್ಬೇಕೂ, ನಾಕ್‌ಜನ್ರ್ ಕೈನಾಗೇ ಸೈ ಅನ್ನಸ್ಕೊೞಬೇಕೂ ಅಂತಾ ಇಲ್ಲದ್ ಬಂಗಾಪಡ್ತಾರೇ. ಬೀದೀ

ದೂಳಿಲ್ಲಾ ಬಾಚ್ ಬಾಚ್ ನುಂಗ್ತಾರೇ. ಆದ್ರೇ ಏಟ್ ತಲ್ ಕೆಳ್ಮಾಕಿದ್ರೂ, ಸಿಗ್ದಂಗೆಗ್ರಾಡದ್ರೂ ಅಣೇಲ್ ಬರ್ದೋಟೇ ಕೈಬಿತ್ತ್ಯಾತೂ. ಅತ್ಕಿಂತಾ ಎಳ್ಕಾಳ್‌ಗಾತ್ರಾ ಎಚ್ಚಾಗ್ಬೇಕೂ ಅಂತಾ ತಿಪ್ಪುರ್ ಲಾಗಾ ಆಕದ್ರೇ ತಾನೇ ಕೈ ಎಟ್‌ಕ್ಯಾತಾ? ನಾನಂಗ್ಮಾಡಿದ್ರಿಂದಾ ನಸ್ಟಾಆಗೋಯ್ತೂ. ಇಂಗ್ಮಾಡಿರ್ತಿದ್ರೇ ಲಾಬಾ ಆಯ್ತಿತ್ತೂ ಅಂತಾ ಮನ್ಸ್ನೋ ಇಳ್ಳಾನ್ನಿಳ್ಗೂ, ಕುಂತೂ ಲೆಕ್ಕಾ ಆಕಿದ್ದೂ ಆಕಿದ್ದೇ. ಯೋಸ್ನೇ ಮಾಡಿದ್ದೂ ಮಾಡಿದ್ದೇ. ಆದ್ರೇ ಲಾಬಾ ನಸ್ಟಾ ನಮ್ ಕೈನಾಗೈತಾ? ಯಾ ಯಾ ಕಾಲ್ಕೇ ಏನೇನಾಗ್ಬೇಕೂ ಅಂತಾ ಆ ಬೊಮ್ಮಾ ನಮ್ಮಣ್ಯಾಗ್ ಬರ್ದಾನೋ ಆದಾಗ್ದೇ ಬುಡ್ತೈತಾ? ಅರ್ಜುನೇ ಐಬೋಗಾ ಆನ್‌ಬೋಸೋನ್ ಅಣೇಲಿ ಸಗ್ಣೀ ಬುಟ್ಟಿ ಒರ್ಬೇಕೂ, ಸಗ್ಣೀ ಬುಟ್ಟಿ ಒರೋನ್ ಅಣೇಲಿ ಸಿಮಾಸ್ನಾ ಏರ್ಬೇಕೂ ಅಂತಾ ಬರ್ದಿದ್ರೇ ಅದ್ನಾ ತಪ್ಸಾಕ್ಯಾರ್ ಕೈಲಾರಾ ಆಯ್ತೈತಾ? ಸುಂಕೇ ಈ ಒಲರ್ಾಟಾ. ನಾನೂ ಊರೂ ಕೇರಿ ಎಲ್ಲಾ ಬುಟ್ಬುಟ್ಟೂ ದಾಸಯ್ಯನಾಗಿ ದೇಸದ್ಮ್ಯಾಕ್ ಒಂಟ್ಬುಟ್ಟಿದ್ದೇ. ಆದ್ರೇ ಅಣೇ ಬರಾ ಬುಡ್ಬೇಕಲ್ಲಾ, ಜುಟ್ಟಿಡ್ಕೊಂಡ್ ಬೆನ್ನಿಗ್ ಗುದ್ದಿ ಎಳ್ಕೊಂಬಂತೂ. ಒಲಾ, ಗದ್ದೇ, ಮನೆ, ಮಟಾ, ನಗಾ, ನಾಣ್ಯಾ, ಊರಿನ್ ಪಟೇಲ್ಕೇ ಎಲ್ಲಾ ಒಮ್ಮಾಕ್ರೇ ಕೈಗತ್ಬುಡ್ತೂ. ಮಲ್ಲೀಕುಟ್ಟೀ ಲಗ್ನಾನೂ ನಿಚ್ಚ ಯಾ ಆಗ್ಬುಡ್ತೂ. ಇನ್ ನಾಕ್ ದಿನ್ಕೇ ಬಾಚಿಂಗಾ ಕಟ್ಟೋದು. ನಾನದ್ನೇ ಏಳೋದು ಸುಮ್ಕೇ ಯಾಕ್ ಒರಲ್ತೀರಾ? ಯಾ ಯಾ ಕಾಲ್ಕೇ ಏನೇನಾಗ್ಬೇಕೋ ತಾನಾಗೇ ಆಯ್ತೈತೇ. (ಪಕ್ಕಕ್ಕೆ ನೋಡಿ) ಅಕ್ಕೋ, ಮಲ್ಲೀ ಇತ್ಕಡೀಕೇನೇ ಬರ್ತಾಳೇ. ಬಾರ್ಲೇ, ನಿನ್‌ಗಂಡ್ನಾ ಗೋನ್ ಗಂಬೀರಾ ವಸಿ ಕಣ್ಬುಟ್ ನೋಡ್ಬಾರ್ಲೇ. (ಮಲ್ಲಿ ನೀರಿನ ಕೊಡವನ್ನು ಕಂಕುಳಲ್ಲಿರಿಕಿಕೊಂಡು ಪ್ರವೇಶಿಸುವಳು. ಮಲ್ಲನನ್ನು ಕಂಡೊಡನೆಯೇ ಸೆರಗನ್ನು ಮರೆಮಾಡಿಕೊಂಡು ನಾಚಿಕೆಯಿಂದ ಬಳುಕಿ ಹೋಗುವಳು) ಅಲೇ ಇವ್ಳಾ! ಆಗ್ಲೇ ಏಟ್ ನಾಚ್ಕೇ ಪಟ್ಕೋತಾಳೇ? ಇರ್ಲೀ, ಇರ್ಲೀ. ಪಟೇಲ್ರು ಎಣ್ತಿಯಾಗೋಳ್ಗೇ ನಾಚ್ಗೇ ಏಸ್ಗೇ, ಬಯಾ, ಬಕ್ತೀ, ಮಾನಾ, ಮರ್ಯಾದೇ ಎಲ್ಲಾ ಇದ್ರೇನೇ ಚಂದಾ. (ಹೋಗುವನು)

ದೃಶ್ಯ ೩೦

(ಕೆಂಪಮ್ಮ ದೇವಿಯನ್ನು ಪ್ರಾರ್ಥಿಸುತ್ತಿರುವಳು)

ಕೆಂಪಮ್ಮ—ತಾಯೇ! ಕೆಂಪಾಂಬಿಕೇ! ಜಗಜ್ಜನನೀ! ನಿಖಿಲಲೋಕ ನಾಯಕೀ! ಇದೇನು ನಿನ್ನ ಲೀಲಾವಿನೋದವಮ್ಮಾ? ನಿತ್ಯ ಜೀವನಕ್ಕಾಗಿ ಪೊರಕೆಗಳನ್ನು ಕಟ್ಟಿ ತರುತ್ತಿದ್ದಾಗ, ಅಕಾಲ ಮಳೆಯನ್ನು ಸುರಿಸಿ ನನ್ನನ್ನು ತೋಯಿಸಿದ್ದಲ್ಲದೆ, ಪೊರಕೆಗಳೂ ಕೊಚ್ಚಿಹೋಗುವಂತೆ ಮಾಡಿದೆಯಾ? ಇದರಲ್ಲಿ ನಿನಗೇನು ಆಪ್ಯಾಯನವಿದೆ ತಾಯೇ! ನಾವು ನಿತ್ಯ ಜೀವನಕ್ಕೂ ಮಾರ್ಗವಿಲ್ಲದೆ ಹಸಿವಿನಿಂದ ನರಳಿ ಸಾಯುತ್ತಿದ್ದರೆ, ನಿನಗೆ ಆನಂದವಾಗುವುದೇ ಅಮ್ಮಾ? ಇಷ್ಟು ದಿನಗಳಿಂದಲೂ ದುಃಖ, ಸಂಕಟ, ಹಸಿವು, ದಾರಿದ್ರ್ಯಗಳಿಂದ ನೋಯಿಸಿದ್ದು ಸಾಕು ತಾಯಿ! ಇನ್ನು ಮೇಲಾದರೂ ಈ ಪರೀಕ್ಷೆಯನ್ನು ನಿಲ್ಲಿಸು. (ಕಣ್ಣು ಮುಚ್ಚಿಕೊಳ್ಳುವಳು)

ಕೆಂಪಣ್ಣ—(ರಾಜಪೋಷಾಕಿನೊಡನೆ ಪ್ರವೇಶಿಸಿ) ಅಮ್ಮಾ!

ಕೆಂಪಮ್ಮ—(ಪಕ್ಕಕ್ಕೆ ತಿರುಗಿ) ಯಾರು?

ಕೆಂಪಣ್ಣ—ನಾನು ಕಣಮ್ಮ! (ಕಾಲಿಗೆ ನಮಸ್ಕರಿಸುವನು.)

ಕೆಂಪಮ್ಮ—(ಗಾಬರಿಯಿಂದ ಹಿಂದಕ್ಕೆ ಸರಿದು) ಅಯ್ಯೋ ನೀವ್ಯಾರ್ ಸ್ವಾಮಿ? ನನ್ ಕಾಲಿಗ್ಯಾಕ್ ನಮಸ್ಕಾರಾ ಮಾಡ್ತೀರಾ? ನನ್ ಕಾಲಿಗ್ ನಮಸ್ಕಾರಾ ಮಾಡ್ಬ್ಯಾಡೀ ಸ್ವಾಮಿ! ನನ್ ಕಾಲಿಗ್ ನಮಸ್ಕಾರಾ ಮಾಡ್ಬ್ಯಾಡೀ ಸ್ವಾಮಿ!

ಕೆಂಪಣ್ಣ—ಅಮ್ಮಾ! ಇದ್ಯಾಕಮ್ಮಾ ಹೀಗಾಡ್ತ್ಯ? ನನ್ ಗುರ್ತ್ ಗೊತ್ತಾಗೋದಿಲ್ವೇನಮ್ಮಾ?

ಕೆಂಪಮ್ಮ—(ಕಣ್ಣನ್ನೂ, ಬಾಯನ್ನೂ, ಅಗಲವಾಗಿಬಿಟ್ಟುಕೊಂಡು) ಕೆಂಪಣ್ಣಾ! ಇದೇನೋ ಮಗ್ನೇ! ರಾಜ್‌ನಾಗ್ ಬಿಟ್ಟಿದ್ದೀಯಲ್ಲೋ? ಇದೆಲ್ಲಾ ಬಟ್ಟೇ ಎಲ್ಲಪ್ಪಾ ಇತ್ತೂ? ಯಾರಪ್ಪಾಕೊಟ್ರೂ? ಎಷ್ಟ ಚನ್ನಾಗ್ ಕಾಣಸ್ತೀಯೋ ನನ್ ಕಂದಾ! (ನಿವಾಳಿಸಿಕೊಳ್ಳುವಳು. ಪಕ್ಕಕ್ಕೆ ತಿರುಗಿ) ಲಕ್ಷ್ಮೀ! ಲಕ್ಷ್ಮೀ! ಇಲ್ ಬಾಮ್ಮಾ! ನಿಮ್ಮಣ್ಣನ್ಗೇ ನೋಡ್ ಬಾಮ್ಮಾ!

(ಲಕ್ಷ್ಮೀ ಪ್ರವೇಶಿಸಿ ಮೂಕಳಂತೆ ನೋಡುತ್ತ ನಿಲ್ಲುವಳು)

ಕೆಂಪಣ್ಣ—ಅದ್ಯಾಕಮ್ಮಾ ಹಾಗ್ ನೋಡ್ತ್ಯ? ಗುರ್ತ್ ಗೊತ್ತಾಗೋದಿಲ್ವೇ?

ಲಕ್ಷ್ಮಿ—(ತಾಯಿಯ ಕಡೆಗೆ ತಿರುಗಿ) ಅಮ್ಮಾ! ಕೆಂಪಣ್ಣಾ ಅಲ್ವೇನಮ್ಮಾ?

ಕೆಂಪಮ್ಮ—ಹೌದಮ್ಮಾ, ನಿಮ್ ಕೆಂಪಣ್ಣಾನೇ, ನೋಡೆಷ್ಟ್ ಚನ್ನಾಗ್ ಕಾಣಸ್ತಾನೇ? ಎಂಥಾ ಒಳ್ಳೇ ಬಟ್ಟೇ ಹಾಕ್ಕೊಂಡಿದ್ದಾನೇ?

ಲಕ್ಷ್ಮೀ—ಈ ಎಲ್ಲಾ ಬಟ್ಟೇ ಅಣ್ಣನ್‌ಗ್ಯಾರಮ್ಮಾ ಕೊಟ್ರೂ?

ಕೆಂಪಮ್ಮ—ನಿಮ್ಮಣ್ಣನ್ನೇ ಕೇಳಮ್ಮಾ! ಹೇಳಪ್ಪಾ, ಈ ಬಟ್ಟೇಯೆಲ್ಲಾ ಯಾರ್ ಕೊಟ್ರೂ ನಿನ್ಗೇ?

ಕೆಂಪಣ್ಣ—ನೋಡಮ್ಮಾ, ನಾನ್ ತೋಟದಲ್ ಮಲಗಿದ್ದೆ. ಬಿಸ್ಲಿನ್ ಝಳಾ ನನ್ ಮುಖಕ್‌ಬೀಳ್‌ದ್ದಾಗೇ ಆದಿಶೇಷಾ ತನ್ ಹೆಡೇ ಬಿಚ್ಕೊಂಡ್ ಆಡಸ್ತಾಯಿದ್ನಂತೇ. ಶಾಸ್ತ್ರಿಗಳು ನನ್ನನ್ ಎಳ್ಸಿ, ನೀನ್ ರಾಜನಾಗೋದು ನಿಶ್ಚಯಾ ಅಂತಾ ಹೇಳದ್ರಮ್ಮಾ. ಅನಂತರ ಮನೇಗ್ ಕರ್ಕೊಂಡ್ ಹೋಗಿ ಈ ಬಟ್ಟೇಯೆಲ್ಲಾ ಕೊಟ್ರೂ. ಇದು ನಮ್ ಹಿರಿಯೌರು ಹಾಕ್ತಾಯಿದ್ ಉಡ್ಪಂತೇ. ಔರ್ ಹಿರಿಯೌರ್ ಕಾಲದಿಂದಾನೂ ಇದನ್ನ ಪೆಟ್ಗೇಲಿಟ್ಟೊ ಭದ್ರವಾಗಿ ಕಾಪಾಡ್ಕೊಂಡ್ ಬಂದಿದ್ದಾರಂತೆ. ಈ ದಿನಾ ಹಾಕ್ಕೋಳೋದಕ್ಕೆ ನನ್ಗಿದನ್ನೆಲ್ಲಾ ಕೊಟ್ರೂ. ನಾನ್ ರಾಜನಾಗೋದಕ್ಕೆ ಸಾಧ್ಯವಿದೆಯೇನಮ್ಮಾ? ಇವನ್ನೆಲ್ಲಾ ನಂಬೋದಕ್ಕಾಗುತ್ತೇನಮ್ಮಾ?

ಕೆಂಪಮ್ಮ—ನಂಬಲೇ ಬೇಕು ಮಗ್ನೇ, ನಂಬಲೇ ಬೇಕು. ನಿನ್ನ ಪೂರ್ವೀಕರ ಜೀವನದಲ್ಲೂ ಇಂಥಾ ಅದ್ಭುತವಾದ ಅನೇಕ ಘಟನೆಗಳು ಜರಗಿ ಹೋಗಿವೆ. ಆದಿಶೇಷನ ಛಾಯೆ ಬಿದ್ದಮೇಲೆ ರಾಜಪದವಿಗೂ ಐಶ್ವರ್ಯಕ್ಕೂ ಇನ್ನೆಲ್ಲಿ ಅಭಾವ? ನೀನ್ ರಾಜನಾಗೋ ಮಂಗಳ ದಿನ ಇನ್ ಹೆಚ್ ದೂರಾ ಇಲ್ಲಾ ಮಗ್ನೇ! ನನ್ನ ಇಷ್ಟು ದಿನದ್ ಪ್ರಾರ್ಥನೆ ಸಾರ್ಥಕವಾಯ್ತು. ಕೊನೆಗೂ ತಾಯಿ ಕೆಂಪಾಂಬಿಕೆಗೆ ನನ್ನ ಮೇಲೆ ಕರುಣೆ ಉಂಟಾಯ್ತು. ದೇವಿ ಅನುಗ್ರಹಾ ಮಾಡದ್ಲೂ. ದೇವ ದೇವನಾದ ಶ್ರೀರಂಗನಾಥನ ಪೂರ್ಣ ಪ್ರಸನ್ನತೆಯೂ ಈಗ ನಿನ್ನ ಮೇಲುಂಟಾಗಿದೆ.

ಕೆಂಪಣ್ಣ—ಇದೆಲ್ಲಕ್ಕಿಂತ ಮಿಗಿಲಾಗಿ ನಿನ್ನಾಶಿರ್ವಾದವೊಂದಿದ್ರೇ ಸಾಕಮ್ಮಾ, ಮೂರು ಲೋಕೆಗಳ ಪದವೀನೂ ನನಗೆ ಲಭ್ಯವಾದ ಹಾಗೆ.

ಕೆಂಪಮ್ಮ—ನನ್ನಾಶೀರ್ವಾದದಲ್ಲೇನಿದೆ ಮಗ್ನೇ? ಪರಮಾತ್ಮನ ಆಶೀರ್ವಾದ ಸದಾ ನಿನ್ಮೆಲಿರ್ಬೇಕೂ. ನನ್ನಾಸೇ ಅಂದ್ರೇ, ಈ ರಾಜನ್ ಪಕ್ಕದಲ್ಲಿ ಯಾವಾಗ್ ಒಬ್ ರಾಣೀನಾ ಕಂಡೇನೋ ಅನ್ನೋದೇ. ನಮ್ಮಗ ನ್ಗೊಪ್ಪೋ ಅಂಥಾ ಹುಡ್ಗೀ ಎಲ್ಲಿದ್ದಾಳೋ? ಔಳನ್ನಾ ಹುಡ್ಕೋದ ಕ್ಕೆಷ್ಟ್ ಶ್ರಮಾಪಡ್ಬೇಕೋ?

ಕೆಂಪಣ್ಣ—ಹುಡ್ಕೋದಕ್ಕೇನೂ ಶ್ರಮಾಪಡ್ಬೇಕಾಗಿಲ್ಲಾಮ್ಮಾ, ನಾನ್ ಮೊದ್ಲೇ ಹುಡುಕ್ಕೊಂಡಿದ್ದೀನಿ.

ಕೆಂಪಮ್ಮ—ಮೊದ್ಲೇ ಹುಡುಕ್ಕೊಂಡಿದ್ದೀಯಾ? ಹ್ಯಾಗಿದ್ದಾಳಪ್ಪಾ?

ಕೆಂಪಣ್ಣ—ಹ್ಯಾಗಿದ್ದಾಳೇ ಅಂತಾ ಹೇಳ್ಲಿ? ದೇವಕನ್ಯೆ ಇದ್ದಾಗಿದ್ದಾಳಮ್ಮಾ! ಆ ರೂಪು, ಆ ಗುಣಾ, ಆ ಮಾತೂ, ಆ ನಗೂ ಅಬ್ಬಾ! ಅಬ್ಬಾ! ಮನುಷ್ಯ ಮಾತ್ರದೌರ್ಗೆಲ್ಲಮ್ಮ ಲಭ್ಯವಾಗುತ್ತೇ? ನಾನಂತೂ ಅಂಥಾ ಹೆಣ್ಣನ್ನ ಇದುವರೆಗೆಲ್ಲೂ ನೋಡಿಲ್ಲಾಮ್ಮಾ.

ಕೆಂಪಮ್ಮ—ಹಾಗಾದ್ರೇ ಹೆಸ್ರೇನಪ್ಪಾ? ಊರ್ಯಾವ್ದು?

ಕೆಂಪಣ್ಣ—ಊರೂ ಕೆಂಪಸಾಗರವಂತೇ.

ಕೆಂಪಮ್ಮ—ನನ್ ತೌರೂರು?

ಕೆಂಪಣ್ಣ—ಹೂಂ. ಹೆಸ್ರೂ ಲಿಂಗಾಂಬೇ ಅಂತೇ.

ಕೆಂಪಮ್ಮ—ತಂದೇವ್ರ್ ಹೆಸ್ರೂ?

ಕೆಂಪಣ್ಣ—ತಂದೇವ್ರ್ ಹೆಸ್ರೂ ಜೌರೇಗೌಡ್ರಂತೇ.

ಕೆಂಪಮ್ಮ—ಏನೂ ಜೌರೇಗೌಡ್ರೇ? ಜೌರೇಗೌಡ್ರೇ?

ಕೆಂಪಣ್ಣ—ಹೌದಮ್ಮಾ ಜೌರೇಗೌಡ್ರಂತೇ.

ಕೆಂಪಮ್ಮ—ಹೋ! (ಸ್ವಲ್ಪ ಹೊತ್ತು ತಟಸ್ಥಳಾಗಿ) ತಿಳೀತೂ ಬಿಡೂ.

ಕೆಂಪಣ್ಣ—ತಿಳೀತೇನಮ್ಮಾ? ಔರ್ಯಾರಮ್ಮಾ?

ಕೆಂಪಮ್ಮ—ಔರೇನ್ ನನ್ಗನ್ಯರಲ್ಲಪ್ಪಾ! ಅನ್ಯರಂತೇ ಇದ್ದಾರೇ ಅಷ್ಟೇ. ಔರ್ ನನ್‌ಸ್ವಂತಣ್ಣಾ. ಆ ಹುಡ್ಗೀ ನನ್ ಸೋದರ್‌ಸೊಸೇ ಕಣಪ್ಪಾ!

ಕೆಂಪಣ್ಣ— ಹಾಗಾದ್ರೇ ಏನವ್ಮಾ, ಔರ್ಗೂ ನಮ್ಗೂ ಸಂಬಂಧಾ ಯಾಕವ್ಮಾ ತಪ್ಹೋಗ್ಬಿಡ್ತು?

ಕೆಂಪಮ್ಮ—ಸಂಬಂಧ ಸಮಾನತೆಯಲ್ಲಿ ಮಾತ್ರ ಕೂಡುತ್ತೆ ಮಗ್ನೇ? ಶ್ರೀಮಂತಿಕೇಗೂ, ಬಡತನಕ್ಕೂ ಎಲ್ಲಿಯ ಸಂಬಂಧಾ? ಶ್ರೀಮಂತಿಕೆ ಹಾಗೂ ಬಡತನದ ಸಮಸ್ಯೆಯಿಂದ ತಂದೇ ಮಕ್ಕಳ್ ಸಂಬಂಧಾನೇ ತಪ್ಹೋಗ್‌ಬಿಡುತ್ತೇ. ಇನ್ ಅಣ್ಣಾ ತಂಗೀದ್ಯಾವ್ಲೆಕ್ಕಾ? ಆದ್ರೂ ಚಿಂತೇಯಿಲ್ಲಾ. ಈಗ್ ನಿನ್‌ಗೋಸ್ಕರಾ ನಾನೇ ಸಂಬಂಧಾ ಬೆಳ್ಸೋದಕ್ಹೋಗ್ತೀನಿ. ತೌರ್ ಮನೇಗ್ ಕಾಲಿಡ್ಲೇ ಬಾರ್ದೂ ಅಂತಾ ಸಂಕಲ್ಪಾಮಾಡ್ಕೊಂಡಿದ್ದೆ. ಏನ್ಮಾಡೋದು ಈಗ್ ಆ ಸಂಕಲ್ಪಾ ಮುರೀಲೇಬೇಕಾಗಿದೆ? ಗಂಡ್ಹೆತ್ತಿದ್ದೀನಿ. ನನ್‌ಗ್ಯಾಕ್ ಒಣಪ್ರತಿಷ್ಠೆ?

ಕೆಂಪಣ್ಣ—ಅದಿರ್ಲವ್ಮಾ,ಅದಕ್ಕಾಗಿ ನೀನೇನ್ ಯೋಚ್ನೇಮಾಡ್ಬ್ಯಾಡಾ. ಭಗವದಿಚ್ಛೆಯಿದ್ರೇ ಅಥ್ಯಾಗೂ ನಡ್ಹೋಗುತ್ತೇ. ಆದ್ರೇ ಏನವ್ಮಾ, ನಾನ್ ಬರ್ವಾಗಾ ನೀನ್ ದುಃಖದ್ ಧ್ವನೀಲಿ ಮಾತಾಡ್ತಾಯಿದ್ದಲ್ಲಾ, ಅದ್ಯಾಕವ್ಮ?

ಕೆಂಪಮ್ಮ—ಯಾಕೂ ಇಲ್ಲಾ ಮಗ್ನೇ! ಅದೇನ್ ಅಂಥಾ ಮುಖ್ಯವಾದ್ ವಿಚಾರವೇನಲ್ಲಾ, ಅದರ್ ಸುದ್ದಿ ಯಾಕಪ್ಪಾ ಬಿಡು.

ಕೆಂಪಣ್ಣ—ಹೇಳವ್ಮಾ ಅದೇನೂ! ನನ್ಹತ್ರಾ ಮರೆಮಾಚ್ತ್ಯಲ್ಲಾ, ಹೇಳವ್ಮಾ ಚಿಂತೇಯಿಲ್ಲ, ಅದೇನೂ?

ಕೆಂಪಮ್ಮ—ಏನೂ ಇಲ್ಲಾಪ್ಪಾ, ನಿತ್ಯದಂತೆ ಈ ದಿನಾನೂ ಹೋಗಿ ಪೊರ್ಕೆಗಳನ್ನ ಕಟ್ಕೊಂಡ್ ಬರ್ತಾಯಿದ್ದೆ. ಮಳೇ ಬಂದ್ಬಿಡ್ತು. ಹಾಗೇ ಹಿರೇ ಹಳ್ಳಾ ದಾಟ್ವಾಗ ಎಂದಿಗಿಂತ ನೀರ್ ಹೆಚ್ಚಾಗಿತ್ತು. ನಾನ್ ಜಾರಿ ಬಿದ್ಬಿಟ್ಟೇ. ಕಟ್ಕೋ ಬಂದಿದ್ ಏಳ್ ಪೊರ್ಕೆಗಳೂ ಕೊಚ್ಹೋಗ್ಬಿಟ್ವೂ. ನಿತ್ಯ ಜೀವನಕ್ಕೆ ಕೊರ್ತೇ ಆಯ್ತಲ್ಲಾ ಅಂತಾ ವ್ಯಸನದಲ್ಲಿ ಏನೇನೋ ಅಂದ್ಕೋತಾಯಿದ್ದೆ ಅಷ್ಟೇ.

ಕೆಂಪಣ್ಣ—ಅದಕ್ಕಾಗಿ ಚಿಂತೇಪಡೋದ್ಬೇಕಿಲ್ಲಾವ್ಮಾ! ಈಗ್ಲೇ ಹೋಗಿ ಎಲ್ಲಿದ್ರೂ ಹುಡ್ಕೀ ತರ್ತೀನಿ. ಅದಕ್ಕಾಗಿ ಯೋಚ್ನೇಮಾಡ್ಬ್ಯಾಡಾ. (ಹೊರಡುವನು)

ಕೆಂಪಮ್ಮ—ಅಯ್ಯೋ! ಹುಡ್ಕೋದೂ ಬ್ಯಾಡಾ ಏನೂ ಬ್ಯಾಡಾ ಬಾಪ್ಪಾ ಕೆಂಪಣ್ಣಾ! ನೀನ್ ಹೋಗ್ಬ್ಯಾಡಾ ಬಾಪ್ಪಾ! ಅಯ್ಯೋ ಹೊರ್ಟೇ ಹೋದ್ನಲ್ಲಾ! ಏನ್ ಛಲಗಾರ ಈ ಹುಡ್ಗಾ! (ಕೈಗಳನ್ನು ಮೇಲ ಕ್ಕೆತ್ತಿ) ದೇವೀ! ಕೆಂಪಾಂಬಿಕೇ! ನನ್ನ ವಂಶದ ಈ ಜ್ಯೋತಿಯನ್ನ ಬೆಳಗಿಸೋ ಬಾಧ್ಯತೆ ನಿನ್ನನ್ನೇ ಸೇರಿದೆ ತಾಯಿ! (ಕಣ್ಣುಮುಚ್ಚು ವಳು)

ಹೊರಗಿನಿಂದ ಶಬ್ದ—ಕೆಂಪಮ್ಮಾ!

ಕೆಂಪಮ್ಮ—(ಎಚ್ಚತ್ತು) ಯಾರೂ?

ಹೊರಗಿನಿಂದ ಶಬ್ದ—ನಾನೂ ಕೆಂಪಮ್ಮಾ!

ಕೆಂಪಮ್ಮ—(ಆಶ್ಚರ್ಯದಿಂದ)ಯಾವುದೋ ಪರಿಚಯುದ ಧ್ವನಿ ಇದ್ದಂತಿದೆ ಯಲ್ಲಾ! (ಪಕ್ಕಕ್ಕೆ ತಿರುಗಿ) ನಾನೂ ಅಂದ್ರೇ ಯಾರೂ? ಬನ್ನೀ, ಒಳಗ್ ಬನ್ನೀ.

ಜವರೇಗೌಡ—(ಬುಟ್ಟಿಯನ್ನು ಹಿಡಿದುಕೊಂಡು ಪ್ರವೇಶಿಸಿ) ಚನ್ನಾಗಿ ದ್ದೀಯಾ ಏನಮ್ಮಾ?

ಕೆಂಪಮ್ಮ—ಯಾರೂ? ಓಹೋ ಅಣ್ಣಾ! (ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಅಳುವುದಕ್ಕಾರಂಭಿಸುವಳು)

ಜವರೇಗೌಡ—ಯಾಕಮ್ಮಾ ಅಳ್ತೀಯಾ?

ಕೆಂಪಮ್ಮ—(ಮುಖ ಮುಚ್ಚಿಕೊಂಡೇ) ಇಷ್ಟದಿನದ್ ಮೇಲೆ ನನ್ ಜ್ಞಾಪ್ಕಾ ಆಯ್ತೇನಣ್ಣಾ?

ಜವರೇಗೌಡ—ಜ್ಞಾಪಕವೇನೋ ಸದಾಕಾಲವೂ ಇತ್ತಮ್ಮಾ, ಆದ್ರೇ ವಿಷಘಳ್ಗೇ ಒಬ್ರೂ ಮತ್ತೊಬ್ರನ್ನ ನೋಡ್ದಂತೆ ತಡ್ದಿಟ್ಟಿತ್ತೂ. ಆದ್ರೂ ನಾನ್ ಸ್ಥಿತಿವಂತನಾಗಿದ್ದೂ ನಿಮ್ ಕಷ್ಟಕಾಲದಲ್ಲಿ ನಿಮ್ಗೆ ಸಹಾಯಾ ಮಾಡ್ಲಿಲ್ಲಾ. ಈ ವಿಚಾರಾ ನನ್ ಹೃದಯಾನೇ ಕೊರ್ದ್ ಹಾಕ್ತಾಯಿದೆಯಮ್ಮಾ! ಏನ್ಮಾಡ್ಲೀ? ನನ್‌ಗ್ಯಾವ್ ಮಂಕ್ ಬಡ್ದಿತ್ತೋ! ಯಾವ ಅಜ್ಞಾನಾ ಆವರ್ಸ್ಕೊಂಡಿತ್ತೋ ಗೊತ್ತಾಗ್ಲಿಲ್ಲಾ. ಅಂತೂ ಗ್ರಹಚಾರದ್ ದಿನಗಳು. ನೆನಸ್ಕೊಂಡ್ರೇ ಪ್ರಜ್ಞೇನೇ ಕೆಟ್ಹೋಗುತ್ತಮ್ಮಾ! ನಾನ್ ನಿಮ್ಮನ್ ಉಪೇಕ್ಷಿಸಿದ್ರೂ,

ನನ್ ಕಷ್ಟಕಾಲದಲ್ಲಿ ನಿನ್ ಮಗ್ನೇ ಬಂದೂ ನನ್ ಮಾನವನ್ನು ಕಾಪಾಡ್ದ. ನನ್ ಮಗಳ ಪಾತಿವ್ರತ್ಯವನ್ನ ರಕ್ಷಸ್ದಾವ್ಮಾ. ನನ್ನ ಹಂಕಾರಕ್ಕೆ ಇದಕ್ಕಿಂತಾ ಬೇರೇ ಶಿಕ್ಷೇಬೇಡಾ.

ಕೆಂಪಮ್ಮ—(ಬೇಗ ಬೇಗ ಸೆರಗಿನಿಂದ ಕಣ್ಣೀರನ್ನೊರೆಸಿಕೊಂಡು) ಅಯ್ಯೋ ಅಣ್ಣಾ! ಅದಕ್ಕಾಗಿ ಯಾಕಣ್ಣಾ ಪಶ್ಚಾತ್ತಾಪಪಡ್ತೀಯಾ? ಬಂಧುಗಳನ್ನ ಒಂದ್ಗೂಡ್ಸೋದೂ, ಆಗಲ್ಸೋದೂ ವಿಧಿ ಲಿಖಿತಾಕಣಣ್ಣಾ! ಅಂತೂ ದೇವ್ರು ಈ ದಿನಾ ನನ್ ಮೇಲೆ ಕರುಣೆ ತೋರಸ್ದಾ. ನನ್ ನರಕದಂಥಾ ಮನೆಗೆ ಸ್ವರ್ಗದ ರೂಪಿನಲ್ಲಿರೋ ಅಣ್ಣನ್ನ ತಂದಾ. ಈ ದಿನಾ ನನಗಾಗಿರೋ ಆನಂದ ಬಹುಷಃ ಈ ಜಗತ್ತಿನಲ್ಲಿ ಮತ್ಯಾರಿಗೂ ಆಗಿಲ್ಲರ್ದೂ. (ಎರಡು ಕೈಗಳನ್ನು ಮೇಲಕ್ಕೆತ್ತಿ) ಪರಮಾತ್ಮಾ! ನನ್ ತೌರ್‌ಮನೇ ಉದ್ಧಾರಾಮಾಡಪ್ಪಾ! ನಮ್ಮಣ್ಣನ್ನ ಸದಾ ಸುಖಿಯಾಗಿಡಪ್ಪಾ! (ಮಗಳ ಕಡೆಗೆ ತಿರುಗಿ) ಲಕ್ಷ್ಮೀ, ಮಾವನ್ಗೇ ನಮಸ್ಕಾರಾಮಾಡಮ್ಮಾ. ನೀರ್ ತಂದ್‌ಕೊಡೂ. ಮಣೇ ಹಾಕೂ. (ಲಕ್ಷ್ಮೀ ಜವರೇಗೌಡರ ಕಾಲಿಗೆ ನಮಸ್ಕರಿಸುವಳು)

ಜವರೇಗೌಡ—ಉತ್ತಮ ವರನನ್ನು ಪಡೆಯಮ್ಮಾ. ಸುಮಂಗಲಿಯಾಗಿ, ಸುಪುತ್ರವತಿಯಾಗಿ ಬಾಳಮ್ಮಾ! (ಲಕ್ಷ್ಮೀಯು ಎದ್ದು ನಿಲ್ಲುವಳು. ಜವರೇಗೌಡರು ಕೆಂಪಮ್ಮನ ಕಡೆಗೆ ತಿರುಗಿ) ಏನಮ್ಮಾ! ಮನೇಗ್ ಬರೋದಿಲ್ವೇನಮ್ಮಾ? ನಿನ್ ಸೋದರ್ ಸೊಸೇ ನಿನ್ನನ್ನ ನೋಡ್ಬೇಕೂ ಅಂತಾ ಹಾತೊರೀತಾಯಿದ್ದಾಳೇ.

ಕೆಂಪಮ್ಮ—ನೀನ್ ಕರೀಬೇಕಾದ್ ಅಗತ್ಯಾ ಏನಿದೇ ಅಣ್ಣಾ? ನಾನೇ ಬರ್ಬೇಕೂ ಅಂತಾಯಿದ್ದೆ. ನನ್ ಸೊಸೇನಾ, ನನ್ ಮನೇ ಭಾಗ್ಯಲಕ್ಷ್ಮೀನಾ ನಾನ್ ಕಣ್ತುಂಬಾ ನೋಡ್ಲೇ ಬೇಕಲ್ಲಾ!

ಜವರೇಗೌಡ— ಹಾಗಾದ್ರೇ ನನ್ ಮಗ್ನಸ್ನಾ ತಂದ್‌ಕೋಳೋದಕ್ಕೆ ನಿನ್ಗೊಪ್ಗೇಯಿದೆಯೇನಮ್ಮಾ?

ಕೆಂಪಮ್ಮ—ನಿನೊಪ್ಪೋದಾದ್ರೆ ಆಗ್ಬೌದಣ್ಣಾ.

ಜವರೇಗೌಡ—ನಾವಾ ಒಪ್‌ಬೇಕಾದ್ ಅಗತ್ಯಾನೇ ಇಲ್ಲಾವ್ಮಾ. ಔರೇ ಒಬ್ರನ್ನಾ ಒಬ್ರು ನೋಡಿ ಒಪ್ಕೋಬಿಟ್ಟಿದ್ದಾರೇ.

ಕೆಂಪಮ್ಮ—ಹಾಗಾದ್ರೇ ನಮ್ ಜವಾಬ್ದಾರೀನೇ ಕಡ್ಮೇಆಯ್ತು ಬಿಡಣ್ಣಾ.

ಜವರೇಗೌಡ—ಏನಮ್ಮಾ? ಈವತ್ತಿನ್ನೂ ಭಾನ್ವಾರಾ. ಗುರುವಾರದ್ದಿವ್ಸಾ ಶುಭ ಮುಹೂರ್ತಾಯಿದೆ. ಲಗ್ನಾಯಿಟ್ಕೋಬಿಡೋಣಾವ್ಮಾ.

ಕೆಂಪಮ್ಮ—ಏನಣ್ಣಾ ಹೀಗ್ಹೇಳ್ತ್ಯ? ಇಷ್ಟ್ ಬೇಗಾ ಇಟ್ಕೋಳೋದಕ್ ಹ್ಯಾಗಣ್ಣಾ ಆಗುತ್ತೇ? ನಮ್ಹತ್ರಾ ಏನಿದೇ? ನಾವಂತೂ ಸಂಪೂರ್ಣವಾಗಿಯೂ ನಿರ್ಗತಿಕ ಸ್ಥಿತಿಯಲ್ಲಿದ್ದೀವಿ.

ಜವರೇಗೌಡ—ಅದಕ್ಕಾಗಿ ಚಿಂತೇನೇ ಮಾಡ್ಬ್ಯಾಡಾವ್ಮಾ. ದೇವ್ರು ನನಗೆ ಬೇಕಾದಷ್ಟ್ ಐಶ್ವರ್ಯಾ ಕೊಟ್ಟಿದ್ದಾನೇ. ಅದರ್ ಮೇಲೆ ನನ್ಗೆಷ್ಟ್ ಬಾಧ್ಯತೆಯಿದೆಯೋ, ನಿನ್ಗೂ ಅಷ್ಟೇಯಿದೆಯುವ್ಮಾ! ಅದೆಲ್ಲಾ ನಿನ್ದೇ ಅಂತಾ ತಿಳ್ಕೋ, ಇನ್ಯಾಕ್ ವ್ಯಸ್ನಾ. ನೋಡ್ತಿರೂ, ಬೇಕಾದ್ರೇ ಈ ಮದ್ವೇಗೋಸ್ಕರಾ ನನ್ ಐಶ್ವರ್ಯವೆಲ್ಲಾ ವೆಚ್ಚವಾಗ್ಹೋಗ್ಲೀ. ರಾಜಸ್ ಮನೇಲಿ ಇಂಥಾ ಮದ್ವೇ ನಡ್ದಿರ್ಬಾರ್ದೂ. ಅಷ್ಟ್ ವೈಭವದಿಂದ ನಡಸ್ತೀನಿ.

ಕೆಂಪಮ್ಮ—ಶಾಸ್ತ್ರಿಗಳನ್ನೂ ಕೇಳ್ಬೇಕಲ್ಲಾಣ್ಣಾ. ಔರ್ನ್ ಬಿಟ್ಟು ನಾವ್ ಯಾವ್ ಕೆಲ್ಸಾನೂ ಮಾಡೋಹಾಗಿಲ್ಲಾ.

ಜವರೇಗೌಡ—ಆಗ್ಲಮ್ಮ ಹಾಗೇ ಆಗ್ಲೀ, ನಾನ್ ಶಾಸ್ತ್ರಿಗಳ್ಮನೇಗ್ಹೋಗಿ ಔರ್ ಸಲಹೇ ಕೇಳೀನೇ ಮುಂದಿನ್ ಕಾರ್ಯ್ಯಾ ನಿರ್ಧರಸ್ತೀನವ್ಮಾ.

ಕೆಂಪಮ್ಮ—ಹಾಗಾದ್ರೇ ಆಗ್ಲೌದಣ್ಣಾ.

ದೃಶ್ಯ—೩೧

ರಸ್ತೆ

ಶಾಸ್ತ್ರಿಗಳೂ, ಬೈರಪ್ಪನೂ ಪ್ರವೇಶಿಸುವರು.

ಬೈರಪ್ಪ—ಶಾಸ್ತ್ರಿಗಳೇ! ನನ್ಗೇಕೋ ಲೋಕವೇ ಬೇಸರವಾಗಿ ಕಾಣಸ್ತಾಯಿದೆ. ನಾನ್ ಹಿಂದೆ ಮಾಡಿದ ಅನ್ಯಾಯಗಳು, ಅತ್ಯಾಚಾರಗಳು, ಅನಾಚಾರಗಳು, ಕೊಲೆ ಹಿಂಸೆ, ದರೋಡೆಗಳು, ಕನ್ನಡಿಯೊಳಗಿರುವ ಚಿತ್ರಗಳಂತೆ ಕಣ್ಣೆದುರಿಗೇ ಗೋಚರಸ್ತಾಯಿವೆ. ಆ ಚಿತ್ರಗಳನ್ನೆಲ್ಲಾ ನೋಡ್ದಾಗ ನನ್ ಸ್ವರೂಪ, ಎಷ್ಟ್ ಅಸಹ್ಯವಾಗಿ, ಎಷ್ಟ್ ಭಯಂ

ಕರವಾಗಿ ಕಾಣ್ಸತ್ತೇ ಅಂತೀರಾ? ನಾನ್ ಮನಷ್ಯನಲ್ಲ, ರಾಕ್ಷಸ್ನೋ ಪೀಡೇನ್ನೋ! ಪಿಶಾಚಿನೋ! ಅನ್ನೋ ಭಾವ್ನೇ ಉಂಟಾಗುತ್ತೇ ನೋಡಿ. ಲೋಕಕಂಟಕರಾದ, ದೈವ ದ್ರೋಹಿಗಳಾದ ನಮ್ಮಂಥಾ ಪಾಪಾತ್ಮರು ಭೂವಿಾ ಮ್ಯಾಲಿರ್ಬಾರ್ದರ್ೂ ಶಾಸ್ತ್ರಿಗಳೇ! ನಾವಿದ್ದಷ್ಟ್ ಕಾಲ ನಮ್ಗೂ ಕ್ಷೇಮವಿಲ್ಲ, ಲೋಕಕ್ಕೂ ಶಾಂತಿಯಿಲ್ಲ. ಏನೋ ಆ ಹುಡ್ಗನ್ ತಲೇಮೇಲೆ ಎರ್ಡ್ ಅಕ್ಕೀಕಾಳ್ಹಾಕ್ಬಿಟ್ರೇ, ಅಲ್ಲೀಗೆ ನನ್ ಕರ್ತವ್ಯ ಮುಗೀತೂ. ಅನಂತರ ಆ ಸ್ವಾಮಿಾ ಪಾದಾ ನೆನಸ್ಕೋಂಡೂ ತೀರ್ಥಯಾತ್ರೇಗಂತಾ ಹೊರ್ಟ್‌ಬಿಡ್ತೀನಿ. ಆಮೇಲೆ ನಾನೀಕಡೇ ಮುಖ್ವೇ ಇಡೋದಿಲ್ಲಾ. ಈ ಭಾಗದ್ ಜನ್ರಿಗೇ ನನ್ ಮುಖ್ವೇ ತೋರ್ಸೋದಿಲ್ಲಾ.

ಶಾಸ್ತ್ರಿ—ಅಯ್ಯೋ ಹಾಗೆಲ್ಲಾ ಬೇಸ್ರಾಪಟ್ಕೋಂಡು ದೇಶಾಂತ್ರಾ ಹೊರ್ಟ್ ಹೋಗೋದಕ್ಕಾಗುತ್ಯೇ ಬೈರಪ್ನೋರೇ?

ಬೈರಪ್ಪ—ಇನ್ನೇನ್ ಮಾಡ್ಲೀ ಶಾಸ್ತ್ರಿಗಳೇ! ನನ್ನಾತ್ಮ ನನ್ನನ್ನ ಪಾಪೀ ಪಾಪೀ ಅಂತಾ ಕರೀತಾಯಿದೆ.

ಶಾಸ್ತ್ರಿ—ನೋಡಿ ಬೈರಪ್ನೋರೇ, ಯಾವ್ ಮನುಷ್ಯನೇ ಆಗ್ಲೀ, ಔನು ಚಂಡಾಲ್ನೇ ಆಗಿರ್ಲೀ, ಪಾಷಂಡ್ನೇ ಆಗಿರ್ಲೀ, ಲೋಕಕಂಟಕನೇ ಆಗಿರ್ಲೀ, ಔನು ಯಾವಾಗ ತನ್ನನ್ನ ಪಾಪೀ ಅಂತಾ ತಿಳ್ಕೋತಾನೋ, ಅಲ್ಲಿಗೇ ಔನು ಪರಿಶುದ್ಧನಾಗ್ತಾನೇ. ಯಾವಾಗ ಔನು ತಾನ್ ಮಾಡಿದ್ ದುಷ್ಕೃತ್ಯಗಳಿಗಾಗಿ ಪಶ್ಚಾತ್ತಾಪಪಡ್ತಾನೋ, ಆಗ್ಲೇ ಔನ್ ಹೃದಯಾ ಆ ಪಶ್ಚಾತ್ತಾಪದ ನಿರ್ಮಲೋದಕದಿಂದ ತೊಳೆದುಹೋಗುತ್ತೇ. ಅನಂತರ ಔನೂ ಶುದ್ಧಾಂತರಂಗನಾಗ್ತಾನೇ ಪಟೇಲ್ರೇ. ಇದು ಧರ್ಮ ಶಾಸ್ತ್ರಗಳ ಸಂದೇಶ. ದೈವವಾಣೀ. ತಿಳ್ಕೋಳಿ, ದುಷ್ಕಾರ್ಯಗಳನ್ನ ಮಾಡಿದ ಈ ಹಸ್ತಗಳಿಂದಲೇ ಸತ್ಕಾರ್ಯಗಳನ್ನ ಮಾಡೋದಕ್ಕೂ ಸಾಧ್ಯವಿದೆ, ಅಸಹ್ಯ ವಚನಗಳನ್ನಾಡುತ್ತಿದ್ದ ಈ ನಾಲಿಗೆಯಿಂದಾನೇ, ಮೃದು ಮಧುರ ವಚನಗಳನ್ನಾಡೋದಕ್ಕೂ ಸಾಧ್ಯವಿದೆ. ಆದ್ದರಿಂದ ಮುಂದೆ ನಾನೇಳೋ ಹಾಗ್ ಕೇಳಿ. ನಿಮ್ಗೆ ಲಭಿಸಿರೋ ಪ್ರಾಪಂಚಿಕ

ಅನುಭವದಿಂದ ಈ ನಾಡಿನ ಕಲ್ಯಾಣ ಸಾಧಿಸುವುದಕ್ಕೆ ಪ್ರಯತ್ನಾಪಡೀ. ನೋಡಿ, ಮಲ್ಲಣ್ಣನ್ ಮದ್ವೇಗೆ, ನೀವ್ ಶ್ರಮಾಪಡ್ತಾಯಿರೋ ಹಾಗೇನೇ ನೀವೂ, ನಾವೂ ಆ ಕೆಂಪೇಗೌಡನ್ ಮದ್ವೇಗೂ ಪ್ರಯತ್ನಾಪಡೋಣ, ಕೆಂಪೇಗೌಡನ್ನಾ ಈ ನಾಡಿನ ರಾಜ ಗದ್ದುಗೆಯ ಮೇಲೆ ಕೂರ್ಸೋದಕ್ಕೂ ಶ್ರಮಾ ವಹಿಸೋಣ. ಇಬ್ಬರೂ ಈ ನಮ್ಮ ಕಣ್ಣುಗಳಿಂದ ಈ ನಾಡಿನ ಪ್ರಜೆಗಳು ಕ್ಷೇಮದಿಂದಲೂ, ಸುಖ, ಸಂತೋಷಗಳಿಂದಲೂ ಬಾಳುತ್ತಿರುವ ಮಂಗಳ ನೋಟವನ್ನು ಕಾಣುವ ಬಯಕೆಯನ್ನಿಟ್ಟುಕೊಳ್ಳೋಣ. ಅದಕ್ಕಾಗಿ ಶ್ರಮಿಸೋಣ. ದುಡಿಯೋಣ. ನಡೀರ್ರಿ ಹೋಗೋಣ. (ಇಬ್ಬರೂ ಹೋಗುವರು)

ದೃಶ್ಯ ೩೨

ಜಂಗಲು ಸಿನು

(ಕೆಂಪಣ್ಣ ಪೊರಕೆಗಳನ್ನು ತೆಗೆಯುವುದು)

ಕಾಡು ಸೀನು ಅಲ್ಲಿ ಪೊರಕೆಗಳು ಹೂತುಕೊಂಡಿರುತ್ತವೆ.

ದೃಶ್ಯ ೩೩

ರಸ್ತೆ

(ಕೆಂಪಣ್ಣನು ಪೊರೆಕೆಗಳನ್ನು ಹೊತ್ತು ತರುತ್ತಿರುವನು ಇದಿರಿನಿಂದ ಶಾಸ್ತ್ರಿಗಳು ಪ್ರವೇಶಿಸುವರು)

ಶಾಸ್ತ್ರಿ—ಇದೇನ್ ಕೆಂಪೇಗೌಡ? ಇದ್ಯಾಕಪ್ಪಾ ಪೊರ್ಕೆಗಳನ್ನ ಹೊತ್ಕೊಂಡ್ ಬರ್ತಾಯಿದ್ದೀಯಾ? ಇದ್ಯಾಕ್ ನಡಗ್ತಾಯಿದ್ದೀಯಾ?

ಕೆಂಪೇಗೌಡ—ಸ್ವಾಮಿ, ನಮ್ಮಮ್ಮ ಹಿರೇಹಳ್ಳ ದಾಟ್ಬರ್ವಾಗ ಹಿರೇ ಹಳ್ಳದಲ್ಬಿದ್ದೂ ಕೈಲಿದ್ ಪೊರ್ಕೆಗಳೆಲ್ಲಾ ಕೊಚ್ಕೊಂಡ್ಹೋದ್ವಂತೆ. ಅದಕ್ಕಾಗಿ ವ್ಯಸ್ನಾಪಡ್ತಾಯಿದ್ಲೂ. ತಂದ್ಕೊಡ್ತೀನೀ ಅಂತಾ ಸಮಾಧಾನ ಮಾಡಿ ಹುಡ್ಕೋದಕ್ಕೆ ಹಿರೇಹಳ್ಳದ್ಹತ್ರಾ ಹೋದೆ. ಪೊರ್ಕೆಗಳೆಲ್ಲಾ

ಕೆಸರ್ ನಲ್ ಹೂತ್ಹೋಗಿದ್ವೂ. ಕೀಳೋದಕ್ಹೋದ್ರೇ ಏನ್ ಆಶ್ಚರ್ಯರ್ಾ ಹೇಳ್ಲಿ ಸ್ವಾಮಿ, ಒಂದೊಂದ್ ಪೊರ್ಕೇ ಎಳದ್ರೂ ಝುಣ್ ಅಂತಾ ಶಬ್ದಾ ಬರೋದು. ಅದೇನ್ ಭೂತಾನೋ, ಪೀಡೇನೋ, ಪಿಶಾಚೀನೋ, ನನ್ಗಂತೂ ಒಂದೂ ಗೊತ್ತಾಗ್ಲಿಲ್ಲ. ನಾನ್ ಬಹ್ಳಾ ಹೆದರ್ಬಿಟ್ಟಿದ್ದೀನಿ ಸ್ವಾಮಿ! ಇಲ್ನೋಡಿ, ನನ್ ಮೈಯೆಲ್ಲಾ ನಡಗ್ತಾಯಿದೆ. ನನ್ಗ ಜ್ವರಾ ಬಂದ್ಬಿಟ್ಟದೇ. ನಾನೇನಾಗ್ತೀನೋ? ಸಾಯ್ತೀನೋ ಬದಕ್ತೀನೋ ಒಂದೂ ಗೊತ್ತಾಗ್ತಾಯಿಲ್ಲಾ.

ಶಾಸ್ತ್ರಿ—ಏನೂ ಝುಣ್ ಅಂತಾ ಶಬ್ದಾ ಬರ್ತಾಯಿತ್ತೇ? (ಬೆರಳಿನ ಮೇಲೆ ಲೆಕ್ಕಹಾಕುತ್ತ) ಆ ಹಾ ಹಾ ಹಾ! ಧನ್ಯ ಕೆಂಪೇಗೌಡ! ನೀನು ಭಾಗ್ಯವಂತ, ಮಹಾ ಅದೃಷ್ಟಶಾಲಿ.

ಕೆಂಪೇಗೌಡ—ಅದೇನ್ ಸ್ವಾಮಿ ನನ್ನ ಮಹಾಭಾಗ್ಯ?

ಶಾಸ್ತ್ರಿ—ನೋಡು ಕೆಂಪೇಗೌಡ! ಝುಣ್ ಅಂತಾ ಶಬ್ಧವಾದದ್ದು ಭೂತ್ವೂ ಅಲ್ಲಾ ಪೀಡೇನೂ ಅಲ್ಲಾ, ಪಿಶಾಚೀನೂ ಅಲ್ಲಾ. ನಾನ್ ಮೊದ್ಲೇ ನಿನ್ಗ್ಹೇಳಿರ್ಲಿಲ್ವೇ? ನಿನ್ ಮೇಲೆ ಆದಿಶೇಷನ ಸುಪ್ರಸನ್ನತೆಯುಂಟಾಗಿದೇ ಅಂತಾ? ಝುಣ್ ಅಂತಾ ಶಬ್ದವಾದದ್ದು ಹಣದ ಕೊಪ್ಪರಿಗೆಯದು. ಎಷ್ಟ್ ಪೊರ್ಕೆಗಳು ಕೊಚ್ಹೋಗಿದ್ವೂ? ಎಲ್ ಹುತ್ಹೋಗಿದ್ವೂ ಗುರ್ತೇನಾದ್ರೂ ಇದೆಯೇನೂ?

ಕೆಂನೇಗೌಡ—ಹೌದ್ ಸ್ವಾಮಿ, ಏಳ್ ಪೊರ್ಕೇಗಳು ಕೊಚ್ಹೋಗಿ ಹೂತ್ಕೊಂಡಿದ್ವೂ. ಅದರಲ್ಲಿ ಐದ್ ಪೊರ್ಕೆಗಳನ್ನ ತಂದಿದ್ದೀನಿ. ಗುರ್ತಿಗೋಸ್ಕರ ಎರ್ಡ್ ಪೊರ್ಕೆಗಳನ್ನ ಅಲ್ಲೇ ಬಿಟ್ ಬಂದಿದ್ದೀನಿ.

ಶಾಸ್ತ್ರಿ—ಹಾಗಾದ್ರೇ ಏಳ್ ಕೊಪ್ಪರ್ಗೇ ಹಣಾ ಸಿಗುತ್ತೇ ಕೆಂಪೇ ಗೌಡ! ನಿಮ್ ಪೂರ್ವೀಕರ ಜೀವನದಲ್ಲೂ ಇಂಥಾ ಘಟನೇನೇ ಜರ್ಗಿದೇ. ಔಗ್ಲೂ ಪೊರ್ಕೆಗಳೂ ಕೊಚ್ಹೋದ್ ಕಾರಣದಿಂದಾನೇ ಕೊಪ್ಪರ್ಗೆ ಹಣಾ ಸಿಕ್ಕಿದೆ.

ಕೆಂಪೇಗೌಡ—ಇದೆಲ್ಲಾ ನಿಜ್ವೇನ್ ಸ್ವಾಮಿ?

ಶಾಸ್ತ್ರಿ—ನಿಜಾಪ್ಪಾ ನಿಜಾ! ನಡೀ, ಜನ್ರನ್ನಾ ಸಹಾಯಕ್ಕರ್ಕೊ ಬಂದೂ ಹಣಾ ತಗಿಯೋಣಾ ಅಂತೇ.

ಕೆಂಪೇಗೌಡ—ಅಗ಼್್ಲೀ ನಡೀರ್ರಿ ಸ್ವಾಮಿ.

ಶಾಸ್ತ್ರಿ—(ಎರಡು ಹೆಜ್ಜೆ ಮುಂದೆ ಹೋಗಿ ಹಿಂದಿರುಗುವರು) ಆಂ! ನೋಡು ಕೆಂಪೇಗೌಡ, ನಿಮ್ ಸೋದರ್ ಮಾವಾ ಕೆಂಪ್ನಾಗರದಿಂದ ಬಂದಿದ್ರೂ ಗುರುವಾರದ್ ದಿನ್ವೇ ಶುಭಮುಹೂರ್ತಾಯಿದೆಯಂತೆ. ಔರ್ ಮಗಳ್ ಲಗ್ನಾ ನೀನ್ ಜೊತೇಲೇ ನಡಸ್ಬೇಕೂ ಅಂತಾಯಿದ್ದಾರಂತೇ. ನಾನೇನೋ ಒಪ್ಗೆ ಕೊಟ್ಬಟ್ಟಿದ್ದೀನಿ. ನಿನ್ಗೂ ಸಮ್ಮತಿಯಿದೇ ತಾನೇ ?

ಕೆಂಪೇಗೌಡ—ತಾವ್ ಒಪ್ಪಿದ್ ಯಾವ್ ಕಾರ್ಯಕ್ಕೂ ವಿರೋಧಾಯಿಲ್ಲಾ

ಶಾಸ್ತ್ರಿ—ಹಾಗಾದ್ರೇ ಸರಿ ನಡೀಹೋಗೋಣ. ವಿವಾಹ ಮಹೋತ್ಸವ ನಡೆದ ಆನಂತರವೇ ಪಟ್ಟಾಭಿಷೇಕ ಮಹೋತ್ಸವ. (ಎಲ್ಲರೂ ಹೋಗುವರು.)

ದೃಶ್ಯ ೩೪

(ಹೊಗಳು ಭಂಟರಿಬ್ಬರು ಸಿಂಹಾಸನದ ಎಡ ಬಲ ಭಾಗದಲ್ಲಿ ನಿಂತಿರುವರು)

ಮೊದಲನೆಯ		ವೀರಾಗ್ರಣಿಗಳ ಅಧಿದೇವತೆ
2 ನೇ	,,	ಪ್ರಜಾಕೋಟಿಯ ಕಲ್ಪತರು
3 ನೇ	,,	ಹಿಂಸಾತ್ಮಕರ ಶತ್ರು
3 ನೇ	,,	ವಿಪದ್ಗ್ರಸ್ತರ ಸಂಕಟ ನಿವಾರಕ
1 ನೇ	,,	ಧುರ ವಿಕ್ರಾಂತ
2 ನೇ	,,	ವೀರ ವಿಕ್ರಮ

ಇಬ್ಬರೂ ಮಹಾರಾಜಾಧಿ ರಾಜ ಮಾಗಡೀ ಶ್ರೀ ಕೆಂಪೇಗೌಡ ಭುವನಾಧಿ ನಾಥರು ರಾಜ ಸಭಾಂಗಣಕ್ಕೆ ಬಿಜಯಗೈಯ್ಯುತ್ತಿರುವರು.

(ಕೆಂಪೇಗೌಡ ತನ್ನ ಪತ್ನಿಯೊಡನೆ ರಾಜ ಗೌರವಗಳಿಂದ ಪ್ರವೇಶಿಸಿ, ಸಿಂಹಾಸನದ ಮೇಲೆ ಕುಳಿತುಕೊಳ್ಳುವನು. ಹಿಂಬಾಲಿಸಿ ಬಂದ ಪರಿವಾರದವರು ತಮ್ಮ ತಮ್ಮ ಪೀಠಗಳ ಬಳಿ ನಿಲ್ಲುವರು. ಕೆಂಪೇಗೌಡ ಕೈ ಸನ್ನೆ ಮಾಡಿದೊಡನೆಯೇ ಕುಳಿತುಕೊಳ್ಳುವರು. ಕವಿಗಳಿಬ್ಬರು ಎದ್ದು ನಿಂತು.

1 ನೇ ಕವಿ—ಕ್ಷಿತಿಜಫಾಲದೊಳೆಸೆವ ನವ್ಯ ದಿನಕರನಂತೆ ಗಗನವೇದಿಕೆ
ಯಲ್ಲಿ ಕಂಗೊಳಿಪ ಶಶಿಯಂತೆ, ಸಲಿಲ ಭಾಂಡದೊಳುದಿಪ
ವಿವೃತೋತ್ಪಲದಂತೆ, ರಾಜಿಸೈ ಕೆಂಪೇಗೌಡ ಪ್ರಜೆಗಳಾವನದಂತೆ

2 ನೇ ಕವಿ—ಧರ್ಮ ಸುಧೆಯನುಸೂಸಿ ಕಂಗೊಳಿಪ ಚಂದಿರನೇ, ಭಯ
ತಮಂಧವಿಭಾಡ ವರ ದಿವ್ಯ ದಿನಕರನೆ. ದೀನದಲಿತೋದ್ಧಾರ, ನಿತ್ಯ
ನವ ಶುಭಕರನೇ, ರಾಗದಲಿ ರಕ್ಷಿಸೈ ಕೆಂಪೇಗೌಡ ಭೂವರನೇ,

1 ನೇ ಕವಿ—ಶ್ರಾಂತ ಶುಷ್ಕ ಮನಾಸ್ಯ ಜನವನ ಭವ್ಯ ನೀಹಾರ
ಭಾರತಾಂಬೆಯ ಬಾಹು ಭದ್ರದೊಳೆಸೆವ ಕೇಯೂರ
ಭೀತಿ ವಿಹ್ವಲವಿದ್ಯೆಯುನ್ಮದ ತಾಪಮರ್ಷಣ ನವ್ಯನೇತಾರಾ
ಶಾಂತಿ ಸುಖ ಸಮ್ಮೋದ ಕರುಣಿಪ ದಿವ್ಯ ದಾತಾರ.

2 ನೇ ಕವಿ—ನಯನ ನರಸಿಯೊಳೆಸೆವ ನವ್ಯಾಬ್ಜ ಸಂಕಾಶ
ದಿವ್ಯ ಗುಣಮಣಿ ಮಾಲ ಮೃದುಲ ಮಧುಮಯ ಭಾಷ
ಧರ್ಮ ದಕ್ಷಯ ಭಾಂಡ ಪಿಡಿದೀಯುತಿಹೆ ತೋಷ,
ಸಕಲ ವಿದ್ಯ ಪ್ರಕೀರ್ಣ ನಿಸ್ತುಲ ಭವ್ಯ ಮಂಜೂಷ

2 ಜನರು—ಭದ್ರವೂ ಶುಭವೂ ಮಂಗಳವೂ ನಿಮಗಿರಲಿ
ಸಂರಾಗ ಸಂಪ್ರೀತಿ ಸಂಪದವು ನಿಮಗಿರಲಿ
ಕ್ಷಿತಿನಾಥ ಕೆಂಪೇಗೌಡ ಚಿರ ಕೀರ್ತಿ ನಿಮಗಿರಲಿ ಜಗದೀಶ
ನನುನಯವು ಅನುಗಾಲ ನಿಮಗಿರಲಿ.

ನರ್ತಕಿಯರಿಂದ ಭರತನಾಟ್ಯ

ಕೆಂಪೇಗೌಡ—ನನ್ನ ಸಭ್ಯ ಪ್ರಜೆಗಳೆ, ನಿಮಗೆ ಭರವಸೆಯಿರಲಿ ಬೆಂಗಳೂರು ಕೆಂಪೇಗೌಡರ ಮನೆತನದ ಬಾಲಕನು, ಕೆಂಪವೀರೇಗೌಡರ ಪುತ್ರನು ನಾಡನ್ನು ಸೂರೆಗೊಳ್ಳುವ ಸಲುವಾಗಿ ಅಧಿಕಾರ ಪೀಠವನ್ನೇರಲಿಲ್ಲ ಪ್ರಜೆಗಳ ಸಿರಿ ಸಂಪದಗಳನ್ನು ಹರಣಮಾಡಿ ಭೋಗವಿಲಾಸಗಳಲ್ಲಿ ವ್ಯಯಮಾಡಲು ಸಿಂಹಾಸನಾರೋಹಣ ಗೈಯ್ಯಲಿಲ್ಲ. ನಾನು ನನ್ನ ನಾಡಿನ ಮತ್ತು ಪ್ರಜೆಗಳ ಕಲ್ಯಾಣಕ್ಕಾಗಿ ಕೀರ್ತಿಗಾಗಿ ಪ್ರಗತಿಗಾಗಿ ನನ್ನ ಜೀವಮಾನದಂತ್ಯದವರೆಗೂ ಶ್ರಮಿಸುವ ಸಂಕಲ್ಪವನ್ನು ಕೈ ಗೊಂಡಿದ್ದೇನೆ. ನಾನು ಸತ್ಯದ ಉತ್ಥಾನ ಧರ್ಮದ ಅಧಿಷ್ಠಾನ ಪ್ರಜಾಪಾಲನ ದೇಶದ ಸಂವರ್ಧನ ಇವುಗಳನ್ನೇ ಮೂಲಧ್ಯೇಯ ವಾಗಿಟ್ಟುಕೊಂಡು ರಾಜ್ಯಪೀಠವನ್ನೇರಿರುತ್ತೇನೆ. ಈ ಮಹದಾಶಯಗಳ

ಬುನಾದಿಯ ಮೇಲೆಯೇ ರಾಜ್ಯಸೂತ್ರಗಳನ್ನು ನಿರ್ಮಿಸುವವನಿದ್ದೇನೆ. ನನ್ನ ದೃಷ್ಟಿಯಲ್ಲಿ ಅಧಿಕಾರಿ ಪ್ರಜೆ ಎಂಬ ಭೇದವಾಗಲಿ, ಬಡವ ಬಲ್ಲಿದರ ವಿವೇಚನೆಯಾಗಲಿ, ಬಲಿಷ್ಠ ಕನಿಷ್ಠರ ಎಣಿಕೆಯಾಗಲಿ, ಉಚ್ಚನೀಚಗಳ ತುಲನೆಯಾಗಲಿ, ಸುಳಿಯಲಾರದು. ಭೇದ ಬುದ್ಧಿ ಸಂಕುಚಿತ ಮನೋ ಭಾವನೆಗಳಿಂದ ಸಂಪೂರ್ಣವಾಗಿಯು ಅಲಿಪ್ತ ನಾಗಿರುವೆನು. ದೀನಾ ನಾಥರನ್ನೂ ವಿಪದ್ಗ್ರಸ್ತರನ್ನೂ ಕರುಣಾದ್ರ್ರ ದೃಷ್ಟಿಯಿಂದ ಕಾಣುವೆನು. ಅವರ ದುಃಖ ಸಂಕಟಗಳನ್ನು ನಿವಾರಿಸಲು ಅಹರ್ನಿಶಿಯೂ ಶ್ರಮಿಸುವೆನು. ದೇಶದಲ್ಲಿ ಅವ್ಯವಸ್ಥೆ ಅರಾಜಕತೆಗಳು ಅಡಿಯಿಡದಂತೆ, ದೌರ್ಜನ್ಯ ದಬ್ಬಾಳಿಕೆಗಳು ತಲೆಯೆತ್ತದಂತೆ, ಅಧರ್ಮ ಅನ್ಯಾಯಗಳು ಮೇರೆ ಮೀರದಂತೆ ಜಾಗರೂಕನಾಗಿರುವೆನು. ನನ್ನ ಸಾಮ್ರಾಜ್ಯದ ಪ್ರತಿಯೊಬ್ಬ ಪ್ರಜೆಯು ಆತನು ಯಾವ ಜನಾಂಗದವನೇ ಆಗಿರಲಿ, ಯಾವುದೇ ಧರ್ಮಕ್ಕೆ ಸಂಬಂಧಪಟ್ಟವನಿರಲಿ, ಆತನೊಡನೆ ವಿಶ್ವಾಸದಿಂದಲೂ ಏಕ ದೃಷ್ಟಿಯಿಂದಲೂ ವರ್ತಿಸಲಾಗುವುದು. ಎಲ್ಲರಿಗೂ ಒಂದೇ ವಿಧವಾದ ರಕ್ಷಣೆಯನ್ನು ನೀಡಲಾಗುವುದು. ಪ್ರತಿಯೊಬ್ಬ ಜನಾಂಗದವನಿಗೂ ಅವನವನ ಧರ್ಮದಂತೆ ಆಚಾರ ವ್ಯವಹಾರಗಳಂತೆ ನಡೆಯಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲಾಗುವುದು. ನಾನು ನಿಷ್ಪಕ್ಷಪಾತಿಯಾಗಿರುವ ಪ್ರತಿಜ್ಞೆಯನ್ನು ಕೈಗೊಂಡಿದ್ದೇನೆ. ಪ್ರಜೆಗಳನ್ನು ಬಾಧಿಸುವ ಅಧಿಕಾರಿಗಳನ್ನು ಕ್ರೂರ ಶಾಸನಕ್ಕೆ ಗುರಿ ಪಡಿಸುವೆನು. ಬಡವರನ್ನು ತುಳಿಯುವ ದುರಾಶಾಪೀಡಿತ ಶ್ರೀಮಂತರಿಗೆ ಉಗ್ರ ಶಿಕ್ಷೆಯನ್ನು ವಿಧಿಸುವೆನು. ಮತ ಭೇದ ಉಳ್ಳವರಿಗೆ ದಂಡನೆಯೊಂದರ ವಿನಹ ನನ್ನ ಸಾಮ್ರಾಜ್ಯದಲ್ಲಿ ಪುರಸ್ಕಾರವಿಲ್ಲ. ಸತ್ಯ, ಧರ್ಮ ದಯೆಯನ್ನು ರಕ್ಷಿಸಿಕೊಂಡು, ಸರ್ವಜನಾದರಣೀಯನಾಗಿ ರಾಜ್ಯ ಭಾರ ನಡೆಸಬೇಕೆಂಬುದೇ ನನ್ನ ಘನೋದ್ದೇಶವು.

ಸಭಿಕರು—ರಾಜಾ ಕೆಂಪೇಗೌಡರಿಗೆ ಜಯವಾಗಲಿ! ರಾಜಾ ಕೆಂಪೇಗೌಡರಿಗೆ ಜಯವಾಗಲಿ!

ಕೆಂಪೇಗೌಡ—ಈಗ ನಾನು ನಮ್ಮ ನಾಡಿನ ಶ್ರೇಷ್ಠವ್ಯಕ್ತಿಗಳೂ ತ್ರಿಕಾಲ ಜ್ಞಾನಿಗಳೂ ಸಕಲ ವಿದ್ಯಾಸಂಪನ್ನರೂ, ಆದ ಅನಂತ ಶಾಸ್ತ್ರಿಗಳಿಗೆ ಈ ನಾಡಿನ ಪ್ರಧಾನಾಮಾತ್ಯ ಪದವಿಯನ್ನು ಕೊಟ್ಟಿರುತ್ತೇನೆ.

(ಉಡುಗೊರೆಯನ್ನು ಕೊಡುವರು)

ಶಾಸ್ತ್ರಿ—(ಉಡುಗೊರೆ ತೆಗೆದುಕೊಂಡು)ಮಹಾಪ್ರಭುಗಳನ್ನು ಪರಮಾತ್ಮನು ನಮ್ಮ ಪಾಲಿನ ವರವಾಗಿ ಅನುಗ್ರಹಿಸಿದ್ದಾನೆ. ಈ ವಿಶಾಲ ಮನೋಭಾವನೆ, ನಿಷ್ಪಕ್ಷಪಾತ ಹೃದಯ, ಉದಾತ್ತ ಧ್ಯೇಯಗಳು, ದೇವತಾ ಸದೃಶವಾದ ಕಲ್ಯಾಣ ಗುಣಗಳು, ಮಹಾ ಸ್ವಾಮಿಯವರಲ್ಲಿ ನಮಗಿರುವ ಕಡು ಭಕ್ತಿಯನ್ನು ಅಧಿಕಗೊಳಿಸುತ್ತಿರುವುವು. ನಮ್ಮ ಮಾನ ಪ್ರಾಣಗಳೂ ಶಕ್ತಿ ಸಾಮರ್ಥ್ಯಗಳೂ ಧನಕನಕ ವಸ್ತು ವಾಹನಾದಿಗಳೂ ಕೊನೆಗೆ ನಮ್ಮ ಜೀವಿತದ ಸರ್ವಸ್ವವೂ ಮಹಾ ಸ್ವಾಮಿಯವರಿಗಾಗಿ ಅರ್ಪಣವು. ಇನ್ನು ಮುಂದೆ ನಾವು ಬಾಳುವೆವಾದರೆ, ಕೆಂಪೇಗೌಡ ಭುವನಾಧಿನಾಥರ ರಕ್ಷಣೆಗಾಗಿ, ಕೀರ್ತಿಗಾಗಿ, ಗೌರವ ಪ್ರತಿಷ್ಠೆಗಳಿಗಾಗಿ. ಇದೇ ನನ್ನ ಪ್ರತಿಜ್ಞೆಯು.

ಕೆಂಪೇಗೌಡ—ನಿಮ್ಮ ಪ್ರತಿಜ್ಞೆಯು ಸ್ತೋತ್ರಾರ್ಹವಾದದ್ದು (ಪಕ್ಕಕ್ಕೆ ತಿರುಗಿ) ಈಗ ನಾನು ನಮ್ಮ ನಾಡಿನ ಮಹಾವೀರರೂ, ಸತ್ವ ಶಾಲಿಗಳೂ, ಅಮಿತ ಧೈರ್ಯೋತ್ಸಾಹವುಳ್ಳವರೂ ಸಂಘಟನಾ ಚತುರರೂ ಆದ ಬೈರಪ್ಪನವರಿಗೆ ನಮ್ಮ ನಾಡಿನ ಪ್ರಧಾನ ಸೇನಾಧಿಪತ್ಯವನ್ನು ಕೊಟ್ಟಿರುತ್ತೇನೆ. (ಉಡುಗೊರೆಯನ್ನು ಕೊಡುವರು)

ಬೈರಪ್ಪ—ಮಹಾಪ್ರಭುಗಳ ಕೀರ್ತಿ ಭಾಸ್ಕರನು ದೇದೀಪ್ಯ ಮಾನವಾಗಿ ರಾರಾಜಿಸಲಿ. ಈ ಖಡ್ಗವನ್ನು ಹಿಡಿದು ಮಹಾ ಸ್ವಾಮಿಯವರ ಆಜ್ಞಾ ಪಾಲನೆಗಾಗಿ, ಮಾಗಡಿ ನಾಡಿನ ಅಭ್ಯುದಯಕ್ಕಾಗಿ, ನಾಡಿನ ಪ್ರಜೆಗಳ ಉದ್ಧಾರಕ್ಕಾಗಿ, ಧರ್ಮದ ರಕ್ಷಣೆಗಾಗಿ, ಸತ್ಯದ ಪ್ರತಿ ಪಾದನೆಗಾಗಿ, ಕಂಕಣ ಬದ್ಧನಾಗಿ ನಿತಾಂತ ಪ್ರಯಾಸದಿಂದ, ಅನಾರತ ಶ್ರಮದಿಂದ ಅಹರ್ನಿಶಿಯೂ ದುಡಿಯುವೆನು. ಶ್ರಮಿಸುವೆನು ಹೋರಾಡುವೆನು. ಇದೇ ನನ್ನ ಪ್ರತಿಜ್ಞೆಯು.

ಕೆಂಪೇಗೌಡ—ನಿಮ್ಮ ಪ್ರತಿಜ್ಞೆಯು ಸ್ವಾಗತಾರ್ಹವಾದುದು.

ಅನಂತಶಾಸ್ತ್ರಿ—ಈ ಮಂಗಳ ಸಮಾರಂಭದ ಶುಭ ಸನ್ನಿವೇಶದಲ್ಲಿ ಕರುಣಾಘನನಾದ ರಂಗನಾಥನನ್ನು ಒಮ್ಮೆ ಎಲ್ಲರೂ ಪ್ರಾರ್ಥಿಸೋಣ....

॥ **ಶುಭಮಸ್ತು** ॥

ಹಾ ಡು ಗ ಳು

(ಪ್ರಾರ್ಥನೆ ಎಲ್ಲರೂ ಹಾಡುವರು) [ಪುಟ ೧

(ತುಮಾರೆ ಹೈ ತುಮಸೇ ದಯಾಮಾಂಗತೇ ಹೈ ಎಂಬಂತೆ)

ದಯಾ ಧರ್ಮ ಸಾರ ಪ್ರಭೋ ರಂಗನಾಥ ।
ಕೃಪಾ ಚಂದ್ರಹಾರ ವಿಭೋ ರಂಗನಾಥ ॥
ರಮಾಲೋಲ ನೀರ, ಕ್ಷಮಾಶೀಲ ತಾರ ।
ಕ್ಷುಧಾ ರೋಗ ದೂರ ಸದಾ ಸೌಖ್ಯಕಾರ ॥
ಮಹೋದಾರ ಧೀರ ಭಯಾಪಾರ ಹಾರ ।
ಚಿದಾನಂದ ಪೂರ ವಿಭೋ ರಂಗನಾಥ ॥ ೧ ॥

ಅಜಾಮಿಳನೊಲಿದ ಮಹಾ ಪುಣ್ಯ ನಾಮ ।
ಗಜಾನಾಥಗೊಲಿದ ಬಲಾನಂತ ಭೀಮ ।
ನಿಜಾ ನೇಕಚರಿತ ಗುಣಾನೀಕ ಧಾಮಾ ।
ನಿರಾಲಂಬ ಧೀರ ವಿಭೋರಂಗನಾಥ ॥ ೨ ॥

ಪುಟ ೯] [ದೃಶ್ಯ ೩

(ಕೆಂಪಮ್ಮ ಗುಡಿಸಿಲು ಸೀನು) (ಜಾಯಿಯೆ ಜಾಯಿ ಕಹಾ ಸಮಜೇಗಾ ಎಂಬಂತೆ)

ತಾಯಿ ನಿ ಮಾಯೆ ಮಹಾ ಬಿಡಿಸೀಗ ಮೌನಭವಾ ।
ಬಳಸಿ ಬರೇ ಸಹಿಸೆದವಾ ॥ ಪ ॥
ಓ ಲೋಕಪಾಲೆ ಹರಣವಿದೇಕೇ ।
ಕೊರಳೇರಿತೀಗಾ ಮರಣಸಲಾಕೇ ॥
ಮೂಕಾಂಬೇ ತೋರು ದಿವಾ ॥ ೧ ॥
ಮಾನಾಪಮಾನ ಕಾರ್ಯ್ಯ ವಿಧಾನಾ ।
ಹೇ ಜೀವ ದಾತೇ ನಿನ್ನಪ್ರದಾನ । ಜಗದಂಬಿಕಾ ಬಿಡಿಸೀ ಭವಾ॥೨॥

ಪುಟ ೧೪] [ದೃಶ್ಯ ೩

ಹೇವಿಧಾತ ರಂಗನಾಥ । ಪ್ರೇಮದಿಂ ಸಲಹೌ ಪ್ರಭೋ ॥
ಬಾಗಿನಮಿಪೆವುದಾರ ಪದಕೆ । ಕರುಣೆಯಿಂ ಕಾಯೌ ವಿಭೋ ॥
ಬಾಳ ಬಾನಲಿ ದುಃಖವು ಮುಗಿಲಾಗಿ ಬರುತಿದೆ ಭೀಕರಾ ।
ಹಸಿವು ಬರಸಿಡಿಲಾಗಿ ಎರಗಿದೆ ಸೈಸೆನಯ್ಯೊ ಭಯಂಕರಾ ॥
ಗೋಳ ಕೇಳುವರಾರ ಕಾಣೆ ಕರುಣೆಯಿಂ ಕಾಯೌ ವಿಭೊ ॥ ಹೇ ॥
ಕಂಬನಿ ಕಾದೆಣ್ಣೆಯಾಗಿದೆ । ದೃಷ್ಟಿ ಮಂಥರವಾಗಿದೆ ।
ಹೃದಯ ಮಂದಿರ ಹತ್ತಿ ಭುಗಿಲೆನೆ ಮಸ್ತಕವು ಕಾವೇರಿದೆ ।
ಮೊರೆಯ ಲಾಲಿಪರಾರ ಕಾಣೆ । ಕರುಣೆಯಿಂ ಕಾಯೌ ವಿಭೋ ॥ ೨ ॥

ಪುಟ ೧೫] [ದೃಶ್ಯ ೪

ರೋಡ್ ಸೀನು (ತೇರದ್ವಾರ ಕಡಾ ಎಕ್ ಜೋಗಿ, ಎಂಬಂತೆ)

ನಾಕಾ ದಾಟೇ ನರಕಾ ದಾಟಿ । ದಾಟಿ ಲೋಕ ವಿರಾಗಿ ॥
ಉದಾರ ಮನದ ವಿಧಾನ ಸಾರೀ । ಕರವಾ ಚಾಚಿಹ ಜೋಗೀ
ಕರ ಚಾಚಿಹನೂ ಬಡ ಜೋಗೀ । ಕರ ಚಾಚಿಹನೂ ಬಡ ಜೋಗೀ ॥ಪ॥
ಬೇಡನು ನಗನಾಣ್ಯ ಬೇಡನು ಮನೆಮಾನ್ಯ ಬೇಡುವ ಕೂಳನು ಜೋಗೀ ॥
ಬೇಡುವ ಕೂಳನು ಕೊಳ್ಳುವ ಅಘವನು ಮಾರುವ ಪುಣ್ಯವನೂ ।
ಕೂಳನು ನೀಡಿ ದಾನ ಮಾಡಿ ಗಳಿಸಿರಿ ನಾಕವನೂ ॥ ಬೇ ॥
ಬಾಳಿದು ವಿಫಲ ದಾನವೇ ಸಫಲ ಕರುಣೆಯೆ ಸತ್ಯವಲಾ ।
ಕರುಣೆಯ ತೋರಿ ಕೂಳನು ನೀಡಿ ಪಡೆಯಿರಿ ಮೋಕ್ಷಫಲಾ ॥ ಬೇ ॥

ಪುಟ ೨೦] [ದೃಶ್ಯ ೬

ಮಲ್ಲಿ (ರೋಡ್ ಸೀನ್).

ಏನಲೆ ಬಿರುಗಾಳಿ ಎಂತಲೆ ಬಿರುಗಾಳಿ ।
ಸಂತೆ ಕೂಡೊತಾವ ಜಗ್ಗಲೆ ಬಿರುಗಾಳಿ ॥
ಬಿರುಗಾಳಿ ಮನೆಯಾಗೆ ಬಿಸೋಕೇ ರಾಗಿಲ್ಲ ।
ಕೋಳಿ ತಿಂನ್ನೊದೆಲ್ಲಾ ಸಣ್ಣಕ್ಕಿ ಬಿರುಗಾಳಿ ॥
ಕ್ಯಾತ್ಸಂದ್ರ ಬಿರುಗಾಳಿ ಕೆಸರು ಮಡಗು ಬಿರುಗಾಳಿ ।
ಜಾರಿ ಬೀಳೋದು ಗೂಳೂರು ಬಿರುಗಾಳಿ ॥
ಜಾರಿ ಬೀಳೋದು ಗೂಳೂರ ಮುಂದೆ ಕೈಹಿಡಿದೆತ್ತ್ತೊದು ಕೈದಾಳಬಿರುಗಾಳಿ॥

ಪುಟ ೨೪] [ದೃಶ್ಯ ೬

ರಾಗ—ತಾಳ

ಮಲ್ಲಿ ಸಲ್ಲಾದ ಸರಸ ತರವಲ್ಲ । ಆತುರದೊಳು ಹದಗೆಡುವುದು
ಬಾಳು ತರವಲ್ಲ ವಯಸಾದರಿನ್ನು ತಿಳಿಲಿಲ್ಲ ॥
ಮಲ್ಲ ನಾ ಬಲ್ಲೆ ನೆಲ್ಲ ಕೇಳ್ ಮಲ್ಲಿ । ಬಲ್ಲಿದ ಇವನೊಳು ಸಲ್ಲದು
ಸವಿನುಡಿ ಇಲ್ಲೀ । ಬಲು ಮಾಟಗಾತಿ ಮಹಮಳ್ಳಿ ॥
ಮಲ್ಲಿ ಜನ ನಗುವರು ಬಿಡು ನನ್ನ ಕೈಯ್ಯ । ಕೈ ಮುಗಿವೆನು
ಬಿಡು ದಮ್ಮಯ್ಯ ॥
ಮಲ್ಲ ಮುಂದೆ ನಡೆವುದುಂಟು ನಮ್ಮ ಮದುವೆ । ಕೈ ಹಿಡಿದರೇನು
ಪೇಳ್ ಚೆಲುವೆ ॥
ಮಲ್ಲಿ ಬಲು ಮೊಜುಗಾರ ಮಾಗಡಿಯ ಗೌಡ ಮಾವ ಮಲ್ಲಣ್ಣ ।
ನಿನ್ನ ಮಾತೆ ಮನಕೆ ಬಲು ಚೆನ್ನ ॥
ಇಬ್ಬರೂ ತಾರ ಚಂದ್ರರ, ಸಮ ಜೋಡಿನಾವ್ । ಹಾಲುಕ್ಕಿದಂಗೆ
ಸಂಸಾರ ಮಾಡಿ ನಾವ್ ಬಾಳ್ವಾ । ಮನ ಮೆಚ್ಚುವಂತೆ ನಾವ್ ನಡಿವಾ ॥

ಪುಟ ೩೭] [ದೃಶ್ಯ ೧೧
ಲಿಂಗಾಂಬೆ ಮನೆ ಸೀನ್ (ಕರುಣಂಚು ಮೇರಿಮಾತಾ ಎಂಬಂತೆ)

ಜಗದಂಬೆ ಜೀವ ದಾತೆ । ಶರಣೆಂಬೆ ಕಾಯೌ ಮಾತೆ ಶಿವೇ ।
ಫಣಿವೇಣಿ ಶೂಲ ಪಾಣಿ । ಕಲ್ಯಾಣಿ ಮೃಡನ ರಾಣೀ ॥
ಪರಿಪಾಲಿಸಭಯ ವಾಣೀ । ಶರ್ವಾಣಿ ಭುವನ ಖ್ಯಾತೇ ॥ ಜ ॥
ದನುಜ ನಿಪಾತ ಲೀಲೆ । ದುರಿತ ವಿದೂರ ಶೀಲೆ ॥
ವರಸಾಮಗಾನ ಲೋಲೇ । ಮಹಿಪಾಲೆ ಅಮರ ಪ್ರೀತೇ ॥ ಜ ॥

ಪುಟ ೪೮] [ದೃಶ್ಯ ೧೨

ಶ್ರೀ ಹರೀ ಗೋವಿಂದಾ । ಮುಕುಂದ ಮಾಧವಾ ।
ಗೋವಿಂದ ಕೇಶವಾ ॥ ಶ್ರೀ ॥
ಶಂಖದಲ್ಲಿ ಬಂದು ನೀನು । ಕಾಯ್ದೆ ಪ್ರಹ್ಲಾದನಾ ।
ಪರಿ ಪರಿಯ ಸಂಕಟದಲಿ ಕಾಯ್ದೆ ಭಕ್ತರಾ ॥ ಶ್ರೀ ॥
ದ್ರೌಪದಿಯ ಮೊರೆಯ ಕೇಳಿ ಮರುಗಿದೆಯೋ ಸ್ವಾಮಿ ।
ವಸ್ತ್ರವನಕ್ಷಯಿಸುತೆ ಸತಿ ಧರ್ಮ ಕಾಯ್ದೆಯೋ ॥ ಶ್ರೀ ॥

ಪುಟ ೫೧] [ದೃಶ್ಯ ೧೪
ರೋಡ್ ಸೀನ್ (ಛೊಡಗಯಾ ಬಾಲಂ ಮೇರ ಪ್ಯಾರ ಭರಾದಿಲ್, ಎಂಬಂತೆ)

ಬೇಡುವೆ ಭಿಕ್ಷವನಾ ನೀಡಿ ನಾಡಿನ ಪುಣ್ಯನಾಥರೇ ।
ಚಿನ್ನವ ಬೆಳೆವಾ ಹೊನ್ನಿನ ಭೂಮಿ । ಪುಣ್ಯದ ನಾಡಿನ ದಾತರೆ ॥
ಪಾಪವ ಕಳೆವ ಪುಣ್ಯವ ತರುವ । ಇಹಪರ ಬಾಳನೆ ಬೆಳಗಿಸುವ ॥ ನಿಮ್ಮ
ಇಹಪರ ಬಾಳನೆ ಬೆಳಗಿಸುವಾ ॥ ಬೇ ॥

ಪುಟ ೬೧] ಲಿಂಗಾಂಬೆ (ಕಾಮ ಸೀನ್) [ದೃಶ್ಯ ೧೫
(ವಫಾವೊಂಕಿ ಮಜಬೂರ್ ದಾಮನ್ ಬಿಚಾಕರ್, ಎಂಬಂತೆ)

ಮಹಾ ಬಂಧ ಮೋಚನ। ಪ್ರಭೋ ರಂಗನಾಥ। ನಿರಾಲಂಬ ಧೀರಾ ।
ವಿಭೋ ರಂಗನಾಥ ॥
ದಯಾ ಸಾಗರ ನೀ ಮೊರೆ ಲಾಲಿಸೀಗ । ನಿರಾಧಾರಿ ಬೇಡುವೇ ।
ಕೃಪೆ ತೋರು ಬೇಗ ॥
ಸದಾನಂದ ಶೀಲ ಪ್ರಭೋ ರಂಗನಾಥ। ನಿರಾಲಂಬ ಧೀರಾ ವಿಭೋ
ರಂಗನಾಥ ॥
ಮುರಾರಿ ಮಹೋದಾರಿ । ಸದಾ ಸೌಖ್ಯ ಕಾರಿ । ಧೃವ ಕೇಶವಾ
ಶೌರೀ ದೀನೋಪಕಾರಿ ॥
ಭಯಾಪಾರ ಹಾರಿ ದಾನವ ವಿಚಾರಿ। ಮನಾನಂದ ಗೀತಾ ।
ನಿಕುಂಜ ವಿಹಾರಿ ॥
ಬಲಾನಂತ ಕಾಯೋ ಪ್ರಭೋ ರಂಗನಾಥ। ನಿರಾಲಂಬ ಧೀರಾ
ವಿಭೋ ರಂಗನಾಥ ॥

ಪುಟ ೬೪] [ದೃಶ್ಯ ೧೬

ಮಲ್ಲ (ಕಾಡು ಸೀನ್) ರಾಗ—ತಾಳ

ವನಿತೆಯ ವನದೊಳು ನೋಡಲು ಬಂದನು । ಲಂಕೆಯ ರಾವಣನೂ
ಮಾತನಾಡದೆ ಇರುವ ಸೀತವ್ವನ ಕಂಡು । ಮಂಕಾಗಿ ಒಂಟೋದನೂ....
ತಕ್ಕ ತಕ ತಕ್ಕ ಧಿಮ್ಮಿ ಧಿಮಿ ಧಿಮ್ಮಿ ॥

ಪುಟ ೬೭] [ದೃಶ್ಯ ೧೬

ಮಲ್ಲಿ (ಕಾಡು ಸೀನ್) ರಾಗ—ತಾಳ

ದೂರಾ ನಿಲ್ಲಿತ್ತ ಬರಬೇಡವೋ । ದೊಡ್ಡ ಘೋರಾ ಅಡವೀಯಲಿ ।
ನಾರೀ ಸಣ್ಣವಳೊಬ್ಬೆ ॥ ದೂ ॥
ಪರನಾರಿಯರ ನೋಡ ಬಾರದೋ । ನನ್ನ ಪತಿ ಬಂದು ಒದ್ದಾನು
ಹೋಗೆಲೋ ॥ ದೂ ॥

ಪುಟ ೭೦] [ದೃಶ್ಯ ೧೭

ರೋಡು ಸೀನ್ (ಚಿನ್ನ ಚಿನ್ನ ವೀಡುಕಟ್ಟ, ಎಂಬಂತೆ)

ಮಲ್ಲಿ ಚೊಕ್ಕ ಚಿನ್ನ ನನ್ನ ಮಲ್ಲ ಮುತ್ತು ರನ್ನ ನನ್ನ ಮಲ್ಲ ।
ಬಂಗಾರ ಗಟ್ಟಿಯಂತ ನನ್ನ ಮಲ್ಲ । ಒಳ್ಳೆ ಬಂಗಾರ
ಗಟ್ಟಿಯಂತ ನನ್ನ ಮಲ್ಲ ॥
ಮಲ್ಲ ಬೆಳ್ಳಿ ಬಂಗಾರದಲ್ಲಿ ಒಳ್ಳೊಳ್ಳೇ ಹರಳಿನಲ್ಲಿ । ಕೊಳ್ಳೀಗೆ
ಮಾಡಸ್ತೀನಿ ಸರವ ಮಲ್ಲಿ । ನಿನ್ನ ಕೊಳ್ಳೀಗೆ ಮಾಡಸ್ತೀನಿ
ಸರವ ಮಲ್ಲಿ ॥
ಮಲ್ಲಿ ಬೆಳ್ಳಿ ಬಂಗಾರಕೆಲ್ಲ ಆಸೆ ಪಡುವ ಹೆಣ್ಣಿವಳಲ್ಲ । ಬಯಸೀ
ಬದುಕಿದೆ ನಿನಗಾಗಿ ಮಲ್ಲಾ ॥
ಮಲ್ಲ ಕಾಯ್ದೆ ಕಾಲವನಾ ನಿನ್ನಾಣೆ । ನಮ್ಮ ಕೆಂಪಾಂಬೆ
ದಯದಿಂದ ಕಂಡೇನೇ ॥
ಇಬ್ಬರೂ ನನ್ನ ನಿನ್ನ ಜೀವನ ಜೋಡಿ ಬಂಗಾರದಂತ ಬಾಳ್ವೆ ಮಾಡಿ ।
ಚಿನ್ನ ಸಂಸಾರ ಸವಿ ನಾವ್ ನೋಡಿ । ಮಿಗೆ
ಸಂತೋಷದೊಳುಕೂಡಿ ಬಾಳುವಾ ಬಾ ॥

ಪುಟ ೮೦] [ದೃಶ್ಯ ೨೦

ಕೆಂಪಣ್ಣ (ತೋಟದ ಸೀನ್) (೧೮ರ ದಿಲ್ ಮೇ ವುಕಾರೆ ಅಜಾ, ಎಂಬಂತೆ)

ಮನಮೋಹನ ವೇಣು ವಿಧಾನಾ । ಜನ ಜೀವನ ಸಾರ ನಿದಾನಾ ।
ದೇವನತಭರಣ । ಕಾವನುತಚರಣ ॥ ಮ ॥

ಮಾ ಮನೋ ಭೂಷಣ ಸಾರ ಭೂಪಾಲನಾ । ನಿಖಿಲ ಲೋಕಾವನಾ ।
ಕೇಶವಾ ಮೋಹನಾ ಮೋಹನಾ ॥

ದಾನವಾ ಭಂಜನಾ । ಮಾನವ ರಂಜನಾ ರಂಜನಾ ।
ಸುರ ಶುಭ ಸದನ ಸುರನುತವದನ । ಅಹಿತಾವನಧಾರಣ ನಿಪುಣಾ ॥

ಪುಟ ೮೨] [ದೃಶ್ಯ ೨೦

(**ತೋಟದ ಸೀನ್**) **ರಾಗ—ತಾಳ**

ಕೆಂಪೇಗೌಡ, ಮಲ್ಲ, ಮಲ್ಲಿ ಭೂಮಿಯ ತಾಯಿಯ ಸೇವೆಯೆ ।
ನಮ್ಮ ಜೀವನ ಸಾಧನ ಭೂಮಿಯೆ । ನಿಜ ರೈತನ ಜೀವನದಾಧಾರಾ ॥
ಮಲ್ಲಿ ಹನಿ ಹನಿಮಳೆಯ ನೀರನೆ ಚೆಲ್ಲೀ
ಕೆಂಪೇಗೌಡ, ಮಲ್ಲಣ್ಣ ಕೆನೆ ಕೆನೆ ಕೆಸರಲಿ ಜೀಜವ ನೆಟ್ಟು
ಮೂವರು ಈ ಭಾರತಿಯಾ ಸೇವೆ ಅಜೇಯ । ಯಶಮೀಯೆದಯ ।
ಸಾಧಿಪೆಧ್ಯೇಯ ॥ **ಭೂ** ॥
ಮಲ್ಲಿ ಬೀಜಕೆ ಒಂದು ಸಸಿಯನೇ ತಂದೂ ।
ಕೆಂಪೇಗೌಡ, ಮಲ್ಲಣ್ಣ ಸಸಿಯಲಿ ನೂರು ಕಾಳನೆ ಕೊಟ್ಟೊ ।
ಮೂವರು ಪಾಲಿಸುವಾ ಭೂಮಿಯ ತಾಯಿ ಸೇವೆ ಅಜೇಯ ।
ಯಶಮೀಯೆ ದಯ ॥ **ಭೂ** ॥

ಪುಟ ೮೫] [ದಶ್ಯ ೨೧

ಕೆಂಪಣ್ಣ (ರೋಡ್ ಸೀನ್) (ತೇರಿ ಯಾದಮೆ ಜಲಕರ ದೇಕಲಿಯಾ, ಎಂಬಂತೆ)

ವಿಧಿ ಬಾಧಿಸು ಸುರಿಸುವೆ ಜಲಧಾರೆ । ನೆಲೆಗಾಣದ ಕಣ್ಣು ಕಾಡುತಿದೆ ॥
ನೀ ನೋಯಿಸಿ ಅಳಿಸು ಮನವಾರೆ । ಗತಿಗಾಣದ ಜೀವ ಬೇಡುತಿದೆ ॥
ನಾನಾರಲಿ ಪೋಗಲಿ ಮೊರೆಯಿಡಲಿ । ಗತಿಯಾರಿಹರೂ ನನಗಿಳೆಯಲ್ಲಿ ॥
ಸಂಕಷ್ಟವು ಬೆನ್ನ ಬಿಡದಿಹುದೂ । ದುರ್ದೈವವು ಬಿಡವೇ ಕಾಡುತಿದೆ ॥

ಪುಟ ೯೪] [ದೃಶ್ಯ ೨೨

ಕೆಂಪಣ್ಣ ತೋಟದ ಸೀನ್ (ಊಂಚಿ ಊಂಚಿ ದುನಿಯಾಕೆ ಎಂಬಂತೆ)

ನಿಗಮನಿಭಾಕರ ವಿಮಲ ವಿಚಾರ । ಸಾರ ಗುಣಾಕರ ಪಾಪವಿದಾರ ॥
ನಿಖಿಲ ಲೋಕ ಪರಿಪಾಲ ಮೂರುತಿ ಜೀಯ ಪಾವನ ನೀ ಪಾವನಾ ।
ವಿಲಸಿತ ನಿರುಪಮ ಮೋಹನ ಕೃಪಾಘನಾ। ವಿಲಸಿತನಿರುಪಮ ಮೋಹನಾ

ಮಾರಪಿತ ಶುಭ ರಾಗಹಿತ । ವನ ಮಾಲ ಧರ ನವ ಲೀಲ ಕೃತ ॥
ವೇದ ವಿಚಾರ ಸಾರ ಮಧುರ ಪುರಾಧಿಕಾರ । ಮಾಯಾರಿ ಶೌರಿ ಜೀಯ
ಪಾವನನೀ ಪಾವನ ಕೃಪಾಘನಾ ವಿಲಸಿತ ನಿರುಪಮ ಮೋಹನಾ
ಕೃಪಾಘನಾ ॥
ಮೋಹಕರ ಭವ ರೋಗಹರ । ವೈದೇಹಿ ಮನ ಮೋದಕರಾ ॥
ತಾರಕ ನಾಮಧಾರ ಸಾನಂದ ಶೀಲಪೂರ । ಮಾ ಯಾ ರಿ ಶೌರಿ ಜೀಯ
ಪಾವನ ನೀ ಪಾವನಾ । ಕೃಪಾಘನಾ
ವಿಲಸಿತ ನಿರುಪಮ ಮೋಹನ ಕೃಪಾಘನಾ।ವಿಲಸಿತ ನಿರುಪಮ ಮೋಹನಾ॥

ಪುಟ ೯೯] [ದೃಶ್ಯ ೨೩

ರೋಡ್ ಸೀನ್ (ಜಾಗ ದರ್ದ್ ಇಪ್ಕ್, ಜಾಗ, ಎಂಬಂತೆ)

ಶಾಂತಿ ಒಂದೇ ಕಲ್ಪದಾನ । ಜನ್ಮತಾರ ಸಾಧನ ಪುಣ್ಯವಿಚಾರ ಪಾವನಾ ॥
ಶಾಂತಿವಿನಾಶದಿಂದಲೀ ಲೋಕಾಭಿರಾಮಕಾಣದು।ದೀನರ ಗೋಳುಮೀರಲು।
ಸೌಖ್ಯ ವಿತಾನ ತೋರದು ತೋರದು ಬಾಳಿ ನಾಯನಾ ॥ ಶಾಂ ॥
ಜ್ಞಾನ ಪ್ರದೀಪ ಆರಿದೆ । ಮಾಯ ತಟಾಕ ಕಾದಿದೇ । ದುಃಖ
ವಿದೂರ ಆತ್ಮವೂ ದುರಿತ ಪಪಾತ ಸೇರಿದೆ ॥
ಶಾಂತಿ ಮಂತ್ರ ಒಂದೆ ತಾನ । ಜನ್ಮತಾರ ಸಾಧನ ಪುಣ್ಯ
ವಿಚಾರ ಪಾವನಾ ॥ ಶಾಂ ॥
ಬಯಸಿ ಬರೀ ವಿಲಾಸವಾ । ಕೈ ಸಾರಿತೀಗ ಈ ಭವಾ ॥
ಮೂರ್ಖ ವಿನಾಶ ಹಾದಿಯೆ ಪುಣ್ಯವಿದಾರ ವೈಭವ ।
ತೋರದು ಬಾಳಿ ನಾಯನಾ ॥ ಶಾಂ ॥

ಪುಟ ೧೦೭] [ದೃಶ್ಯ ೨೭

ಮಲ್ಲ (ರೊಡು ಸೀನ್) ರಾಗ—ಕಾಳ

ಹಿಂದಿಲ್ಲ ಗೋವಿಂದ । ಮುಂದಿಲ್ಲ ಗೋವಿಂದ, ಎಂದೆಂದಿಗೂ ನಿನ್ನ
ನಂಬಿದೆ ಗೋವಿಂದ ॥ ಹಿಂ ॥
ಇದ್ರೆ ಕೇಳೋರಿಲ್ಲ, ಸತ್ರೆ ಅಳೋರಿಲ್ಲ । ಇದ್ರು ಸತ್ರು ನೀನೊಬ್ನೆ ಗತಿ
ಕಾಣೊ ಗೋವಿಂದಾ ॥ ಹಿಂ ॥
ನನ್ನಂತ ಬಾಳು ನಿಮ್ಗ್ಯಾರ್ಗೂದ್ರೂ ಬ್ಯಾಡ್ದಿದ್ರೇ । ಕೈಯೆತ್ತಿ ದುಗ್ಗಾಣಿ
ಎಸಿರಪ್ಪ ಗೋವಿಂದಾ ॥

ಪುಟ ೧೦೯] [ದೃಶ್ಯ ೨೭

ಹೊಡಿ ನಗಾರಿ ಮೇಲೆ ಕೈ ಫಡ ಫಡನೆ।ಎಷ್ಟು ಕರುಣಿಯೋ ರಂಗನಾಥನು॥
ನಂಬಿದವರ ಬೆಂಬಿಡದಲೆ ಪೊರೆವ ॥ ಹೊ ॥

(ಎಲ್ಲರೂ ಹಾಡುವರು) ದಯಾ ಧರ್ಮ ಸಾರ ಪ್ರಭೋ ರಂಗನಾಥ ।

॥ ಶು ಭ ಮ ಸ್ತು ॥

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚು ಕಾಲ ಯಾರೂ ಪುಸ್ತಕವನ್ನಿಟ್ಟುಕೊಳ್ಳಲಾಗದು.

ಹಿಂದಿರುಗಿಸುವ ದಿನ	ಹಿಂದಿರುಗಿಸುವ ದಿನ
31 OCT 1978	

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

R

ಪುಸ್ತಕಸೂಚಿ

ವ. ಸಂ: O,33,೨(V) KAR M N59

ಕ್ರ. ಸಂ: 15124

ಲೇಖಕ: ಕಿಂಬಾಲ್ (ಬಸ್ ಕೆ)

...: ಮಾಗಡಿ ಕೆಂಪೇಗೌಡ.

ವ. ಸಂ: O,33,೨(V) KAR M N59

ಕ್ರ. ಸಂ: 15124

ಕ. ಸಾ. ಪ.
ಗ್ರಂಥ ಭಂಡಾರ

ಜಾಹಿರಾತು ! ಜಾಹಿರಾತು ! !

ನಾಟಕ ಆಡುವವರಿಗೆ ಸುಸಮಯ

ಮಹಾಶಯರೇ,

ನಮ್ಮಲ್ಲಿ ಝುಮಝು ಮಿಕಿಸುವ ಜರತಾರಿ ಡ್ರೆಸ್ಸುಗಳು ಹಿತ್ತಾಳೆ ಡ್ರೆಸ್‌ಗಳು, ಸಿ... ಗಳು, ನೇ... ಕಪ್ಪು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಈ ಎಲ್ಲಾ ನಾಟಕಗಳಿಗಬೇಕಾಗುವ ನಾಟಕದ ಸಾಮಾನುಗಳು ಸುಲಭ ರೀತಿ ಬಾಡಿಗೆಗೆ ದೊರೆಯುತ್ತವೆ. ಒಮ್ಮೆ ಪರೀಕ್ಷಿಸಿರಿ.

ಮಾಲೀಕರು

ಬಿ. ?. ಲಕ್ಷ್ಮಣ್

ನ್ಯೂಕಲ್ಕತ್ತಾ ಕಾಲೋನಿ, ಭದ್ರಾವತಿ.